ಭಾನುವಾರ, ಆಗಸ್ಟ್ 27, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 238 | ಪುಟ 18
• www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಕ್ವಿಯರ್ ಸಮುದಾಯದ ಮೇಲೆ ಬೆಳಕು ಚೆಲ್ಲುವ ಕಲಾ ಪ್ರಕಾರಗಳಲ್ಲಿನ ಹೂರಣವು ವಾಸ್ತವಕ್ಕೆ ಹತ್ತಿರವೇ?

ಕುಚ್ಚಲಕ್ಕಿ ರಫ್ತು: ಶೇ 20ರಷ್ಟು ಸುಂಕ 8
ಶಿಕ್ಷಕಿಯಿಂದ ಕೋಮುಪ್ರೇರಿತ ಹೇಳಿಕೆ: ಪ್ರಕರಣ ದಾಖಲು
ಸೌಜನ್ಯಾಗೆ ನ್ಯಾಯ: ಕೆಆರ್‌ಎಸ್ ಪಕ್ಷದಿಂದ ಪಾದಯಾತ್ರೆ 6
ವಿದ್ಯಾರ್ಥಿ ಕೆನ್ನೆಗೆ ಸಹಪಾಠಿಗಳಿಂದ ಏಟು 7

ಒಳ ಪುಟಗಳು

ಪ್ರಧಾನಿ ಕಚೇರಿಗೆ ಅಶೋಕ ಲೆಕ್ಕಕ್ಕೇ ಇಲ್ಲ: ಶಿವಕುಮಾರ್ 6
ಎನ್‌ಸಿಪಿ ಇಬ್ಭಾಗ ಆಗಿಲ್ಲ: ಶರದ್ ಪವಾರ್ 7
ಮಳೆ ಕೊರತೆ: ಎಫ್‌ಪಿಐಗೆ ಅಡ್ಡಿ? 8
'ವ್ಯಾಗ್ನರ್'ಗೆ ಆವರಿಸಿದ ಅನಿಶ್ಚಿತತೆ 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಈ ಮಾವಿನ ಉತ್ಪನ್ನಕ್ಕೆ ಹೆಚ್ಚಿದೆ ಬೇಡಿಕೆ ● ಬೇಕಿದೆ ನಿರಂತರ ಫಸಲು ಬಿಡುವ ತಳಿ

ಅಪ್ಪೆಮಿಡಿಯ ಅಂತರಂಗ...

• ಗಾಣಧಾಳು ಶ್ರೀಕಂಠ

ಬೆಂಗಳೂರು: ಸಾಗರ ತಾಲ್ಲೂಕು ಸೂಡೂರಿನ ನಾಗಭೂಷಣ ಭಟ್ಟರು ಆರು ಎಕರೆಯಲ್ಲಿ ವಿವಿಧ ತಳಿಗಳ 400 ಅಪ್ಪೆಮಿಡಿ ಮರಗಳನ್ನು ಬೆಳೆಸಿದ್ದಾರೆ. ಸುಮಾರು ನೂರು ಮರಗಳು ಫಸಲು ಬಿಡುತ್ತವೆ. 'ಅಪ್ಪೆಮಿಡಿ'ಯ ವಾರ್ಷಿಕ ವಹಿವಾಟು ₹10 ಲಕ್ಷದಿಂದ ₹12 ಲಕ್ಷ. 'ಅಡಿಕೆ ಬೆಳೆಗಿಂತ ಇದೇ ವಾಸಿ' ಎನ್ನುತ್ತಾರೆ ಅವರು.

ಶಿರಸಿ ತಾಲ್ಲೂಕು ಶೀಗೇಹಳ್ಳಿಯ ಭಾರ್ಗವ ಹೆಗಡೆ 10 ಎಕರೆಯಲ್ಲಿ ಮೂರು ಪ್ರಮುಖ ಅಪ್ಪೆಮಿಡಿ ತಳಿಗಳ 900 ಗಿಡಗಳನ್ನು ಬೆಳೆದಿದ್ದಾರೆ. ಜೊತೆಗೆ ವಿವಿಧ ತಳಿಗಳ 60 ಗಿಡಗಳಿವೆ. ಎಲ್ಲವೂ ಫಸಲು ಕೊಡುವಂಥ ಮರಗಳಾದರೂ, ಕಾಯಿ ಬಿಡುತ್ತಿರುವುದು ಕೆಲವು ಮರಗಳು ಮಾತ್ರ. ಆದರೂ, ಬಿಟ್ಟಷ್ಟೇ ಫಸಲನ್ನು ಮಾರಾಟ ಮಾಡಿ ವರ್ಷಕ್ಕೆ ಸುಮಾರು ₹3 ಲಕ್ಷದಷ್ಟು ಆದಾಯ ಪಡೆಯುತ್ತಿದ್ದಾರೆ. 'ಬೇಡಿಕೆ ಸಾಕಷ್ಟಿದೆ. ಪೂರೈಸುವುದಕ್ಕೆ ನೆಟ್ಟ ಮಿಡಿ ಮರಗಳೆಲ್ಲ ಫಸಲು ಬಿಡಬೇಕಲ್ಲ' ಎನ್ನುತ್ತಾರೆ.

ವಾರ್ಷಿಕ ಸುಮಾರು 4 ಲಕ್ಷ ಅಪ್ಪೆಮಿಡಿ ಖರೀದಿಸಿ ಉಪ್ಪಿನಕಾಯಿ ತಯಾರಿಸಿ, ಮಾರಾಟ ಮಾಡುವ ಸಿದ್ದಾಪುರ ತಾಲ್ಲೂಕಿನ ತಟ್ಟಿಕೈನ 'ಪೃಥ್ವಿ ಪಿಕಲ್ಸ್'ನ ಶಶಿಕಲಾ ಹೆಗಡೆ–ಶಾಂತರಾಂ ಹೆಗಡೆ ದಂಪತಿ, ವಾರ್ಷಿಕ ₹50 ಲಕ್ಷದಷ್ಟು ವಹಿವಾಟು ನಡೆಸುತ್ತಾರೆ. ರಾಜ್ಯದಲ್ಲಿ ಇದರ ವಾರ್ಷಿಕ ವಹಿವಾಟು ₹100 ಕೋಟಿ ಇತ್ತು ಎಂದು ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ(ಐಐಎಚ್‌ಆರ್), ನಾಲ್ಕೈದು ವರ್ಷಗಳ ಹಿಂದೆ ವರದಿಯೊಂದರಲ್ಲಿ ಉಲ್ಲೇಖಿಸಿತ್ತು. ಈಗ ವಹಿವಾಟು ನಾಲ್ಕುಪಟ್ಟಾಗಿರುವ ಅಂದಾಜಿದೆ!

ಮಲೆನಾಡಿನ ವಿಶಿಷ್ಟ ಮಾವಿನ ತಳಿ ಅಪ್ಪೆಮಿಡಿಗಿರುವ ಬೇಡಿಕೆಯ ಒಂದು ನಮೂನೆ ಇದು. ಈ ಅಭಿಪ್ರಾಯಗಳು ಅಪ್ಪೆಮಿಡಿ ಮಾವಿನ ಬೇಡಿಕೆ–ಪೂರೈಕೆ ನಡುವಿನ ವ್ಯತ್ಯಾಸವನ್ನೂ ತೆರೆದಿಡುತ್ತವೆ. ವಿಶೇಷವೋ, ವಿಚಿತ್ರವೋ, ಈ ಮಿಡಿ ಮಾವಿಗೆ ಎಷ್ಟು ಬೇಡಿಕೆ ಇದೆಯೋ, ಇದರ ಕೃಷಿಯ ಸುತ್ತ ಅಷ್ಟೇ ಸಮಸ್ಯೆಗಳೂ ಇವೆ.

ಒಳನೋಟ
ಆಹಾ ಅಪ್ಪೆ ಪರಿಮಳ
ಪ್ರತಿಕ್ರಿಯಿಸಿ: 9606038256
feedback@prajavani.co.in

ಕಾನ ಅಪ್ಪೆ ತಳಿ. ಚಿತ್ರ: ಡಾ. ಕೆ.ವಿ.ರವಿಶಂಕರ್

ಮಾವು ಕುಲದಲ್ಲೇ ವಿಶಿಷ್ಟ ತಳಿ: 'ಅಪ್ಪೆಮಿಡಿ'–ಒಂದು ವಿಶಿಷ್ಟ ಜಾತಿಯ ಕಾಡು ಮಾವು. ವಿಶಿಷ್ಟವಾದ ಸ್ವಾದ, ಪರಿಮಳ, ರುಚಿ ಹೊಂದಿರುವ ಮಾವಿನ ಕಾಯಿ. ಮಲೆನಾಡಿನ ನದಿ ದಡಗಳು, ಹೊಳೆ ಅಂಚುಗಳು ಅಪ್ಪೆಮಿಡಿಯ ಮೂಲ ನೆಲೆ. ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬ, ತೀರ್ಥಹಳ್ಳಿ, ಹೊಸನಗರ, ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ಧಾಪುರ, ಕುಮಟಾ, ಯಲ್ಲಾಪುರ ಕಡೆಗಳಲ್ಲಿ ಹರಿಯುವ ಅಘನಾಶಿನಿ, ಕುಮದ್ವತಿ, ಕಾಳಿ, ವರದಾ, ಬೇಡ್ತಿ ಹಾಗೂ ಶರಾವತಿ ನದಿಗಳ ದಂಡೆಯ ಮೇಲೆ ಹತ್ತಾರು ದಶಕಗಳಿಂದ ಅಪ್ಪೆಮಿಡಿ ಮರಗಳು ನೈಸರ್ಗಿಕವಾಗಿ ಬೆಳೆಯುತ್ತಿವೆ.

ಅಪ್ಪೆಮಿಡಿ ಉತ್ಪನ್ನಗಳಿಗೆ ತುಂಬಾ ಬೇಡಿಕೆ ಇದೆ. ಈ ತಳಿಗಳಲ್ಲಿ ಜೀರಿಗೆ ಪರಿಮಳದ ಮಿಡಿಗೆ ಬೇಡಿಕೆ ಹೆಚ್ಚು. ಹೆಬ್ಬೆರಳು ಗಾತ್ರದ ಒಂದು ಮಿಡಿಗೆ ₹5 ರಿಂದ ₹15ರವರೆಗೂ ಬೆಲೆ ಇರುತ್ತದೆ. ಒಂದು ಕೆ.ಜಿಗೆ ₹300 ರಿಂದ ₹700ರವರೆಗೂ ಮಾರಾಟವಾಗುತ್ತದೆ. ಹಸಿ ಕಾಯಿಗೆ ಒಂದು ಬೆಲೆಯಾದರೆ, ಕಾಯಿಗಳನ್ನು ಉಪ್ಪಿನಲ್ಲಿಟ್ಟು ಮಾರಾಟ ಮಾಡುವುದಕ್ಕೆ ಇನ್ನೊಂದು ಬೆಲೆ.

ಅಪ್ಪೆಮಿಡಿ ಅಂಕಿಅಂಶ

50 ಹೆಕ್ಟೇರ್ ಶಿವಮೊಗ್ಗ ಜಿಲ್ಲೆ

10 ಹೆಕ್ಟೇರ್ ಉತ್ತರ ಕನ್ನಡ ಜಿಲ್ಲೆ

₹100 ಕೋಟಿ ವಾರ್ಷಿಕ ವಹಿವಾಟು (ಆರು ವರ್ಷಗಳ ಹಿಂದೆ)

225 ಐಐಎಚ್‌ಆರ್ ಜೀನ್ ಬ್ಯಾಂಕ್‌ನಲ್ಲಿರುವ ಅಪ್ಪೆಮಿಡಿ ವೆರೈಟಿ (ಅಂದಾಜು)

(ವಿಸ್ತೀರ್ಣ ಮಾಹಿತಿ: ತೋಟಗಾರಿಕೆ ಇಲಾಖೆ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆ)

'ಜೀನ್ ಬ್ಯಾಂಕ್'ನಲ್ಲಿರುವ ಅಪ್ಪೆ ಮಿಡಿಗಳಲ್ಲಿ ಉತ್ತಮ ಫಸಲು ನೀಡುವ ಐದು ತಳಿಗಳನ್ನು ಗುರುತಿಸಿದ್ದೇವೆ. ಅವುಗಳಿಂದ ಕಸಿ ಗಿಡಗಳನ್ನು ತಯಾರಿಸಿ ರೈತರಿಗೆ ವಿತರಿಸಿದ್ದೇವೆ. ಫಸಲು ಬರಲು ಎರಡು–ಮೂರು ವರ್ಷ ಕಾಯಬೇಕಿದೆ.

ಡಾ.ಎಂ.ಶಂಕರನ್, ಪ್ರಧಾನ ವಿಜ್ಞಾನಿ ಮತ್ತು ಮುಖ್ಯಸ್ಥರು, ಹಣ್ಣುಬೆಳೆ ವಿಭಾಗ, ಐಐಎಚ್‌ಆರ್, ಬೆಂಗಳೂರು

ರೈತರ ಬಳಿಯಿರುವ ಮೂರ್ನಾಲ್ಕು ತಳಿಗಳು ಮಾತ್ರ ವರ್ಷಕ್ಕೋ, ಎರಡು ವರ್ಷಕ್ಕೋ ಫಲ ಕೊಡುವುದಾಗಿ ತೋರಿವೆ. ಅಂಥ ರೈತರ ಬಳಿ ಚರ್ಚಿಸಿ, ಅವರ ಅನುಭವಗಳೊಂದಿಗೆ ಈ ತಳಿಗಳನ್ನು ಅಭಿವೃದ್ಧಿಪಡಿಸಬೇಕಿದೆ

ಶಿವಾನಂದ ಕಳವೆ, ಕೃಷಿ–ಪರಿಸರ ಚಿಂತಕ, ಶಿರಸಿ

ಒಂದು ಕಾಲದಲ್ಲಿ ಮಲೆನಾಡಿನ ಮನೆ ಮನೆಗಳಲ್ಲಿ ಘಮಘಮಿಸುತ್ತಿದ್ದ ಅಪ್ಪೆಮಿಡಿಯ ಪರಿಮಳ ಈಗ ಹೊರದೇಶಗಳಲ್ಲೂ ಪಸರಿಸಿದೆ.

4ನೇ ಪುಟ ನೋಡಿ

'ತ್ರಿ'ವಿಕ್ರಮ ನೆಲೆಯೀಗ 'ಶಿವಶಕ್ತಿ ಪಾಯಿಂಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಂದ್ರಯಾನ–3ರ ಲ್ಯಾಂಡರ್ ವಿಕ್ರಮ್, ಚಂದ್ರನ ಮೇಲಿಳಿದ ಸ್ಥಳವನ್ನು 'ಶಿವಶಕ್ತಿ ಪಾಯಿಂಟ್' ಎಂಬುದಾಗಿ ನಾಮಕರಣ ಮಾಡಲಾಗುವುದು' ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದರು.

ಇಲ್ಲಿನ ಪೀಣ್ಯದಲ್ಲಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಟೆಲಿಮೆಟ್ರಿ ಟ್ರ್ಯಾಕಿಂಗ್ ಆ್ಯಂಡ್ ಕಮಾಂಡ್ ಸೆಂಟರ್‌ನಲ್ಲಿ ಶನಿವಾರ ಬೆಳಿಗ್ಗೆ ವಿಜ್ಞಾನಿಗಳನ್ನು ಅಭಿನಂದಿಸಿ ಮಾತನಾಡಿದ ಅವರು, 'ಇಂತಹ ಅಧ್ಯಯನ ನೌಕೆಗಳು ಇಳಿದ ಸ್ಥಳಕ್ಕೆ ನಾಮಕರಣ ಮಾಡುವ ಪರಂಪರೆ ವೈಜ್ಞಾನಿಕ ಕ್ಷೇತ್ರದಲ್ಲಿದೆ. ಈ ಅವಕಾಶದಂತೆ ಚಂದ್ರಯಾನ–3 ಇಳಿದ ಸ್ಥಳವನ್ನು ಶಿವಶಕ್ತಿ ಪಾಯಿಂಟ್ ಎಂದು ನಾಮಕರಣ ಮಾಡಲು ನಿರ್ಧರಿಸಲಾಗಿದೆ' ಎಂದರು.

'ಶಿವ ಎಂದರೆ ಮನುಕುಲದ ಕಲ್ಯಾಣಕ್ಕಾಗಿ ನಿರ್ಣಯ ಕೈಗೊಳ್ಳುವುದು. ಶಕ್ತಿ ಎಂದರೆ ಆ ನಿರ್ಣಯಗಳನ್ನು ಅನುಷ್ಠಾನಕ್ಕೆ ತರಲು ಬೇಕಾದ ಬಲ ಎಂದರ್ಥ. ಶಿವಶಕ್ತಿ ಪಾಯಿಂಟ್ ಹಿಮಾಲಯದಿಂದ ಕನ್ಯಾಕುಮಾರಿವರೆಗಿನ ಪ್ರದೇಶಗಳನ್ನು ಜೋಡಿಸಲಿದೆ' ಎಂದು ಹೇಳಿದರು.

ತಿರಂಗಾ ಪಾಯಿಂಟ್: 'ಚಂದ್ರಯಾನ–2 ಪತನವಾದ ಸ್ಥಳಕ್ಕೂ ನಾಮಕರಣ ಮಾಡಲು ಅವಕಾಶವಿತ್ತು. ಆದರೆ ವೈಫಲ್ಯದ ಬೇಸರದಲ್ಲಿ ಆ ಕೆಲಸ ಮಾಡಲಿಲ್ಲ. ಈಗ ಚಂದ್ರಯಾನ–2 ಪತನವಾಗಿದ್ದ ಸ್ಥಳವನ್ನು 'ತಿರಂಗಾ' ಎಂದು ನಾಮಕರಣ ಮಾಡುತ್ತೇವೆ. ಯಾವ ವೈಫಲ್ಯವೂ ಅಂತಿಮವಲ್ಲ, ಅಂತಃಶಕ್ತಿ ಇದ್ದರೆ ಗೆಲುವು ಸಾಧ್ಯ ಎಂಬುದನ್ನು ತಿರಂಗಾ ಪಾಯಿಂಟ್ ಸೂಚಿಸುತ್ತದೆ' ಎಂದರು.

ಲ್ಯಾಂಡರ್ 'ವಿಕ್ರಮ್'ನಿಂದ ರೋವರ್ 'ಪ್ರಜ್ಞಾನ್' ಚಂದ್ರನಂಗಳಕ್ಕೆ ಇಳಿದ ಪ್ರಾತ್ಯಕ್ಷಿಕೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ತೋರಿಸಿದ ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ —ಪಿಐಬಿ ಚಿತ್ರ

ಆ.23 ರಾಷ್ಟ್ರೀಯ ಬಾಹ್ಯಾಕಾಶ ದಿನ

'ಚಂದ್ರಯಾನ–3 ಚಂದ್ರನ ಮೇಲಿಳಿದ ನೆನಪಿಗಾಗಿ ಆಗಸ್ಟ್ 23 ಅನ್ನು ಇನ್ನು ಮುಂದೆ ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನಾಗಿ ಆಚರಿಸಲಾಗುವುದು' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರಕಟಿಸಿದರು. ವಿಜ್ಞಾನ, ತಂತ್ರಜ್ಞಾನ ಮತ್ತು ಬಾಹ್ಯಾಕಾಶ ವಿಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಈ ದಿನವನ್ನು ಮೀಸಲಿಡಲಾಗುವುದು ಎಂದರು.

ರಸಪ್ರಶ್ನೆ ಸ್ಪರ್ಧೆ: ಚಂದ್ರಯಾನ ಯೋಜನೆ ಕುರಿತು MyGov ವೇದಿಕೆ ಮೂಲಕ ರಾಷ್ಟ್ರ ಮಟ್ಟದ ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿದೆ. ಸೆಪ್ಟೆಂಬರ್ 1ರಿಂದ ಆರಂಭವಾಗುವ ಈ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಮತ್ತು ಸಂಶೋಧಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಪ್ರಧಾನಿ ಮನವಿ ಮಾಡಿದರು.



ರೈಲು ಬೋಗಿಗೆ ಬೆಂಕಿ 9 ಯಾತ್ರಿಗಳು ಸಾವು

ಮದುರೈ (ತಮಿಳುನಾಡು) (ಪಿಟಿಐ): ಮದುರೈ ರೈಲು ನಿಲ್ದಾಣದಲ್ಲಿ ನಿಲುಗಡೆಯಾಗಿದ್ದ ಪ್ರವಾಸಿಗರ ರೈಲು ಬೋಗಿಯಲ್ಲಿ ಶನಿವಾರ ಮುಂಜಾನೆ ಸಂಭವಿಸಿದ ಅಗ್ನಿ ದುರಂತದಲ್ಲಿ ಉತ್ತರ ಪ್ರದೇಶ ಮೂಲದ ಒಂಬತ್ತು ತೀರ್ಥಯಾತ್ರಾರ್ಥಿಗಳು ಮೃತಪಟ್ಟಿದ್ದಾರೆ. 20 ಮಂದಿ ಗಾಯಗೊಂಡಿದ್ದು, ಸ್ಥಳೀಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

ಆಹಾರ ತಯಾರಿಸುವ ಉದ್ದೇಶಕ್ಕಾಗಿ ಬೋಗಿಯಲ್ಲಿ ಅಕ್ರಮವಾಗಿ ತರಲಾಗಿದ್ದ ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡಿರುವುದೇ ಈ ಅನಾಹುತಕ್ಕೆ ಕಾರಣ ಎಂಬುದು ದಕ್ಷಿಣ ರೈಲ್ವೆ ವಿಭಾಗದಿಂದ ನಡೆಸಿರುವ ಪ್ರಾಥಮಿಕ ತನಿಖೆಯಿಂದ ಬಯಲಾಗಿದೆ.

ಬೆಳಗಿನ ತಿಂಡಿ ತಯಾರಿಸುವ ವೇಳೆ ಗ್ಯಾಸ್ ಸೋರಿಕೆಯಾಗಿರುವ ಸಾಧ್ಯತೆ ಇದೆ. ಬೋಗಿಯಲ್ಲಿ ದೊರೆತಿರುವ ಎಲ್‌ಪಿಜಿ ಸಿಲಿಂಡರ್, ಆಲೂಗಡ್ಡೆ ಚೀಲ ಹಾಗೂ ಸುಟ್ಟು ಕರಕಲಾಗಿರುವ ಪಾತ್ರೆಗಳು ಇದಕ್ಕೆ ಪುಷ್ಟಿ ನೀಡಿವೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

'ಭದ್ರಪಡಿಸಿದ್ದ ಬೋಗಿಯ ಬಾಗಿಲನ್ನು ಮುರಿದು ಹಲವರು ಹೊರಗೆ ಓಡಿಬಂದರು. ಹಾಗಾಗಿ, ಹೆಚ್ಚಿನ ಜೀವಹಾನಿ ತಪ್ಪಿದೆ' ಎಂದು ಬದುಕುಳಿದ ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ.

ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ತೆರಳಿದ ಮದುರೈ ಜಿಲ್ಲಾಧಿಕಾರಿ ಎಂ.ಎಸ್. ಸಂಗೀತಾ ಅವರು ಗಾಯಾಳುಗಳ ಚಿಕಿತ್ಸೆಯ ನೆರವಿಗಾಗಿ ಸ್ಪಂದಿಸಿದ್ದಾರೆ. ಮೃತದೇಹಗಳನ್ನು ಅವರ ಊರುಗಳಿಗೆ ಕಳುಹಿಸಲು ಅಗತ್ಯ ವ್ಯವಸ್ಥೆ ಕೈಗೊಂಡಿದ್ದಾರೆ.

7ನೇ ಪುಟ ನೋಡಿ

ಕೋವಿಡ್ ಅಕ್ರಮ ತನಿಖೆ ಕುನ್ಹಾ ಆಯೋಗ ರಚನೆ

ಪ್ರಜಾವಾಣಿ ವಾರ್ತೆ



ಜಾನ್ ಮೈಕಲ್ ಕುನ್ಹಾ

ಬೆಂಗಳೂರು: ಕೋವಿಡ್ ನಿವಾರಣೆ ಹೆಸರಿನಲ್ಲಿ ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ತನಿಖೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ನೇತೃತ್ವದಲ್ಲಿ ವಿಚಾರಣಾ ಆಯೋಗ ರಚಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಕೋವಿಡ್ ನಿರ್ವಹಣೆಗಾಗಿ ಔಷಧಿ ಹಾಗೂ ಉಪಕರಣಗಳ ಖರೀದಿಸಿರುವುದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ನೀಡಿರುವ ವರದಿಯಲ್ಲಿ ಆರೋಪಗಳ ಬಗ್ಗೆ ವಿವರಿಸಲಾಗಿದೆ. ಹೀಗಾಗಿ, ಪ್ರಕರಣದ ತನಿಖೆಗೆ ಆಯೋಗ ರಚಿಸಲಾಗಿದೆ ಎಂದು ಆದೇಶ ಹೇಳಿದೆ.

ಮೂರು ತಿಂಗಳ ಒಳಗೆ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸಬೇಕು. ಆಯೋಗದ ಕೇಂದ್ರ ಕಚೇರಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸಲು ಅನುಕೂಲ ಆಗುವಂತೆ ಸೌಲಭ್ಯವನ್ನು ಆರೋಗ್ಯ ಇಲಾಖೆ ಒದಗಿಸಬೇಕು ಎಂದೂ ತಿಳಿಸಲಾಗಿದೆ.

ನ್ಯಾ. ನಾಗಮೋಹನ್‌ದಾಸ್ ಆಯೋಗ: ಬಿಜೆಪಿ ಸರ್ಕಾರದ ಅವಧಿಯ ಕಾಮಗಾರಿ ಅಕ್ರಮದ ತನಿಖೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿಯನ್ನು ಆಯೋಗವಾಗಿ ಬದಲಿಸಲಾಗಿದೆ. ಸಮಿತಿ ರಚಿಸಿ ಆಗಸ್ಟ್ 17ರಂದು ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಲಾಗಿದೆ.

‘ಚಂದ್ರಯಾನ–3’ ತಂಡದಲ್ಲಿ ರೇವಾ ವಿವಿ ಹಳೆ ವಿದ್ಯಾರ್ಥಿಗಳು

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರದ (ಇಸ್ರೊ) ‘ಚಂದ್ರಯಾನ–3’ರ ತಂಡದಲ್ಲಿ ರೇವಾ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಗಳು ಕಾರ್ಯನಿರ್ವಹಿಸಿದ್ದು, ವಿಜ್ಞಾನಿಗಳ ಸಾಧನೆಗೆ ವಿ.ವಿ ಶುಭಹಾರೈಸಿದೆ.

ಎಂ.ಟೆಕ್ ವಿದ್ಯಾರ್ಥಿಗಳಾಗಿದ್ದ ಲಿಪಿನ್, ಶಿವಾನಿ, ಮಂಗಲ್ ಮೋಹಪಾತ್ರ, ಆಕಾಶ್, ರೇಣುವೆಂಕಟಸ್ವಾಮಿ, ಕಿಶೋರ್ ರೆಡ್ಡಿ, ಆದಿಸೇಷು ಬಾಬು, ಹರಿಕೃಷ್ಣ ಹಾಗೂ ಬುಕ್ಕಾ ರಮೇಶ್ ಅವರು ‘ಚಂದ್ರಯಾನ–3’ರ ತಂಡದಲ್ಲಿ ಕಾರ್ಯನಿರ್ವಹಿಸಿದ್ದಾರೆ ಎಂದು ವಿಶ್ವವಿದ್ಯಾಲಯ ತಿಳಿಸಿದೆ.

‘ಈ ಯೋಜನೆಯ ತಂಡದಲ್ಲಿ ವಿ.ವಿ.ಹಳೆ ವಿದ್ಯಾರ್ಥಿಗಳು ಇದ್ದದ್ದು ಹೆಮ್ಮೆ ತಂದಿದೆ’ ಎಂದು ವಿ.ವಿ ಕುಲಪತಿ ಪಿ.ಶ್ಯಾಮರಾಜು ಅವರು ಸಂತಸ ವ್ಯಕ್ತಪಡಿಸಿದ್ದಾರೆ.

ಇಡೀ ತಂಡ ಬದಲಿಸುವ, ಹೊಸಬರಿಗೆ ಅವಕಾಶ ಮಾಡಿಕೊಡುವ ಇಂಗಿತ

ಕೆಪಿಸಿಸಿ ಶೀಘ್ರ ಪುನರ್‌ರಚನೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯನ್ನು (ಕೆಪಿಸಿಸಿ) ಶೀಘ್ರ ಪುನರ್ ರಚಿಸಲಾಗುವುದು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೆಪಿಸಿಸಿಗೆ ಹೊಸದಾಗಿ ಕಾರ್ಯಾಧ್ಯಕ್ಷರ ನೇಮಕ ವಿಚಾರವಾಗಿ ಸುದ್ದಿಗಾರರು ಕೇಳಿದಾಗ, ‘ಕೇವಲ ಕಾರ್ಯಾಧ್ಯಕ್ಷರು ಮಾತ್ರವಲ್ಲ. ಇಡೀ ತಂಡವನ್ನು ಬದಲಿಸಬೇಕಿದೆ’ ಎಂದರು.

‘ಕೆಪಿಸಿಸಿ ಪದಾಧಿಕಾರಿಗಳಾಗಿರುವ ಅನೇಕರು ಸಚಿವರಾಗಿದ್ದಾರೆ. ಅವರನ್ನು ಪಕ್ಷದ ಜವಾಬ್ದಾರಿಯಿಂದ ಮುಕ್ತಗೊಳಿಸಬೇಕಿದೆ. ಹೊಸಬರಿಗೆ ಅವಕಾಶ ಮಾಡಿಕೊಡಬೇಕಿದೆ’ ಎಂದೂ ಹೇಳಿದರು.

ನ್ಯಾಯಾಲಯಕ್ಕೆ ವಾಸ್ತವಾಂಶ:‘ಕರ್ನಾಟಕದಲ್ಲಿ ನೀರಿದೆ, ಇದಕ್ಕಾಗಿಯೇ ನೀರು ಬಿಡುಗಡೆ ಮಾಡಿದ್ದು, ಈಗ ಸುಪ್ರೀಂ ಕೋರ್ಟ್ ಮುಂದೆ ನೀರಿಲ್ಲ ಎಂದು ಹೇಳುತ್ತಿದೆ’ ಎಂಬ ತಮಿಳುನಾಡು ಪರ ವಕೀಲ ಮುಕುಲ್ ರೋಹಟಗಿ ಹೇಳಿಕೆ ಬಗ್ಗೆ ಕೇಳಿದಾಗ, ‘ಈ ವಿಚಾರವಾಗಿ ನಾವು ಪ್ರತಿಕ್ರಿಯಿಸುವುದಿಲ್ಲ. ವಾಸ್ತವಾಂಶವನ್ನು ನ್ಯಾಯಾಲಯದ ಮುಂದಿಟ್ಟಿದ್ದೇವೆ. ಇದು ತಾಂತ್ರಿಕ ವಿಚಾರವಾಗಿದ್ದು, ನಾವು ಅಣೆಕಟ್ಟುಗಳಲ್ಲಿನ ಒಳಹರಿವಿನ ಮಾಹಿತಿ ನೀಡಿದ್ದೇವೆ’ ಎಂದರು.

ಕಾವೇರಿ ವಿಚಾರವಾಗಿ ಸರ್ವಪಕ್ಷ ನಿಯೋಗ ತೆಗೆದುಕೊಂಡು ಹೋಗುತ್ತಿರುವುದು ರಾಜಕೀಯ ಮಾಡಲು ಎಂಬ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ಹೇಳಿಕೆ ಬಗ್ಗೆ ಕೇಳಿದಾಗ, ‘ಕೋರ್ಟ್ ಈ ವಿಚಾರದಲ್ಲಿ ಏನು ಹೇಳಬೇಕೋ ಹೇಳಿದೆ. ಅವರಿಗೆ ಕರ್ನಾಟಕ ರಾಜ್ಯದ ಬಗ್ಗೆ ಹಿತಾಸಕ್ತಿ ಇದ್ದರೆ ಅವರು ನಮ್ಮ ಜೊತೆ ಸೇರಿ ರಾಜ್ಯದ ಪರವಾಗಿ ಧ್ವನಿ ಎತ್ತಲಿ’ ಎಂದರು.

‘ಕಾವೇರಿ ವಿಚಾರವಾಗಿ ಈಗಾಗಲೇ ನಮ್ಮ ತಂಡ ದೆಹಲಿಯಲ್ಲಿ ಕಾನೂನು ತಜ್ಞರ ಜೊತೆ ಚರ್ಚಿಸಿದೆ. ಮುಂದಿನ ದಿನಗಳಲ್ಲಿ ನಾನು ಮತ್ತೊಂದು ಸಭೆ ಮಾಡಲಿದ್ದೇನೆ’ ಎಂದರು.

‘ಫಲ ಬೇರೆಯವರ ಪಾಲಾಗಬಾರದು’

ಕೆಂಗೇರಿ: ‘ಎಸ್.ಟಿ. ಸೋಮಶೇಖರ್ ಮತ್ತು ನನ್ನ ನಡುವೆ 35 ವರ್ಷಗಳಿಂದ ಸ್ನೇಹವಿದೆ. ನೀರು, ಗೊಬ್ಬರ ಹಾಕಿ ಅವರನ್ನು ರಾಜಕೀಯವಾಗಿ ಬೆಳೆಸಿದ್ದೇವೆ. ಈಗ ಹಣ್ಣು ಬಿಟ್ಟಿದೆ. ಅದನ್ನು ಬೇರೆಯವರು ಕಿತ್ತುಕೊಂಡು ತಿನ್ನಬಾರದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಹೆಮ್ಮಿಗೆಪುರದಲ್ಲಿ ನಾಗರಿಕರ ಅಹವಾಲು ಆಲಿಸಿದ ಬಳಿಕ ಅವರು ಮಾತನಾಡಿದರು.

‘ಸೋಮಶೇಖರ್ ಇತ್ತೀಚೆಗೆ ಬಹಳ ಸುದ್ದಿಯಲ್ಲಿದ್ದಾರೆ. ನಾಗರಿಕರು ಮತ್ತು ಶಾಸಕರು ಕೂತು ತೀರ್ಮಾನ ಮಾಡಿಕೊಳ್ಳಿ. ನಮ್ಮ ಸರ್ಕಾರ 5 ವರ್ಷ ಇರುತ್ತದೆ. ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತೀರಿ ಎಂಬುದು ಗೊತ್ತಿದೆ’ ಎಂದು ಕಾಂಗ್ರೆಸ್‌ಗೆ ಪರೋಕ್ಷವಾಗಿ ಆಹ್ವಾನ ನೀಡಿದರು.

‘ನಾನು ಕನಕಪುರಕ್ಕೆ ಹೋಗಲು ಆಗಿಲ್ಲ. ಆದರೆ, ಎರಡು ಬಾರಿ ನನ್ನನ್ನು ನಿಮ್ಮ ಕ್ಷೇತ್ರಕ್ಕೆ ಸೋಮಶೇಖರ್ ಎಳೆದುಕೊಂಡು ಬಂದಿದ್ದಾರೆ. ಸಮಸ್ಯೆ ಬಗ್ಗೆ ಕಾಳಜಿ ಇದೆ. ಮುಂದಿನ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆ ಬೆಂಬಲ ನೀಡಬೇಕು’ ಎಂದು ಹೇಳಿದರು.

‘ಇಲ್ಲಿನ ಜನರು ಸೌಲಭ್ಯ ಕಲ್ಪಿಸಲು ಕೋರಿದ್ದಾರೆ. ಇದೆಲ್ಲವನ್ನು ಸೋಮಶೇಖರ್ ಮೊದಲೇ ಕೇಳಿಕೊಂಡಿದ್ದರು. ರಾಜಕೀಯವನ್ನು ಪಕ್ಕಕ್ಕಿಟ್ಟು ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತೇನೆ’ ಎಂದು ಭರವಸೆ ನೀಡಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಹೆಮ್ಮಿಗೆಪುರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜನಸ್ಪಂದನ ಕಾರ್ಯಕ್ರಮವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು. ಶಾಸಕ ಎಸ್.ಟಿ. ಸೋಮಶೇಖರ್, ಅಧಿಕಾರಿಗಳು ಇದ್ದರು

‘ಸಮರ್ಪಕ ರಸ್ತೆ, ಒಳಚರಂಡಿ, ಸುಗಮ ವಾಹನ ಸಂಚಾರ, ಸರ್ಕಾರಿ ಆಸ್ಪತ್ರೆ, ಅರಣ್ಯ ಇಲಾಖೆಯಿಂದ ಬಿಡಿಎ ನಿವೇಶನ ಸ್ವಾಧೀನ, ರಸ್ತೆ ವಿಸ್ತರಣೆ, ಕಸ ವಿಲೇವಾರಿ ಘಟಕ, ಬಹುಮಹಡಿ ಪಾರ್ಕಿಂಗ್, ಬಿಎಂಟಿಸಿ ಬಸ್ ಡಿಪೊ, ಬಿಬಿಎಂಪಿ ಅನುಮೋದಿತ ಬಡಾವಣೆಗಳನ್ನು ಬಿಬಿಎಂಪಿಗೆ ಹಸ್ತಾಂತರ, ಸುಸಜ್ಜಿತ ಶಾಲೆಗಳಿಗಾಗಿ ಮನವಿಗಳು ಬಂದಿವೆ. ಎಲ್ಲ ಇಲಾಖೆಗಳ ಅಧಿಕಾರಿಗಳನ್ನು ಕರೆದುಕೊಂಡು ಬಂದಿದ್ದೇನೆ. ಅವರು ಈ ಮನವಿಗಳಿಗೆ ಸ್ಪಂದಿಸಲಿದ್ದಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಉತ್ತಮ ತೆರಿಗೆದಾರರಾದ ಉತ್ತರಹಳ್ಳಿ ಕ್ಷೇತ್ರದ ಅಪಾರ್ಟ್‌ಮೆಂಟ್ ಸಂಸ್ಥೆ ಪದಾಧಿಕಾರಿಗಳ ಹಿತ ಕಾಯಲು ಸರ್ಕಾರ ಬದ್ಧವಾಗಿದೆ. ಕೆಲವರು ತೆರಿಗೆ ವಂಚಿಸುತ್ತಾರೆ. ಅದನ್ನು ಸರಿ ಮಾಡಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದರು.

ಈ ಭಾಗಕ್ಕೆ ಮೆಟ್ರೊ ಸಂಪರ್ಕ ಕಲ್ಪಿಸಲು ಶಾಸಕ ಸೋಮಶೇಖರ್ ಪ್ರಯತ್ನಿಸುತ್ತಿದ್ದಾರೆ ಎಂದರು.

ಶಾಸಕ ಎಸ್.ಟಿ. ಸೋಮಶೇಖರ್ ಮಾತನಾಡಿ, ‘ಯಾರು ಏನೇ ಆರೋಪ ಮಾಡಿದರೂ ಕ್ಷೇತ್ರದ ಅಭಿವೃದ್ಧಿಗಾಗಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರನ್ನು ನೂರು ಸಲ ಬೇಕಾದರೂ ಭೇಟಿ ಮಾಡುತ್ತೇನೆ ಹೊರತು ವೈಯಕ್ತಿಕ ಲಾಲಸೆಗಲ್ಲ’ ಎಂದು ಸ್ಪಷ್ಟಪಡಿಸಿದರು.

ಉದ್ಯೋಗಾವಕಾಶ ಬಳಸಿಕೊಳ್ಳಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಉದ್ಯೋಗ ಅವಕಾಶ ನೀಡಲು ಹಲವು ಕಾರ್ಯಕ್ರಮ ಹಮ್ಮಿಕೊಂಡಿದ್ದು, ನಾಗರಿಕರು ಪ್ರಯೋಜನ ಪಡೆದುಕೊಳ್ಳಬೇಕು’ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ಹೇಳಿದರು.

ಆದಿಚುಂಚನಗಿರಿ ಮಠದ ನಿರ್ಮಲನಂದನಾಥ ಸ್ವಾಮೀಜಿ ದೀಕ್ಷಾದಿನದ ಪ್ರಯುಕ್ತ ಒಕ್ಕಲಿಗ ಯುವ ಬ್ರಿಗೇಡ್ ಹಾಗೂ ಎನ್‌ಆರ್‌ಐ ಒಕ್ಕಲಿಗರ ಬ್ರಿಗೇಡ್ ವತಿಯಿಂದ ಶನಿವಾರ ಏರ್ಪಡಿಸಿದ್ದ ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡಿದರು.

‘ಉದ್ಯೋಗಾಕಾಂಕ್ಷಿಗಳು ತಮ್ಮ ಅರ್ಹತೆಗೆ ತಕ್ಕ ಕೆಲಸ ಹುಡುಕಿಕೊಳ್ಳಬೇಕು. ವಿದ್ಯೆ ಮೊಟಕುಗೊಂಡವರಿಗೆ ಉದ್ಯೋಗ ಮೇಳಗಳು ಅವಕಾಶ ಕಲ್ಪಿಸುತ್ತವೆ. ಉದ್ಯೋಗಾಕಾಂಕ್ಷಿಗಳು ಕೌಶಲಗಳನ್ನು ಮೈಗೂಡಿಸಿಕೊಳ್ಳಬೇಕು ಮತ್ತು ಪೋಷಕರು ಕೌಶಲ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳಲ್ಲಿ ಮಕ್ಕಳನ್ನು ತೊಡಗಿಸಬೇಕು’ ಎಂದರು.

ಆದಿಚುಂಚನಗಿರಿ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ ಮಾತನಾಡಿ, ‘ರೈತರು ಮತ್ತು ಹಳ್ಳಿಯ ಮಕ್ಕಳಿಗೆ ಉತ್ತಮ ಅವಕಾಶ ಸಿಗಬೇಕು. ಅವರಲ್ಲಿರುವ ಪ್ರತಿಭೆ ಹೊರಹೊಮ್ಮಿದಾಗ ಸಮಾಜದಲ್ಲಿ ಅಭಿವೃದ್ಧಿ ಸಾಧ್ಯ. ಮನುಷ್ಯನ ಬದುಕು, ಜೀವನ ಸರಿಯಾಗಿ ಇರಬೇಕಾದರೆ ಸೌಲಭ್ಯ ಇರಬೇಕು’ ಎಂದು ಹೇಳಿದರು.

ಗ್ಯಾಸ್ಟ್ರೋ ಎಂಟ್ರಾಲಜಿ ಸೈನ್ಸ್ , ಆರ್ಗನ್ ಟ್ರಾನ್ ಪ್ಲಾಂಟ್ ನಿರ್ದೇಶಕ ಎನ್.ಎಸ್. ನಾಗೇಶ್, ಸಾಯಿ ಸನ್ನಿಧಿ ಎಸ್ಟೇಟ್ ವ್ಯವಸ್ಥಾಪಕ ನಿರ್ದೇಶಕ ನಯನ್ ಗೌಡ, ಇಂಡಿಯನ್ ಪಬ್ಲಿಕ್ ಹೈಸ್ಕೂಲ್ ಅಧ್ಯಕ್ಷ ಎಚ್.ಆನಂದ್, ಪ್ರೊಫೆಸರ್ ಶಿವಲಿಂಗಯ್ಯ, ಸರ್ವಪಲ್ಲಿ ರಾಧಕೃಷ್ಣನ್ ಅವರ ಮೊಮ್ಮಗ ಸುಬ್ರಮಣ್ಯ ಶರ್ಮ, ಒಕ್ಕಲಿಗ ಯುವ ಬ್ರಿಗೇಡ್ ಅಧ್ಯಕ್ಷ ನಂಜೇಗೌಡ ನಂಜುಂಡ ಇದ್ದರು.

ಉದ್ಯೋಗ ಮೇಳದಲ್ಲಿ ಒಕ್ಕಲಿಗ ಬ್ರಿಗೇಡ್ ವತಿಯಿಂದ ಸೌಮ್ಯನಾಥ ಸ್ವಾಮೀಜಿ ಅವರಿಗೆ ನೆನಪಿನ ಕಾಣಿಕೆ ನೀಡಿದರು. ಇಂಡಿಯನ್ ಪಬ್ಲಿಕ್ ಹೈಸ್ಕೂಲ್ ಅಧ್ಯಕ್ಷ ಎಂ.ಎ. ಆನಂದ್, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಸುರೇಶ್, ಆರ್ಗನ್ ಟ್ರಾನ್ ಪ್ಲಾಂಟ್ ನಿರ್ದೇಶಕ ಎನ್.ಎಸ್. ನಾಗೇಶ್, ಜಿಕೆವಿಕೆ ಪ್ರೊಫೆಸರ್ ಶಿವಲಿಂಗಯ್ಯ ಇದ್ದರು

ನಾಡಿನಾದ್ಯಂತ ಭಕ್ತರನ್ನು ಆಕರ್ಷಿಸುತ್ತಿರುವ ಪಾಂಡವರು ಪ್ರತಿಷ್ಟಾಪಿಸಿರುವ

ಶ್ರೀಕರೇನಳ್ಳಮ್ಮ ದೇವಸ್ಥಾನ

ನೆಲಮಂಗಲ ತಾಲ್ಲೂಕು,ಕಸಬಾ ಹೋಬಳಿಯ ಕಾಡು ಕರೆನಹಳ್ಳಿ. ಇಲ್ಲಿ ನೆಲೆಗೊಂಡಿರುವ ಶ್ರೀಕರೇನಳ್ಳಮ್ಮಅರ್ಥಾತ್ ಮಾರಮ್ಮ ದೇವಿ ನಾಡಿನ ಮೂಲೆಮೂಲೆಯಲ್ಲಿ ಭಕ್ತರ ಬಾಯಲ್ಲಿ ನಲಿದಾಡುತ್ತಿದ್ದಾಳೆ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಹೊಸರೂಪ ಪಡೆದ ಈ ದೇವಸ್ಥಾನ ಈಗ ಜನಜನಿತವಾಗಿದೆ.

ಪ್ರತಿ ಸೋಮವಾರ ಪೂಜೆ ಹಾಗೂ ಅನ್ನ ಸಂತರ್ಪಣೆ ಇರುತ್ತದೆ, ದೇವಸ್ಥಾನಕ್ಕೆ ಆಗಮಿಸುವ ಭಕ್ತರೆ ಅನ್ನ ಸಂತರ್ಪಣೆಗೆ ಬೇಕಾದ ಸಾಮಗ್ರಿಗಳನ್ನ ನೀಡುವ ಮುಖೇನ ಪ್ರಸಾದವನ್ನು ಸೇವಿಸುತ್ತಾರೆ, ಸಾವಿರಾರು ಜನ ಊಟವನ್ನು ಮಾಡುವ ಮೂಲಕ ಕೃತಾರ್ಥತೆಯನ್ನು ಪಡೆಯುತ್ತಾರೆ, ಒಮ್ಮೆ ಭೇಟಿಯಿತ್ತ ಭಕ್ತಾಧಿಗಳು ಮತ್ತೆ ಮತ್ತೆ ಬರುವಂತೆ ದೇವಿ ಅನುಗ್ರಹಿಸುತ್ತಾಳೆ, ಭಕ್ತರ ಕೋರಿಕೆಯ ಮೇರೆಗೆ ಹೂ ನೀಡುವ ಮೂಲಕ ಅಭಯ ಹಸ್ತ ಚಾಚುವ ದೇವಿ, ಶರಣಾರ್ಥಿ ಎಂದು ಬರುವ ಭಕ್ತರ ಸಂಕಷ್ಟಕ್ಕೆ ಮಿಡಿಯುತ್ತಾಳೆ, ಹಾಗಾಗಿಯೇ ಕಳೆದ ಹತ್ತಾರು ವರ್ಷಗಳಿಂದ ಇಲ್ಲಿಗೆ ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸುವ ಭಕ್ತರು ದೇವಿ ದರುಶನ ಪಡೆದು ಕೃತಾರ್ಥರಾಗುತ್ತಾರೆ, ಭಕ್ತಾಧಿಗಳು ತಮ್ಮ ಮನೆಗಳ ಗೃಹ ಪ್ರವೇಶ ಹಾಗೂ ಕಾರ್ಯಕ್ರಮಗಳಿಗೆ ಅಮ್ಮನವರ ಉತ್ಸವ ಮೂರ್ತಿಯನ್ನು ತೆಗೆದುಕೊಂಡು ಹೋಗಿ ಧನ್ಯತೆಯನ್ನು ಪಡೆಯುತ್ತಾರೆ. ಭಕ್ತರು,ದೇವಿಯ ಕೃಪೆಗೆ ಪಾತ್ರರಾಗಿ ಹಿಂದುರುಗಿದ ಮೇಲೆ ಈ ದೇವಿಯ ಮಹಿಮೆಯನ್ನು ಸಾರುತ್ತ ಬಾಯಿಂದ ಬಾಯಿಗೆ ಹರಿದು, ನಾಡಿನಾದ್ಯಂತ ಮೂಲೆಮೂಲೆಗಳಿಂದ ಧಾವಿಸಿ ದೇವಿಯ ದರುಶನ ಪಡೆದು ಸಾರ್ಥಕತೆಯ ಆನಂದವನ್ನು ಅನುಭವಿಸುತ್ತಾರೆ. ಪ್ರತಿ ಸೋಮವಾರವಲ್ಲದೇ ದೀಪಾವಳಿ ಹಬ್ಬದಲ್ಲಿ ವಿಭಿನ್ನ ಬಗೆಯ ದೀಪೋತ್ಸವ ,ನವರಾತ್ರಿಯಂದು ದೇವಿಗೆ ವಿಶೇಷ ಅಲಂಕಾರ ಹಾಗೂ ವಿಜಯದಶಮಿಯಂದು ವಿಶೇಷ ಪೂಜೆ ಹಾಗೂ ಯುಗಾದಿ ಮುಗಿದ ಎರಡನೇ ಶುಕ್ರವಾರದಿಂದ ಮುಂದಿನ ಗುರುವಾರದ ತನಕ ಜಾತ್ರೆ ಹಾಗೂ ಕರಗ ಉತ್ಸವವನ್ನು ಏರ್ಪಡಿಸಿ ಪಕ್ಕದ ಹಳ್ಳಿಗಳಲ್ಲೂ ದೇವಿಯ ಮೆರವಣಿಗೆಯನ್ನು ಏರ್ಪಡಿಸುತ್ತಾರೆ.

ಭಾನುವಾರ ಸೋಮವಾರ ಕರಗ ಉತ್ಸವದ ನಂತರ ಮಂಗಳವಾರ ದೇವಸ್ಥಾನದ ಪ್ರಾಂಗಣದಲ್ಲಿ ಅಗ್ನಿಕೊಂಡ ಏರ್ಪಡಿಸಿರುತ್ತಾರೆ, ಈ ಉತ್ಸವಕ್ಕೆ ಸುಮಾರು ಐದುಸಾವಿರ ಭಕ್ತಾಧಿಗಳು ಸೇರಿ ಬಹಳ ಸಡಗರ ಸಂಭ್ರಮದಿಂದಲೇ ದೇವಿಯ ಕೃಪೆಗೆ ಪಾತ್ರರಾಗುತ್ತಾರೆ.

ಇಲ್ಲಿ ಊಟದ ವ್ಯವಸ್ಥೆಯು ಇದ್ದು ಭಕ್ತರು ಪ್ರಸಾದ ಪಡೆದು ಧನ್ಯತೆಯ ಭಾವಪ್ರಾಪ್ತಿಗೆ ಒಳಗಾಗುತ್ತಾರೆ, ಇದೇ ಸಂದರ್ಭದಲ್ಲಿ ದೇವಿಗೆ ವಿವಿಧ ರೀತಿಯ ಅಲಂಕಾರಗಳನ್ನು ಮಾಡುತ್ತಾರೆ.ವಿಶೇಷವಾಗಿ ಪ್ರತಿ ವರ್ಷ ವಜ್ರಾಂಗಿ ಧಾರಣೆ ಕಾರ್ಯಕ್ರಮಕ್ಕೆ ಹೆಚ್ಚು ಮಹತ್ವವಿದ್ದು ,ದೇನಿಗೆ ವಜ್ರಲೇಪಿತ, ಆಭರಣಗಳನ್ನು ದೇವಿಗೆ ಉಡುಗೆ-ತೊಡಿಗೆಯಾಗಿ ತೊಡಿಸಿ ವಿಶೇಷ ಪೂಜೆ ಮಾಡುತ್ತಾರೆ,ಈ ಸಂದರ್ಭದಲ್ಲಿ ಹಾಜರಾಗುವ ಭಕ್ತರು ಮಾರಮ್ಮದೇವಿಯ ದರುಶನ ಪಡೆದು ಕಣ್ತುಂಬಿಕೊಳ್ಳುತ್ತಾರೆ.



ಪಾಂಡವರು ನಿರ್ಮಿಸಿದ ದೇವಸ್ಥಾನ

ಪ್ರಸ್ತುತ ಪ್ರಸಿದ್ದಿ ಪಡೆದಿರುವ,ಸಹಸ್ರಾರು ಭಕ್ತಾಧಿಗಳನ್ನು ಆಕರ್ಷಿಸುತ್ತಿರುವ ಮಾರಮ್ಮ ದೇವಸ್ಥಾನಕ್ಕೆ ಒಂದು ಐತಿಹ್ಯ ಉಂಟು, ಸಾವಿರಾರು ವರುಷಗಳ ಹಿಂದೆ ಪಾಂಡವರು ವನವಾಸದಲ್ಲಿದ್ದು,ಸಂಚರಿಸುತ್ತ ಬಸವೇನಹಳ್ಳಿ ಬೆಟ್ಟದಲ್ಲಿ ಒಂದು ಬೃಹತ್ತಾದ ಕಲ್ಲುಬಂಡೆಯ ಅಡಿಯಲ್ಲಿ ತಂಗಿ ಅಲ್ಲಿ ವಿಶ್ರಾಂತಿ ಪಡೆದು ಹೊರಡುವಾಗ ಅಲ್ಲಿ ಒಂದು ಪುಟ್ಟ ಕಲ್ಲಿನ ಮೂರ್ತಿಯನ್ನು ಪ್ರತಿಷ್ಟಾಪಿಸಿ ಹೋದರಂತೆ, ಅದು ಕ್ರಮೇಣ ಪಾಂಡವರಗುಡಿ ಕಲ್ಲೇಲಿಂಗೇಶ್ವರ ದೇವಸ್ಥಾನ ಎಂದು ಪ್ರಖ್ಯಾತಿಪಡೆಯಿತು.

ಸುಮಾರು ವರ್ಷಗಳ ನಂತರ ವ್ಯಾಪಾರ ನಿಮಿತ್ತ ಕುದುರೆ, ಹಸುಗಳ ಮೇಲೆ ಚಿನ್ನ ,ಬೆಳ್ಳಿ ಹೇರಿಕೊಂಡು ವ್ಯಾಪಾರಕ್ಕೆ ಬಂದ ವ್ಯಾಪಾರಿಗಳು ವಿಶ್ರಾಂತಿ ಪಡೆಯಲು ಪಾಂಡವರು ವಿಶ್ರಮಿಸಿದ್ದಲ್ಲಿಯೇ ಉಳಿದು, ಬೆಟ್ಟದ ಕೆಳಗೆ ಪಾಂಡವರು ಪ್ರತಿಷ್ಟಾಪಿಸಿದ್ದ ಗುಂಡುಕಲ್ಲು ಅದರ ಜೊತೆ ಇನ್ನೆರಡು ಕಲ್ಲುಗಳನ್ನು ಜೋಡಿಸಿ ಒಲೆ ಮಾಡಿ ಅದರ ಮೇಲೆ ಪಾತ್ರೆಗಳ ಇರಿಸಿ ಊಟ ತಯಾರಿಸಿ ತಿಂದು ನಂತರ ವಿಶ್ರಾಂತಿ ನಿಮಿತ್ತ ಮಲಗಿದರಂತೆ ವ್ಯಾಪರಸ್ಥರು ಮಲಗಿದ್ದಲ್ಲಿಯೇ ಪ್ರಾಣ ಬಿಟ್ಟಿದ್ದರಂತೆ. ತಯಾರಿಸಿದ ಅನ್ನ ಕೂಡ ರಕ್ತಮಯವಾಗಿತ್ತು, ಬೆಟ್ಟದ ಕೆಳಗಿದ್ದ ಹಸು, ಕುದುರೆಗಳು ಸಹ ಸತ್ತಿದ್ದವಂತೆ.

ಪ್ರಾಣಕಳೆದುಕೊಳ್ಳದೆ ಉಳಿದಿದ್ದ ಒಂದಿಬ್ಬರು ಎಲ್ಲೊ ಅನಾಹುತವಾಗಿದೆ ಎಂದು ಯೋಚಿಸುವಷ್ಟರಲ್ಲಿ ಅಲ್ಲಿ ಅಶರೀರವಾಣಿ ಮಾತಾಡುವುದು ಕೇಳಿಸಿತಂತೆ, ಆ ಧ್ವನಿಯನ್ನು ಆಲಿಸಿದ ಅವರು ಕಲ್ಲುಬಂಡೆಯೆಂದು ಆ ಮೂರ್ತಿಯನ್ನು ಅಡಿಗೆಗೆ ಬಳಸಿ ತಪ್ಪು ಮಾಡಿದ್ದೇವೆ ಎಂದು ಕ್ಷಮಾಪಣೆ ಕೇಳಿದಾಗ ಅಶರೀರವಾಣಿ ಕ್ಷಮಾದಾನ ನೀಡುವ ಮೂಲಕ ಅವರೆಲ್ಲರಿಗೂ ಮರಳಿ ಜೀವ ಬಂತೆಂಬ ಪ್ರತಿತಿಯಿದೆ, ನಂತರ ಅವರು ಹೊರಡುವ ಮುನ್ನ ಕಲ್ಲುಗುಂಡೆಂದು ಭಾವಿಸಿದ್ದ ಪುಟ್ಟ ಮೂರ್ತಿಯನ್ನು ಪ್ರತಿಷ್ಟಾಪಿಸಿ ಮೂರು ದೊಡ್ಡ ಕಲ್ಲು ಚಪ್ಪಡಿಗಳನ್ನು ನಿಲ್ಲಿಸಿ ಅದರ ಮೇಲೆ ದೊಡ್ಡದಾದ ಚಪ್ಪಡಿ ಹೊದಿಸಿ ಪುಟ್ಟ ದೇವಾಲಯ ಮಾಡಿ ಪೂಜಿಸಿ ಹೊರಟರಂತೆ. ಅಂದಿನಿಂದ ಕಾಡೇ ಆಗಿದ್ದ ಆ ಸುತ್ತಮುತ್ತಲಿನ ಜಾಗವನ್ನು ಮತ್ತು ಪಾಂಡವರ ಗುಡಿಯನ್ನು ಲಿಂಗೇಗೌಡ ಎಂಬುವವರು ಗುರುತಿಸಿ ಬೆಟ್ಟದ ಕೆಳಗೆ ಜನರೇ ವಾಸಿಸದ ಜಾಗದಲ್ಲಿ ಅವರು ವಾಸಿಸುತ್ತ ದೇವಿಗೆ ಪೂಜೆ ಮಾಡುತ್ತಿದ್ದರು, ಇದನ್ನ ಕಂಡ ಒಂದಿಷ್ಟು ಜನ ಅಲ್ಲಿಗೆ ಬಂದು ವಾಸಮಾಡಲು ಆರಂಭಿಸಿದರು ಅಂದಿನಿಂದ ಅದು ಹಳ್ಳಿಯಾಗಿ, ಪುಟ್ಟ ಕಲ್ಲುಗುಂಡನ್ನೆ ಮಾರಮ್ಮ ದೇವಿ ಎಂದು ಪೂಜಿಸುತ್ತ ಬಂದರು.

ಪ್ರಸ್ತುತಿ ಪಿವಿ ಬ್ರ್ಯಾಂಡ್ ಸ್ಪಾಟ್

ಲಿಂಗೇಗೌಡರ ಮಗ ನಂಜಪ್ಪ ಮತ್ತು ಗಂಗಮಾರಯ್ಯ ಕುಟುಂಬ ಹಾಗೂ ಮಾರೇಗೌಡರು ಅರ್ಚಕರಾಗಿ ದೇವಸ್ಥಾನದಲ್ಲಿ ಪೂಜೆ ಪುನಸ್ಕಾರಗಳು ನಡೆಯುವಂತೆ ನೋಡಿಕೊಂಡು ಬರುತ್ತಲಿದ್ದಾರೆ.

ಜೀರ್ಣೋದ್ದಾರಗೊಂಡ ಪಾಂಡವರ ಗುಡಿ

ಸಾವಿರದ ಒಂಬೈನೂರ ತೊಂಬತ್ತೇಳು, ತೊಂಬತ್ತೆಂಟರಲ್ಲಿ, ಪುಟ್ಟದಾಗಿದ್ದ ದೇವಸ್ಥಾನವನ್ನು ನವೀಕರಿಸಿ ಮೂಲ ದೇವರು ಮಾರಮ್ಮನವರ ಪಟ್ಟ ವಿಗ್ರಹದೊಂದಿಗೆ ,ದೋಡ್ಡದಾದ ದೇವಸ್ಥಾನವನ್ನು ನಿರ್ಮಿಸಲು ಭಕ್ತಾಧಿಗಳು ಹಾಗೂ ಇತರೇ ಗ್ರಾಮಸ್ಥರು ಟೊಂಕಕಟ್ಟಿ ದೇವಸ್ಥಾನವನ್ನು ನಿರ್ಮಿಸಿ ಬಹುದೊಡ್ಡ ಮಾರಮ್ಮನ ವಿಗ್ರಹವನ್ನು ಪ್ರತಿಷ್ಟಾಪಿಸಿದರು,

ಈ ವಿಗ್ರಹ ಸ್ಥಾಪನೆ ಹಾಗೂ ದೇವಾಲಯ ಸ್ಥಾಪನೆಗೆ ಹಳ್ಳಿಯ ಜನ ಹಿಂಜರಿದಿದ್ದು ಉಂಟು, ಶತ,-ಶತಮಾನಗಳಿಂದ ಪುಟ್ಟ ಗುಂಡುಕಲ್ಲು ರೂಪದಲ್ಲಿದ್ದ ದೇವಿಯ ಮಹಿಮೆ ಅರಿತಿದ್ದ ಅವರಿಗೆ ದೇವರ ಅಲುಗಾಡಿಸಿದರೆ ಏನಾದರೂ ಕೇಡಾಗಬಹುದು ಎಂದು ಯೋಚಿಸಿ ಹಿರಿಯರಾದ ಕೆಲವರು , ಹಲವಾರು ಅರ್ಚಕರನ್ನ ಕೇಳಿ ಅದರಲ್ಲೂ ಬೆಂಗಳೂರಿನ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದ ಅರ್ಚಕರಾದ ಶ್ರೀ ಚೆಲುವರಾಜ ಭಟ್ಟಾಚಾರ್ಯ ಅವರ ಮಾರ್ಗದರ್ಶನದಲ್ಲಿ ದೇವಾಲಯ ರೂಪುಗೊಂಡಿತು ಎಂದು ದೇವಸ್ಥಾನದ ಮೇಲುಸ್ತುವಾರಿಯಾಗಿರುವ ಶ್ರೀ ವೆಂಕಟಸ್ವಾಮಿಯವರು ಸ್ಮರಿಸುತ್ತಾರೆ,

ದೇವಸ್ಥಾನ ನಿರ್ಮಾಣಗೊಂಡು ದಿನಕಳೆದಂತೆ ಭಕ್ತರು ನಾನಾ ಕಡೆಗಳಿಂದ ಬರಲು ಆರಂಭವಾದ ನಂತರ ದೇವಸ್ಥಾನವು ಕೂಡ ಹೊಸರೂಪು ಪಡೆಯಲಾರಂಬಿಸಿತು, 2011 ರಲ್ಲಿ 1008 ಕಳಸಗಳನ್ನು ಕೊಯಮತ್ತೂರಿನಲ್ಲಿ ತಯಾರು ಮಾಡಿಸಿ ,ಚಂಡಿಕ ಹೋಮ ಹಾಗೂ ಈ ಕಳಸಗಳಿಂದ ದೇವಿಗೆ ಅಭಿಷೇಕ ಮಾಡುವ ಮಖೇನ ಅಮ್ಮನವರ ಕೃಪಕಟಾಕ್ಷ ಪಡೆದರು,

ಅಂದಿನಿಂದ ಇಂದಿನವರೆವಿಗೂ ಅಮ್ಮನವರ ದರ್ಶನಕ್ಕೆ ನಾಡಿನ ಮೂಲೆ ಮೂಲೆಗಳಿಂದ ಧಾವಿಸುತ್ತಿರುವುದು ಅಚ್ಚರಿಯನ್ನುಂಟು ಮಾಡಿದೆ.

ಗ್ರಾಮಸ್ಥರ ಸಹಕಾರದಿಂದ ಅಶ್ವತ್ ಕಟ್ಟೆ ಹಾಗೂ ದ್ವಿಮುಖ ನಾಗರ ಮೂರ್ತಿಯ ಪ್ರತಿಷ್ಟಾಪನೆ



ದೇವಸ್ಥಾನದ ಮುಂದೆ ಸಾರ್ವಜನಿಕರ ರಸ್ತೆ ಇದ್ದು ಅಲ್ಲಿ ಅಶ್ವತಕಟ್ಟೆ ಇಲ್ಲದಿರುವುದನ್ನು ಗಮನಿಸಿದ ಗ್ರಾಮಸ್ಥರು ಸಾರ್ವಜನಿಕ ರಸ್ತೆಯನ್ನು ಪಕ್ಕಕ್ಕೆ ಸರಿಸಿ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಅಶ್ವತ್ತಕಟ್ಟೆಯನ್ನು ನಿರ್ಮಿಸಿ ವಿಶೇಷ ಎಂಬಂತೆ ದೇವಸ್ಥಾನಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಕಾಣುವಂತೆ ಪಶ್ಚಿಮ ದಿಕ್ಕಿನಲ್ಲಿ ಒಂದು ನಾಗರ ಮತ್ತು ಪೂರ್ವಕ್ಕೆ ಒಂದು ನಾಗರ ಪ್ರತಿಮೆ ಮಾಡಿಸಿದ್ದಾರೆ , ಸಾರ್ಜನಿಕರು ರಸ್ತೆಯ ಬದಿಯಲ್ಲೇ ನಿಂತು ದೇವರ ಹಾಗೂ ನಾಗರ ದರುಶನ ಪಡೆಯಬಹುದಾಗಿದೆ, ವಿಶೇಷವೆಂದರೆ ಒಂದೇ ಪ್ರತಿಮೆಯಲ್ಲಿ ಎರಡೂ ಕಡೆ ನಾಗರಗಳು ಹೆಡೆ ಎತ್ತಿರುವಂತದ್ದು, ಇದು ದೇಶದ ಯಾವುದೇ ಮೂಲೆಯಲ್ಲೂ ಇರದಂತ ಅಪರೂಪದ ನಾಗರ ಪ್ರತಿಮೆ ಇದಾಗಿದೆ. ಭಕ್ತರು ನಾಗದೋಷ ಹಾಗೂ ಇತರೆ ಸಂಕಷ್ಟಗಳಿಗೆ ಇಲ್ಲಿಗೆ ಆಗಮಿಸಿ ಅಶ್ವತ್ತ, ಕಟ್ಟೆಯ ಸುತ್ತಲೂ ಪ್ರದಕ್ಷಿಣೆ ಹಾಕಿ ನಾಗರಪ್ರತಿಮೆಗಳಿಗೆ ಪೂಜೆ ಮಾಡುವುದರಿಂದ ದೋಷ ಮುಕ್ತಿ ಹೊಂದುವುದರ ಜೊತೆ ಕಷ್ಟಗಳಿಗೆ ಪರಿಹಾರ ಸಿಗುತ್ತದೆ ಎಂದು ಅಲ್ಲಿಗೆ ಬಂದ ಭಕ್ತಾಧಿಗಳು ವಿವರಿಸುತ್ತಾರೆ. ಅಶ್ವತ್ತಕಟ್ಟೆ ಗ್ರಾನೈಟ್‌ನಿಂದ ಕಂಗೊಳಿಸುತ್ತಿದ್ದು, ಸಂಪೂರ್ಣವಾಗಿ, ಆಲಯ ಹಾಗೂ ಅಶ್ವತ್ತ ಕಟ್ಟೆ ಪ್ರಶಾಂತವಾಗಿ, ಆಹ್ಲಾದಕರ ವಾತಾವರಣವಾಗಿದೆ, ಈ ಕಟ್ಟೆಯನ್ನು ನಿರ್ಮಿಸಿಕೊಟ್ಟಿರುವ ಶ್ರೇಯಸ್ಸು ಗ್ರಾಮಸ್ಥರಿಗೆ ಸಲ್ಲಬೇಕು

ಭಾನುವಾರದ ಪುರವಣಿ ಓದಿರಿ

SRI DEVARAJ URS ACADEMY OF HIGHER EDUCATION AND RESEARCH
(A Deemed to be University Declared Under Section 3 of UGC Act 1956)
Comprising Sri Devaraj Urs Medical College
[Constituent Unit of Sri Devaraj Urs Educational Trust for Backward Classes (Regd.)]
TAMAKA, KOLAR - 563103, KARNATAKA, INDIA
Ph: 918152-243003, +91 9448395232, FAX: +918152-243008
E-mail: registrar@sduaher.ac.in office@sduaher.ac.in website:www.sduher.ac.in

No. SDUAHER/ADMIN/ 76 / 2023-24 Date:26th, August 2023

ANNOUNCEMENT
FREE POST GRADUATE MEDICAL SEATS WITHOUT TUITION FEES

The Management of Sri Devaraj Urs Academy of Higher Education and Research, Tamaka, Kolar in order to encourage students to join the Pre and Para Clinical courses in Medical, under the categories (General Quota) at Sri Devaraj Urs Academy of Higher Education and Research, Kolar announces **FREE POST GRADUATE MEDICAL SEATS WITHOUT TUITION FEES** allotted during counselling to be conducted by DGHS for the academic year 2023-24 in below mentioned courses:-

Course
MS – Anatomy
MD – Bio-Chemistry
MD – Physiology
MD – Forensic Medicine
MD – Microbiology
MD – Pharmacology

Interested and eligible candidates are requested to apply within last date of admission through DGHS portal.
Sd/-
Dr. D.V.L.N. Prasad, Registrar

ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯ ವಾರ್ಷಿಕೋತ್ಸವ

ಜಯಂತೊಗೆ 'ಬಾರ್ಟನ್ಸ್ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡ 16ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ವ್ಯಂಗ್ಯಚಿತ್ರಕಾರ ಜಯಂತೊ ಬ್ಯಾನರ್ಜಿ ಅವರಿಗೆ 'ಬಾರ್ಟನ್ಸ್ ಜೀವಮಾನ ಸಾಧನೆ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಸಮಾರಂಭದಲ್ಲಿ ಜಯಂತೊ ಬ್ಯಾನರ್ಜಿ ಅವರ ವ್ಯಂಗ್ಯಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಿದ ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್, 'ಬರಹಗಳಲ್ಲಿ ಹೇಳಲಾಗದ್ದನ್ನೂ ವ್ಯಂಗ್ಯಚಿತ್ರಗಳು ಹೇಳುತ್ತವೆ. ಇದು ವೈವಿಧ್ಯಮಯ ಕಲಾ ಪ್ರಕಾರವಾಗಿದ್ದು, ವಿಶ್ವದಾದ್ಯಂತ ಪ್ರಸಿದ್ಧಿ ಪಡೆಯುತ್ತಿದೆ. ಭಾರತದಲ್ಲಿಯೂ ಈ ಪ್ರಕಾರ ವೇಗವಾಗಿ ಬೆಳವಣಿಗೆ ಹೊಂದುತ್ತಿದೆ. ಎಲ್ಲರನ್ನೂ ಸೆಳೆಯುವ ಶಕ್ತಿ ಈ ಕಲೆಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಾರ್ಟನ್ಸ್‌ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಭರತ್ ಮೆಹ್ತಾ, 'ವ್ಯಂಗ್ಯ ಚಿತ್ರ ಕಲಾವಿದರನ್ನು ಗುರುತಿಸಿ, ಪ್ರೋತ್ಸಾಹಿಸಬೇಕು. ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು ಈ ನಿಟ್ಟಿನಲ್ಲಿ ಉತ್ತಮ ಕೆಲಸ ಮಾಡುತ್ತಿದೆ' ಎಂದು ಹೇಳಿದರು.

ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ವಿ.ಜಿ. ನರೇಂದ್ರ, 'ಸಂಸ್ಥೆಯು 16 ವರ್ಷಗಳಲ್ಲಿ ವ್ಯಂಗ್ಯಚಿತ್ರಗಳ 190 ಪ್ರದರ್ಶನ ನಡೆಸಿದೆ. ದೇಶದ ಪ್ರಮುಖ ವ್ಯಂಗ್ಯಚಿತ್ರಕಾರರೆಲ್ಲ ಇಲ್ಲಿಗೆ ಭೇಟಿ ನೀಡಿದ್ದಾರೆ. ಅಮೆರಿಕ, ಇಂಗ್ಲೆಂಡ್ ಸೇರಿ ಹಲವು ದೇಶಗಳ ಕಲಾವಿದರು ಇಲ್ಲಿಗೆ ಬಂದಿದ್ದಾರೆ. ವ್ಯಂಗ್ಯಚಿತ್ರ ಕಾರ್ಯಾಗಾರವನ್ನೂ ನಡೆಸಿ, ಯುವಜನರನ್ನು ಈ ಕಲೆಯತ್ತ ಸೆಳೆಯಲಾಗುತ್ತಿದೆ. ಮಹಿಳೆಯರು ಕೂಡ ಈ ಕಲೆಯ ಬಗ್ಗೆ ಆಸಕ್ತಿ ತೋರುತ್ತಿದ್ದಾರೆ. ವ್ಯಂಗ್ಯಚಿತ್ರಕ್ಕೆ ಸಂಬಂಧಿಸಿದಂತೆ ಸಂಸ್ಥೆಯಲ್ಲಿ 3 ಸಾವಿರಕ್ಕೂ ಅಧಿಕ ಅಪರೂಪದ ಪುಸ್ತಕಗಳಿವೆ. ಇವು ವಿಶ್ವವಿದ್ಯಾಲಯಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಸಹಕಾರಿಯಾಗಿವೆ' ಎಂದರು.

ಜಯಂತೊ ಬ್ಯಾನರ್ಜಿ ಅವರು ರಚಿಸಿದ ನೂರಕ್ಕೂ ಅಧಿಕ ವ್ಯಂಗ್ಯಚಿತ್ರಗಳನ್ನು ಪ್ರದರ್ಶನದಲ್ಲಿ ಇರಿಸಲಾಗಿದೆ. ಎಂ.ಜಿ. ರಸ್ತೆಯಲ್ಲಿರುವ ಇಂಡಿಯನ್ ಕಾರ್ಟೂನ್ ಗ್ಯಾಲರಿಯಲ್ಲಿ ಸೆ.23ರ ವರೆಗೆ ಭಾನುವಾರ ಹೊರತುಪಡಿಸಿ ಉಳಿದ ದಿನ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಪ್ರದರ್ಶನ ಇದೆ.

ಸಮಾರಂಭದಲ್ಲಿ ಜಯಂತೊ ಬ್ಯಾನರ್ಜಿ ಅವರಿಗೆ 'ಬಾರ್ಟನ್ಸ್ ಜೀವಮಾನ ಸಾಧನೆ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಭರತ್ ಮೆಹ್ತಾ, ವಿ.ಜಿ. ನರೇಂದ್ರ, ಚಿರಂಜೀವಿ ಸಿಂಘ್ ಹಾಗೂ ಎನ್‌ಇಸಿಇಯ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ಕೆ. ಅನಂತ ಗೌಡ ಇದ್ದಾರೆ.

'ಕಸ್ತೂರಿ ರಂಗನ್ ವರದಿ ಅವೈಜ್ಞಾನಿಕ'

ಮಡಿಕೇರಿ: 'ಪಶ್ಚಿಮ ಘಟ್ಟ ಕುರಿತ ಕಸ್ತೂರಿ ರಂಗನ್ ವರದಿ ವೈಜ್ಞಾನಿಕವಾಗಿಲ್ಲ, ಅದನ್ನು ತಿರಸ್ಕರಿಸಬೇಕು ಎಂದು ರಾಜ್ಯ ಸರ್ಕಾರ ಈಗಾಗಲೇ ತೀರ್ಮಾನಿಸಿದೆ. ಆದರೂ ಕೇಂದ್ರ ಸರ್ಕಾರ ರಚಿಸಿರುವ ನಿವೃತ್ತ ಐಎಫ್‌ಎಸ್ ಅಧಿಕಾರಿ ಸಂಜಯ್ ಕುಮಾರ್ ನೇತೃತ್ವದ ಸಮಿತಿಗೆ ಪಶ್ಚಿಮಘಟ್ಟದ ಎಲ್ಲರನ್ನು ಭೇಟಿ ಮಾಡಿ ವರದಿ ಸಲ್ಲಿಸುವಂತೆ ಕೋರಲಾಗಿದೆ' ಎಂದು ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

'ಕಸ್ತೂರಿ ರಂಗನ್ ವರದಿ 10 ವರ್ಷ ಹಳೆಯದಾಗಿದ್ದರೆ, ಗಾಡ್ಗೀಳ್ ವರದಿ ಅದಕ್ಕಿಂತ ಹಳೆಯದು. ಪ್ರಸಕ್ತ ಕಾಲಘಟ್ಟದ ಅಗತ್ಯಕ್ಕೆ ತಕ್ಕಂತೆ ವರದಿಯಲ್ಲಿ ಮಾರ್ಪಾಡು ಮಾಡಬೇಕು ಎಂಬುದು ಸರ್ಕಾರದ ನಿಲುವು' ಎಂದರು.

ಬಿ. ಶಿವಸ್ವಾಮಿ ಕೆಎಎಸ್ ಅಧಿಕಾರಿಗಳ ಸಂಘದ ಅಧ್ಯಕ್ಷ

ಕೆಎಎಸ್ ಅಧಿಕಾರಿಗಳ ಸಂಘದ ಪದಾಧಿಕಾರಿಗಳಾಗಿ ಆಯ್ಕೆಯಾದ ಸಿ.ಎಲ್. ಶಿವಕುಮಾರ್, ಕೆ.ಚನ್ನಬಸಪ್ಪ, ಬಿ.ಶಿವಸ್ವಾಮಿ, ಆರತಿ ಆನಂದ್, ಸಿ.ಮದನ್ ಮೋಹನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘದ ಅಧ್ಯಕ್ಷರಾಗಿ ಮುಖ್ಯಮಂತ್ರಿ ಅವರ ಜಂಟಿ ಕಾರ್ಯದರ್ಶಿ ಬಿ.ಶಿವಸ್ವಾಮಿ ಅವರು ಆಯ್ಕೆಯಾಗಿದ್ದಾರೆ.

ಕೆ.ಚನ್ನಬಸಪ್ಪ (ಉಪಾಧ್ಯಕ್ಷ), ಸಿ.ಎಲ್.ಶಿವಕುಮಾರ್ (ಕಾರ್ಯದರ್ಶಿ), ಸಿ.ಮದನ್ ಮೋಹನ್ (ಜಂಟಿ ಕಾರ್ಯದರ್ಶಿ), ಆರತಿ ಆನಂದ್ (ಖಜಾಂಚಿ) ಪದಾಧಿಕಾರಿಗಳಾಗಿ ಆಯ್ಕೆ ಆಗಿದ್ದಾರೆ.

ಆಗಸ್ಟ್ 26ರಂದು ನಡೆದ ಸಂಘದ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಎಲ್ಲ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಸಂಘದ ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.

ಅಮಿತ್ ಶಾ ಕರೆ ಮಾಡಿಲ್ಲ: ಶೆಟ್ಟರ್

ಉಡುಪಿ: 'ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿಯ ಯಾವ ನಾಯಕರೂ ಕರೆ ಮಾಡಿ ನನ್ನ ಜೊತೆ ಮಾತನಾಡಿಲ್ಲ' ಎಂದು ಕಾಂಗ್ರೆಸ್ ನಾಯಕ ಜಗದೀಶ ಶೆಟ್ಟರ್ ಸ್ಪಷ್ಟಪಡಿಸಿದರು.

ಶನಿವಾರ ಮಣಿಪಾಲದಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಬಿಜೆಪಿಯು ರಾಜ್ಯದಲ್ಲಿ ನಾಯಕತ್ವರಹಿತ ಪಕ್ಷವಾಗಿದೆ. ಹೊಸ ರಾಜ್ಯಾಧ್ಯಕ್ಷರ ನೇಮಕ ಮಾಡಲು ಸಹ ಇದುವರೆಗೆ ಸಾಧ್ಯವಾಗಿಲ್ಲ. ಬಿಜೆಪಿಯಲ್ಲಿ ಒಬ್ಬರೂ ನಾಯಕರಿಲ್ಲ; ರಾಜ್ಯದಲ್ಲಿ ಬಿಜೆಪಿ ಮತ್ತಷ್ಟು ದಯನೀಯ ಸ್ಥಿತಿಗೆ ಇಳಿಯಲಿದೆ' ಎಂದು ಹೇಳಿದರು.

'ಬಿಜೆಪಿಯ ಒಳಗೆ ಸಾಕಷ್ಟು ನಾಯಕರು ನೊಂದು ಸಂಕಟಪಡುತ್ತಿದ್ದು, ಪಕ್ಷ ಬಿಟ್ಟು ಬರಲು ಸಿದ್ಧರಾಗಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಜಯಭೇರಿ ಬಾರಿಸಲಿದ್ದು, 12ರಿಂದ 15 ಸ್ಥಾನ ಗೆಲ್ಲುವುದು ನಿಶ್ಚಿತ' ಎಂದರು.

'ಅಸ್ತಿತ್ವದಲ್ಲಿ ಇಲ್ಲದ ಯೋಜನೆಗೆ ಅನುದಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶೇಷ ಶಾಲೆಗಳಿಗೆ ಶಿಕ್ಷಕ ಕೇಂದ್ರಿತವಾಗಿ ನೀಡುತ್ತಿರುವ ಸಹಾಯಧನ ಸ್ಥಗಿತಗೊಳಿಸಿ, ಮಕ್ಕಳು ಕೇಂದ್ರಿತ ಸಹಾಯಧನ ನೀಡಬೇಕು. ಈ ಮೂಲಕ ಹಣದ ದುರುಪಯೋಗ ತಡೆಯಬೇಕು' ಎಂದು ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಆಗ್ರಹಿಸಿದೆ.

ಈ ಬಗ್ಗೆ ಸಂಘವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದೆ. 'ಸರ್ಕಾರವು ಅಸ್ತಿತ್ವದಲ್ಲಿ ಇಲ್ಲದ ಯೋಜನೆಗಳಿಗೆ ಅನುದಾನ ನೀಡುತ್ತಿದೆ. ರಾಜ್ಯ ಅನುದಾನ ಸಂಹಿತೆ–1982ರಡಿ ವಿಶೇಷ ಶಾಲೆಗಳಿಗೆ ನೀಡುತ್ತಿರುವ ಸಹಾಯಧನವು ಶಿಕ್ಷಕ ಕೇಂದ್ರೀಕೃತವಾಗಿತ್ತು. ಇದನ್ನು 2010ರಲ್ಲಿ ಪರಿಷ್ಕರಿಸುವ ಮೂಲಕ ಅಂಗವಿಕಲ ಮಕ್ಕಳಿಗೆ ಕೇಂದ್ರೀಕೃತಗೊಳಿಸಿ, ರಾಜ್ಯ ಸಹಾಯಧನ ಯೋಜನೆ ಜಾರಿಗೆ ಆದೇಶ ಹೊರಡಿಸಲಾಗಿದೆ. ಆ ವೇಳೆ 27 ಶಾಲೆಗಳಿದ್ದವು. 2011ರಲ್ಲಿ ಏಳು ಶಾಲೆಗಳಿಗೆ ಮಂಜೂರಾತಿ ನೀಡಲಾಗಿದೆ. ಸರ್ಕಾರ ತಾನೇ ರೂಪಿಸಿದ ಕಾನೂನು ಉಲ್ಲಂಘಿಸಿ, ಶಿಕ್ಷಕ ಕೇಂದ್ರೀಕೃತ ಸಹಾಯಧನಕ್ಕೆ ಆರ್ಥಿಕ ಇಲಾಖೆಯಿಂದ ಮಂಜೂರಾತಿ ನೀಡುತ್ತದೆ. ಸದ್ಯ 34 ಶಾಲೆಗಳು ಕಾರ್ಯನಿರ್ವಹಿಸುತ್ತಿವೆ' ಎಂದು ಸಂಘದ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ತಿಳಿಸಿದ್ದಾರೆ.

'ಅಸ್ತಿತ್ವದಲ್ಲಿ ಇರದ 1982ರ ರಾಜ್ಯ ಅನುದಾನ ಸಂಹಿತೆಯಡಿ ಶಾಲೆಗಳ ಸಿಬ್ಬಂದಿಗೆ ವಾರ್ಷಿಕ ಸುಮಾರು ₹ 20 ಕೋಟಿ ವೇತನ ನೀಡಲಾಗುತ್ತಿದೆ. ಈ ಶಾಲೆಗಳಲ್ಲಿ 871 ಮಕ್ಕಳಿದ್ದಾರೆ. ಪರಿಷ್ಕರಿಸಿದ ಯೋಜನೆಯಡಿ ವಾರ್ಷಿಕ ₹ 70 ಕೋಟಿ ವೆಚ್ಚದಲ್ಲಿ ಸುಮಾರು 10 ಸಾವಿರ ಮಕ್ಕಳಿಗೆ ಶೈಕ್ಷಣಿಕ ಪುನರ್ವಸತಿ ಒದಗಿಸಲಾಗುತ್ತಿದೆ. ಈ ಶಾಲೆಗಳಲ್ಲಿ ಸುಮಾರು 5 ಸಾವಿರ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಹೇಳಿದ್ದಾರೆ.

'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಅಂಗವಿಕಲರ ಹಣ ಅವರ ಸಬಲೀಕರಣಕ್ಕೆ ಸದ್ಬಳಕೆಯಾಗುವಂತೆ ನೋಡಿಕೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಅಪಘಾತ: ರೈತ ಮುಖಂಡ ಸಾವು

ತಿ.ನರಸೀಪುರ (ಮೈಸೂರು ಜಿಲ್ಲೆ): ತಾಲ್ಲೂಕಿನ ಕುರುಬೂರು ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಶನಿವಾರ ಪಲ್ಸರ್– ಟಿವಿಎಸ್ ಮೊಪೆಡ್ ನಡುವೆ ಸಂಭವಿಸಿದ ಅಪಘಾತದಲ್ಲಿ ತಾಲ್ಲೂಕು ವೀರಶೈವ ಮಹಾಸಭಾ ಉಪಾಧ್ಯಕ್ಷ, ರೈತ ಮುಖಂಡ ಕೆ.ಜಿ.ನಾಗರಾಜು (80) ಮೃತಪಟ್ಟರು.

ಅವರ ಪುತ್ರ ಕೆ.ಎನ್.ರಾಜೇಶ್ ತೀವ್ರವಾಗಿ ಗಾಯಗೊಂಡಿದ್ದು, ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ನಾಗರಾಜು ಹಾಗೂ ರಾಜೇಶ್ ಜಮೀನಿನಿಂದ ಮನೆಗೆ ಬರುತ್ತಿದ್ದಾಗ ಮುಖ್ಯ ರಸ್ತೆಗೆ ತಿರುವ ಪಡೆಯುತ್ತಿದ್ದ ವೇಳೆ ಕೊಳ್ಳೇಗಾಲದ ಕಡೆಯಿಂದ ಬಂದ ಪಲ್ಸರ್ ಬೈಕ್ ಮೊಪೆಡ್‌ಗೆ ಡಿಕ್ಕಿ ಹೊಡೆದಿದ್ದು, ನಾಗರಾಜು ಸ್ಥಳದಲ್ಲೇ ಅಸುನೀಗಿದರು. ರಾಜೇಶ್ ಗಾಯಗೊಂಡರು. ಈ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಕುರುಬೂರು ಗ್ರಾಮಸ್ಥರು ಕೆಲ ಕಾಲ ರಸ್ತೆ ತಡೆ ನಡೆಸಿದರು.

WEEKEND CORNER ಕ್ಲಾಸಿಫೈಡ್ಸ್

AVAILABLE FOR RENT

Available for Rent 5000 Sq Ft RCC, Building Ground & 1st Floor Suitable for Godown at Kadirenahalli 1.5kms From BSK Metro on Uttarahalli Road, With Borewell & 60 HP Power.

Cellar Floor of 900 Sq ft Suitable for Shops / Doctors Clinics / Medical Store Opp. to Central, Mall & Big Bazaar 9th Blk Jayanagar

Contact: 98455 55505

BDA SITE 5 BHK HOUSE FOR SALE

Hosakerehalli

Lift, modular kitchen, commercial space in basement floor, Built-up: 2900 sft (Basement+Gr+3 flrs) South east corner. 620 sqft Site Area

Call: 7406 219 219

WANTED LAND FOR PETROL BUNK

Wanted Land for Long Lease-Rent Minimum Dimension 80ft x100ft & Above Preferably Bangalore North Airport Road, Bangalore Tumkur Road Hoskote-Kolar Road Rajarajeshwari Nagar-Bannerghatta Road and Kothanur-Kannur-Bagalur Road & Sathanur to Reva College Road and any Major Main Road in Bangalore City.

Contact : 99860 39699

DH ಪ್ರಜಾವಾಣಿ Classifieds More value, more impact The 1st thing to do when Selling/Buying your Property REAL ESTATE #1 PLACE YOUR AD HERE www.dhclassifieds.com BOOK NOW

Book your ad with us now! For more details contact: +91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

WANTED OPEN LAND

Looking for open land for SHOWROOM SETUP on main roads only in Bangalore City BBMP Limits for rent / lease for 20 years at Prime Location space required min. 70 feet X 70 feet

9845582152

Exciting FRANCHISE BUSINESS

(only for those having good contacts with school managements)

with single investment (Rs.5 Lakhs only)

3 Exciting Businesses (in Edu. Skills needed for every student)

(First-time Books, Direct & Online Training on skills)

Excellent Profits Assured!

Partner with India's ONLY Organisation holding 15 Limca & World Records!

MAX Academy H.O.: Chennai many Centers in India

maxsmartskills.com 70197 67742 99416 42277

PRM/KA/RERA/1251/309/PR/220223/005748

DS-MAX SHRESTA

BOOK YOUR DREAM HOME IN BANGALORE'S MOST HAPPENING LOCATION

THANISANDRA - KANNURU JUN.

JUST 10 MINS. FROM MANYATA TECH PARK

LUXURIOUS 2 & 3-BHK APARTMENTS

Rs. 42.00 - 54.51 Lakhs*

BBMP APPROVED



8880 003 003

www.dsmaxproperties.com

*T & C Apply

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

REAL ESTATE SELLING

Sites

Arkavathi Layout

30X30 CORNER North West 30x40 South Arkhavathy Layout 2nd block. Genuine Buyer USR- 7019770736 /8951614989.

Bommanahalli

"MICO LAYOUT Bommanahalli Semi-commercial 30x42 BBMP A Katha site for sale Contact: 9845146725/ 9741466369"

Banashankari

BANASHANKARI 6TH Stage- WANTED/ AVAILABLE BDA Sites All Measurements Residential/ Commercial Sites Contact- 8050908920/ 9986866661

BANASHANKARI 6TH Stage, 10th Block, 60x40 West Facing site for sale Rs. 7500/- Sqft. Contact: Pradeep:- 9845365079.

50X80 BDA Site For Sale South Facing Banashankari 3rd Stage Ring Road Call: 9900277889 9986377964

'AVAILABLE 'AND Wanted Banashankari 6th Stage, Anjanapura, BDA And BMRDA Sites,20X30,30X40,40X60, 50X80,Contact:9900097239

SALE BDA Old House 40x60 SF Khatriguppe Water Tank 40ft Road Banashankari 3rd Stage: 9845969165

Frazer Town

SALE 2,100 Sq.Ft 4,100 Sq.Ft Prime Commercial Properties On Wheelers Road, Frazer Town Call: 9980525450

General

EAGLETON RESORTS, BIDADI SITE 80X120, ES CORNER CLOSE GOLF GROUND CLEAR DOCUMENTS RS. 2.70Cr: 9845065084

HAL And Around

60X40 BDA site with 3500sqft house sale on 80ft road HAL 2nd stage near ISRO LPSC. Brokers`Excuse. Contact: 9844089333, +16096646084 (6am-8am/ 4pm-6pm)

Hesaraghatta

30X40 SESHADRI Layout- Near Bagalkunte 'B' Katha SALE 2 Sites Rs. 3500/ Sft. Contact: 84536-94141

Jalahalli

SITES FOR SALE BAGALGUNTE, DC CONVERTED, BUILT TO SUITABLE VILLAS, NEAR BY NAGASANDRA METRO: 6364565657

Kumaraswamy Layout

25X30 EAST Facing BDA Site Sale Kumaraswamy Layout Near Police Station. Clear Titles. Contact:- 9342197377

Kanakapura Road

SALE BCMC, Bank Officer BSK 6th Stage. BDA Panchayat/ Commercial Sites/ House. RMS PROPERTIES: 6360702897

KANAKAPURA ROAD Attached to Narayananagar 1st Block,30x50,North BBMP A' Khata Site 12750/- Negotioble:9845704509

Kempegowda Layout

KEMPEGOWDA LAYOUT, Commercial Site For Sale, 7th J-Sector 50×80, Road 80', North Facing, Kumar 9945112279

Nagarabhavi

SITE FOR Sale- Nagarabhavi, 12th Block, Near Nammura Thindi, BDA Site No. 264, West Facing, 40 feet Road, measuring 30x42 sft. Contact Owner: 9844009086, 9343368313

NAGARBHAVI 1ST Block Near BDA Complex 20x30 Site for Sale, Builder Location. Call: 9342874483, 9880962629

Nelamangala

50X45 NORTH EAST CORNER SITE SALE, Nelamangala New Town, Adjacent to Ratan School Main Road. Contact: 9448064395.

Rajarajeshwari Nagar

'A' KHATA Property for Sale in Rajarajeshwari Nagar 400 mtrs from Sub Registrar office, 40x60, East facing Sites. Call: 9448288522

Tumkur Road

30X40 SITE sale (2 side road) Kirloskar layout, Hesaraghatta main road, opposite Sapthagiri college. 9620480363.

Vijayanagar

NEAR MC-LAYOUT, Secretariat Layout Sale 31X42 South West Corner Site, Semi-Commercial, Clear Title. 9880886474

SITE FOR Sale Vijayanagar 30x70 South Facing Road Nagarbhavi 30x40 North Facing Contact: 9886112385

Vishweshwariah Layout

40X60 BDA Site Sale Vishveshwaraiah Layout 6th Block 40ft Road KLE Law College Opp Direct Owner Only Genuine Buyers Call: 7892037234

BDA 30X40 South Facing 1st Block Rate 9500 Srike 100Ft Road Parllel 40Ft Road 1st Block Rate 10500 2nd Block Rate 8000 3ft Margin Land West Facing SMV Layout 6th Block Rate 8500 Contact: Shivu 9844603127

House

Banashankari

HOUSE SALE (G+3) 2BHK Per Floor @Banashankari 5th Stage BDA 30x40 Plot Attached, Poornapragna Layout, Rs 3.20 Crores Bheeresh 9900471143, 9844888847 Shivakumar 9845875555

Electronic City

1575 SQFT NF Site at Begur. Fully Compounded with Security Gate. A Khatha. 1.5KM from Hosur Road Metro. Rs. 5400/- Psft: 9008930130

Frazer Town

HOUSE FOR Sale measuring 50*80 site in Cox Town. Clear titles. Contact: 9886377763, 9341243676.

Jayanagar

SALE COMMERCIAL 80x120 Jayanagar 5th Block on 80 feet Road With old House Call:9844134068 9066399102

J P Nagar

J.P.NAGAR 3RD Phase Excellent Location Livable 40x60 Duplex-House. North Facing 40x56 Site Also Available Call Suraj Realtors: 9845232711

SALE 20X30 Old House West Facing J.P.Nagar 4th Phase Dollers Calony 1.2cr Negotiable 9886087768, 9739006655

J.P.NAGAR 2ND Phase, 40x60 with old house, West facing near Raghigudda Temple Call Owner- 9945266669.

Rajajinagar

SALE 30X34 Site (with an old house) North facing near Rajajinagar, 6th Block Circle, Broker excuse. Owner: 8310134045

MORE Classifieds Ads on Subsequent Pages

R T Nagar

R.T.NAGAR 5-BHK Duplex House 2nd and 3rd Floor E/F, Semi Furnished. 2.60 Cr Nego. 9986356467

Sanjaynagar

SALE STILT-FLOOR Parking-Plus 3-floors 3 BHK House With Lift and`Solar Vinayaka Layout Bhoopsandra Call:6361859856

Flat

Basavanagudi

WELL APPOINTED 3 Bedroom apartment near National College Metro Station Basavanagudi, LalBagh, Bangalore for Sale. Asking price is Rs. 2.5 Crore. Contact: 9980868914.

Rajajinagar

PURVA BLUEBELLE Adjacent to Magadi road Metro station (purple lane) Rajajinagar 3 bedroom Jodi units 5 bedroom + servant room with all luxurious Amenities for Sale Contact: 9844027560.

DNR HIGHLINE @ Okalipuram near LULU Mall Rajajinagar 3 & 4 Bedroom FLATS with 7 Star Luxurious Amenities for Sale. for details Contact: 9844027560.

Sanjaynagar

SALE: SANJAYNAGAR 2BHK Flats Rupees 7900000 -9900000 Lakhs. 3 BHK Flats 17500000 -2500000/- 9353748029

Vijayanagar

THREE BEDROOM FLAT, Area 1470 sft including Balcony, Carparking, Rate:7500/Sft (Negotiable) at Saraswathinagar, Vijayanagar, Bangalore. (Broker excuse)- 9880100828.

Agricultural Land

Kanakapura Road

AGRICULTURE/ INDUSTRIAL Land 25 Guntas (E/W120Ft And N/S 227Ft) Suitable for Farm House or Industrial Sheds for Sale, 800 mtrs From Somanahalli Gate on Kanakapura Road@ Rs.15.0 Lacs Per Guntas/ Negotiable. M: 9741491886/ 7618763975

Mysore

LAKE ATTACHED FARMPLOTS

6000 Sq ft Fully developed farm plots with direct Lake Access. Plantations - Coconut, Teak & Silver Oak. Location - Hampapura, Mysore. Contact: 8088251504 www.chigurele.com

Out-Station

AGRICULTURE LAND for Sale16 Acres Agriculture Land for Sale-Full Water-Full Fencing, 3kms from Madanapalli-Kadiri Main Road,160Kms for Bangalore,27 Kms from Horsely Hills - Cont: 7382525123

Ramanagar

AGRICULTURAL LANDS Available on Mysore Road in and Around Bidadi, Ramanagar 1-to-50 Acres. Contact- 9900115519

Commercial Building

Jayanagar

JAYANAGAR 9TH Block Commercial PG Building 40x70 Corner5floors,Rental income 7.20 lakhs, Price:10.50cr. Contact.9945079777

Koramangala

BRAND NEW Commercial property for Sale/ Rent in prime location at Koramangala. Contact: 9845122028/ 8548832516

Commercial Land

Multiple Locations

27 ACRES Converted Sale Malur, Industrial Land 7, 12Acres Bidadi,Harohalli, Doddaballapur, Sale/lease/ Build to Suit.9980577227

Mysore Road

SALE BY Owner DC converted for petrol bunk 13,000 sqft vacant commercial land on Bidadi Muthawadi 80 Feet Road, East Facing, Vaastu, E-Khatha clear title. Ready Registration. Ph: 9900170818.

Commerical

Jayanagar

SALE JAYANAGAR 8th Block, 23x50 Commercial old building, South, near Sangam Circle 25,000/- Sft. Janani Associate- 9980645789

Industrial & Factory

Tumkur Road

SALE, INDUSTRIAL Warehouse, Commercial Land. Dabaspet to Doddaballapur, Koratagere Road. 18/25/90 Acres. 9141326819

Villas/Bunglows

Sadashiva Nagar

PRIME RESIDENTIAL VACANT PLOT 45X60 OPPOSITE PARK ACROSS SADASHIVANAGAR SWIMMING POOL SOUTH-FACE CONTACT OWNER 9844018823

RENTAL PROPERTIES

Accommodation Available

Commercial

COMMERCIAL SPACE OF 10,540 SFT AVAILABLE FOR LONG LEASE IN SALARPURIA TOUCHSTONE, KADUBISANAHALLI, OUTER RING ROAD, BANGALORE CONTACT MOBILE NO: 9640040333

House

HOUSE FOR RENT/SALE Independent 3200 Sqft house in 50x80 MUDA Site, 4BHK, North facing, Near Suyog Hospital, Ramakrishna Nagar, Mysore 570023 Monthly Rent: Rs 40000/- Sale Price: Rs 4.25 Crores Contact: 9845680609 / 9886557655

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 Phase Immediate Settlement. genuine Sellers Contact: 9902038118, 9449060605

Banashankari

WANTED BDA Banashankari 6th Stage Anjanapura J.P.Nagar Kanakapura Road Surrounding. Immediate Settlement. Phone- 9964627255/ 9845511170

BDASITES WANTED Arkavathy,Anjanapura, Banashankari 6th-Stage,Kempegowda Vishweswaraiah Any BDA Layout. Contact: 9845062822, 8660751654

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager The Printers (Mysore) Pvt. Ltd. Bengaluru

Title Sponsors

SUMADHURA DELIVERING HAPPINESS Luxury Home Partner

Assetz empowered innovation Redesigning the Way People Live Developer Partner

REALTY INVESTMENT EXPO

Property On Your Mind ? We Got The Best Properties For You

The Biggest Real Estate Expo In East Bengaluru

Marriott Hotel EPIP Zone, Whitefield

26TH & 27TH AUGUST

LAST DAY TODAY

25+ TOP BUILDERS | 100+ PROJECTS



FREE ENTRY 11 AM • 7 PM Marriott Hotel EPIP Zone, Near Sathya Sai Hospital, Whitefield

ADARSH · TotalEnvironment · Nambiar · MANA · DSR · Elegance Enterprises · Aranyakaa · ARS · 2gTULA · Mahidhara Projects Pvt. Ltd. · Jain Farms · SUNDHWA · Felicity Adobe · LIGHTER · HomeLane

VISIT & GET FREE RESORT PASS +91 98451 66756 +91 99564 42255

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Sites

Vishweshwariah Layout

"REQUIRED NAGARABHAVI, Vishveshwaraiah, Kempegowda Layout 20x30, 30x40, 40x60, 50x80 Sites, Contact Genuine sellers only, 9845268611'

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

Resedential/ Commercial

Multiple Locations

"WANTED - RESIDENTIAL COMMERCIAL Industrial Agricultural properties-around Kanakapura Road Bannergatta Rd Mysore-Road Banashankari Jayanagar, J.P.Nagar,BTM, Basaveshwaragar, Rajajinagar, Vijayanagar Genuine Sellers Call 9845286505"

BUILDERS ESSENTIAL

Water Proofing

WE FIX LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

MATRIMONIAL

Brides Wanted

Brahmin

WANTED BRIDE
For Fair, Handsome Brahmin Boy, Born 1991, 5'8''. MBA from prestigious Stanford University (USA), BTech (CSE) from NIT (Double Gold Medalist). Heading Family Business - Central India's Oldest and Largest Higher Education Group of Engineering, Pharmacy, Management Colleges and Universities; Multiple Industries and Companies. Bhopal based Nuclear family of IITians/IIMians.
Mob.: 7987594345
dr.sharma1141@gmail.com

Hindu

WANTED BRIDES
CNB, 32 yrs, 5'11 height, BE MBA, SWE, Sal Rs. 24.00 LPA MNC Blr
CNB, 33 yrs, 5'7" height, M.Tech (IIT), Sal Rs. 30.00 LPA, Project Manager, MNC Blr
CNB, 31 yrs, 5'8" height, CA, Sal Rs. 35.00 LPA, Finance Controller, MNC Blr.
Contact USHODHAYA (Personalized Matrimonial Services)
96119 19477
98868 84291

JOB OPPORTUNITIES

Marketing & Sales

"OFFICE AND Marketing Executives needed for-a reputed dental equipment Pvt.Ltd company-in Bangalore. Qualification: graduation in any discipline,with computer knowledge and well-versed English language. MBA with,or without experience. Training will_be arranged as_per the requirements,& guidelines. Interested candidates can_call: 9341223410/ 9844016274/ 9980546442"

Teachers/ Professors

HHS & HMS ITI
WANTED TEACHING STAFF

Trade	Qualification	Post
Electrician	BE in EEE or Diploma in EEE	1
Electronics Mechanic	BE in E&C or Diploma in E&C	2
Clerk	B.Com. with Computer knowledge	1

Apply Bio Data with in Ten days or Email to hhshmsiti@gmail.com
2, Hazrath Hameed Shah Complex,Cubbonpet Main Road, Bengaluru- 560002
9986020170 / 080-41707827

REQUIRED EXPERIENCED candidates to handle Nursery Section with NTT qualification. Contact: Jnanavahini Vidya Samsthe (JVS) #8, BEML layout, 8th main, Basaveswara Nagar, Bengaluru-79. Phone: 9343745526. Email: jvsschool@gmail.com

REQUIRED PROFESSOR/ Reader Obstetric Gynecologist (OBG) Contact : Principal Anuradha Homoeopathic Medical College & Hospital, Shreegandha Nagar, Shreeganda Kaval, Hegganahalli Cross, Bengalore Ph No : 8073895319 Email : anuradhahomoeopathy@gmail.com

WANTED LECTURERS in Biology, Computer Science and Commerce for Vidyavana College, Whitefield Bengaluru. Contact: 9663389388, vidyavanahr@gmail.com

General

WAREHOUSE INCHARGE At Gulbarga 2- 3 Yrs Experience Sap, Excel, English Essential- 9154369336, awl.ar.hyd@Gmail.Com

WANTED STAFF Security Guards, Kitchen Helpers, Office Female Assistant, Bus Driver. Contact: 'Professional' Bangalore. 9886236341.

Multiple Vacancy

WANTED EXPERIENCED Female TALLY OPERATOR/ ACCOUNTANT/ OFFICE ASSISTANT for Office in Vasantnagar, Bangalore. Contact- 7411252299

EDUCATION SUCCESS

PRASIDDHI SCHOOL
Managed by Sree Sharadamba Trust ®
Bangalore Palace Compound, Vasanthnagar, Bangalore – 560 052.

Celebrating Student Milestones!

The Prasiddhi School, Palace Ground, Bangalore, is proud to share that 7 of our students from the 10th standard were among the 36 selected all over India for showcasing their dreams and aspirations through reels on Instagram as part of the Amrit Generation Campaign organised by the Ministry of Women and Child Development in collaboration with META, India.
Our Students were fortunate to have a unique opportunity to meet and interact with our Honourable **Prime Minister, Shri. Modiji,** on the 11th of August at the Parliament House in New Delhi.

The Management, Principal, Staff & Students Congratulate them

Names of Students in order from left :
Rahul Singh. Ridhi Shree R. Khushee NK. Khushbu Kanwar. Nikitha R. Mahima SM. Laharikhaa Sri KR

prasiddhischool1991@gmail.com Tel 23447687 / 99809 99065

Engg/ Production Technical

MISTRY ARCITECTS Required CIVIL ENGINEERS with 2/3 years of experience @ site/office. Should have knowledge of specifications & BOQ'S compulsory. Contact: 080-25256266, 41154416, Email- reception@mistrys.com

Wanted

WANTED
Join Our Compassionate Team at The Beeches UK Ltd!
We're seeking dedicated Residential Care Workers to provide exceptional care to children and young people aged 8-18. As part of our team, you'll support education, behavior, and well-being, provide personalized care, assist with daily activities, implement therapeutic interventions, and ensure compliance with regulations. This opportunity offers 3-year, 2-tier UK visa sponsorship, 28 days holiday, pension contributions, and full training provided. To apply, send your CV to waltermackintosh2023@gmail.com for further information.

OTHERS

For Sale

OFFICE ASSETS FOR RE-SALE
Office assets like work stations, cash counter, cabins, cubicles, furniture's, Godrej strong room grill with door, unused Godrej Safe lockers available in the premises for outright re-sale on **'as is where is'** condition available at 3 locations suitable for Banks, NBFC etc.
Location Contact:
Bangalore: 9481481919 / 9036292226
Mysore : 8618222424 / 9341236021
Puttur : 8970294980

EDUCATIONAL

Correspondence Courses

STUDY AT Home SSLC DIRECT 2nd PUC Regular Class Science Commerce Arts. BA,B.Com,BBA, B.Sc,BCA,BSW, B.LISc,B.Ed, M.Ed, M.LISc,MA M.Com,M.Sc, MBA, MSW, MCA,PG-Diploma Courses, Contact: Manasa Correspondence College. Malleshwaram Circle Bangalore. 9663555154/ 9880498484.

BUSINESS

Business to Business

Consultants

WE NEED Retired Bank Executives from Deutsche Bank, ICICI, Axis, Kotak Banks, public sector Banks with Experience in NPA Loans, DRT cases and one time settlements to work as CONSULTANTS. Call Arun 9945699789.

Business Offers

Business For Sale

RUNNING RESTAURANT for sale in Mysore at a Prime location. Interested buyers may contact 9036866770

PERSONAL

Change of Name

I, NO.14623272A, Rank- Hon.Naib.Sub. Name: C AROKIA DOSS S/o. S.Chennappan R/a#798, 26th cross, L.R.Nagar, Vivekanagar Post, Bengaluru North-560047 have changed_my_name from C AROKIA DOSS to C AROCKIA DASS vide`affidavit dated:22.8.2023 before`Notary Meer Hassan,Bangalore

CHANGE OF NAME
I, **M. SANTHOSHI** D/O MR. MANMULLJI DHARIWAL residing at No.11, Flat No. 401, PRESTIGE ANDREE RESIDENCE, ANDREE ROAD, SHANTHINAGAR, BENGALURU-560027 changed my name as **SUJATHA TALEDA** with effect from 26.02.1996 (Twenty Sixth February Nineteen Ninety Six) vide Affidavit dated: 21.08.2023 sworn to before Mr.C.Srinivasa, Advocate and Notary, Govt of India, 11/4, 13th Cross, 8th Main, Malleswaram, Bengaluru-560003, Register No. 1806 Expiry on 08.11.2025.

I, GEETA Spouse of 681502-B. Warrant Officer N Raghuveera Bhat R/o.Flat#103, Sai_Charan Platinum Apartment, 15th`Cross, 1st Block, Vishwapriya Nagar, Begur_Main Road,Bengaluru 560068 have changed my Name from GEETA to GEETHA BHAT vide`affidavit dated:24.8.2023 before VII.Addl.Chief Metropolitan Magistrate, Bangalore

I, CHANDRAKALA Chikkavalagamadi Venkatappa W/o Dr KV Raghu aged about 48 years, residing at No.18, Mathrushree Nilaya 3rd Cross, Ashirwad Layout, Varanasi, TC Palya Post KR.Puram, Bangalore 560036. Have changed my name to Chandrakala ChampionReef Venkatappa vide affidavit dated 26.08.2023 before Notary C Sasikala Bangalore. Henceforth I shall be called as Chandrakala ChampionReef Venkatappa only.

CHANGE OF NAME
I, **CHITTI BABU A V,** R/at. 37, K.R.Palyam, ITC Main Road, Cox Town, Jeevanahalli, Bangalore - 560005 have changed my name to **CHITTI BABU ADANI VENKATACHALAPATHI** vide affidavit dated 19/08/2023 before Notary R. Venkateshan, Bangalore.

I, JAYANTHI HANDADI SHRINIVASA, residing at Udupi-576220 have changed my name as JAYANTHI SHIVARAMA ADIGA, vide affidavit dated 26/8/2023 before Notary P.C.Ramaiah, Bengaluru

I, SHIVARAMA, residing at Udupi-576220 have changed my name as SHIVARAMA ADIGA KOLLUR VISHWESHWARA, vide affidavit dated 26/8/2023 before Notary P.C.Ramaiah, Bengaluru

I, KALPANA W/o S M Shashidhar aged about 40 Years, residing at Ward No 01, New KEB Colony, Vapasandra, Chikkaballapur Town and District. Have changed my name to N Kalpana vide affidavit dated 26.05.2023 before Notary K H Venkatappa Chikkaballapur. Henceforth I shall be called as N Kalpana only

I, JOHNSON JAIWANTH, Residing at Bangalore-91 have changed my name as JOHNSON, vide affidavit dated 26/8/2023 before Notary P.C.Ramaiah, Bengaluru

Lost

DOCUMENT LOST
I, **BIJU CHACHO,** R/at # Flat No. 204, SR Homes, Near Chinnapanahalli Lake, Srinivasa Reddy Layout, Bangalore-37, have lost my original **sale deed document no./ Identification No : 4518/1973-74 & 776/ 1974-75 (RHB Colony, Mahadevapura Post)**
Finders please Contact:
9349123468

DH DECCAN HERALD Classifieds
More value, more impact
REAL ESTATE ಪ್ರಜಾವಾಣಿ
The 1st thing to do when Selling/Buying your Property
#1 PLACE YOUR AD HERE
www.dhclassifieds.com BOOK NOW
Book your ad with us now! For more details contact:
+91 9901641752 | +91 9886213331 |
+91 9845114560 | +91 9731810277 |
+91 9900428036 | 080- 45557163/164

THE BIG TWIN EXPO IN OUR CITY!
LAST 3 DAYS OF EXPO! DON'T MISS IT!
POWER TV Presents
FURNITURE & HOME INTERIOR EXPO
25th Aug Friday BIG SALE | 26th Aug Saturday BIG DEALS | 27th Aug Sunday BIG EXCHANGE | 28th Aug Monday BIG OFFERS | 29th Aug Tuesday BIG DISCOUNT
TIMING: 10 AM TO 9.30 PM
VENUE: SHUBH CONVENTION CENTRE,
(FULLY AIR CONDITIONED) NEAR BRIGADE MILLINIUM, JP NAGAR, 7 TH PHASE - BENGALURU

MODERN SOFA SET | RECLINER SOFA SET | DINING ROOM FURNITURE | ITALIAN DESIGNER SOFAS | ANTIQUE & IRON FURNITURE
SPACE SAVING FURNITURE | SHEESHAM WOOD FURNITURE | CARPET, RUGS & MATTRESSES | DECORATIVE ART & HANDICRAFTS | CARVED WOODEN SWING
AMPLE CAR PARKING ENTRY FREE 91 96111 76669
YP ROOPESH EVENTS & EXHIBITIONS Marketed by RED FM 93.5

Where Luxury Meets Glamour!
Indian Lifestyle & Jewellery Exhibition back again at Bangalore
50 Designer Brands Across Country

POWER TV Presents
INDIAN LIFESTYLE & JEWELLERY EXHIBITION
Adorn. Inspire. Elevate. Celebrate.
DATE
25th | 26th | 27th | 28th | 29th
August 2023
VENUE
Shubh Convention Centre,
JP. Nagar, Bengaluru
Marketed by
fs Fasshion Storei Event Company
RED FM 93.5 Bajaate Raho!
For Booking Contact Ravi:+91-9880340484
Follow Us: fasshionstorei.exhibition

ಅಪ್ಪೆಮಿಡಿಯ ಅಂತರಂಗ...

ಒಂದನೇ ಪುಟದಿಂದ

ಹೀಗಾಗಿ ಐದಾರು ವರ್ಷಗಳ ಹಿಂದೆ ನೂರು ಕೋಟಿ ರೂಪಾಯಿಗಳಷ್ಟಿದ್ದ ಮಿಡಿ ವಹಿವಾಟು ಈಗ ಮೂರ್ನಾಲ್ಕುಪಟ್ಟು ಹೆಚ್ಚಿದೆ ಎಂದು ಅಂದಾಜಿಸಲಾಗುತ್ತಿದೆ. ಹೀಗೆ ವಿಶಿಷ್ಟ ಸ್ವಾದ, ಪರಿಮಳ, ರುಚಿಯ ಕಾರಣಕ್ಕಾಗಿ 'ಸಾಗರ ಪ್ರಾಂತದ ಅಪ್ಪೆಮಿಡಿ ತಳಿ'ಗೆ ಭೌಗೋಳಿಕ ಗುರುತಿಸುವಿಕೆ(Geographical Indicator Registry) ಮಾನ್ಯತೆ ಸಿಕ್ಕಿದೆ.

ಅಪ್ಪೆಮಿಡಿಗೆ ಇಷ್ಟೆಲ್ಲ ಬೇಡಿಕೆ ಇದ್ದರೂ, ಅದಕ್ಕೆ ತಕ್ಕಂತೆ ಉತ್ಪಾದನೆಯಾಗುತ್ತಿಲ್ಲ. ವರದಿಯೊಂದರ ಪ್ರಕಾರ ಉಪ್ಪಿನಕಾಯಿ ತಯಾರಿಕೆಯ ಬೇಡಿಕೆಗೆ ಪೂರೈಕೆಯಾಗುತ್ತಿರುವ ಅಪ್ಪೆಮಿಡಿಗಳಲ್ಲಿ ಬೆಳೆಗಾರರ ಪಾಲು ಶೇ 1ಕ್ಕಿಂತ ಕಡಿಮೆ ಎನ್ನಲಾಗುತ್ತಿದೆ. ಇಂಥ ಅಪರೂಪದ ಮಾವಿನ ತಳಿಯ ಬೆಳೆ ಪ್ರದೇಶದ ವಿಸ್ತೀರ್ಣ, ಉತ್ಪಾದನೆ, ಬೇಡಿಕೆ, ವಹಿವಾಟು, ಮಾರುಕಟ್ಟೆಯಂತಹ ಮಾಹಿತಿಗಳು ಬೆಳೆಗಾರರ ಬಾಯಿಮಾತಿನಲ್ಲಿವೆಯೇ ಹೊರತು, ಎಲ್ಲೂ ದಾಖಲೆಯಾಗಿ ಲಭ್ಯವಿಲ್ಲ. ಇದಕ್ಕೆ ಕಾರಣ ಅಪ್ಪೆಮಿಡಿ ಕೃಷಿ, ಮಾರುಕಟ್ಟೆ ಎಲ್ಲ ಅಸಂಘಟಿತವಾಗಿರುವುದೇ ಆಗಿದೆ.

ಜಾಡಿಯಲ್ಲಿರುವ ಉಪ್ಪು ಬೆರೆಸಿದ ಅಪ್ಪೆಮಿಡಿ ಕಾಯಿಗಳು

ಅಪ್ಪೆಮಿಡಿಯ ವೈಶಿಷ್ಟ್ಯ

ಅಪ್ಪೆಮಿಡಿ ಉಪ್ಪಿನಕಾಯಿಗೆ ಬಳಸುವ ಅಪರೂಪದ ತಳಿ. ಜೀರಿಗೆ ಮಿಡಿ ಉಪ್ಪಿನಕಾಯಿ ಹೆಸರು ಹೇಳಿದರೆ ಸಾಕು, ಬಾಯಲ್ಲಿ ನೀರೂರುತ್ತದೆ. ಮಲೆನಾಡಿಗರು ಇದರಲ್ಲಿ ಗೊಜ್ಜು, ಹುಳಿ ಸೇರಿದಂತೆ ಹಲವು ಖಾದ್ಯಗಳನ್ನು ತಯಾರಿಸುತ್ತಾರೆ. ಕೃಷಿ ಬರಹಗಾರ ಪೂರ್ಣಪ್ರಜ್ಞ ಬೇಳೂರು ಅವರು ಈ ತಳಿಯಿಂದ ತಯಾರಿಸುವ ಸುಮಾರು ಇಪ್ಪತ್ತೆಂಟು ಖಾದ್ಯಗಳನ್ನು ದಾಖಲಿಸಿದ್ದಾರೆ. ಇಷ್ಟೆಲ್ಲ ಆದರೂ, ಈ ಅಪ್ಪೆಮಿಡಿಯನ್ನು ಮಲೆನಾಡಿಗರು ಉಪ್ಪಿನಕಾಯಿಯ ಸರಕಾಗಷ್ಟೇ ನೋಡುವುದಿಲ್ಲ. ತಮ್ಮ ಸೀಮೆಯ ಸಾಂಸ್ಕೃತಿಕ ರಾಯಭಾರಿಯಂತೆ ಕಾಣುತ್ತಾರೆ.

ಈ ಮಾವಿನ ಕಾಯಿಯ ತೊಟ್ಟು ಮುರಿದಾಗ ಚಿಮ್ಮುವ ಸೊನೆ ಇದೆಯಲ್ಲಾ, ಅದು ಉಪ್ಪಿನಕಾಯಿಯನ್ನು ದೀರ್ಘಕಾಲ ಕೆಡದಂತಿಡುವ ರಕ್ಷಾ ಕವಚ. ಸೊನೆಗೆ ಬೆಂಕಿ ಹಚ್ಚಿ 'ಗುಣಮಟ್ಟ' ಪರೀಕ್ಷಿಸುತ್ತಾರೆ. ಆ ಬೆಂಕಿ ದೀರ್ಘಕಾಲ ಉರಿದರೆ ಮಿಡಿ ಉತ್ತಮ, ಬಾಳಿಕೆಯೂ ದೀರ್ಘವೆಂದು ಅರ್ಥ. ಒಂದೇ ಒಂದು ತೊಟ್ಟು ಸೊನೆ, ಇಡೀ ಆಹಾರವನ್ನೇ ಪರಿಮಳಯುಕ್ತವಾಗಿಸುತ್ತದೆ. ಈ 'ಸೊನೆ'ಯ ಪರಿಮಳದಿಂದ ಗ್ರಾಹಕರನ್ನು ಮರಳು ಮಾಡುವ ಪ್ರಯತ್ನಗಳು ಅಲ್ಲಲ್ಲಿ ನಡೆಯುತ್ತವೆಯಂತೆ !

ಮಿಡಿ ಮಾವಿನಲ್ಲಿ ರೈತರು ನಾಲ್ಕು ವಿಧದ/ತಳಿಗಳನ್ನು ಗುರುತಿಸುತ್ತಾರೆ. ಅಪ್ಪೆಮಿಡಿ, ಜೀರಿಗೆ ಮಿಡಿ, ಕರ್ಪೂರದ ಅಪ್ಪೆ ಮಿಡಿ, ಕಂಚಪ್ಪೆ ಮಿಡಿ. ಇವೆಲ್ಲ ಮಿಡಿಯ ಸೊನೆಯ ಪರಿಮಳ ಆಧರಿಸಿ ಗುರುತಿಸಿರುವ ತಳಿಗಳು. ಜೀರಿಗೆ ಪರಿಮಳವಿರುವ ಮಿಡಿಗೆ 'ಜೀರಿಗೆ ಅಪ್ಪೆ', ಕಂಚಿಕಾಯಿ ರುಚಿಯಿರುವ ಮಿಡಿಗೆ 'ಕಂಚಪ್ಪೆ' ಹಾಗೂ ಹುಳಿ ಅಂಶವಿರುವ ಮಿಡಿಗೆ 'ಸಾದಾ ಅಪ್ಪೆ' ಎನ್ನುತ್ತಾರೆ. ಇದೇ ತಳಿಗಳನ್ನು ಬೇರೆ ಬೇರೆ ಪ್ರದೇಶದಲ್ಲಿ ಬೆಳೆಯುವ ಕಾರಣ, ಈ ಮಾವಿನ ಜೊತೆಗೆ, ಆಯಾ ಪ್ರದೇಶ, ಊರುಗಳ ಹೆಸರೂ ಬೆರೆತುಕೊಂಡಿವೆ.

ಮಲೆನಾಡಿನಲ್ಲಿ ನೂರು ವರ್ಷಕ್ಕೂ ಹಳೆಯದಾದ ಅಪ್ಪೆಮಿಡಿ ಮರಗಳಿವೆ. ಹಳೆಯ ಮರಗಳು ಬೃಹತ್ ಗಾತ್ರದ ಜೊತೆಗೆ ಎತ್ತರವಾಗಿರುತ್ತವೆ. ಇವುಗಳಲ್ಲಿ ಒಂದೊಂದು ಮರ 2 ಸಾವಿರದಿಂದ 6 ಸಾವಿರ ಮಿಡಿಗಳನ್ನು ಬಿಡುತ್ತದೆ. ಕೆಲವು 4 ರಿಂದ 5 ಟನ್ ಫಸಲು ಕೊಟ್ಟಿರುವ ಉದಾಹರಣೆಗಳಿವೆ.

ಬೆಳೆಗಾರರ 'ಮಾವಿನ ತಳಿ'

ವಿಶಿಷ್ಟ ಗುಣಗಳಿರುವ ಅಪ್ಪೆಮಿಡಿ ತಳಿಗಳನ್ನು ಮೊದಲು ಗುರುತಿಸಿದ್ದು, ತೋಟಗಳಲ್ಲಿ ಬೆಳೆಸಲು ಪ್ರಯತ್ನಿಸಿದ್ದು ಮಲೆನಾಡಿನ ಬೆಳೆಗಾರರೇ. ಅದು ಎಂಟು ದಶಕಗಳ ಹಿಂದೆ. 1939ರಲ್ಲಿ ಶಿರಸಿ ತಾಲ್ಲೂಕಿನ ಸಿದ್ದಾಪುರದ ಶೇಡಿ ದಂಟ್ಕಲ್ ಗಣೇಶ ಹೆಗಡೆಯವರು ಅಘನಾಶಿನಿ ನದಿಯ ದಂಡೆಯಲ್ಲಿದ್ದ 'ಅನಂತಭಟ್ಟನ ಅಪ್ಪೆಮಿಡಿ' ಎಂಬ ಮಾವಿನ ತಳಿಯನ್ನು ಮೊದಲ ಬಾರಿಗೆ ತೋಟದಲ್ಲಿ ನೆಟ್ಟು ಬೆಳೆಸಲು ಪ್ರಯತ್ನಿಸಿದರು ಎಂದು ಅಪ್ಪೆಮಿಡಿ ಕುರಿತು ಮೂರು ದಶಕಗಳ ಕಾಲ ಕ್ಷೇತ್ರಾಧ್ಯಯನ ನಡೆಸಿರುವ ಕೃಷಿ–ಪರಿಸರ ಬರಹಗಾರ ಶಿವಾನಂದ ಕಳವೆ ಹೇಳುತ್ತಾರೆ.

ಅಂದಿನಿಂದ 90ರ ದಶಕದವರೆಗೂ ಅಲ್ಲಲ್ಲಿ ಅಪ್ಪೆಮಿಡಿ ಕೃಷಿ ಚರ್ಚೆಯಾಗುತ್ತಿದ್ದರೂ, 1990ರ ನಂತರ ಆ ವಿಷಯದ ಕುರಿತು ಗಂಭೀರವಾದ ಮಾತುಕತೆಗಳು ಆರಂಭವಾದವು. ಸಾಗರದ ಬೇಳೂರು ಸುಬ್ಬಣ್ಣನವರಂಥ ಅನುಭವಿ ಕೃಷಿಕರು ಹಲವು ವಿಧದ ಅಪ್ಪೆಮಿಡಿಗಳನ್ನು ಗುರುತಿಸಿ, ಕಸಿ ಗಿಡಗಳನ್ನು ತಯಾರಿಸಿ ರೈತರಿಗೆ ಬೆಳೆಸಲು ಉತ್ತೇಜಿಸಿದರು. 2005 ರಿಂದ 2007ರ ನಡುವೆ ಶಿರಸಿ, ಸಾಗರದಲ್ಲಿ ಶಿವಾನಂದ ಕಳವೆ ನೇತೃತ್ವದಲ್ಲಿ 'ಅಪ್ಪೆಮಿಡಿಯ ಮೂಲ ತಳಿಗಳ ಸಂರಕ್ಷಣೆ' ಉದ್ದೇಶದೊಂದಿಗೆ ನಡೆದ ಮೇಳಗಳು ಈ ಮಾವಿನ ಕೃಷಿ ವಿಸ್ತರಣೆ ಜೊತೆಗೆ, ಮಹಿಳಾ ಸಂಘಗಳು ಮನೆ ಮನೆಗಳಲ್ಲಿ ಅಪ್ಪೆಮಿಡಿ ಉಪ್ಪಿನಕಾಯಿ ತಯಾರಿಸಿ ಮಾರಾಟ ಮಾಡಲು ಉತ್ತೇಜನ ನೀಡಿದವು.

ಮೇಳಗಳು, ಹಬ್ಬಗಳಿಂದ ಅಪ್ಪೆಮಿಡಿಗೆ ಬೇಡಿಕೆಯೂ ಹೆಚ್ಚಾಯಿತು. ಉಪ್ಪಿನಕಾಯಿ ತಯಾರಕ ಕಂಪನಿಗಳು ಮಿಡಿ ರುಚಿ ಬೆನ್ನು ಹತ್ತಿ, ಆ ಬೇಡಿಕೆಯನ್ನು ವಿಸ್ತರಿಸಿದವು. ಈ ಲಾಭ ಪಡೆಯಲು ಹೊಳೆದಡದಲ್ಲಿದ್ದ ಮಾವಿನ ಮರಗಳಿಂದ ಅವೈಜ್ಞಾನಿಕವಾಗಿ ಕಾಯಿಗಳನ್ನು ಕೊಯ್ಯುವವರ ಸಂಖ್ಯೆಯೂ ಅಧಿಕವಾಯಿತು. ಎತ್ತರದ ಮರಗಳನ್ನು ಏರಿ ಕಾಯಿ ಕೊಯ್ಯುವ ಕೌಶಲವಿಲ್ಲದವರು, ಮರದ ರೆಂಬೆಗಳನ್ನು ಕತ್ತರಿಸಲಾರಂಭಿಸಿದರು. ಪರಿಣಾಮವಾಗಿ ಅಪರೂಪದ ಅಪ್ಪೆಮಿಡಿ ತಳಿಗಳು ಅಳಿಯಲು ಆರಂಭವಾದವು.

ತಳಿ ಸಂರಕ್ಷಣೆಯ ಪ್ರಯತ್ನ

ಇದೇ ವೇಳೆ ಅಪ್ಪೆಮಿಡಿಯ ಅಪರೂಪದ ತಳಿಗಳ ಸಂರಕ್ಷಣೆಗೆ ಭಾರತೀಯ ತೋಟಗಾರಿಕ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಮುಂದಾಯಿತು. ಸಂಸ್ಥೆಯ ನಿರ್ದೇಶಕರಾಗಿದ್ದ ಡಾ.ಎಂ.ಆರ್. ದಿನೇಶ್, ಡಾ.ಕೆ.ವಿ.ರವಿಶಂಕರ್ ಮತ್ತಿತರರ ವಿಜ್ಞಾನಿಗಳ ತಂಡ ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿ ಸುತ್ತಾಡಿ, ಅಳಿವಿನಂಚಿನಲ್ಲಿದ್ದ ಅಪ್ಪೆಮಿಡಿ ತಳಿಗಳನ್ನು ಗುರುತಿಸಿ, ಸಸಿ ಮಾಡಿ ಐಐಎಚ್‌ಆರ್ ಆವರಣದಲ್ಲಿ (ಜೀನ್ ಬ್ಯಾಂಕ್) ನೆಟ್ಟು ಬೆಳೆಸಲಾರಂಭಿಸಿದರು. ಸುಮಾರು ಎರಡು ದಶಕಗಳಿಂದ ಈ ತಳಿ ಸಂರಕ್ಷಣೆ, ಸಂಶೋಧನೆ ಮುಂದುವರಿಯುತ್ತಿದೆ. ಸದ್ಯ 200ಕ್ಕೂ ಹೆಚ್ಚು ವಿದದ ಅಪ್ಪೆಮಿಡಿಗಳ ಸಂಗ್ರಹವಾಗಿದೆ. ಸಂಗ್ರಹಿಸಿರುವ ತಳಿಗಳ ಗುಣ ವಿಶೇಷಣಗಳನ್ನು ದಾಖಲಿಸಲಾಗಿದೆ. ಇಲ್ಲಿ ಬೆಳೆಯುವ ಮಿಡಿಗಳನ್ನು ರೈತರಿಗೆ ಪರಿಚಯಿಸಲು ಐಐಎಚ್‌ಆರ್ ಪ್ರತಿ ವರ್ಷ 'ಅಪ್ಪೆಮಿಡಿ ಮೇಳ'ವನ್ನು ಆಯೋಜಿಸುತ್ತಿದೆ.

ಈ ನಡುವೆ 2008–09ರಲ್ಲಿ ಶಿವಮೊಗ್ಗ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕರಾಗಿದ್ದ ವಿಶ್ವನಾಥ್ ಅವರು ಅಪ್ಪೆಮಿಡಿಯ ಸಂರಕ್ಷಣೆ ಮತ್ತು ವಿಸ್ತರಣೆಗೆ ಆಸಕ್ತ ಬೆಳೆಗಾರರನ್ನು ಉತ್ತೇಜಿಸಿದರು. ಸಾಗರದ ಭಾಗದಲ್ಲಿರುವ ಮಿಡಿ ತಳಿಗಳನ್ನು ಗುರುತಿಸಿ, ಕಸಿ ಗಿಡಗಳನ್ನು ತಯಾರಿಸಿ, ರೈತರಿಗೆ ವಿತರಿಸುವ ಕಾರ್ಯಕ್ಕೆ ಮುಂದಾದರು. 'ಕ್ಲಸ್ಟರ್ ವಿಲೇಜ್' ಪರಿಕಲ್ಪನೆಯಲ್ಲಿ ರೈತರ ಗುಂಪುಗಳ ಮೂಲಕ ಅಪ್ಪೆಮಿಡಿ ಗಿಡಗಳನ್ನು ಬೆಳೆಸುವ ಆಂದೋಲನವೂ ನಡೆಯಿತು. ಇದೇ ವೇಳೆ ಇಲಾಖೆ ಆಸಕ್ತ ಬೆಳೆಗಾರರನ್ನು ಸೇರಿಸಿ 'ಸಹ್ಯಾದ್ರಿ ಅಪ್ಪೆಮಿಡಿ ಬೆಳೆಗಾರರ ಸಂಘ' ಸ್ಥಾಪಿಸಲು ಉತ್ತೇಜಿಸಿತು. ಮಿಡಿ ಸಸಿಗಳ ವಿತರಣೆ ಜೊತೆಗೆ, ಅವುಗಳನ್ನು ಬೆಳೆಸಲು ಬೇಕಾದ ಗೊಬ್ಬರ, ನಿರ್ವಹಣೆಗೆ ಸಬ್ಸಿಡಿ ನೀಡುವ ಮೂಲಕ ಅಪ್ಪೆಮಿಡಿ ಬೆಳವಣಿಗೆಗೆ ಉತ್ತೇಜನ ನೀಡಲಾಯಿತು.

1. ಅಪ್ಪೆಮಿಡಿ ಕಾಯಿ, 2.ಉಪ್ಪಿನಲ್ಲಿ ಹಾಕಿರುವುದು 3. ಉಪ್ಪುನೀರಿನಲ್ಲಿ ಮುಳುಗಿಸಿದ ನಂತರ 4. ಉಪ್ಪಿನಕಾಯಿ
ಚಿತ್ರಗಳು: ಅಪ್ಪೆಮಿಡಿ, ಐಐಎಚ್‌ಆರ್ ಪ್ರಕಟಿತ ಪುಸ್ತಕದಿಂದ

ಐಐಎಚ್‌ಆರ್‌ನಲ್ಲಿ ನಡೆದ ಅಪ್ಪೆಮಿಡಿ ಮೇಳದಲ್ಲಿ ಪ್ರದರ್ಶನಕ್ಕಿಟ್ಟಿದ್ದ ಜೀನ್ ಬ್ಯಾಂಕ್‌ನ ಅಪ್ಪೆಮಿಡಿ ತಳಿಗಳು

ಇದೇ ವೇಳೆ, ಸಾಗರದಲ್ಲಿರುವ ತೋಟಗಾರಿಕಾ ಇಲಾಖೆಯ ಫಾರಂನಲ್ಲಿ ವಿವಿಧ ತಳಿಗಳ ಅಪ್ಪೆಮಿಡಿ ಮಾವಿನ ಸಸಿಗಳನ್ನು ಬೆಳೆಸುವ ಪ್ರಕ್ರಿಯೆ ಶುರುವಾಯಿತು. ಮತ್ತೊಂದೆಡೆ ಶಿರಸಿ ಭಾಗದಲ್ಲಿ ಅಲ್ಲಿನ ಅರಣ್ಯ ಕಾಲೇಜು, ಸ್ಥಳೀಯ ಬೆಳೆಗಾರರು ಆ ಭಾಗದಲ್ಲಿ ಅಪ್ಪೆಮಿಡಿ ವಿಸ್ತರಣೆಗೆ ಆಸಕ್ತಿ ತೋರಿದರು. ಪರಿಣಾಮವಾಗಿ ಈಗ ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 50 ಹೆಕ್ಟೇರ್, ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು 10 ಹೆಕ್ಟೇರ್‌ನಲ್ಲಿ ಅಪ್ಪೆಮಿಡಿ ಕೃಷಿ ಇದೆ. 'ಸಹ್ಯಾದ್ರಿ ಬಳಗದಲ್ಲಿ 50 ನೋಂದಾಯಿತ ಸದಸ್ಯರಿದ್ದಾರೆ. ಸಾಗರದ ಎರಡು ಹೋಬಳಿಗಳಲ್ಲೇ ಸುಮಾರು 20 ಸಾವಿರ ಅಪ್ಪೆಮಿಡಿ ಗಿಡಗಳಿವೆ' ಎನ್ನುತ್ತಾರೆ ಸಂಘದ ಅಧ್ಯಕ್ಷ ಸಾಗರದ ಗಣೇಶ್ ಕಾಕಲ್.

ದಶಕದಿಂದೀಚೆಗೆ ಅಪ್ಪೆಮಿಡಿಯು ತುಮಕೂರು, ದೊಡ್ಡಬಳ್ಳಾಪುರ ಮೈಸೂರು, ನೆಲಮಂಗಲ, ಹಿರಿಯೂರು ಸೇರಿದಂತೆ ಬಯಲು ಸೀಮೆ ಪ್ರದೇಶಕ್ಕೂ ವಿಸ್ತರಿಸಿದೆ. ಗದಗ ಜಿಲ್ಲೆ ಗಜೇಂದ್ರಗಡ ಸಮೀಪದಲ್ಲಿ ಸಮೀರ್ ಪಾಟೀಲ್ ಎಂಬುವವರು ನಾಲ್ಕು ವರ್ಷಗಳಿಂದ ದೊಂಬೆಸರ ಜೀರಿಗೆ, ಕ್ವಾಡ್ರಿಗೆ ಜೀರಿಗೆ, ಕಲ್ಕೊಪ್ಪ ಜೀರಿಗೆ, ಬಟಾಣಿಜೆಡ್ಡು ಹೆಸರಿನ 500 ಅಪ್ಪೆಮಿಡಿ ಗಿಡಗಳನ್ನು ಹಂತ ಹಂತವಾಗಿ ನಾಟಿ ಮಾಡಿಕೊಂಡು ಬಂದಿದ್ದಾರೆ. ಅವುಗಳಲ್ಲಿ 40 ರಿಂದ 60 ಗಿಡಗಳು ಫಸಲು ಕೊಡುತ್ತಿವೆ. ಉತ್ತಮ ಬೆಲೆಯೂ ಸಿಗುತ್ತಿದೆಯಂತೆ. ಮುಂದೆ ಮಿಡಿಗಳನ್ನು ಉಪ್ಪುನೀರಿನಲ್ಲಿಟ್ಟು, ನೇರವಾಗಿ ಗ್ರಾಹಕರಿಗೆ ತಲುಪಿಸುವ ಯೋಚನೆಯಲ್ಲಿದ್ದಾರೆ ಸಮೀರ್.

ಮೂಲ ಸಮಸ್ಯೆ: ಇಷ್ಟೆಲ್ಲ ಪ್ರಯತ್ನಗಳ ಫಲವಾಗಿ 2007ರಿಂದ ಇಲ್ಲಿವರೆಗೂ ಅಪ್ಪೆಮಿಡಿ ಕೃಷಿ ದೊಡ್ಡ ಪ್ರಮಾಣದಲ್ಲೇನೊ ವಿಸ್ತರಣೆಯಾಗುತ್ತಿದೆ. ಆದರೆ, ನಾಟಿ ಮಾಡುವ ಗಿಡಗಳೆಲ್ಲ ಫಲ ಕೊಡುತ್ತಿಲ್ಲ (ಸಾಮಾನ್ಯವಾಗಿ ಗಿಡ ನೆಟ್ಟು ನಾಲ್ಕೈದು ವರ್ಷಗಳ ನಂತರ ಫಸಲು ಶುರುವಾಗುತ್ತದೆ).

ಐಐಎಚ್‌ಆರ್, ತೋಟಗಾರಿಕೆ ಇಲಾಖೆ ಜಂಟಿಯಾಗಿ, ಬೆಳೆಗಾರರು ಮತ್ತು ಬಳಕೆದಾರರ ಸಹಭಾಗಿತ್ವದೊಂದಿಗೆ ಅಪ್ಪೆಮಿಡಿ ತಳಿಗಳ ಕುರಿತು ಅಧ್ಯಯನ ನಡೆಸಬೇಕು. ಯಾವ ತಳಿಯಲ್ಲಿ ಅಪ್ಪೆಮಿಡಿಯ ಮೂಲ ಗುಣವಿದೆ. ಉಪ್ಪಿನಕಾಯಿಗೆ ಒಗ್ಗುವ ತಳಿ ಯಾವುದು? ಇವೇ ಮೊದಲಾದ ಗುಣವಿಶೇಷಣಗಳನ್ನು ಪತ್ತೆ ಮಾಡಬೇಕು

–ಡಾ. ಕೆ. ರಾಮಕೃಷ್ಣಪ್ಪ, ತೋಟಗಾರಿಕೆ ಇಲಾಖೆಯ ನಿವೃತ್ತ ಹೆಚ್ಚುವರಿ ನಿರ್ದೇಶಕರು

ಅಪ್ಪೆಮಿಡಿ ಬೆಳೆ ವಿಸ್ತರಣೆಯಾಗುತ್ತಿದೆ. ಶೀಘ್ರ ಹಾಗೂ ನಿರಂತರವಾಗಿ ಫಲ ಕೊಡುವಂತಹ ತಳಿಗಳ ಸಂಶೋಧನೆ ನಡೆಸುವ ಕುರಿತು ತೋಟಗಾರಿಕಾ ವಿಶ್ವವಿದ್ಯಾಲಯೊಂದಿಗೆ ಚರ್ಚಿಸಲಾಗಿದೆ.

– ಪ್ರಕಾಶ್, ಉಪ ನಿರ್ದೇಶಕರು, ತೋಟಗಾರಿಕಾ ಇಲಾಖೆ, ಶಿವಮೊಗ್ಗ

ಸಾವಿರ ಗಿಡಗಳನ್ನು ಬೆಳೆಸಿರುವ ಭಾರ್ಗವ ಹೆಗಡೆ 'ನಾನು ಎಲ್ಲ ರೀತಿಯ ಆರೈಕೆ ಮಾಡುತ್ತಿದ್ದೇನೆ. ಆದರೂ, ಎಲ್ಲ ಮರಗಳು ಪ್ರತಿ ವರ್ಷ ಕಾಯಿ ಬಿಡುವುದಿಲ್ಲ. ಕೆಲವು ತಳಿಗಳಂತೂ ಚೆನ್ನಾಗಿ ಬೆಳೆಯುತ್ತವೆ. ಒಮ್ಮೆಯೂ ಕಾಯಿ ಬಿಡದಿರುವ ಉದಾಹರಣೆಗಳಿವೆ' ಎನ್ನುತ್ತಾರೆ.

'ಸಾಗರ ತಾಲ್ಲೂಕಿನಲ್ಲಿ ಹತ್ತಾರು ಬೆಳೆಗಾರರು ಉತ್ಸಾಹದಿಂದ ಅಪ್ಪೆಮಿಡಿ ಬೆಳೆಗಾರರ ಸಂಘ ಮಾಡಿ, ಹೆಚ್ಚು ಅಪ್ಪೆಮಿಡಿ ಬೆಳೆಸಲು ಪ್ರಯತ್ನಿಸಿದರು. ಗಿಡಗಳನ್ನು ನೆಟ್ಟು ಏಳೆಂಟು ವರ್ಷಗಳಾದರೂ ಕಾಯಿ ಬಿಡಲಿಲ್ಲ. ಹೀಗಾಗಿ ಎಲ್ಲರಿಗೂ ನಿರಾಸೆಯಾಗಿದೆ. ಸಂಘದ ಚಟುವಟಿಕೆಗಳೂ ಮೊದಲಿನಷ್ಟು ಉತ್ಸಾಹದಿಂದ ನಡೆಯುತ್ತಿಲ್ಲ' ಎನ್ನುತ್ತಾರೆ ಗಣೇಶ್ ಕಾಕಲ್.

ಸಾಗರದ ತೋಟಗಾರಿಕೆ ಇಲಾಖೆಯ ಫಾರಂನಲ್ಲಿ ವಿವಿಧ ಅಪ್ಪೆಮಿಡಿ ತಳಿಗಳ ಸುಮಾರು ಮೂರು ಸಾವಿರ ಮರಗಳಿವೆಯಂತೆ. ಪ್ರತಿ ವರ್ಷ 80 ರಿಂದ 90 ಮರಗಳಷ್ಟೇ ಕಾಯಿ ಬಿಡುತ್ತವೆ. ಉಳಿದ ಮರಗಳಲ್ಲಿ ಹೂವಾಗುತ್ತದೆ. ಕಾಯಿ ಕಚ್ಚುವುದಿಲ್ಲ. ಎಲ್ಲ ರೀತಿಯ ವೈಜ್ಞಾನಿಕ ಆರೈಕೆಗಳನ್ನು ಮಾಡಿದ್ದೇವೆ. ಪ್ರಯತ್ನಗಳಿಗೆ 'ಫಲ' ಸಿಕ್ಕಿಲ್ಲ' ಎನ್ನುತ್ತಾರೆ ಸಾಗರದ ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ರಮೇಶ್. ದಶಕಗಳ ಹಿಂದೆ 'ಅನಂತಭಟ್ಟನ ಅಪ್ಪೆಮಿಡಿ ತಳಿ'ಯನ್ನು ಸಸಿ ಮಾಡಿ ಹಂಚಿದಾಗಲೂ ಇಂಥ ಅನುಭವಗಳೇ ಆಗಿವೆ.

ಗಿಡಗಳು ಕಾಯಿ ಕಚ್ಚದಿರುವುದಕ್ಕೆ ಬೆಳೆಗಾರರು ಅವರದ್ದೇ ಆದ ಅನುಭವದಲ್ಲಿ ಕಂಡುಕೊಂಡಿರುವ ಕಾರಣಗಳನ್ನು ನೀಡುತ್ತಾರೆ. ಒಬ್ಬರು 'ಹವಾಮಾನ ವೈಪರೀತ್ಯದಿಂದ ಹೀಗಾಗಿರಬಹುದು' ಎಂದು ಅಂದಾಜಿಸಿದರೆ, 'ನದಿ–ಹೊಳೆ ದಂಡೆ ವಾತಾವರಣದಲ್ಲಿ ಬೆಳೆಯುವ ತಳಿ, ಕೃಷಿ ಭೂಮಿಯ ವಾತಾವರಣಕ್ಕೆ ಹೊಂದಿಕೊಳ್ಳದೇ ಇರಬಹುದು' ಎಂದು ತರ್ಕಿಸುತ್ತಾರೆ. ಕೆಲವು ವಿಜ್ಞಾನಿಗಳು ಹಾಗೂ ನರ್ಸರಿಯವರು ಗಿಡ ನಾಟಿ ಮಾಡುವ ತಾಂತ್ರಿಕ ಪ್ರಕ್ರಿಯೆಯಲ್ಲಿನ ವ್ಯತ್ಯಾಸದಿಂದ ಹೀಗಾಗುತ್ತಿದೆ ಎನ್ನುತ್ತಾರೆ. ಆದರೆ, ನಿಖರವಾದ ಕಾರಣವೇನೆಂಬುದು ಇನ್ನೂ ಸರಿಯಾಗಿ ತಿಳಿದಿಲ್ಲ.

ಆದರೆ, ಐಐಎಚ್‌ಆರ್ ಮತ್ತು ಶಿರಸಿ ಅರಣ್ಯ ಕಾಲೇಜಿನ ಪ್ರಾಯೋಗಿಕ ತಾಕುಗಳಲ್ಲಿ ಬೆಳೆಸಿರುವ ಅಪ್ಪೆಮಿಡಿಯ ತಳಿಗಳಲ್ಲಿ ಕೆಲವು ಉತ್ತಮ ಫಲ ಕೊಡುತ್ತಿವೆ. ಐಐಎಚ್‌ಆರ್, ತನ್ನ ಜೀನ್ ಬ್ಯಾಂಕ್‌ನಲ್ಲಿ ಉತ್ತಮವಾಗಿ ಫಲ ಕೊಡುತ್ತಿ ರುವ ನಾಲ್ಕೈದು ತಳಿಗಳನ್ನು ಗುರುತಿಸಿ, ಅವುಗಳಿಂದ ಕಸಿ ಗಿಡಗಳನ್ನು ತಯಾರಿಸಿ ರೈತರಿಗೆ ವಿತರಿಸುತ್ತಿದೆ. ಆದರೆ, ಸಂಶೋಧನಾ ತಾಕುಗಳಲ್ಲಿ ಗೆಲ್ಲುವ ಅಪ್ಪೆಮಿಡಿ ತಳಿಗಳು ಜಮೀನಿನಲ್ಲೇಕೆ ಗೆಲ್ಲುವುದಿಲ್ಲ ಎನ್ನುವುದು ಬೆಳೆಗಾರರ ಪ್ರಶ್ನೆಯಾಗಿದೆ.

(ಪೂರಕ ಮಾಹಿತಿ: ರಾಜೇಂದ್ರ ಹೆಗಡೆ, ಶಿರಸಿ, ಐಐಎಚ್‌ಆರ್, ಬೆಂಗಳೂರು, ತೋಟಗಾರಿಕೆ ಇಲಾಖೆ, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆ. ಡಾ. ವಾಸುದೇವ್ ಆರ್. ಶಿರಸಿ, ಅನಂತಮೂರ್ತಿ ಜವಳಿ, ರಿಪ್ಪನ್‌ಪೇಟೆ, ನಾಗೇಂದ್ರ ಸಾಗರ್)

ಪರಿಹಾರದ ಮಾರ್ಗಗಳಾವುವು ?

ಪ್ರತಿ ವರ್ಷ ನಿಶ್ಚಿತವಾಗಿ ಕಾಯಿ ಬಿಡುವಂತಹ ಅಪ್ಪೆಮಿಡಿ ತಳಿಗಳನ್ನು ಗುರುತಿಸಿ, ರೈತರಿಗೆ ವಿತರಿಸುವ ಕೆಲಸವಾಗಬೇಕು ಎನ್ನುವುದು ಹಲವು ಅಪ್ಪೆಮಿಡಿ ಬೆಳೆಗಾರರ ಪ್ರಮುಖ ಬೇಡಿಕೆ.

ಈವರೆಗೆ ಪರಿಮಳ, ಬಣ್ಣ, ಆಕಾರ ಚೆನ್ನಾಗಿರುವಂತಹ ಮಿಡಿ ಮಾವಿನ ಕುರಿತು ಸಂಶೋಧನೆಗಳಾಗಿವೆ. ಆದರೆ, ನಮಗೆ ಬೇಕಾಗಿರುವುದು ಪ್ರತಿ ವರ್ಷ ಫಸಲು ಬಿಡುವ ಮಾಮೂಲಿ ಅಪ್ಪೆಮಿಡಿ ತಳಿ. ಇದರ ಬಗ್ಗೆ ಸಂಶೋಧನೆ ಮಾಡಿ ತಿಳಿಸಿದರೆ, ರೈತರಿಗೂ ಅನುಕೂಲ, ಗ್ರಾಹಕರ ಜೇಬಿಗೂ ಹೊರೆಯಾಗುವುದಿಲ್ಲ ಎನ್ನುತ್ತಾರೆ ಕೃಷಿಕ ಭಾರ್ಗವ ಹೆಗಡೆ.

ಅಡ್ಡೇರಿ ಜೀರಿಗೆ ಚಿತ್ರ: ಡಾ.ಕೆ.ವಿ.ರವಿಶಂಕರ್

ತಳಿ ಗುರುತಿಸುವ ಜೊತೆಗೆ, ಬೆಳೆಯುವ ವಿಧಾನದಲ್ಲಿ (ಕೃಷಿ) ಪ್ರಾದೇಶಿಕವಾಗಿ ಅನುಸರಿಸುವ ತಂತ್ರಜ್ಞಾನಗಳನ್ನು ಸಂಶೋಧಿಸುವ ಕಡೆಯೂ ಗಮನಹರಿಸಬೇಕಿದೆ. ಜೊತೆಗೆ, ಸ್ಥಳ ಮತ್ತು ವಾತಾವರಣ ಬದಲಾದಾಗ ತಳಿಗಳಲ್ಲಿನ ಗುಣದಲ್ಲಿ ವ್ಯತ್ಯಾಸವಾಗುತ್ತವೆಯೇ ಎಂಬುದನ್ನು ಸಂಶೋಧನೆಗಳ ಮೂಲಕ ಪತ್ತೆ ಹಚ್ಚಬೇಕಿದೆ ಎಂಬುದು ಬೆಳೆಗಾರರ ಬೇಡಿಕೆಯಾಗಿದೆ.

ಈಗಾಗಲೇ ಅಪ್ಪೆಮಿಡಿಯ 'ಬೇಡಿಕೆ'ಯ ಬೆನ್ನುಹತ್ತಿ ಎಕರೆಗಟ್ಟಲೆ ಅಪ್ಪೆಮಿಡಿ ಗಿಡಗಳನ್ನು ಬೆಳೆಸುವ ಪ್ರಯತ್ನ ನಡೆಯುತ್ತಿದೆ. ಸಾಕಷ್ಟು ನರ್ಸರಿಗಳಲ್ಲಿ ಸಸಿಗಳು ಮಾರಾಟವಾಗುತ್ತಿವೆ. 'ಹಲವು ಕನಸುಗಳನ್ನಿಟ್ಟುಕೊಂಡು ನೆಟ್ಟ ಗಿಡಗಳು ಫಸಲೇ ಬಿಡುತ್ತಿಲ್ಲ, ನಾವೇನಾದರೂ ಮೋಸ ಹೋಗಿದ್ದೀವಾ' ಎಂದು ಹಳಹಳಿಸುತ್ತಿರುವವರು ಇದ್ದಾರೆ.

ಇಂಥ ಸಂದರ್ಭದಲ್ಲಿ ರಾಜ್ಯ ಸರ್ಕಾರ, ಅಪ್ಪೆಮಿಡಿಯಲ್ಲಿರುವ ಉತ್ತಮ ತಳಿಗಳ ಗುರುತಿಸುವಿಕೆ ಮತ್ತು ಅಭಿವೃದ್ಧಿಪಡಿಸುವತ್ತ ಹೆಚ್ಚು ಗಮನಹರಿಸಬೇಕಿದೆ. 'ಅಡಿಕೆಗೆ ಪರ್ಯಾಯ' ಬೆಳೆಯಾಗಬಹುದಾದ ಬೆಳೆ ಇದು ಎಂದು ಅಪ್ಪೆಮಿಡಿ ಬೆಳೆಸಿ ಯಶಸ್ಸು ಕಂಡವರು ಹೇಳುತ್ತಿದ್ದಾರೆ. ಬೇರೆಲ್ಲ ಮಾವಿಗಿಂತ ಕಡಿಮೆ ಆರೈಕೆಯಲ್ಲಿ, ಹೆಚ್ಚು ಹಣ ನೀಡುವ ತಳಿ ಎಂದು ಅನುಭವಿ ರೈತರ ಅಭಿಪ್ರಾಯವಾಗಿದೆ. ಇದೆಲ್ಲದಕ್ಕಿಂತ ಮುಖ್ಯವಾಗಿ, ತನ್ನ ವಿಶಿಷ್ಟ ಗುಣಗಳಿಗಾಗಿಯೇ ಅಪ್ಪೆಮಿಡಿ ಜಿ.ಐ ಮಾನ್ಯತೆ ಪಡೆದಿದೆ. ಇಂಥ ಅಪೂರೂಪದ ಮಾವಿನತಳಿಯ ಅಭಿವೃದ್ಧಿಗಾಗಿ ಪ್ರತ್ಯೇಕ ಯೋಜನೆಯೊಂದನ್ನು ರೂಪಿಸುವ ಅಗತ್ಯವೂ ಇದೆ.

ಅಪ್ಪೆಮಿಡಿ ಉಪ್ಪಿನಕಾಯಿ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 27-8-1998

● **ಜಾರಿ ನಿರ್ದೇಶನಾಲಯದ ವಕೀಲ ಕೆ.ಕುಮಾರ್ ಹಠಾತ್ ವಜಾ**

ಚೆನ್ನೈ, ಆ. 26 (ಯುಎನ್‌ಐ)– ಜಾರಿ ನಿರ್ದೇಶನಾಲಯದ ನಿರ್ದೇಶಕ ಎಂ.ಕೆ.ಬೆಕ್‌ಬರೂವ ಅವರನ್ನು ವರ್ಗಾವಣೆ ಮಾಡಿದ ಬೆನ್ನ ಹಿಂದೆಯೇ ಜಾರಿ ನಿರ್ದೇಶನಾಲಯದ ವಿಶೇಷ ಸರ್ಕಾರಿ ವಕೀಲರಾದ ಕೆ.ಕುಮಾರ್ ಅವರನ್ನು ವಜಾ ಮಾಡಲಾಗಿದೆ.

ಅವರು ಎಐಎಡಿಎಂಕೆಯ ನಾಯಕಿ ಜೆ.ಜಯಲಲಿತಾ ಅವರ ಆಪ್ತ ಗೆಳತಿ ಶಶಿಕಲಾ ಅವರ ವಿರುದ್ಧದ 'ಫೆರಾ' (ವಿದೇಶಿ ವಿನಿಯಮ ಕಾಯ್ದೆ) ಪ್ರಕರಣಗಳನ್ನು ನಿರ್ವಹಿಸುತ್ತಿದ್ದರು.

50 ವರ್ಷಗಳ ಹಿಂದೆ

ಸೋಮವಾರ, 27-8-1973

● **ಅಜೀಜ್ ಅಹ್ಮದ್ ಮನವಿ ಮೇರೆಗೆ ಮತ್ತೆ ಇಂದಿರಾ ಮಧ್ಯಪ್ರವೇಶ**

ನವದೆಹಲಿ, ಆ. 26– 1971ರ ಸಮರದ ನಂತರ ಉದ್ಭವಿಸಿರುವ ಮಾನವೀಯ ಸಮಸ್ಯೆಗಳ ಇತ್ಯರ್ಥಕ್ಕಾಗಿ ಭಾರತ–ಪಾಕಿಸ್ತಾನಗಳ ನಡುವೆ ಕಳೆದ ಎಂಟು ದಿನಗಳಿಂದ ಇಲ್ಲಿ ನಡೆದಿರುವ ಮಾತುಕತೆಯಲ್ಲಿ ಉಂಟಾಗಿರುವ ತೊಡಕನ್ನು ನಿವಾರಿಸಲು ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಇಂದು ಮಧ್ಯಪ್ರವೇಶ ಮಾಡಿದರು.

ಪಾಕಿಸ್ತಾನಿ ನಿಯೋಗದ ನಾಯಕ ಅಜೀಜ್ ಅಹ್ಮದ್ ಅವರು ಇಂದು ಸಂಜೆ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರನ್ನು ಭೇಟಿ ಮಾಡಿದ್ದರು. ಇಂದಿರಾಗಾಂಧಿ ಮತ್ತು ಅಹ್ಮದ್ ಅವರ ನಡುವೆ ಸುಮಾರು ಅರ್ಧಗಂಟೆಕಾಲ ಮಾತುಕತೆ ನಡೆಯಿತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಆಗಸ್ಟ್ 27, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಏಕಾದಶಿ ಗಂ. 21-33 ನಕ್ಷತ್ರ: ಮೂಲಾ ಗಂ. 07-16 ನಂತರ ಪೂರ್ವಾಷಾಢ ಗಂ. 29-15 ಯೋಗ: ಪ್ರೀತಿ ಗಂ. 13-26 ಕರಣ: ವಣಿಜ ಗಂ. 10-56, ಸಿಂಹ ಮಾಸದ 10 ನೇ ದಿನ, ಮಳೆನಕ್ಷತ್ರ: ಮಘಾ 3, ರಾಹುಕಾಲ: ಸಾಯಂಕಾಲ 04-30 – 06-00, ಸೂರ್ಯೋದಯ : 06-22 ಸೂರ್ಯಾಸ್ತ : 06-42, ಮುಸ್ಲಿಂ ದಿನಾಂಕ: 10 ಸಫರ್, ದಿನ ವಿಶೇಷ: ಝುಲಾನ ಯಾತ್ರಾರಂಭ, ಪವಿತ್ರ ಏಕಾದಶಿ,
ಅದೃಷ್ಟ ಸಂಖ್ಯೆ: 1, 9

ಮೇಷ: ಎಲ್ಲಾ ಸಮಸ್ಯೆ ಬಗೆಹರಿಸಿಕೊಂಡು ಮುಂದಿನ ಹೆಜ್ಜೆ ಹಾಕುವ ಯೋಚನೆ ಸರಿಯಾದ ಮಾರ್ಗವಾಗಿರುತ್ತದೆ. ಅಕ್ಕ-ಪಕ್ಕದವರಲ್ಲಿ ಮಾತನಾಡುವ, ಗೆಳೆತನವನ್ನು ಬೆಳೆಸಿಕೊಳ್ಳುವ ನಡುವಳಿಕೆಯನ್ನು ರೂಢಿಸಿಕೊಳ್ಳಿರಿ.

ವೃಷಭ: ಸಮಸ್ಯೆ ಮತ್ತು ದುಃಖ ಎಲ್ಲರ ಜೀವನದಲ್ಲೂ ಇರುವುದು, ಅದಕ್ಕಾಗಿ ಹೆದರುವ ಅವಶ್ಯಕತೆ ಇಲ್ಲ. ಸಮಸ್ಯೆಯನ್ನು ಎದುರಿಸುವ ಬಗ್ಗೆ ಯೋಚಿಸಿ. ನಿಮ್ಮ ಇಂದಿನ ದಿನಚರಿಯು ನಿಮ್ಮವರಲ್ಲಿ ಸಂತೋಷವನ್ನು ಮೂಡಿಸುತ್ತದೆ.

ಮಿಥುನ: ಕಲಹವನ್ನು ಉಂಟುಮಾಡುವ ವಿಚಾರಗಳನ್ನು ನಿಯಂತ್ರಿಸುವ ಜಾಣ್ಮೆ ನಿಮ್ಮಲ್ಲಿರಲಿ. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತತೆ ತೋರಿ ಬರುತ್ತದೆ. ಕ್ರೀಡೆ ಮತ್ತು ಚಿತ್ರಕಲೆಯಲ್ಲಿ ಆಸಕ್ತಿ ಹೆಚ್ಚಲಿದೆ.

ಕರ್ಕಾಟಕ: ಫ್ಯಾಷನ್ ಡಿಸೈನರ್‌ಗಳು ಹೆಚ್ಚಿನ ಅವಕಾಶ, ಉತ್ತಮ ಧನಲಾಭ ಪಡೆಯುವರು. ನಂಬಿಕಸ್ಥರಿಂದ ಮೋಸ ಹೋಗುವ ಸಾಧ್ಯತೆಯಿದೆ ಜಾಗ್ರತೆವಹಿಸಿ. ಪಾಲಕರಾಗುವ ಸುದ್ದಿ ತಿಳಿದು ಸಂತಸವಾಗುವುದು.

ಸಿಂಹ: ನಿಮ್ಮ ಸಾಮರ್ಥ್ಯ ಮತ್ತು ಕೆಲಸಕ್ಕೆ ಗ್ರಹಣ ಆವರಿಸಿ ಯೋಜನಾಬದ್ಧವಾಗಿ ಈ ದಿನ ಕೆಲಸ ನಡೆಯುವುದು ಕಷ್ಟಕರ ವಿಷಯ. ಬಟ್ಟೆ ವ್ಯಾಪಾರಿಗಳಿಗೆ ಇಂದು ಉತ್ತಮ ಮಾರಾಟ ಹಾಗೂ ಉತ್ತಮ ಲಾಭವಾಗುವುದು.

ಕನ್ಯಾ: ಸಹೋದರರಲ್ಲಿನ ಭಿನ್ನಾಭಿಪ್ರಾಯ ಅನ್ಯರಿಗೆ ತಿಳಿಯುವಂಥ ಘಟನೆ ಈ ದಿನ ನಡೆಯಬಹುದು. ಆದಾಯಕ್ಕೆ ತಕ್ಕಂತೆ ಜೀವನವನ್ನು ರೂಪಿಸಿಕೊಳ್ಳುವಲ್ಲಿ ಸಮರ್ಥರಾಗುವಿರಿ. ವಿದ್ಯಾರ್ಥಿಗಳಿಗೆ ಪ್ರಗತಿ ಉಂಟಾಗುವುದು.

ತುಲಾ: ಸ್ವ ಸಾಮರ್ಥ್ಯವನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸಿದಲ್ಲಿ, ಹುದ್ದೆಯನ್ನು ಭದ್ರಗೊಳಿಸಿಕೊಳ್ಳಬಹುದು ಅಥವಾ ಮೇಲಧಿಕಾರಿಗಳ ಗಮನಸೆಳೆಯಬಹುದು. ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಏಕಾಗ್ರತೆ ಅನಿವಾರ್ಯವಾಗುತ್ತದೆ.

ವೃಶ್ಚಿಕ: ಸಾಮಾಜಿಕವಾಗಿ ನಿಮ್ಮ ಗೌರವ ಬೆಳೆಯುವುದರ ಫಲವಾಗಿ ಶತ್ರುಬಾಧೆ ಅಥವಾ ಅಸೂಯೆಯು ವೃದ್ಧಿಯಾಗಲಿದೆ. ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸುವಿರಿ. ನಿಮ್ಮ ಹಿರಿಯರ ಆಸ್ತಿ, ಸ್ವತ್ತುಗಳು ನಿಮ್ಮ ಪಾಲಿಗೆ ಬರಲಿವೆ.

ಧನು: ಕಮಿಷನ್ ಏಜೆಂಟರುಗಳಿಗೆ ಮತ್ತು ರಿಯಲ್ ಎಸ್ಟೇಟ್ ವ್ಯಾಪಾರಿಗಳಿಗೆ ಅಧಿಕ ಲಾಭ. ತಂದೆಯವರ ಆರೋಗ್ಯ ತಪಾಸಣೆ ನಡೆಸುವ ಬಗ್ಗೆ ಗಮನವಿರಲಿ. ಸ್ನೇಹಿತನ ಸಹಾಯದಿಂದ ವೃಥಾ ಅಲೆದಾಟಗಳು ತಪ್ಪುವುದು.

ಮಕರ: ಮನೆಯ ಅಲಂಕಾರಕ್ಕೆ ಹೇರಳ ಹಣ ವ್ಯಯಿಸುವಿರಿ. ಜೀವನದಲ್ಲಿನ ಹಳೆಯ ಘಟನೆಯಿಂದ ಕಲಿತ ಪಾಠ ಉತ್ತಮ ತಿಳುವಳಿಕೆಗೆ ಕಾರಣವಾಗುವುದು. ಮನೆಯವರ ಬೇಡಿಕೆಗಳನ್ನು ಸ್ವಲ್ಪ ಮಟ್ಟಿಗೆ ಪೂರೈಸುವಿರಿ.

ಕುಂಭ: ಈ ದಿನ ಸುಗಂಧ ದ್ರವ್ಯಗಳ ಉಪಯೋಗದಿಂದ ಅಲರ್ಜಿ ಸಂಭವಿಸಬಹುದು, ಎಚ್ಚರಿಕೆ ಇರಲಿ. ಕೈಯಲ್ಲಿ ಹಣ ಇರುವುದರಿಂದ ಬಾಕಿ ಇರಿಸಿದ ಕೆಲಸಗಳ ಬಗ್ಗೆ ಗಮನಹರಿಸಿ. ನೀಲಿ ಬಣ್ಣ ಶುಭವನ್ನು ತರುವುದು.

ಮೀನ: ವಾತಾವರಣದ ಬದಲಾವಣೆ ಆರೋಗ್ಯದ ಮೇಲೆ ಪ್ರಭಾವ ಬೀರಲಿದೆ. ಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಿವಾಹ ಯೋಗ ಕೂಡಿ ಬರುವುದು. ಯಾವುದೇ ಕೆಲಸಕ್ಕೂ ಮುನ್ನ ಸಂಪೂರ್ಣವಾಗಿ ವಾಸ್ತವಾಂಶ ಅರಿತುಕೊಳ್ಳಿರಿ.

ಪದಬಂಧ 5423

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೆರಿಗೆ ಕೋಣೆಯಿದು (5)
4.ಬಿಡಿಸಲು ಕಷ್ಟವಾಗಿರುವ ಪ್ರಶ್ನೆ (3)
5.ವರ ಮಾಡಿರುವ ಒತ್ತಾಯ (3)
6.ವನದಲ್ಲಿ ಕಾಣಿಸಿರುವ ಮುಖ (3)
7.ನೂಲು ತೆಗೆಯುವ ಸಾಧನ (3)
9.ತೊಡೆ ತಟ್ಟುತ್ತಾ ಹಾಕಿದ ಕಡಿವಾಣ! (2)
10.ಪ್ರಹರಿಗೆ ವಿಷ್ಣು ಪ್ರತ್ಯಕ್ಷ್ಯಗಿರುವನಲ್ಲಾ? (2)
12.ಇದು ಶ್ರೇಷ್ಠವಾದುದು (3)
14.ಭಾವ ಬೀರಿರುವ ವರ್ಚಸ್ಸು! (3)
15.ಇದು ಕಷ್ಟವೇ ಅಲ್ಲ ಬಿಡಿ! (3)
16.ತಪರಾಕು ಆದ ಮೇಲೆಯೇ ಈ ಹೊಗಳಿಕೆ! (3)
17.ಈತ ಮಾತಿಗೆ ತಪ್ಪುವವನು (5)

ಮೇಲಿಂದ ಕೆಳಕ್ಕೆ
1.ಪ್ರವಾಸದ ಸಮಯದಲ್ಲಿ ಈ ಅಲಂಕಾರ! (4)
2.ಅರಿವಳಿಕೆ ಕೊಟ್ಟ ನಂತರ ಬಂದಿರುವ ಅರಿವು! (5)
3.ವನದಲ್ಲಿ ಮಾಡಿರುವ ಯಜ್ಞ (3)
4.ನಿರಂತರ ಎಂದು ಹೀಗೆನ್ನಿ (3)
8.ಕೆಲಸವನ್ನು ಮಾಡುವ ನಿಶ್ಚಿತ ಸ್ಥಳ (3)
9.ಬರವಿದ್ದಾಗ ನೋಡುತ್ತಿರುವ ಆಕಾಶ (3)
10.ಇದು ಕುದುರೆಯ ಮುಖ (5)
11.ದೃಢಕಾಯವನ್ನು ಈ ರೀತಿ ಹೇಳಿ (4)
13.ಕುಸುಮವು ಅಸ್ಪಷ್ಟವಾಗಿ ಕಾಣುತ್ತಿದೆಯಲ್ಲಾ! (3)
14.ಮೊದಲನೆ ಹಿಂದೂ ಸಂವತ್ಸರ (3)

1		2		3	■	4		
	■		■	5			■	■
	■	6			■	7	8	
	■		■	■	■	■		■
■	9		■	■	■	10		■
■		■	■	■	■		■	11
12		13	■	14			■	
■	■	15			■		■	
16			■	17				

5422ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸರಸ್ವತಿ 3.ಅಂತರ್ಯಾಮಿ
4.ಮಿಡಿತ 5.ವನಚರ
7.ರಜತ 9.ಕಾನನ
10.ಅಬಲೆ 11.ಸುಗಮ
13.ಮನೋಹರ 15.ಮಲರು
16.ಮಾದಕತೆ 17.ಕಡಿವಾಣ

ಮೇಲಿಂದ ಕೆಳಕ್ಕೆ:
1.ಸಚಿವ 2.ತಿಮಿರ
3.ಅಂತರ 6.ನಳನಳಿಸು
8.ತಲೆಬರಹ 12.ಮಮತೆ
13.ಮರುಕ 14.ರಮಣ

ಸುಡೊಕು 5809

	5		1			4		7
6		9		5				
	4		8				6	
4			5		9	2		1
	2			4			5	
3		5	2		8			6
5	7					8		9
		1	4		5			
	8			7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5808 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ಪಬ್‌ಗಳ ಮೇಲೆ ಪೊಲೀಸರ ದಾಳಿ

ಬೆಂಗಳೂರು: ಕೇಂದ್ರ ವಾಣಿಜ್ಯ ಪ್ರದೇಶದಲ್ಲಿರುವ (ಸಿಬಿಡಿ) ಹಲವು ಪಬ್‌ಗಳ ಮೇಲೆ ಕೇಂದ್ರ ವಿಭಾಗದ ಪೊಲೀಸರು ಶುಕ್ರವಾರ ರಾತ್ರಿ ದಾಳಿ ಮಾಡಿದ್ದು, ನಿಯಮ ಉಲ್ಲಂಘನೆ ಆರೋಪದಡಿ 20 ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಚರ್ಚ್‌ಸ್ಟ್ರೀಟ್, ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ ಹಾಗೂ ಸುತ್ತಮುತ್ತಲಿನ ಹಲವು ಪಬ್‌ಗಳಿಂದ ನಿಯಮ ಉಲ್ಲಂಘನೆ ಆಗುತ್ತಿರುವ ಬಗ್ಗೆ ದೂರುಗಳು ಬಂದಿದ್ದವು. ವಿಶೇಷ ತಂಡಗಳನ್ನು ರಚಿಸಿ, ಎಲ್ಲ ಪಬ್‌ಗಳ ಮೇಲೆ ದಾಳಿ ಮಾಡಿ ಪರಿಶೀಲಿಸಲಾಯಿತು' ಎಂದು ಪೊಲೀಸರು ಹೇಳಿದರು.

'13 ಪಬ್‌ಗಳು ತಡರಾತ್ರಿ 1 ಗಂಟೆ ಬಳಿಕವೂ ತೆರೆದಿದ್ದವು. ಅಂಥ ಪಬ್‌ಗಳ ವಿರುದ್ಧ ಪೊಲೀಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ಸಂಬಂಧಪಟ್ಟವರಿಗೆ ನೋಟಿಸ್ ನೀಡಲಾಗಿದೆ' ಎಂದು ತಿಳಿಸಿದರು.

'ಎರಡು ಪಬ್‌ಗಳಲ್ಲಿ ವಿದೇಶಿ ಮಹಿಳೆಯರಿಬ್ಬರನ್ನು ಅಕ್ರಮವಾಗಿ ಬಳಸಿಕೊಳ್ಳಲಾಗುತ್ತಿತ್ತು. ಇಬ್ಬರೂ ಮಹಿಳೆಯರನ್ನು ರಕ್ಷಿಸಲಾಗಿದೆ. ಎರಡೂ ಪಬ್‌ಗಳ ವ್ಯವಸ್ಥಾಪಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸ್ಥಳೀಯರಿಗೆ ತೊಂದರೆ ಉಂಟು ಮಾಡುತ್ತಿದ್ದ 5 ಪಬ್‌ಗಳ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ನಕಲಿ ದಾಖಲೆ: ಶ್ರೀಲಂಕಾ ಪ್ರಜೆಗಳ ಅಕ್ರಮ ಪ್ರವೇಶದ ತನಿಖೆ ಚುರುಕು

₹1.50 ಲಕ್ಷಕ್ಕೆ ಪಾಸ್‌ಪೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀಲಂಕಾ ಪ್ರಜೆಗಳ ಅಕ್ರಮ ಪ್ರವೇಶ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಸಿಬಿ ಪೊಲೀಸರು, ಪ್ರಮುಖ ಆರೋಪಿ ಜಲಾಲ್‌ನ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ. ಓಮನ್ ದೇಶಕ್ಕೆ ಹೋಗಿರುವ ಜಲಾನ್, ₹ 1.50 ಲಕ್ಷ ನೀಡಿ ಪಾಸ್‌ಪೋರ್ಟ್ ಪಡೆದುಕೊಂಡಿದ್ದನೆಂಬ ಸಂಗತಿ ಪತ್ತೆ ಮಾಡಿದ್ದಾರೆ.

'ಶ್ರೀಲಂಕಾದ ಜಲಾಲ್ ಅಲಿಯಾಸ್ ಸಿದ್ದಿಕಿ, ಡ್ರಗ್ಸ್ ಪೆಡ್ಲರ್. ಜೊತೆಗೆ, ಅಪರಾಧ ಹಿನ್ನೆಲೆಯುಳ್ಳವ. ಈತನನ್ನು ಎನ್‌ಸಿಬಿ ಅಧಿಕಾರಿಗಳು ಈ ಹಿಂದೆಯೇ ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಜೈಲಿನಿಂದ ಪರಾರಿಯಾಗಿದ್ದ ಈತ, ನಕಲಿ ದಾಖಲೆ ನೀಡಿ ಪಾಸ್‌ಪೋರ್ಟ್ ಪಡೆದು ಓಮನ್ ದೇಶಕ್ಕೆ ಹೋಗಿದ್ದಾನೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'5 ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಶ್ರೀಲಂಕಾದ ಪ್ರಜೆಗಳಾದ ಕಾಸನ್ ಕುಮಾರ್ ಸಂಕ, ಇ.ಡಬ್ಲ್ಯು.ಎ ಅಮಿಲ್ ನುವಾನ್ ಹಾಗೂ ರಂಗ ಪ್ರಸಾದ್ ಅಕ್ರಮವಾಗಿ ದೇಶದೊಳಗೆ ನುಸುಳಲು ಜಲಾನ್ ವ್ಯವಸ್ಥೆ ಮಾಡಿದ್ದ. ನಗರದ ನಿವಾಸಿಯಾಗಿರುವ ಕೊಲೆ ಆರೋಪಿ ಪರಮೇಶ್ ಅಲಿಯಾಸ್ ಜಾಕ್ ಜೊತೆಯಲ್ಲೂ ಜಲಾನ್ ಒಡನಾಟ ಇಟ್ಟುಕೊಂಡಿದ್ದ' ಎಂದು ತಿಳಿಸಿವೆ.

ಅಪರಾಧ ಸುದ್ದಿಗಳು

'ಜಲಾಲ್ ಕಸ್ಟಡಿಗೆ ಪಡೆಯಲು ಪ್ರಯತ್ನ'

'ಪ್ರಕರಣದಲ್ಲಿ ಬಂಧಿಸಲಾಗಿರುವ ಆರೋಪಿ ಅನ್ಬಳಗನ್, ಬೆಂಗಳೂರಿನ ವಿವೇಕನಗರದವ. ಪಾಸ್‌ಪೋರ್ಟ್ ಸೇವೆ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದ. ಈತನನ್ನು ಸಂಪರ್ಕಿಸಿದ್ದ ಜಲಾಲ್, ನಕಲಿ ದಾಖಲೆ ಹಾಗೂ ₹ 1.50 ಲಕ್ಷ ನೀಡಿ ಪಾಸ್‌ಪೋರ್ಟ್ ಮಾಡಿಸಿಕೊಂಡಿರುವುದು ತನಿಖೆಯಿಂದ ತಿಳಿದುಬಂದಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಜಲಾನ್ ಹಾಗೂ ಇತರೆ ಆರೋಪಿಗಳು, ಹಣ ಅಕ್ರಮ ವರ್ಗಾವಣೆ ದಂಧೆಯಲ್ಲಿ ತೊಡಗಿದ್ದರು. ಭಾರತ, ಪಾಕಿಸ್ತಾನ್, ಶ್ರೀಲಂಕಾ ಹಾಗೂ ಇತರೆ ದೇಶಗಳಲ್ಲಿ ಅಪರಾಧ ಎಸಗುತ್ತಿದ್ದರು. ಇದೊಂದು ಅಂತರರಾಷ್ಟ್ರೀಯ ತಂಡವೆಂಬ ಮಾಹಿತಿ ಇದೆ. ಜಲಾನ್‌ನನ್ನು ಕಸ್ಟಡಿಗೆ ಪಡೆಯಲು ಓಮನ್ ಪೊಲೀಸರನ್ನು ಸಂಪರ್ಕಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಅವಹೇಳನಕಾರಿ ಪೋಸ್ಟ್: ಠಾಣೆಗೊಂದು ಘಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿ ಹಾಗೂ ಅವಹೇಳನಕಾರಿ ಪೋಸ್ಟ್ ಪ್ರಕಟಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಮುಂದಾಗಿರುವ ಪೊಲೀಸರು, ಠಾಣೆಗೊಂದು ವಿಶೇಷ ಘಟಕ ತೆರೆಯಲು ಸಿದ್ಧತೆ ಆರಂಭಿಸಿದ್ದಾರೆ.

ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಗೊಳ್ಳುತ್ತಿರುವ ಪೋಸ್ಟ್‌ಗಳ ವಿರುದ್ಧ ಹೆಚ್ಚಿನ ದೂರುಗಳು ವರದಿಯಾಗುತ್ತಿವೆ. ಈ ಬಗ್ಗೆ ಪೊಲೀಸ್ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದ ಕಮಿಷನರ್ ಬಿ. ದಯಾನಂದ್, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಪ್ರತ್ಯೇಕ ಘಟಕದ ಅವಶ್ಯಕತೆ ಇರುವುದಾಗಿ ಅಭಿಪ್ರಾಯಪಟ್ಟಿದ್ದರು.

ಇದರ ಬೆನ್ನಲ್ಲೇ ನಗರದ ಪ್ರತಿ ಠಾಣೆಯಲ್ಲಿ ಇಬ್ಬರು ಸಿಬ್ಬಂದಿ ನೇತೃತ್ವದಲ್ಲಿ ಪ್ರತ್ಯೇಕ ಘಟಕ ತೆರೆಯಲು ತಯಾರಿ ನಡೆದಿದೆ. ಸುಳ್ಳು ಸುದ್ದಿ ಮೂಲಕ ಜನರನ್ನು ಪ್ರಚೋದಿಸಿ ಸಮಾಜದ ಶಾಂತಿ ಹಾಗೂ ಕೋಮು ಸೌಹಾರ್ದಕ್ಕೆ ಧಕ್ಕೆ ತರುವ ವ್ಯಕ್ತಿಗಳನ್ನು ಘಟಕದ ಸಿಬ್ಬಂದಿ ಪತ್ತೆ ಮಾಡಲಿದ್ದಾರೆ. ಬಳಿಕ, ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸಲಿದ್ದಾರೆ.

'ಸಾಮಾಜಿಕ ಮಾಧ್ಯಮಗಳಲ್ಲಿ ಕೆಲವರು ಸುಳ್ಳು ಸುದ್ದಿ ಹಾಗೂ ಪ್ರಚೋದನಾಕಾರಿ ಪೋಸ್ಟ್ ಪ್ರಕಟಿಸುತ್ತಿದ್ದಾರೆ. ಇದರಿಂದಾಗಿ, ಕಾನೂನು ಸುವ್ಯವಸ್ಥೆಗೆ ಧಕ್ಕೆ ಬರುತ್ತಿದೆ. ಹೀಗಾಗಿ, ಸಾಮಾಜಿಕ ಮಾಧ್ಯಮಗಳ ಮೇಲೆ ನಿಗಾ ಇರಿಸಲು ಪ್ರತ್ಯೇಕ ತಂಡ ರಚಿಸಲು ಚಿಂತನೆ ನಡೆದಿದೆ' ಎಂದು ಕಮಿಷನರ್ ಬಿ. ದಯಾನಂದ್ ಹೇಳಿದರು.

'ಕಮಿಷನರೇಟ್ ಕಚೇರಿ ಹಾಗೂ ಡಿಸಿಪಿ ಕಚೇರಿಗಳಲ್ಲಿ ಈಗಾಗಲೇ ವಿಶೇಷ ಘಟಕಗಳಿವೆ. ಪರಿಣತ ಸಿಬ್ಬಂದಿ ಘಟಕದಲ್ಲಿ ಕೆಲಸ ಮಾಡುತ್ತಿದ್ದರು. ಇದೀಗ, ಪ್ರತಿ ಠಾಣೆಯಲ್ಲೂ ಇಂಥ ಘಟಕಗಳು ಆರಂಭವಾಗಲಿವೆ. ಅಲ್ಲಿಯ ಸಿಬ್ಬಂದಿಗೂ ತರಬೇತಿ ನೀಡಲಾಗುವುದು. ಅಗತ್ಯವಿರುವ ಉಪಕರಣಗಳನ್ನೂ ಒದಗಿಸಲಾಗುವುದು' ಎಂದು ತಿಳಿಸಿದರು.

ಜಾಜೂರು ಗ್ರಾಮದ ದೇವಾಲಯದ ಬಳಿ ಕಾಣಿಸಿಕೊಂಡಿರುವ ಕರಡಿ

ಕರಡಿ ಓಡಾಟ: ಜನರಲ್ಲಿ ಭೀತಿ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನರಸೀಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರಾತ್ರಿ ವೇಳೆ ಕರಡಿ ಸಂಚರಿಸುತ್ತಿದ್ದು, ಜನರಲ್ಲಿ ಭೀತಿ ಉಂಟಾಗಿದೆ.

ಮಾಕೇನಹಳ್ಳಿ, ಲಕ್ಕೇಪುರ, ಜಾಜೂರು, ನರಸೀಪುರ ಚನ್ನೋಹಳ್ಳಿ ಗ್ರಾಮಗಳ ಸರಹದ್ದಿನಲ್ಲಿ ಕರಡಿ ಓಡಾಡುತ್ತಿದೆ. ಕೆಲ ದಿನಗಳ ಹಿಂದೆ ಚನ್ನೋಹಳ್ಳಿಯಲ್ಲಿ ಮನೆ ಹತ್ತಿರದ ಮರದಿಂದ ಹಲಸಿನ ಹಣ್ಣು ಕಿತ್ತು ತಿಂದು ಹೋಗಿತ್ತು. ಇದೀಗ ಜಾಜೂರು ಗ್ರಾಮದ ದೇವಾಲಯದ ಬಳಿ ರಾತ್ರಿ 12ರ ಸುಮಾರಿಗೆ ಕಾಣಿಸಿಕೊಂಡಿದೆ.

ಗ್ರಾಮಗಳಿಗೆ ಲಗ್ಗೆಯಿಡುತ್ತಿರುವ ಕರಡಿಯು ದಾಳಿ ಮಾಡಬಹುದು ಎಂಬ ಆತಂಕ ಇದೆ ಎಂದು ಜಾಜೂರಿನ ಯುವಕ ಚಿಕ್ಕಹನ್ನು ತಿಳಿಸಿದರು.

ಕರಡಿಗಳು ರಾತ್ರಿ ವೇಳೆ ಆಹಾರ ಹುಡುಕಿಕೊಂಡು ಹೋಗುತ್ತವೆ. ಸಾರ್ವಜನಿಕರು ರಾತ್ರಿ ಸಂಚರಿಸುವಾಗ ಟಾರ್ಚ್ ಹಾಗೂ ಕೋಲು ಹಿಡಿದುಕೊಳ್ಳಬೇಕು. ಒಂಟಿಯಾಗಿ ಯಾರೂ ಸಂಚರಿಸಬಾರದು. ಕಾಡಂಚಿನ ಗ್ರಾಮಗಳ ಜನರು ಎಚ್ಚರಿಕೆಯಿಂದ ಇರಬೇಕು ಎಂದು ಅರಣ್ಯ ಅಧಿಕಾರಿಗಳು ಸಲಹೆ ನೀಡಿದ್ದಾರೆ.

ಈ ಗ್ರಾಮಗಳಿಗೆ ಹೊಂದಿಕೊಂಡಂತೆ ರಾಮದೇವರ ಬೆಟ್ಟ ಮತ್ತು ನಂದಿಹಳ್ಳಿ ಅರಣ್ಯ ಬೆಟ್ಟಗಳಿವೆ. ಅಲ್ಲಿ ಕರಡಿಗಳು ವಾಸಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ಅರಣ್ಯದಲ್ಲಿ ಹಣ್ಣಿನ ಗಿಡಗಳು ಕಡಿಮೆ ಆಗಿರುವುದರಿಂದ ಆಹಾರ ಹುಡುಕಿಕೊಂಡು ಗ್ರಾಮಗಳತ್ತ ಬರುತ್ತಿವೆ ಎಂದು ಗ್ರಾಮಸ್ಥರು ಹೇಳಿದರು.

ಮೀನುಗಳ ಸಾವು: ಎನ್‌ಜಿಟಿ ನೋಟಿಸ್

ನವದೆಹಲಿ: ಬೆಂಗಳೂರಿನ ಮಹದೇವಪುರ ವಲಯದ ಕೆಳ ಅಂಬಲಿಪುರ ಕೆರೆಯಲ್ಲಿ ಮೀನುಗಳ ಸಾಮೂಹಿಕ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿದಂತೆ ಪ್ರತಿವಾದಿಗಳಿಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಚೆನ್ನೈ ಪೀಠ ನೋಟಿಸ್ ಜಾರಿ ಮಾಡಿದೆ.

ಮೀನುಗಳು ಮೃತಪಟ್ಟ ಸುದ್ದಿಯು ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು. ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿರುವ ಪೀಠವು, ಈ ಬಗ್ಗೆ ಪ್ರತಿಕ್ರಿಯೆ ನೀಡುವಂತೆಯೂ ಪ್ರತಿವಾದಿಗಳಿಗೆ ಸೂಚಿಸಿದೆ. ಪ್ರಕರಣದ ವಿಚಾರಣೆಯನ್ನು ಸೆ. 29ಕ್ಕೆ ಮುಂದೂಡಿದೆ.

ಸರಣಿ ಅಪಘಾತ: ಸವಾರ ಸಾವು

ಬೆಂಗಳೂರು: ಪಾನಮತ್ತ ಚಾಲಕನೊಬ್ಬ ಲಾರಿಯನ್ನು ಅಡ್ಡಾದಿಡ್ಡಿ ಚಲಾಯಿಸಿ ಸರಣಿ ಅಪಘಾತವನ್ನುಂಟು ಮಾಡಿದ್ದು, ಬೈಕ್ ಸವಾರ ನೇಮಿರಾಜ್ (35) ಮೃತಪಟ್ಟಿದ್ದಾರೆ.

'ಕಲ್ಯಾಣನಗರದಲ್ಲಿ ಶುಕ್ರವಾರ ತಡರಾತ್ರಿ ಸಂಭವಿಸಿರುವ ಅಪಘಾತದಲ್ಲಿ ಬೈಕ್, ಕಾರು ಸೇರಿ ಎಂಟು ವಾಹನಗಳು ಜಖಂಗೊಂಡಿವೆ. ಅಪಘಾತಕ್ಕೆ ಕಾರಣವಾಗಿರುವ ಲಾರಿ ಚಾಲಕ ಹಿಂದೂಪುರದ ಚಂದ್ರಶೇಖರನನ್ನು (37) ಬಂಧಿಸಲಾಗಿದೆ. ಲಾರಿ ಜಪ್ತಿ ಮಾಡಲಾಗಿದೆ' ಎಂದು ಬಾಣಸವಾಡಿ ಸಂಚಾರ ಪೊಲೀಸರು ಹೇಳಿದರು.

'ಮೃತ ನೇಮಿರಾಜ್, ಹಾಸನದವರು. ನಗರದ ಅಮೆಜಾನ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಕಸ್ತೂರಿನಗರ ನಿವಾಸಿಯಾದ ಯುವತಿಯನ್ನು ಕೆಲ ತಿಂಗಳ ಹಿಂದೆಯಷ್ಟೇ ನೇಮಿರಾಜ್ ಮದುವೆಯಾಗಿದ್ದರು. ದಂಪತಿ ಯಲಹಂಕದಲ್ಲಿ ನೆಲೆಸಿದ್ದರು.'

'ಶುಕ್ರವಾರ ವರಮಹಾಲಕ್ಷ್ಮಿ ಹಬ್ಬದ ಕಾರಣ ಪತ್ನಿ ಬೆಳಿಗ್ಗೆಯೇ ತವರು ಮನೆಗೆ ಹೋಗಿದ್ದರು. ಮಧ್ಯಾಹ್ನದ ಪಾಳಿ ಕೆಲಸ ಮುಗಿಸಿದ್ದ ನೇಮಿರಾಜ್, ಕಚೇರಿಯಿಂದ ನೇರವಾಗಿ ರಾತ್ರಿ 12 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಪತ್ನಿಯ ತವರು ಮನೆಗೆ ಹೊರಟಿದ್ದರು. ಇದೇ ವೇಳೆಯೇ ಈ ಅಪಘಾತ ಸಂಭವಿಸಿದೆ' ಎಂದು ಪೊಲೀಸರು ತಿಳಿಸಿದರು.

ಕಬ್ಬಿಣದ ಸರಳು ಸಾಗಿಸುತ್ತಿದ್ದ ಲಾರಿ ಚಾಲಕ

'ಆರೋಪಿ ಚಂದ್ರಶೇಖರ್, ಕಬ್ಬಿಣದ ಸರಳುಗಳನ್ನು ಲಾರಿಯಲ್ಲಿ ಸಾಗಿಸುತ್ತಿದ್ದ. ಹಿಂದೂಪುರದಿಂದ ಬಂದಿದ್ದ ಆತ, ರಾಮಮೂರ್ತಿನಗರದ ಗೋದಾಮಿನತ್ತ ಲಾರಿ ಚಲಾಯಿಸಿಕೊಂಡು ಹೊರಟಿದ್ದ' ಎಂದು ಪೊಲೀಸರು ಹೇಳಿದರು.

'ಮದ್ಯದ ಅಮಲಿನಲ್ಲಿದ್ದ ಚಾಲಕ ಅತಿ ವೇಗದಲ್ಲಿ ಅಡ್ಡಾದಿಡ್ಡಿಯಾಗಿ ಲಾರಿ ಚಲಾಯಿಸಿದ್ದ. ಆರಂಭದಲ್ಲಿ, ಕಾರು ಹಾಗೂ ಬೈಕ್‌ಗೆ ಲಾರಿ ಡಿಕ್ಕಿ ಹೊಡೆದಿತ್ತು. ನಂತರ, ಮತ್ತೊಂದು ಲಾರಿ, ಎರಡು ಕಾರು, ಮೂರು ಬೈಕ್‌ಗಳಿಗೆ ಗುದ್ದಿತ್ತು. ಅಪಘಾತದ ವೇಳೆ ಲಾರಿ ಹಾಗೂ ಕಾರಿನ ನಡುವೆ ನೇಮಿರಾಜ್ ಸಿಲುಕಿದ್ದರು. ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರು' ಎಂದು ಪೊಲೀಸರು ಹೇಳಿದರು.

'ಅಪಘಾತದಲ್ಲಿ ಐವರು ಗಾಯಗೊಂಡಿದ್ದಾರೆ. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಚಾಲಕ ಚಂದ್ರಶೇಖರ್, ಮದ್ಯ ಸೇವನೆ ಮಾಡಿದ್ದನ್ನು ವೈದ್ಯಕೀಯ ತಪಾಸಣೆಯಿಂದ ಗೊತ್ತಾಗಿದೆ' ಎಂದರು.

ಬೆತ್ತಲೆ ವಿಡಿಯೊ: ಠಾಣೆ ಮೆಟ್ಟಿಲೇರಿದ ವೈದ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರತಿಷ್ಠಿತ ಆಸ್ಪತ್ರೆಯೊಂದರ ವೈದ್ಯರಿಗೆ ವಾಟ್ಸ್‌ಆ್ಯಪ್‌ನಲ್ಲಿ ಕರೆ ಮಾಡಿದ್ದ ಯುವತಿಯೊಬ್ಬರು ಬೆತ್ತಲೆ ವಿಡಿಯೊ ಚಿತ್ರೀಕರಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದು, ಈ ಸಂಬಂಧ ಹೈಗ್ರೌಂಡ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೋರಮಂಗಲ ನಿವಾಸಿಯಾಗಿರುವ 58 ವರ್ಷ ವಯಸ್ಸಿನ ವೈದ್ಯರೊಬ್ಬರು ಇತ್ತೀಚೆಗೆ ದೂರು ನೀಡಿದ್ದರು. ಆಧರಿಸಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರು ಆಗಸ್ಟ್ 22ರಂದು ರಾತ್ರಿ ಆಸ್ಪತ್ರೆಯಲ್ಲಿದ್ದರು. ಆಗ ಅವರ ಮೊಬೈಲ್‌ನ ವಾಟ್ಸ್‌ಆ್ಯಪ್‌ಗೆ ವಿಡಿಯೊ ಕರೆ ಬಂದಿತ್ತು. ಪರಿಚಯಸ್ಥರು ಇರಬಹುದೆಂದು ವೈದ್ಯ, ಕರೆ ಸ್ವೀಕರಿಸಿದ್ದರು. ಯುವತಿಯೊಬ್ಬರು ಬೆತ್ತಲೆಯಾಗಿ ಕಾಣಿಸಿಕೊಂಡಿದ್ದರು. ಹೆದರಿದ್ದ ವೈದ್ಯ ಕರೆ ಕಡಿತಗೊಳಿಸಿದ್ದರು.'

'ಕೆಲ ನಿಮಿಷಗಳ ನಂತರ ಅದೇ ಯುವತಿ ಪುನಃ ಕರೆ ಮಾಡಿದ್ದರು. ಆದರೆ, ದೂರುದಾರ ಕರೆ ಸ್ವೀಕರಿಸಿರಲಿಲ್ಲ. ಇದಾದ ಕೆಲ ನಿಮಿಷಗಳ ನಂತರ, ವಾಟ್ಸ್‌ಆ್ಯಪ್‌ಗೆ ವಿಡಿಯೊವೊಂದು ಬಂದಿತ್ತು. ಅದನ್ನು ಡೌನ್‌ಲೋಡ್ ಮಾಡಿ ನೋಡಿದಾಗ, ದೂರುದಾರರ ಬೆತ್ತಲೆ ವಿಡಿಯೊ ಆಗಿತ್ತು' ಎಂದು ಮೂಲಗಳು ತಿಳಿಸಿವೆ.

'ದೂರುದಾರರಿಗೆ ಕರೆ ಮಾಡಿದ್ದ ಯುವತಿಯೇ ವಿಡಿಯೊ ಚಿತ್ರೀಕರಣ ಮಾಡಿಕೊಂಡಿದ್ದಾರೆ. ನಂತರ, 21 ಸೆಕೆಂಡ್‌ಗಳ ಬೆತ್ತಲೆ ವಿಡಿಯೊ ಕಳುಹಿಸಿದ್ದಾರೆ. ಅದನ್ನೇ ದೂರುದಾರರಿಗೆ ಕಳುಹಿಸಿದ್ದಾರೆ. ತಾವು ಕೇಳಿದಷ್ಟು ಹಣ ನೀಡದಿದ್ದರೆ, ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಣಕ್ಕೆ ಬೇಡಿಕೆ ಇರಿಸುತ್ತಿದ್ದಂತೆ ವೈದ್ಯ ಠಾಣೆಗೆ ಬಂದು ದೂರು ನೀಡಿದ್ದಾರೆ. ವ್ಯವಸ್ಥಿತ ತಂಡವೇ ಕೃತ್ಯ ಎಸಗಿರುವ ಮಾಹಿತಿ ಇದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿವೆ.

ಕೆರೆಯಲ್ಲಿ ಮುಳುಗಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನ್ಮದಿನದ ಪಾರ್ಟಿ ಬಳಿಕ ಈಜಾಡಲೆಂದು ಕೆರೆಗೆ ಹೋಗಿದ್ದ ಯುವಕರಿಬ್ಬರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದು, ಈ ಬಗ್ಗೆ ಹುಳಿಮಾವು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಂಬತ್ತಹಳ್ಳಿ ನಿವಾಸಿ ಸೊಲೊಮನ್ (28) ಹಾಗೂ ಜ್ಞಾನಭಾರತಿ ನಿವಾಸಿ ಅಭಿಷೇಕ್ (27) ಮೃತರು. ಚಿಕ್ಕಕಮ್ಮನಹಳ್ಳಿ ಕೆರೆಯಲ್ಲಿದ್ದ ಇವರಿಬ್ಬರ ಮೃತದೇಹಗಳನ್ನು ಹೊರಗೆ ತೆಗೆದು, ಮರಣೋತ್ತರ ಪರೀಕ್ಷೆಗೆಂದು ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸೊಲೊಮನ್, ಸೆಕೆಂಡ್ ಹ್ಯಾಂಡ್ ಕಾರು ಮಾರಾಟ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು. ಅಭಿಷೇಕ್, ಕಾಲ್ ಸೆಂಟರ್ ಉದ್ಯೋಗಿ. ಇಬ್ಬರೂ ಹಲವು ವರ್ಷಗಳ ಸ್ನೇಹಿತರು. ಆಗಾಗ ಒಟ್ಟಿಗೆ ಸೇರಿ ಪಾರ್ಟಿ ಮಾಡುತ್ತಿದ್ದರು' ಎಂದರು ತಿಳಿಸಿವೆ.

'ಕೆರೆ ಬಳಿಯೇ ಮನೆ: 'ಚಿಕ್ಕಕಮ್ಮನಹಳ್ಳಿಯ ಕೆರೆ ಬಳಿಯ ಮನೆಯಲ್ಲಿ ಸೊಲೊಮನ್ ವಾಸವಿದ್ದರು. ಆಗಸ್ಟ್ 24ರಂದು ಅವರ ಜನ್ಮದಿನವಿತ್ತು. ಸ್ನೇಹಿತ ಅಭಿಷೇಕ್ ಅವರನ್ನು ಮನೆಗೆ ಕರೆಸಿದ್ದ ಸೊಲೊಮನ್, ಪಾರ್ಟಿ ಮಾಡಿದ್ದರು. ಇಬ್ಬರೂ ಮದ್ಯ ಕುಡಿದಿದ್ದರೆಂಬುದು ಗೊತ್ತಾಗಿದೆ.'

'ಪಾರ್ಟಿ ಬಳಿಕ ಇಬ್ಬರೂ ಈಜಾಡಲೆಂದು ಕೆರೆಗೆ ಹೋಗಿದ್ದರು. ಇದೇ ವೇಳೆಯೇ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಶುಕ್ರವಾರ (ಆಗಸ್ಟ್ 25) ಬೆಳಿಗ್ಗೆ ಮೃತದೇಹಗಳು ಪತ್ತೆಯಾಗಿವೆ' ಎಂದು ಮೂಲಗಳು ತಿಳಿಸಿವೆ.

'ನಿಶ್ಚಿತಾರ್ಥವಾಗಿತ್ತು'

'ಸೊಲೊಮನ್‌ಗೆ ಮದುವೆ ನಿಶ್ಚಯವಾಗಿತ್ತು. ಎರಡು ತಿಂಗಳ ಹಿಂದೆಯಷ್ಟೇ ನಿಶ್ಚಿತಾರ್ಥವಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಎಫ್‌ಕೆಸಿಸಿಐ ಪದಾಧಿಕಾರಿಗಳಿಗೆ ಗೌರವ

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಮಹಾಸಂಸ್ಥೆ (ಎಫ್‌ಕೆಸಿಸಿಐ) ನಗರದಲ್ಲಿ ಶನಿವಾರ ಹಮ್ಮಿಕೊಂಡ ಸಮಾರಂಭದಲ್ಲಿ ಸಭೆಯಲ್ಲಿ ಎಫ್‌ಕೆಸಿಸಿಐ ಅಧಿ ಕಾರ್ಯನಿರ್ವಹಿಸುತ್ತಿರುವ ಸಂಘಟನೆಗಳ ಅಧ್ಯಕ್ಷರನ್ನು ಗೌರವಿಸಲಾಯಿತು. (ಕುಳಿತವರು ಎಡದಿಂದ) ಎಫ್‌ಕೆಸಿಸಿಐ ಅಸೋಸಿಯೇಷನ್ ಕಮಿಟಿ ಅಧ್ಯಕ್ಷ ಪಿ.ಎಚ್. ರಾಜ್ ಪುರೋಹಿತ್, ಚುನಾಯಿತ ಅಧ್ಯಕ್ಷ ರಮೇಶ್ ಚಂದ್ರ ಲಾಹೋಟಿ, ಅಧ್ಯಕ್ಷ ಬಿ.ವಿ. ಗೋಪಾಲ ರೆಡ್ಡಿ, ಐ.ಎಸ್. ಪ್ರಸಾದ್ ಹಾಗೂ ಬಾಲಾಜಿ ಇದ್ದಾರೆ – ಪ್ರಜಾವಾಣಿ ಚಿತ್ರ

₹4.93 ಕೋಟಿ ದಂಡಕ್ಕೆ ಮಧ್ಯಂತರ ತಡೆಯಾಜ್ಞೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೊಮ್ಮಸಂದ್ರದ ಸಂಧರ್ ಟೆಕ್ನಾಲಜೀಸ್ ಲಿಮಿಟೆಡ್‌ಗೆ ₹4.93 ಕೋಟಿ ದಂಡ ವಿಧಿಸಿದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಆದೇಶಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಚೆನ್ನೈ ಪೀಠವು ಷರತ್ತುಬದ್ಧ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪುಷ್ಪಾ ಸತ್ಯನಾರಾಯಣ ಹಾಗೂ ಡಾ.ಸತ್ಯಗೋಪಾಲ್ ಕೊರ್ಲಪಾಟಿ ಅವರಿದ್ದ ನ್ಯಾಯಪೀಠವು, ನಾಲ್ಕು ವಾರಗಳಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಒಟ್ಟು ಮೊತ್ತದ ಶೇ 50ರಷ್ಟು ಮೊತ್ತವನ್ನು ಬ್ಯಾಂಕ್ ಗ್ಯಾರಂಟಿಯ ರೂಪದಲ್ಲಿ ನೀಡಬೇಕು ಎಂದು ಕಂಪನಿಗೆ ಸೂಚಿಸಿತು. ಮಾಲಿನ್ಯ ನಿಯಂತ್ರಣ ಮಂಡಳಿಗೆ ನೋಟಿಸ್ ನೀಡಲು ಸೂಚಿಸಿದ ಪೀಠವು, ವಿಚಾರಣೆಯನ್ನು ಸೆ.25ಕ್ಕೆ ಮುಂದೂಡಿತು. ಜಲ ಕಾಯ್ದೆ (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) 1974, ವಾಯು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ 1981 ಮತ್ತು ಪರಿಸರ (ರಕ್ಷಣೆ) ಕಾಯ್ದೆ 1986 ಪಾಲನೆ ಮಾಡದ ಕಾರಣಕ್ಕೆ ಕಂಪನಿಯು ₹4.93 ಕೋಟಿ ಪರಿಸರ ಪರಿಹಾರ ಪಾವತಿಸುವಂತೆ ಮಾಲಿನ್ಯ ನಿಯಂತ್ರಣ ಮಂಡಳಿಯು ಜುಲೈ 12ರಂದು ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಕಂಪನಿಯು ಎನ್‌ಜಿಟಿ ಮೆಟ್ಟಿಲೇರಿತ್ತು.

ಸುಧಾ ಮಯೂರ ಓದಿರಿ

ಜಿಎಸ್‌ಟಿ ಸಂಖ್ಯೆ ದುರ್ಬಳಕೆ ₹120 ಕೋಟಿ ವಹಿವಾಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಜಿಎಸ್‌ಟಿ ಸಂಖ್ಯೆ ದುರುಪಯೋಗ ಮಾಡಿಕೊಂಡಿರುವ ಅಪರಿಚಿತರು ₹120 ಕೋಟಿ ವಹಿವಾಟು ತೋರಿಸಿದ್ದಾರೆ' ಎಂದು ವ್ಯಾಪಾರಿ ರಾಜೇಶ್, ರಾಮಮೂರ್ತಿನಗರ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ.

'ಪ್ರಿಂಟಿಂಗ್ ಉಪಕರಣ ದುರಸ್ತಿ ಕೆಲಸ ಮಾಡುತ್ತಿದ್ದೇನೆ. ಇದಕ್ಕಾಗಿ ಜೆಪಿಜಿ ಎಂಟರ್‌ಪ್ರೈಸಸ್ ಎಂಬ ಕಂಪನಿ ತೆರೆದಿದ್ದೆ. ಜಿಎಸ್‌ಟಿ ಸಂಖ್ಯೆಯನ್ನೂ ಪಡೆದುಕೊಂಡಿದ್ದೆ. ಜಿಎಸ್‌ಟಿಗೆ ಕಡಿತವಾದ ಮೊತ್ತವನ್ನು ವಾಪಸು ಪಡೆಯುವುದು ಹೇಗೆ ಎಂಬುದು ಗೊತ್ತಿರಲಿಲ್ಲ. ಹೀಗಾಗಿ, ಗೂಗಲ್ ಜಾಲತಾಣದಲ್ಲಿ ಹುಡುಕಾಟ ನಡೆಸಿದ್ದೆ. ವ್ಯಕ್ತಿಯೊಬ್ಬರ ನಂಬರ್ ತೆಗೆದುಕೊಂಡು, ಮಾತನಾಡಿದ್ದೆ' ಎಂದು ವ್ಯಾಪಾರಿ ದೂರಿನಲ್ಲಿ ತಿಳಿಸಿದ್ದಾರೆ.

'ಹಣ ಮರುಪಾವತಿಗೆ ಸಹಾಯ ಮಾಡುವುದಾಗಿ ಹೇಳಿದ್ದ ವ್ಯಕ್ತಿ, ಜಿಎಸ್‌ಟಿ ಸಂಖ್ಯೆ ಹಾಗೂ ವೈಯಕ್ತಿಕ ಮಾಹಿತಿ ಪಡೆದುಕೊಂಡಿದ್ದ. ಇದಾದ ನಂತರ, ಯಾವುದೇ ಹಣ ಬಂದಿರಲಿಲ್ಲ. ಆದರೆ, ನನ್ನ ಜಿಎಸ್‌ಟಿ ಸಂಖ್ಯೆಯಿಂದ ಮೂರು ತಿಂಗಳ ಅವಧಿಯಲ್ಲಿ ₹120 ಕೋಟಿ ವಹಿವಾಟು ನಡೆದಿರುವುದು ಇತ್ತೀಚೆಗೆ ಗೊತ್ತಾಗಿದೆ. ನಂತರ, ಜಿಎಸ್‌ಟಿ ಸಂಖ್ಯೆ ರದ್ದುಪಡಿಸಿದ್ದೇನೆ' ಎಂದು ವ್ಯಾಪಾರಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಜಿಎಸ್‌ಟಿ ಸಂಖ್ಯೆ ಪಡೆದು ವಂಚನೆ ಮಾಡಿರುವ ಆರೋಪದ ಅಪರಿಚಿತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

Srishyla Educational Trust (R), Bheemasamudra

GM UNIVERSITY, DAVANAGERE

Approved by Govt of Karnataka Act No 19 of 2023

FACULTY RECRUITMENT

GM UNIVERSITY is established by the Karnataka Act 19 of 2023 Government of Karnataka which is under the aegis of Srishyla Education Trust which has an experience of running higher educational Institutions for last two decades. Gm university invites applications for the following posts.

PROFESSORS / ASSOCIATE PROFESSORS / ASSISTANT PROFESSORS

IN THE DEPTS. OF

CSE, E&C, EEE, & Computer Application, Commerce and Management.

Qualification, Experience, as per UGC norms. Salary as per 7th Pay UGC Scales

We also invite for Vice Chancellor/Registrar/HR Manager/Finance Officer/System Administrator/Corporate and Public Relation Officer/Placement and Training Officer/Maintenance Engineer/ Personal Secretaries/Accountants/Receptionist/Graphic Designer. Best Scale can be considered for Candidates with Commensurate Experience.

Send Your Resume to E-Mail: gmu.davanagere@gmail.com with in 07 days of this Publication.

Contact: 94831-78899, 63642-59993

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟದ್ದು)

ಎಆರ್‌ಎಂ ಶಾಖೆ, ವೃತ್ತ ಕಚೇರಿ ಕಟ್ಟಡ ಬಲ್ಮಠ ರಸ್ತೆ, ಮಂಗಳೂರು-01

SARFAESI ಕಾಯ್ದೆಯಡಿಯಲ್ಲಿ "ಕಟ್ಟನ್‌ಮನೆ ಎಸ್ಟೇಟ್" ಆಸ್ತಿಯು ಮಾರಾಟಕ್ಕಿದೆ

ಕೊಪ್ಪ ತಾಲೂಕು, ಜಯಪುರ ಹತ್ತಿರದ ಉತ್ತಮವಾಗಿ ನಿರ್ವಹಣೆಯಲ್ಲಿರುವ 141 ಎಕರೆ ಕಾಫಿ ಎಸ್ಟೇಟ್ ಜೊತೆಗೆ ಬಂಗಲೆ ಸೌಕರ್ಯ ಇತ್ಯಾದಿಗಳನ್ನು ಒಳಗೊಂಡಿರುವ ಆಸ್ತಿಯು ಮಾರಾಟಕ್ಕಿದೆ.

ಹೆಚ್ಚಿನ ವಿವರಗಳಿಗೆ: ಕೆನರಾ ಬ್ಯಾಂಕ್, ಎಆರ್‌ಎಂ ಶಾಖೆ, ಮಂಗಳೂರು, 9901574353 (ಜಲೀಶ್ ದಿನಕರನ್, ಮುಖ್ಯ ಪ್ರಬಂಧಕರು), 9482010646 (ಮಂಜುನಾಥ್, ಪ್ರಬಂಧಕರು), 8210181920 (ರೋಹನ್ ಕುಮಾರ್, ಪ್ರಬಂಧಕರು) ಇವರನ್ನು ಯಾವುದೇ ಕೆಲಸದ ದಿನದಲ್ಲಿ ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು.

ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., ನಂ. 156, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055.

ಬಹಿರಂಗ ಹರಾಜು ಇಸ್ತಿಹಾರ್

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು ಕೆ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ., ನಂ–32, ಕೆ.ಹೆಚ್.ರಸ್ತೆ, ಬೆಂಗಳೂರು–560027. ಇವರ ಹುಕ್ಕುಂ ಈ ಕೆಳಗೆ ನಮೂದಿಸಿರುವ ಸಿ.ಇ.ಪಿ ಸಂಖ್ಯೆಗಳಂತೆ ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಸೂಚಿಸಿರುವ ಸುಸ್ತಿದಾರರು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–55. ಇವರಲ್ಲಿದ್ದ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಬ್ಯಾಂಕಿಗೆ ಆದಾರ ಮಾಡಿದ ಈ ಕೆಳಗೆ ನಮೂದಿಸಿರುವ ಸ್ವತ್ತುಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 38 ರನ್ವಯ ಬಹಿರಂಗ ಹರಾಜಿನ ಮೂಲಕ ಮಾರಲಾಗುವುದು. ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತುಗಳನ್ನು ಹರಾಜಿನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನಂ.156, 8ನೇ ಅಂತಸ್ತು, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–55. ಇವರಲ್ಲಿ ಪಡೆಯಬಹುದು. ದೂರವಾಣಿ ಸಂಖ್ಯೆ 23442648, 23449450, ಮೊಬೈಲ್ 9900856389, 9844048485

ಸುಸ್ತಿದಾರರ ಹೆಸರು	ಸಿ.ಇ.ಪಿ ಸಂಖ್ಯೆ	ಹರಾಜು ಮಾಡುವ ಸ್ವತ್ತಿನ ವಿವರ	ಹರಾಜು ನಡೆಯಲಿರುವ ಸ್ಥಳ, ದಿನಾಂಕ ಸಮಯ ಮತ್ತು ವಸೂಲಾಗಬೇಕಾಗಿರುವ ಮೊತ್ತ
ಶ್ರೀ ನರಸಿಂಹಮೂರ್ತಿ ಎಂ ಮತ್ತು ಶ್ರೀಮತಿ ಅನಿತಾ ಮೂರ್ತಿ	ಎಆರ್‌ಸಿ/ಯು.ಐ.ಜೆ/138/2019-20	ಬಿ.ಬಿ.ಎಮ್.ಪಿ ನಂ.9, ಹಳೇ ನಂ.17/18, 6ನೇ ಮುಖ್ಯರಸ್ತೆ, 3ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು–560096. ಬಿ.ಬಿ.ಎಮ್.ಪಿ ವಾರ್ಡ್ ನಂ.11 ಪಿ.ಐ.ಡಿ. ನಂ: 11–12–9 ಬೆಂಗಳೂರು. ಇಲ್ಲಿರುವ ಪೂರ್ವ ಪಶ್ಚಿಮ 30 ಅಡಿಗಳು & ಉತ್ತರ ದಕ್ಷಿಣ 40 ಅಡಿಗಳು ನಿವೇಶನದಲ್ಲಿರುವ ಕಟ್ಟಡಕ್ಕೆ ಚಕ್ಕುಬಂದಿ: ಪೂರ್ವಕ್ಕೆ – ಸ್ವತ್ತಿನ ಸಂಖ್ಯೆ 11 & 12; ಪಶ್ಚಿಮಕ್ಕೆ – ರಸ್ತೆ; ಉತ್ತರಕ್ಕೆ – ರಸ್ತೆ; ದಕ್ಷಿಣಕ್ಕೆ – ಆಸ್ತಿಯ ಪೈಕಿ ಉಳಿಕೆ ಭಾಗ	ಬಿ.ಬಿ.ಎಮ್.ಪಿ ನಂ.9, ಹಳೇ ನಂ.17/18, 6ನೇ ಮುಖ್ಯರಸ್ತೆ, 3ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು–560096. ದಿನಾಂಕ: 30.08.2023ರ ಬುಧವಾರ ಬೆಳಗ್ಗೆ 11–30 ಘಂಟೆ ರೂ.18,00,000/– (ದಿನಾಂಕ. 31.05.2023 ರವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ.)

ಹರಾಜಿನ ಷರತ್ತುಗಳು ಮತ್ತು ನಿಯಮಗಳು

1. ಹರಾಜಿನ ಮುನ್ನ ಸಾಲ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.
2. ಕಟ್ಟಡವು ಯಾವುದೇ ಸ್ಥಿತಿಯಲ್ಲಿದ್ದರೂ ಅದೇ ಸ್ಥಿತಿಯಲ್ಲಿ ಹರಾಜು ಮಾಡಲಾಗುವುದು.
3. ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ರೂ.50,000/– ಗಳನ್ನು ಠೇವಣಿಯಾಗಿ ಪಾವತಿಸಿ ರಶೀತಿಯನ್ನು ಪಡೆಯತಕ್ಕದ್ದು.
4. ಹರಾಜಿನಲ್ಲಿ ಬಿಡ್ ನಿಂತತಕ್ಷಣವೇ ಹರಾಜು ಮೊಬಲಗಿನ ಶೇ.15 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಿ ರಶೀತಿಯನ್ನು ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್‌ದಾರರು ಪಾವತಿ ಮಾಡಿರುವ ಹಣವನ್ನು ಕಾನೂನು ರೀತ್ಯ ಮುಟ್ಟುಗೋಲು ಹಾಕಿಕೊಂಡು ಬೇರೆ ಹರಾಜು ಮಾಡಲಾಗುವುದು.
5. ಬಿಡ್ ಮೊಬಲಗು ಅತ್ಯಂತ ಬೆಲೆಗಿಂತಕಡಿಮೆಯಾದಲ್ಲಿ ಆಸ್ತಿಯನ್ನು ಅಂತಹ ಬಿಡ್‌ದಾರರಿಗೆ ಬಿಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆ.ಸಿ.ಎಸ್.ನಿಯಮಗಳ ಪ್ರಕಾರ ಮಾರಾಟಾಧಿಕಾರಿಯವರು ಹೊಂದಿರುತ್ತಾರೆ.
6. ಹರಾಜಿನಲ್ಲಿಯೋಗ್ಯ ಬೆಲೆ ಬಾರದಿದ್ದಲ್ಲಿ ಹರಾಜಿಗಿಟ್ಟಿರುವ ಸ್ಥಿರಾಸ್ತಿಯನ್ನು ಖರೀದಿಸುವ ಮತ್ತು ಆಸ್ತಿ ವರ್ಗಾವಣೆ ಮಾಡಿಕೊಳ್ಳುವ ಹಕ್ಕನ್ನು ಬ್ಯಾಂಕು ಹೊಂದಿರುತ್ತದೆ.
7. ಹರಾಜಿಗಿಟ್ಟಿರುವ ಸ್ಥಿರಾಸ್ತಿಯ ವಿವರಣೆ ಮತ್ತುಅಳತೆಯಲ್ಲಿ ವ್ಯತ್ಯಾಸವಿದ್ದಲ್ಲಿ ವಿಷಯದಲ್ಲಿಯಾವುದಾದರೂ ತಪ್ಪುಗಳಿದ್ದರೆ ಸರ್ಕಾರವುಜವಾಬ್ದಾರರಾಗುವುದಿಲ್ಲ.
8. ಸ್ಥಿರಾಸ್ತಿ ಹರಾಜು ಮತ್ತು ಸ್ವೀಕರಿಸುವ ಹರಾಜಿನ ಷರತ್ತುಗಳಿಗೊಳಪಟ್ಟಿರುತ್ತದೆ. ಬಿಡ್‌ದಾರರು ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಾರಾಟ ಸ್ವೀಕರಿಸುವುದಕ್ಕೆ ಸರ್ಕಾರದವರುಜವಾಬ್ದಾರರಾಗುವುದಿಲ್ಲ.
9. ಮೂಲ ಸಾಲಗಾರರಿಗೇ, ಜಾಮೀನುದಾರರಿಗಾಗಲೀ ಅಥವಾ ಅವರ ಹಿತೈಷಿಗಳಿಗಾಗಲೀ ಬಹಿರಂಗ ಹರಾಜಿನಲ್ಲಿ ಆಸ್ತಿ ಮಾರಾಟ ಮಾಡಿದ 30 ದಿನಗಳೊಳಗಾಗಿ ಸಾಲದ ಪೂರ್ಣ ಬಾಕಿ ಮತ್ತು ಹರಾಜಿನಲ್ಲಿ ಆಸ್ತಿ ಖರೀದಿಸಿದ ಬಿಡ್‌ದಾರರು ಬ್ಯಾಂಕಿಗೆ ಪಾವತಿಸಿದ ಹಣದ ಮೇಲೆ ಶೇ 5 ರಷ್ಟು ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದಲ್ಲಿ ಹರಾಜಿನಲ್ಲಿ ಆಸ್ತಿ ಖರೀದಿಸಿದವರಿಗೆ ಅವರು ಪಾವತಿಸಿದ ಮೊತ್ತ ಮತ್ತುಅದರಮೇಲೆ ಶೇ 5 ರಷ್ಟು ಹಣ ಪಡೆಯುವ ಮಾತ್ರ ಹಕ್ಕುಳ್ಳವರಾಗಿರುತ್ತಾರೆ ಹಾಗೂ ಹರಾಜಿನಲ್ಲಿರುವ ಆಸ್ತಿಗೆ ಹಕ್ಕು ಇರುವುದಿಲ್ಲ.

ದಿನಾಂಕ: 24.08.2023
ಬೆಂಗಳೂರು.

ಮಾರಾಟಾಧಿಕಾರಿ
ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು – 55.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organization.

INSTITUTION SALES INTERNS

Job Description:

- Knowledge in institutional Sales, educational sales, corporate sales is an added advantage.
- Strong written and verbal communication skill in English and Kannada.
- Should be passionate to do field sales.
- Candidate should have 2 Wheeler with DL is must.

Qualification : Any Degree
Location: Bangalore
Experience: Minimum 1 Year experience in Sales / Marketing.
Interested candidates please send your updated Resume/CV within 7 days to the following Email ID.

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: careers@deccanherald.co.in

‘ಕಬ್ಬನ್ ರೀಡ್ಸ್’ಗೆ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ • ಕಥೆ, ಕವನಗಳ ರಚನೆಗೆ ವೇದಿಕೆ

ಕಬ್ಬನ್ ಉದ್ಯಾನದಲ್ಲಿ ಓದಿನ ಧ್ಯಾನ!

• ಖಲೀಲಅಹ್ಮದ ಶೇಖ

ಕಬ್ಬನ್ ಉದ್ಯಾನದಲ್ಲಿ ಶನಿವಾರ ಭಾಗವಹಿಸಿದ್ದ ಪುಸ್ತಕಪ್ರಿಯರು (ಎಡಚಿತ್ರ) ಕಬ್ಬನ್ ರೀಡ್ಸ್‌ನ ಸದಸ್ಯರು ತಮ್ಮ ಪುಸ್ತಕಗಳು ಮತ್ತು ಕಲಾಕೃತಿಗಳೊಂದಿಗೆ ಶನಿವಾರ ಕಂಡದ್ದು ಹೀಗೆ –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಬೆಂಗಳೂರು: ‘ಸಿಲಿಕಾನ್ ಸಿಟಿ’ಯ ವಾಯುವಿಹಾರಿಗಳ ಮತ್ತು ಪ್ರೇಮಿಗಳ ಸ್ವರ್ಗ ಕಬ್ಬನ್ ಉದ್ಯಾನ ಈಗ ಪುಸ್ತಕ ಪ್ರೇಮಿಗಳ ಅಚ್ಚುಮೆಚ್ಚಿನ ತಾಣವಾಗಿದೆ. ಹಚ್ಚಹಸಿರಿನ ಹುಲ್ಲು ಹಾಸಿನಲ್ಲಿ ಪುಸ್ತಕ ಓದಿನ ಆನಂದದ ಜೊತೆಗೆ ಚಿತ್ರಕಲೆ, ಕಥೆ-ಕವನಗಳ ರಚನೆಗೆ ವೇದಿಕೆಯಾಗಿದೆ.

ಪುಸ್ತಕ ಓದುವ ಹವ್ಯಾಸ ವೃದ್ಧಿಸುವ ಉದ್ದೇಶದಿಂದ ಸ್ವಯಂ ಉದ್ಯೋಗಿಗಳಾದ ಹರ್ಷ ಸ್ನೇಹಾಂಶು ಮತ್ತು ಶ್ರುತಿ ಸಾಹ ಅವರು ‘ಕಬ್ಬನ್ ರೀಡ್ಸ್’ ಎಂಬ ಇನ್‌ಸ್ಟಾಗ್ರಾಂ ಪೇಜ್ ಸ್ಥಾಪಿಸಿದ್ದಾರೆ. ಈ ಮೂಲಕ ಕಬ್ಬನ್ ಉದ್ಯಾನ, ಲಾಲ್‌ಬಾಗ್ ಸೇರಿ ನಗರದಲ್ಲಿರುವ ವಿವಿಧ ಉದ್ಯಾನಗಳಲ್ಲಿ ಸಾರ್ವಜನಿಕರಲ್ಲಿ ಪುಸ್ತಕ ಓದುವ ಹವ್ಯಾಸವನ್ನು ಹೆಚ್ಚಿಸುವ ಕೆಲಸ ಮಾಡುತ್ತಿದೆ.

ಪ್ರತಿ ಶನಿವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 2ರವರೆಗೆ ಕಬ್ಬನ್ ಉದ್ಯಾನದ ಹುಲ್ಲುಹಾಸು, ಮರಗಳ ಬುಡದಲ್ಲಿ ಪುಸ್ತಕಗಳನ್ನು ಓದುತ್ತಿರುವ ಪುಸ್ತಕ ಪ್ರಿಯರು, ಕಥೆ–ಕವನ ರಚಿಸುವ ಯುವ ಕವಿಗಳು ಮತ್ತು ಪ್ರಕೃತಿ ಸೌಂದರ್ಯವನ್ನು ಕುಂಚದಲ್ಲಿ ಅರಳಿಸುವ ಕಲಾವಿದರ ದಂಡು ಸಿಗುತ್ತದೆ. ಇದರಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ವಿಶೇಷ.

‘ಸ್ವ ಉದ್ಯೋಗಿ ಹರ್ಷ ಸ್ನೇಹಾಂಶು ಮತ್ತು ಶ್ರುತಿ ಸಾಹ ಅವರು ಪ್ರತಿ ಶನಿವಾರ ಇಂದಿರಾನಗರದಿಂದ ಕಬ್ಬನ್ ಉದ್ಯಾನಕ್ಕೆ ಸೈಕ್ಲಿಂಗ್ ಮತ್ತು ಪುಸ್ತಕ ಓದುವುದಕ್ಕೆ ಬರುತ್ತಿದ್ದರು. ಪುಸ್ತಕ ಓದುವ ಆಸಕ್ತಿ ಇರುವವರೂ ನಮ್ಮೊಂದಿಗೆ ಸೇರಿಕೊಳ್ಳಬಹುದು ಎಂದು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲೊಂದು ಪೋಸ್ಟ್ ಮಾಡಿದ್ದರು. ಇದಕ್ಕೆ ಸ್ನೇಹಿತರಿಬ್ಬರು ಸೇರಿಕೊಂಡರು. ಇದು, ಹೀಗೆ ಮುಂದುವರೆದು ‘ಕಬ್ಬನ್ ರೀಡ್ಸ್’ ಇನ್‌ಸ್ಟಾಗ್ರಾಂ ಪೇಜ್ ಹುಟ್ಟಿಕೊಂಡಿತು. ಹಂತ-ಹಂತವಾಗಿ ಈ ವೇದಿಕೆಯಲ್ಲಿ ಹಲವಾರು ಜನ ಸ್ವಇಚ್ಛೆಯಿಂದ ಭಾಗವಹಿಸುತ್ತಿದ್ದಾರೆ’ ಎಂದು ವೇದಿಕೆಯ ಚಿತ್ಕಲೆ ಡಿ. ಪ್ರಕಾಶ್ ತಿಳಿಸಿದರು.

ತಿಂಗಳಿಂದ ಪ್ರತಿ ಶನಿವಾರ ಕಬ್ಬನ್ ಉದ್ಯಾನಕ್ಕೆ ಬರುತ್ತಿದ್ದೇನೆ. ಇಲ್ಲಿ ಸಾಂಸ್ಕೃತಿಕ ವಿನಿಮಯದ ಜತೆಗೆ ಹೊಸತನ ಕಲಿಯುವುದಕ್ಕೆ ಒಳ್ಳೆಯ ವೇದಿಕೆಯಾಗಿದೆ

ರೂಬಿನಾಜ್, ಕವಯಿತ್ರಿ

ಕಬ್ಬನ್ ರೀಡ್ಸ್ ಎಂಬ ಓದುವ ಬಳಗದಲ್ಲಿ ಸೇರಿಕೊಂಡಿರುವುದು ಬಹಳ ಖುಷಿ ನೀಡಿದೆ. ಪ್ರತಿ ಶನಿವಾರ ಪ್ರಕೃತಿಯ ಸೌಂದರ್ಯವನ್ನು ಕುಂಚದ ಮೂಲಕ ಅನಾವರಣಗೊಳಿಸುತ್ತಿದ್ದೇನೆ

ಪೂಜಾ, ಎಂಜಿನಿಯರ್

ದೇಶ–ವಿದೇಶಗಳಲ್ಲಿ ‘ಕಬ್ಬನ್ ರೀಡ್ಸ್’

ಕಬ್ಬನ್ ರೀಡ್ಸ್‌ನೊಂದಿಗೆ ದೇಶ–ವಿದೇಶಗಳಲ್ಲಿ 60ಕ್ಕೂ ಹೆಚ್ಚು ರೀಡ್ಸ್ ತಂಡಗಳು ಸಂಯೋಜಿತವಾಗಿವೆ. ಮುಂಬೈ, ದೆಹಲಿ, ಪುಣೆ, ಚೆನ್ನೈ, ಹೈದರಾಬಾದ್, ಕೋಲ್ಕತ್ತ, ಕೊಚ್ಚಿ, ಗೋವಾ, ಅಹಮದಾಬಾದ್, ವಿಜಯವಾಡ, ಪಾಂಡಿಚೇರಿ, ತ್ರಿಶೂರ್, ಶ್ರೀನಗರ, ಕಟಕ್, ಶಿಲ್ಲಾಂಗ್, ಜೈಪುರ ಮತ್ತು ಕ್ವಾಲಾಲಂಪುರ, ಆ್ಯಮ್‌ಸ್ಟರ್ಡಾಮ್, ಮೆಲ್ಬೋರ್ನ್, ಲಂಡನ್ ದುಬೈ, ಪ್ಯಾರಿಸ್, ಜೋಹಾನಸ್‌ಬರ್ಗ್, ಸಿಯಾಟಲ್, ನ್ಯೂಯಾರ್ಕ್ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.

‘2023ರ ಜನವರಿ 7ರಂದು ಅಧಿಕೃತವಾಗಿ ಪ್ರಾರಂಭವಾದ ‘ಕಬ್ಬನ್ ರೀಡ್ಸ್’ ಸಾಮಾಜಿಕ ಮಾಧ್ಯಮಗಳಲ್ಲಿ ಪುಸ್ತಕ ಓದುವ, ಚಿತ್ರಕಲೆ ಬಿಡಿಸುವ ರೀಲ್ಸ್‌ಗಳನ್ನು ಅಪ್‌ಲೋಡ್ ಮಾಡುವ ಮೂಲಕ ಹೆಚ್ಚು-ಹೆಚ್ಚು ಓದುಗರನ್ನು ಸೆಳೆಯಲು ಪ್ರಾರಂಭಿಸಿತು. ಇದುವರೆಗೂ ಸುಮಾರು 33 ಸೆಷನ್‌ಗಳ ನಡೆದಿದ್ದು, ಪ್ರತಿ ಶನಿವಾರ ಓದುಗರ ಸಂಖ್ಯೆ ಹೆಚ್ಚುತ್ತಲೆ ಇದೆ’ ಎಂದು ಕಬ್ಬನ್ ರೀಡ್ಸ್‌ನ ಸಂಸ್ಥಾಪಕರಾದ ಹರ್ಷ, ಶ್ರುತಿ ಸಾಹ ತಿಳಿಸಿದರು.

‘ಓದುಗರ ಸಂಖ್ಯೆ ಹೆಚ್ಚಿಸುವುದೇ ಕಬ್ಬನ್ ರೀಡ್ಸ್‌ನ ಮುಖ್ಯ ಗುರಿಯಾಗಿದೆ. ಇದರಿಂದ, ನಮಗೆ ಬೇರೆ ಯಾವುದೇ ರೀತಿಯ ಲಾಭ ಗಳಿಸುವ ಉದ್ದೇಶವಿಲ್ಲ’ ಎಂದು ತಿಳಿಸಿದರು.

‘ನಾಲ್ಕು ತಿಂಗಳ ಹಿಂದೆಯೇ ಕಬ್ಬನ್ ರೀಡ್ಸ್ ಓದುವ ಬಳಗಕ್ಕೆ ಸೇರಿಕೊಂಡಿದ್ದೇನೆ. ಪ್ರಕೃತಿಯ ಮಡಲಲ್ಲಿ ಕುಳಿತುಕೊಂಡು ಪುಸ್ತಕ ಓದುವ ಆಸೆ ಈಡೇರಿದೆ. ಪ್ರತಿ ಶನಿವಾರ ಹೊಸಬರ ಭೇಟಿಯಾಗುತ್ತದೆ. ಪ್ರಚಲಿತ ವಿದ್ಯಮಾನಗಳ ವಿಚಾರಗಳ ವಿನಿಮಯ ಮಾಡಿಕೊಳ್ಳುವುದಕ್ಕೆ ಇದೊಂದು ಉತ್ತಮ ವೇದಿಕೆಯಾಗಿದೆ’ ಎಂದು ಓದುಗ ವಸಂತ ಕಿಣಿ ತಮ್ಮ ಅನುಭವ ಹಂಚಿಕೊಂಡರು.

ಮೋದಿ ಮೆಚ್ಚುಗೆ: ‘ಕಬ್ಬನ್ ರೀಡ್ಸ್’ ಬಗ್ಗೆ ಸಂಸದ ಪಿ.ಸಿ. ಮೋಹನ್ ಅವರು ಟ್ವೀಟ್ ಮಾಡಿದ್ದರು. ಇದನ್ನು ಮರುಟ್ವೀಟ್ ಮಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ‘ಓದುವ ಆನಂದವನ್ನು ಹರಡುವ ಪ್ರಯತ್ನ ಶ್ಲಾಘನೀಯ’ ಎಂದು ಕಬ್ಬನ್ ರೀಡ್ಸ್ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಸುದ್ದಿ 2 ನಿಮಿಷ

ಬಿಬಿಎಂಪಿಗೆ ಹೈಕೋರ್ಟ್ ನೋಟಿಸ್

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಎಂಟು ವಲಯಗಳ ವ್ಯಾಪ್ತಿಯಲ್ಲಿನ 'ಬಿ' ಖಾತೆ ಹೊಂದಿರುವ 9,736 ಸ್ವತ್ತುಗಳಿಗೆ ಅಕ್ರಮವಾಗಿ ನೀಡಲಾಗಿದ್ದ 'ಎ' ಖಾತಾ ಪ್ರಮಾಣ ಪತ್ರಗಳನ್ನು ರದ್ದುಪಡಿಸಿರುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ಸ್ವತ್ತುಗಳ ಮಾಲೀಕರಿಗೆ ನೋಟಿಸ್ ನೀಡಲಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಹತ್ತು ದಿನಗಳಲ್ಲಿ ಮಾಹಿತಿ ಒದಗಿಸಿ’ ಎಂದು ಹೈಕೋರ್ಟ್ ಬಿಬಿಎಂಪಿಗೆ ನಿರ್ದೇಶಿಸಿದೆ.

ಈ ಸಂಬಂಧ ಯಲಹಂಕ ವಲಯದ ವರದರಾಜ ಸ್ವಾಮಿ ಬಡಾವಣೆ ನಿವಾಸಿ ಎಸ್.ಎಂ. ರಮೇಶ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ವಕೀಲ ಪವನ ಚಂದ್ರ ಶೆಟ್ಟಿ ವಾದ ಮಂಡಿಸಿ, ‘ಅರ್ಜಿದಾರರ ನಿವೇಶನದ 'ಎ' ಖಾತಾ ಪ್ರಮಾಣ ಪತ್ರವನ್ನು ರದ್ದುಪಡಿಸಿ ಬಿಬಿಎಂಪಿ ಮುಖ್ಯ ಆಯುಕ್ತರು ಆದೇಶ ಮಾಡಿದ್ದಾರೆ. ಈ ಆದೇಶ ಮಾಡುವ ಮುನ್ನ ಅರ್ಜಿದಾರರಿಗೆ ವಿವರಣೆ ನೀಡಲು ಅವಕಾಶ ನೀಡಿಲ್ಲ. ಇದೊಂದು ಏಕಪಕ್ಷೀಯ ನಿರ್ಧಾರ. ಆದ್ದರಿಂದ, ಮುಖ್ಯ ಆಯುಕ್ತರ ಆದೇಶ ಮತ್ತು ಸಹಾಯಕ ಕಂದಾಯ ಅಧಿಕಾರಿಯ ನೋಟಿಸ್ ರದ್ದುಪಡಿಸಬೇಕು’ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಸಹಾಯಕ ಕಂದಾಯ ಅಧಿಕಾರಿ ನೀಡಿದ್ದ ನೋಟಿಸ್‌ಗೆ ತಡೆ ನೀಡಿತಲ್ಲದೆ, ‘ಅರ್ಜಿದಾರರ ನಿವೇಶನ 'ಎ' ಖಾತೆಯಲ್ಲಿಯೇ ಉಳಿಯಲಿದೆ’ ಎಂದು ಸ್ಪಷ್ಟಪಡಿಸಿತು.

ರಾಜ್ಯ ಸರ್ಕಾರ, ಬಿಬಿಎಂಪಿ ಮುಖ್ಯ ಆಯುಕ್ತರು, ಸಹಾಯಕ ಕಂದಾಯ ಅಧಿಕಾರಿ ಸೇರಿದಂತೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್ 5ಕ್ಕೆ ಮುಂದೂಡಿತು.

ಬಿಬಿಎಂಪಿ: ಕಣದಲ್ಲಿ 35 ಮಂದಿ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕಾರಿ ಸಮಿತಿ ಚುನಾವಣೆಯ ಕಣದಲ್ಲಿ 35 ಮಂದಿ ಉಳಿದುಕೊಂಡಿದ್ದಾರೆ.

ಒಟ್ಟು 37 ಮಂದಿ ನಾಮಪತ್ರ ಸಲ್ಲಿಸಿದ್ದು, ಇಬ್ಬರು ಶನಿವಾರ ನಾಮಪತ್ರ ವಾಪಸ್ ಪಡೆದರು. ಅಂತಿಮವಾಗಿ 35 ಮಂದಿ ಕಣದಲ್ಲಿದ್ದು, ಅವರಿಗೆ ಚಿಹ್ನೆಗಳನ್ನು ಘೋಷಿಸಿ ಚುನಾವಣೆ ಅಧಿಕಾರಿ ಎನ್. ಚಂದ್ರಶೇಖರ್ ಆದೇಶ ಹೊರಡಿಸಿದ್ದಾರೆ. ಸಂಘಕ್ಕೆ ಸೆ.3 ರಂದು ಮತದಾನ ನಡೆಯಲಿದೆ.

ಸಂಘದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಆರೋಗ್ಯ ವಿಭಾಗದ ಮೂವರು ಹಾಗೂ ಎಂಜಿನಿಯರಿಂಗ್ ವಿಭಾಗದ ನಾಲ್ವರು ಕಣದಲ್ಲಿದ್ದಾರೆ. ಪ್ರಸ್ತುತ ಸಂಘದ ಅಧ್ಯಕ್ಷರಾಗಿರುವ ಎ. ಅಮೃತ್‌ರಾಜ್ ನೇತೃತ್ವದಲ್ಲಿ ಈ ಏಳು ಜನ ಸೇರಿದಂತೆ 17 ಜನ ಕಾರ್ಯಕಾರಿ ಸಮಿತಿಯ ಎಲ್ಲ ಸ್ಥಾನಗಳಿಗೆ ಸ್ಪರ್ಧಿಸಿದ್ದಾರೆ.

ಆರೋಗ್ಯ ವೈದ್ಯಾಧಿಕಾರಿ ಡಾ. ಶೋಭಾ ಅವರು ಕಣದಲ್ಲಿದ್ದು, ಹಿರಿಯ ಆರೋಗ್ಯ ಪರಿವೀಕ್ಷಕರಾದ ಆರ್. ರೇಣುಕಾಂಬ, ಕೆ. ಸಂತೋಷಕುಮಾರ ನಾಯ್ಕ ಸ್ಪರ್ಧೆಯಲ್ಲಿದ್ದಾರೆ. ಸಹಾಯ ಕಾರ್ಯಪಾಲಕ ಎಂಜಿನಿಯರ್‌ಗಳಾದ ವಿ. ಉಮೇಶ್, ಎಚ್.ಕೆ. ತಿಪ್ಪೇಶ್, ಎಂ. ಸಂತೋಷ್‌ಕುಮಾರ್, ಸಹಾಯಕ ಎಂಜಿನಿಯರ್ ಕೆ. ಮಂಜೇಗೌಡ, ಪ್ರಾಂಶುಪಾಲರಾದ ಎನ್. ಎಸ್. ಸೋಮಶೇಖರ್ ಸ್ಪರ್ಧೆಗಿಳಿದಿದ್ದಾರೆ. ಸಂಘದಲ್ಲಿ 2,600 ಸದಸ್ಯರಿದ್ದು, ಪ್ರತಿಯೊಬ್ಬರೂ 17 ಮತ ಚಲಾಯಿಸಲು ಅವಕಾಶವಿದೆ.

ರಾಜ್ಯದ ಸಣ್ಣ ನೀರಾವರಿ ಯೋಜನೆಗಳ ಗಣತಿ; ಶೇಕಡ 3.8ರಷ್ಟು ಏರಿಕೆ

ಯೋಜನೆ ಹೆಚ್ಚಳ– ನೀರಾವರಿ ಅನುಕೂಲ ಇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಣ್ಣ ನೀರಾವರಿ ಯೋಜನೆಯ ಐದನೇ ಗಣತಿಗೆ ಹೋಲಿಸಿದರೆ ಆರನೇ ಗಣತಿಯ ವೇಳೆ ಕರ್ನಾಟಕದಲ್ಲಿ ಸಣ್ಣ ನೀರಾವರಿ ಯೋಜನೆಗಳ ಸಂಖ್ಯೆ ಶೇ 3.8ರಷ್ಟು ಹೆಚ್ಚಳ ಆಗಿದೆ. ಆದರೆ, ಈ ಯೋಜನೆಗಳಿಂದ ನೀರಾವರಿ ಸೌಕರ್ಯ ಕಲ್ಪಿಸಿರುವ ಪ್ರದೇಶ ಗಣನೀಯವಾಗಿ ಕಡಿಮೆ ಆಗಿದೆ.

ಕೇಂದ್ರ ಜಲಶಕ್ತಿ ಸಚಿವಾಲಯವು ಸಣ್ಣ ನೀರಾವರಿ ಯೋಜನೆಗಳ ಆರನೇ ಗಣತಿ ವರದಿಯನ್ನು ಶನಿವಾರ ಬಿಡುಗಡೆ ಮಾಡಿದೆ. ಈ ವರದಿಯ ಪ್ರಕಾರ, ಉತ್ತರ ಪ್ರದೇಶವು ಗರಿಷ್ಠ ಸಂಖ್ಯೆಯ ಸಣ್ಣ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಿದೆ. ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ, ಒಡಿಶಾ ಹಾಗೂ ಜಾರ್ಖಂಡ್ ರಾಜ್ಯಗಳು ಗರಿಷ್ಠ ಪ್ರಮಾಣದಲ್ಲಿ ಮೇಲ್ಮೈ ನೀರಿನ ಯೋಜನೆಗಳನ್ನು ಅನುಷ್ಠಾನ ಮಾಡಿವೆ.

ಐದನೇ ಗಣತಿಯ ವೇಳೆ ರಾಜ್ಯದಲ್ಲಿ 13.54 ಲಕ್ಷ ಸಣ್ಣ ನೀರಾವರಿ ಘಟಕಗಳು ಇದ್ದವು. ಇದರಲ್ಲಿ 12.16 ಲಕ್ಷ ಅಂತರ್ಜಲ ಹಾಗೂ 1.37 ಲಕ್ಷ ಮೇಲ್ಮೈ ನೀರಿನ ಯೋಜನೆಗಳು. ಆರನೇ ಗಣತಿಯ ವೇಳೆ ಅಂತರ್ಜಲ ಯೋಜನೆಗಳ ಪ್ರಮಾಣ ಶೇ 5ರಷ್ಟು (61,252) ಹೆಚ್ಚಾಗಿದೆ. ಮೇಲ್ಮೈ ನೀರಿನ ಘಟಕಗಳ ಪ್ರಮಾಣ ಶೇ 7.2ರಷ್ಟು (9,926) ಇಳಿಕೆ ಆಗಿದೆ.

ಐದನೇ ಗಣತಿಯ ಸಂದರ್ಭದಲ್ಲಿ ಸಣ್ಣ ನೀರಾವರಿ ಯೋಜನೆಗಳಿಂದ 31.54 ಲಕ್ಷ ಹೆಕ್ಟೇರ್‌ಗೆ ನೀರಾವರಿ ಸೌಕರ್ಯ ಕಲ್ಪಿಸಲಾಗಿತ್ತು. ಆಗಿನ ಗಣತಿಯ ಪ್ರಕಾರ, 26.82 ಲಕ್ಷ ಹೆಕ್ಟೇರ್‌ಗೆ ನೀರಾವರಿ ಸೌಕರ್ಯ ಒದಗಿಸಲಾಗಿದೆ. ಇದರ ಪ್ರಕಾರ, ಕೃಷಿ ಭೂಮಿಗಳನ್ನು ನೀರಾವರಿಗೆ ಒಳಪಡಿಸಿರುವ ಪ್ರಮಾಣ ಶೇ 15ರಷ್ಟು ಕಡಿಮೆ ಆಗಿದೆ.

ಶೇ 95.7ರಷ್ಟು ಸಣ್ಣ ನೀರಾವರಿ ಘಟಕಗಳು ವೈಯಕ್ತಿಕ ಮಾಲೀಕತ್ವದಲ್ಲಿವೆ. ಶೇ 3.5 ಯೋಜನೆಗಳು ಸಾರ್ವಜನಿಕ ಸ್ವಾಮ್ಯದಲ್ಲಿವೆ. ಉಳಿದವುಗಳನ್ನು ನಿರ್ಮಾಣ ಮಾಡಿದ್ದು ಕೃಷಿಕರ ಗುಂಪು. 9.73 ಲಕ್ಷ ಕೊಳವೆಬಾವಿಗಳನ್ನು ತೋಡಿಸಿರುವುದು 2 ಎಕರೆಗಿಂತ ಕಡಿಮೆ ಜಮೀನು ಹೊಂದಿರುವ ಸಣ್ಣ ರೈತರು. ರೈತರು ತಮ್ಮ ಉಳಿತಾಯದ ಹಣದ ನೆರವಿನಿಂದ 8.06 ಲಕ್ಷ ಸಣ್ಣ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದಾರೆ.

13.99 ಲಕ್ಷ ಸಣ್ಣ ನೀರಾವರಿ ಘಟಕಗಳು ಕಾರ್ಯಾಚರಣೆ ಮಾಡುತ್ತಿವೆ. ಇದರಲ್ಲಿ ಶೇ 6.1 (85,892) ಘಟಕಗಳು ಕಡಿಮೆ ಬಳಕೆಯಾಗುತ್ತಿವೆ. ಸಮರ್ಪಕ ವಿದ್ಯುತ್ ಲಭ್ಯತೆ ಇಲ್ಲದಿರುವುದು ಹಾಗೂ ಈ ಬಾವಿಗಳಲ್ಲಿ ಕಡಿಮೆ ಪ್ರಮಾಣದ ನೀರು ಸಿಗುತ್ತಿರುವುದು ಇದಕ್ಕೆ ಪ್ರಮುಖ ಕಾರಣ. ನಿರ್ವಹಣೆ ಕೊರತೆ ಹಾಗೂ ಹಣಕಾಸಿನ ಸಮಸ್ಯೆಗಳು ಸಹ ಕಾರಣ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಅಂಕಿಅಂಶಗಳು

- **14,05,215** ರಾಜ್ಯದಲ್ಲಿರುವ ಸಣ್ಣ ನೀರಾವರಿ ಯೋಜನೆಗಳು
- **12,77,252** ಅಂತರ್ಜಲ ಯೋಜನೆಗಳು
- **2,409** ಯೋಜನೆಗಳು ಶಾಶ್ವತ ಸ್ಥಗಿತ
- **1,27,963** ಮೇಲ್ಮೈ ನೀರು ಯೋಜನೆಗಳು
- **6,96,702** ಮಧ್ಯಮ ಕೊಳವೆಬಾವಿಗಳು
- **13,99,546** ಯೋಜನೆಗಳು ಬಳಕೆಯಲ್ಲಿವೆ
- **3,30,824** ಆಳವಾದ ಕೊಳವೆಬಾವಿಗಳು
- **3,260** ಯೋಜನೆಗಳು ತಾತ್ಕಾಲಿಕ ಸ್ಥಗಿತ
- **1,34,603** ಬಾವಿಗಳು

ಬಿಜೆಪಿ ಸೋಲು ಖಚಿತ: ಖಂಡ್ರೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ‘ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಬಿಜೆಪಿ ನಾಯಕತ್ವ ಸೋಲುತ್ತದೆ ಎಂಬುದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸ್ಪಷ್ಟವಾಗಿರುವುದರಿಂದಲೇ, ಅವರು ಬೆಂಗಳೂರಿಗೆ ಭೇಟಿ ನೀಡಿದಾಗ ರಾಜ್ಯದ ನಾಯಕರನ್ನು ತಮ್ಮ ಹಿಂದೆ, ಮುಂದೆ ಬರಲು ಬಿಟ್ಟಿಲ್ಲ’ ಎಂದು ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಪ್ರತಿಪಾದಿಸಿದರು.

‘ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋತಿರುವ ಬಿಜೆಪಿ ನಾಯಕರು, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬೀದಿಯಲ್ಲಿ ನಿಂತು ಕೈ ಬೀಸಿದರು. ಮುಂದಿನ ಲೋಕಸಭಾ ಚುನಾಣೆಯಲ್ಲೂ ಇದೇ ಪರಿಸ್ಥಿತಿ ಮುಂದುವರಿಯಲಿದೆ ಎನ್ನುವುದರ ಪ್ರತಿಬಿಂಬ ಇದು’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಬಹು ಮಾಧ್ಯಮ ಪ್ರಜಾವಾಣಿ@75 www.prajavani.net

ಇಂದು

ಫೇಸ್‌ಬುಕ್, ಯೂಟ್ಯೂಬ್, ಟ್ವಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ

ಸೆಲೆಬ್ರಿಟಿ PREMIERE

ಚೈತ್ರಾ ಜೆ.ಆಚಾರ್ ನಟಿ



ಪ್ರಜಾವಾಣಿ ಜೊತೆ ನಟಿ ಚೈತ್ರಾ ಜೆ.ಆಚಾರ್ ಬೆಳಿಗ್ಗೆ 11 ಕ್ಕೆ

Prajavani.net Prajavani Prajavani

ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಹೂಡಿಕೆ ಹೆಸರಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ರಾಮನಗರ: ಆನ್‌ಲೈನ್‌ನಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂದು ನಗರದ ಬ್ಯಾಂಕ್ ಉದ್ಯೋಗಿಯೊಬ್ಬರಿಗೆ ಟೆಲಿಗ್ರಾಂ ಆ್ಯಪ್‌ನಲ್ಲಿ ಸಂದೇಶ ಕಳಿಸಿ, ಹಣ ಹೂಡಿಕೆ ಮಾಡಿಸಿಕೊಂಡ ಆನ್‌ಲೈನ್ ವಂಚಕರು ವ್ಯಕ್ತಿಗೆ ₹3.35 ಲಕ್ಷ ಮೋಸ ಮಾಡಿದ್ದಾರೆ. ಈ ಕುರಿತು ರಾಮನಗರ ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉದ್ಯೋಗಿಯು ಟೆಲಿಗ್ರಾಂನಲ್ಲಿ ಬಂದಿರುವ ಸಂದೇಶವನ್ನು ನಿಜವೆಂದು ನಂಬಿ ಮೊದಲಿಗೆ ₹5 ಸಾವಿರ ಹೂಡಿಕೆ ಮಾಡಿದ್ದಾರೆ. ಅದಕ್ಕೆ ಪ್ರತಿಯಾಗಿ ಅಸಲಿನೊಂದಿಗೆ ಹೆಚ್ಚುವರಿಯಾಗಿ ₹1,500 ಲಾಭ ಬಂದಿದೆ. ಹೀಗೆ ಹೂಡಿಕೆಯನ್ನು ಹೆಚ್ಚು ಮಾಡಿದರೆ, ಲಾಭ ಸಹ ದುಪ್ಪಟ್ಟಾಗುತ್ತಾ ಹೋಗುತ್ತದೆ ಎಂದು ವಂಚಕರು ನಂಬಿಸಿದ್ದಾರೆ.

ಹೀಗೆ ಎರಡು- ಮೂರು ಸಲ ಹೂಡಿಕೆ ಮಾಡಿ ಲಾಭ ಗಳಿಸಿದ ಉದ್ಯೋಗಿಗೆ ₹2.20 ಲಕ್ಷ ಹೂಡಿಕೆ ಮಾಡಿದರೆ ₹6.37 ಲಕ್ಷ ಲಾಭ ಬರಲಿದೆ ಎಂದು ಆಸೆ ತೋರಿಸಿದ್ದಾರೆ. ನಿಜವೆಂದು ನಂಬಿದ ಉದ್ಯೋಗಿ ಎರಡು ಕಂತುಗಳಲ್ಲಿ ₹1.10 ಲಕ್ಷ ಹೂಡಿಕೆ ಮಾಡಿದ್ದಾರೆ. ಇದಾದ ನಂತರ, ಆ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಸಂಪರ್ಕಕ್ಕೂ ಯಾರೂ ಸಿಕ್ಕಿಲ್ಲ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಬಸ್ ಡಿಕ್ಕಿ– ಯುವತಿ ಸಾವು: ರಾಮನಗರ: ದ್ವಿಚಕ್ರ ವಾಹನಕ್ಕೆ ಬೈಕ್ ಡಿಕ್ಕಿ ಹೊಡೆದಿದ್ದರಿಂದ ಯುವತಿಯೊಬ್ಬರು ಮೃತಪಟ್ಟಿರುವ ಘಟನೆ ಬಿಡದಿ ಬಳಿಯ ಕಣಿಮಿಣಕಿ ಟೋಲ್ ಸರ್ವೀಸ್ ರಸ್ತೆಯಲ್ಲಿ ನಡೆದಿದೆ.

ತಾಲ್ಲೂಕಿನ ಬನ್ನಿಕುಪ್ಪೆ ಗ್ರಾಮದ ರಕ್ಷಿತಾ ಮೃತ ಯುವತಿ. ಬೆಳಿಗ್ಗೆ 8.30ರ ಸುಮಾರಿಗೆ ರಕ್ಷಿತಾ ಅವರು ಸ್ಕೂಟರ್‌ನಲ್ಲಿ ಬೆಂಗಳೂರು ಕಡೆಗೆ ಹೋಗುತ್ತಿದ್ದಾಗ, ಹಿಂದಿನಿಂದ ವೇಗವಾಗಿ ಬಂದ ಬಸ್ ಸ್ಕೂಟರ್‌ಗೆ ಗುದ್ದಿದೆ. ಡಿಕ್ಕಿಯ ರಭಸಕ್ಕೆ ಯುವತಿ ರಸ್ತೆ ಪಕ್ಕದ ಸಿಮೆಂಟ್ ಚರಂಡಿಗೆ ಉಜ್ಜಿಕೊಂಡು ಹೋಗಿ ಬಿದ್ದಿದ್ದಾರೆ. ಸ್ಥಳೀಯರು ಆಸ್ಪತ್ರೆಗೆ ಸಾಗಿಸಿದರೂ, ತೀವ್ರವಾಗಿ ಗಾಯಗೊಂಡಿದ್ದ ಅವರು ಕೊನೆಯುಸಿರೆಳೆದಿದ್ದಾರೆ ಎಂದು ಕುಂಬಳಗೋಡು ಠಾಣೆ ಪೊಲೀಸರು ತಿಳಿಸಿದ್ದಾರೆ.

ಹೈಕೋರ್ಟ್‌ನ ಸರ್ಕಾರಿ ವಕೀಲರ ಸಮ್ಮೇಳನದಲ್ಲಿ ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿಕೆ

ಮಧ್ಯಸ್ತಿಕೆ ಪ್ರಕರಣಗಳಿಗೆ ‘ಮಾರ್ಗದರ್ಶಿ ಸೂತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಸ್ತಿಕೆ ಪ್ರಕರಣಗಳಿಗೆ ಮಾರ್ಗದರ್ಶಿ ಸೂತ್ರ ಸಿದ್ಧಗೊಳಿಸಲಾಗುತ್ತಿದ್ದು, 15 ದಿನಗಳಲ್ಲಿ ಅಂತಿಮಗೊಳಿಸಲಾಗುವುದು ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ವಿಧಾನಸೌಧದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಹೈಕೋರ್ಟ್‌ನ ಸರ್ಕಾರಿ ವಕೀಲರ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಮಧ್ಯಸ್ತಿಕೆ ಪ್ರಕರಣಗಳಲ್ಲಿದ್ದ ಲೋಪಗಳನ್ನು ಸರಿಪಡಿಸಲು ಹಾಗೂ ಸರ್ಕಾರಿ ವಕೀಲರು ಸಮಯಕ್ಕೆ ಸರಿಯಾಗಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನಿಯಮ ರೂಪಿಸಲಾಗುತ್ತಿದೆ. ಉನ್ನತಾಧಿಕಾರಿಗಳ ಜತೆ ಚರ್ಚಿಸಿದ ನಂತರ ಮಾರ್ಗದರ್ಶಿ ಸೂತ್ರಗಳನ್ನು ಪ್ರಕಟಿಸಲಾಗುವುದು ಎಂದರು.

ಜನರಿಗೆ ನ್ಯಾಯ ಸಿಗುವ ಪ್ರಮಾಣ ಇನ್ನೂ ಹೆಚ್ಚಾಗಬೇಕು. ಬಡವರಿಗೆ ನ್ಯಾಯ ಸಿಗದಿದ್ದರೆ ಸರ್ಕಾರಿ ವಕೀಲರನ್ನು ನೇಮಿಸಿಕೊಂಡಿದ್ದು ಸಾರ್ಥಕವಾಗದು

ಸಿದ್ದರಾಮಯ್ಯ, ಮುಖ್ಯಮಂತ್ರಿ

ಯಾವುದೇ ದಿಕ್ಸೂಚಿ ಇಲ್ಲದೇ, ಸರ್ಕಾರದ ಆದೇಶ, ಸುತ್ತೋಲೆಗಳ ಮೇಲೆ ನಡೆಯುತ್ತಿದ್ದ ಸರ್ಕಾರಿ ವ್ಯಾಜ್ಯ ನಿರ್ವಹಣೆಗೆ ಚೌಕಟ್ಟು ಒದಗಿಸಲಾಗಿದೆ. ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ಕಾಯ್ದೆ ಜಾರಿಗೆ ತರಲಾಗಿದೆ. ಆ ಮೂಲಕ ದೇಶದಲ್ಲೇ ಮೊದಲ ಬಾರಿಗೆ ಸರ್ಕಾರಿ ವಕೀಲರ ಕಾರ್ಯನಿರ್ವಹಣೆಗೆ ಹೊಣೆಗಾರಿಕೆ ನಿಗದಿ ಮಾಡಲಾಗಿದೆ. ಇನ್ನು ಮುಂದೆ ಸರ್ಕಾರದ ವಕೀಲರು ವ್ಯಾಜ್ಯಗಳನ್ನು ಪರಿಣಾಮಕಾರಿಯಾಗಿ, ಸರ್ಕಾರದ ಹಿತಾಸಕ್ತಿಗೆ ಅನುಗುಣವಾಗಿ ನಿರ್ವಹಿಸಲಿದ್ದಾರೆ ಎಂದರು.

ಐದಾರು ವರ್ಷಗಳಲ್ಲಿ ಕರ್ನಾಟಕ ಸರ್ಕಾರ ಹಾಗೂ ಇತರೆ ಸರ್ಕಾರಿ ಸಂಸ್ಥೆಗಳು ಶೇ 75ರಷ್ಟು ಪ್ರಕರಣಗಳನ್ನು ಸೋತಿವೆ. ಸರ್ಕಾರದ ವಿರುದ್ಧ ಆದೇಶಗಳಾಗಿವೆ. ಕ್ರಿಮಿನಲ್ ಪ್ರಕರಣಗಳಲ್ಲಿ ಶೇ 65ಕ್ಕಿಂತಲೂ ಹೆಚ್ಚು ಪ್ರಕರಣಗಳಲ್ಲಿ ಸೋಲು ಅನುಭವಿಸಲಾಗಿದೆ. ತಪ್ಪಿತಸ್ಥರಿಗೆ ಶಿಕ್ಷೆ ಆಗಿಲ್ಲ. ಮೇಲ್ಮನವಿಗಳ ಸಂಖ್ಯೆ ಹೆಚ್ಚಳದಿಂದ ವೆಚ್ಚವೂ ಅಧಿಕವಾಗಿದೆ ಎಂದು ಹೇಳಿದರು.

ಸರ್ಕಾರಿ ವಕೀಲರು ಮೌಖಿಕ ವಾದ-ಪ್ರತಿವಾದಗಳ ಜತೆಗೆ ಲಿಖಿತ ವಾದ-ಪ್ರತಿವಾದಗಳ ಸಲ್ಲಿಕೆಯನ್ನೂ ಕಡ್ಡಾಯಗೊಳಿಸಲಾಗಿದೆ. ಅದಕ್ಕಾಗಿ ಪ್ರಕ್ರಿಯೆಯ ವ್ಯಾಖ್ಯಾನ ಮಾಡಲಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು.

ಅಂಕಿ-ಅಂಶಗಳು

- **2.50** ಲಕ್ಷ ಹೈಕೋರ್ಟ್‌ನಲ್ಲಿ ಬಾಕಿ ಇರುವ ಪ್ರಕರಣಗಳು
- **18.9** ಲಕ್ಷ ಕೆಳ ಹಂತದಲ್ಲಿ ಬಾಕಿ ಇರುವ ಪ್ರಕರಣಗಳು
- **1,626** 20 ವರ್ಷಕ್ಕಿಂತ ಹಿಂದಿನ ಪ್ರಕರಣಗಳು
- **172** 30 ವರ್ಷಕ್ಕಿಂತ ಹಳೆಯ ಪ್ರಕರಣಗಳು

ಧಾರ್ಮಿಕ ಘೋಷಣೆ ಬರೆದ ವಿದ್ಯಾರ್ಥಿಗೆ ಥಳಿತ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಠುವಾ ಜಿಲ್ಲೆಯಲ್ಲಿ ತರಗತಿಯ ಬೋರ್ಡ್ ಮೇಲೆ ಧಾರ್ಮಿಕ ಘೋಷಣೆ ಬರೆದ ಕಾರಣಕ್ಕೆ 10ನೇ ತರಗತಿಯ ವಿದ್ಯಾರ್ಥಿಗೆ ದೈಹಿಕವಾಗಿ ಶಿಕ್ಷೆ ನೀಡಿದ ಆರೋಪದ ಮೇಲೆ ಸರ್ಕಾರಿ ಶಾಲೆಯ ಶಿಕ್ಷಕನನ್ನು ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಸಂತ್ರಸ್ತ ವಿದ್ಯಾರ್ಥಿ ಆಸ್ಪತ್ರೆಗೆ ದಾಖಲಾಗಿ, ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದು ಅಧಿಕಾರಿ ತಿಳಿಸಿದ್ದಾರೆ.

ವಿದ್ಯಾರ್ಥಿಯ ಮೇಲೆ ದೈಹಿಕ ಹಲ್ಲೆ ನಡೆಸಿರುವುದರಲ್ಲಿ ಬನಿ ಸರ್ಕಾರಿ ಪ್ರೌಢಶಾಲೆಯ ಪ್ರಾಂಶುಪಾಲ (ಬಾನಿ) ಕೂಡ ಆರೋಪಿಯಾಗಿದ್ದು, ಅವರು ತಲೆಮರೆಸಿಕೊಂಡಿದ್ದಾರೆ. ಬಂಧನಕ್ಕೆ ಶೋಧ ನಡೆಯುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚಿತ್ರಾವಳಿ

1

2

3



4

5

1. ಪೀಣ್ಯದ ರಾಮಯ್ಯ ಟೆಕ್ನಾಲಜಿ ಕ್ಯಾಂಪಸ್‌ನಲ್ಲಿ ಶನಿವಾರ ಹಮ್ಮಿಕೊಂಡ 2023–24ನೇ ಸಾಲಿನ ಬಿ.ಟೆಕ್ ಬ್ಯಾಚ್‌ನ ಮೊದಲ ವರ್ಷದ ಪರಿಚಯಾತ್ಮಕ ಕಾರ್ಯಕ್ರಮ ‘ದೀಕ್ಷಾರಂಭ’ದಲ್ಲಿ ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್‌ನ ಕುಲಪತಿ ಕುಲದೀಪ್ ಕುಮಾರ್ ರೈನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಸಹ ಕುಲಪತಿ ಪ್ರೊ. ಗೋವಿಂದ್ ಆರ್. ಕಡಾಂಬಿ, ಶೈಕ್ಷಣಿಕ ವಿಭಾಗದ ಡೀನ್ ಪ್ರೊ. ಮೇಧಾ ರಾವ್, ಎಂಜಿನಿಯರಿಂಗ್ ಹಾಗೂ ತಾಂತ್ರಿಕ ವಿಭಾಗದ ಡೀನ್ ಪ್ರೊ.ಜಿ.ವಿ. ದೇಸಾಯಿ ಹಾಗೂ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ದಯಾನಂದ್ ಇದ್ದಾರೆ
2. ಮಾರತಹಳ್ಳಿಯಲ್ಲಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ನವೀಕೃತ ಮಳಿಗೆ ಶನಿವಾರ ಪುನರಾರಂಭಗೊಂಡಿತು. ನಟಿ ಶ್ರೀನಿಧಿ ಶೆಟ್ಟಿ ಉದ್ಘಾಟಿಸಿದರು. ಕರ್ನಾಟಕ ವಲಯ ಮುಖ್ಯಸ್ಥ ಫಿಲ್ಸರ್ ಬಾಬು, ಅಧಿಕಾರಿಗಳು ಇದ್ದರು
3. ಗಂಗಪ್ಪ ತಳವಾರ್ ಅವರ ಕಾದಂಬರಿ ‘ಧಾವತಿ’ ಶನಿವಾರ ಬಿಡುಗಡೆಗೊಂಡಿತು. ಬರಹಗಾರರಾದ ವಿಕಾಸ್ ಮೌರ್ಯ, ಹುಲಿಕುಂಟೆ ಮೂರ್ತಿ, ಎಚ್.ಡಿ. ಉಮಾಶಂಕರ್, ಪಿ. ಭಾರತಿದೇವಿ, ಎನ್. ವೆಂಕಟೇಶ್, ಸುಬ್ಬು ಹೊಲೆಯಾರ್, ದು. ಸರಸ್ವತಿ, ಗಂಗಪ್ಪ ತಳವಾರ್ ಇದ್ದರು.
4. ಪಿಇಎಸ್ ವಿಶ್ವವಿದ್ಯಾಲಯದ ಬಿ.ಟೆಕ್, ಬಿ ಆರ್ಕ್ ಕೋರ್ಸ್‌ಗಳ ಪ್ರಥಮ ವರ್ಷದ ತರಗತಿಗಳು ಶನಿವಾರ ಆರಂಭವಾದವು. ವಿವಿ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ, ಎಚ್‌ಪಿಸಿ ಸಾಫ್ಟ್‌ವೇರ್‌ನ ಹಿರಿಯ ವ್ಯವಸ್ಥಾಪಕ ಅಶೋಕ್ ಭಟ್, ವಿವಿ ಕುಲಪತಿ ಜೆ. ಸೂರ್ಯ, ಸಿಇಒ ಅಜೋಯ್‌ಕುಮಾರ್, ಸಮ ಕುಲಾಧಿಪತಿ ಜವಾಹರ್ ಇದ್ದರು
5. ಗೃಹೋಪಯೋಗಿ ವಸ್ತುಗಳು ಮತ್ತು ಎಲೆಕ್ಟ್ರಾನಿಕ್ಸ್ ಮಾರಾಟ ಸಂಸ್ಥೆ ಗಿರಿಯಾಸ್‌ನ 136ನೇ ಮಳಿಗೆಯನ್ನು ಉತ್ತರಹಳ್ಳಿಯಲ್ಲಿ ಸ್ಯಾಮ್‌ಸಂಗ್ ಡಿಜಿಟಲ್ ಅಪ್ಲಯನ್ಸ್ ಮುಖ್ಯಸ್ಥ ಪುಷ್ಪ್ ಸೌರಭ್ ಬೈಶಾಖಿಯಾ ಉದ್ಘಾಟಿಸಿದರು. ಗಿರಿಯಾಸ್ ವ್ಯವಸ್ಥಾಪಕ ನಿರ್ದೇಶಕ ಪಿ.ಎಲ್. ಗಿರಿಯಾ, ನಿರ್ದೇಶಕರಾದ ಎಚ್.ಆರ್. ಗಿರಿಯಾ, ಮನೀಷ್ ಗಿರಿಯಾ, ಅಮಾನ್ ಗಿರಿಯಾ ಇದ್ದರು.

ನಿವೃತ್ತ ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳ ಖಂಡನಾ ಪತ್ರ

ಐಐಎಂಬಿ: ಪತ್ರಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜದ ಸಾಮರಸ್ಯಕ್ಕೆ ಧಕ್ಕೆ ತರುವ ಮಾಧ್ಯಮ ಸಂಸ್ಥೆಗಳಿಗೆ ಹಣ ನೀಡಬಾರದು' ಎಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಹಾಲಿ ಹಾಗೂ ನಿವೃತ್ತ ಪ್ರಾಧ್ಯಾಪಕರು ಭಾರತದ ಕಾರ್ಪೋರೇಟ್ ಕಂಪನಿಗಳಿಗೆ ಬರೆದಿದ್ದ ಪತ್ರಕ್ಕೆ ನಿವೃತ್ತ ಐಎಎಸ್, ಐಪಿಎಸ್ ಹಾಗೂ ಐಎಫ್‌ಎಸ್ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕೆಲವರ ಈ ನಡೆ ದಿವಾಳಿ ಮನಸ್ಥಿತಿ, ಸೈದ್ಧಾಂತಿಕ ಪಕ್ಷಪಾತದ ಪ್ರತಿಬಿಂಬ. ಇಂತಹ ನಡೆಯನ್ನು ಸಂಸ್ಥೆ ಖಂಡಿಸಬೇಕು ಎಂದು ಕೆ.ಶ್ರೀಧರ್ ರಾವ್, ಎಸ್. ಎಲ್.ಗಂಗಾಧರಪ್ಪ, ಎಂ.ಮದನ್ ಗೋಪಾಲ್, ಪಿ.ಬಿ.ರಾಮಮೂರ್ತಿ, ಎಂ.ಲಕ್ಷ್ಮೀನಾರಾಯಣ, ರಮೇಶ್ ಝಳಕಿ, ಎನ್.ಪ್ರಭಾಕರ್, ಎಂ.ಎನ್. ಕೃಷ್ಣಮೂರ್ತಿ, ಗೋಪಾಲ್ ಹೊಸೂರ್, ಭಾಸ್ಕರ ರಾವ್, ಬ್ರಿಜ್ ಕಿಶೋರ್ ಸಿಂಗ್ ಸೇರಿದಂತೆ 23 ನಿವೃತ್ತ ಅಧಿಕಾರಿಗಳು ಐಐಎಂಬಿ ಆಡಳಿತ ಮಂಡಳಿ ಅಧ್ಯಕ್ಷ ದೇವಿ ಪ್ರಸಾದ್ ಶೆಟ್ಟಿ ಅವರಿಗೆ ಪತ್ರ ಬರೆದಿದ್ದಾರೆ.

ಬೆಂಗಳೂರಿನಲ್ಲಿ 1973ರಲ್ಲಿ ಸ್ಥಾಪನೆಯಾದ ಐಐಎಂ ಬದ್ಧತೆ, ಸಮರ್ಪಣೆ ಮತ್ತು ಕಠಿಣ ಪರಿಶ್ರಮಕ್ಕೆ ದೇಶದಲ್ಲೇ ಹೆಸರಾಗಿದೆ. ಶೈಕ್ಷಣಿಕ ಚಟುವಟಿಕೆಗಳಲ್ಲಿ ಜಾಗತಿಕ ಶ್ರೇಷ್ಠತೆಯ ಗುಣಮಟ್ಟವನ್ನು ಸಾಧಿಸಲು ಅನುಕೂಲವಾಗುವಂತೆ ಕೇಂದ್ರ ಸರ್ಕಾರ ಐಐಎಂಗಳಿಗೆ ರಾಷ್ಟ್ರೀಯ ಪ್ರಾಮುಖ್ಯತೆ ಸಂಸ್ಥೆಯ ಸ್ಥಾನಮಾನ ನೀಡಿದೆ. ಬೆಂಗಳೂರಿನ ಐಐಎಂ ಸಹ ಉಪನಿಷತ್ತಿನಿಂದ ಅಳವಡಿಸಿಕೊಂಡ 'ನಮ್ಮ ಅಧ್ಯಯನವು ಪ್ರಬುದ್ಧವಾಗಲಿ' ಎಂಬ ತನ್ನ ಧ್ಯೇಯವಾಕ್ಯದಂತೆ ನಡೆಯುತ್ತಿದೆ. ಇಂತಹ ಸಂಸ್ಥೆಯಲ್ಲಿ ಕೆಲಸ ಮಾಡಿ ನಿವೃತ್ತರಾದ ಹಾಗೂ ಹಾಲಿ ಪ್ರಾಧ್ಯಾಪಕರು ಕಾರ್ಪೋರೇಟ್ ಕಂಪನಿಗಳಿಗೆ ಬರೆದ ಪತ್ರ ನಾಗರಿಕ ಸಮಾಜವನ್ನು ದಿಗ್ಭ್ರಮೆಗೊಳಿಸುವಂತಿದೆ ಎಂದಿದ್ದಾರೆ.

ಪತ್ರದಲ್ಲಿ ಬಳಸಿರುವ ದ್ವೇಷದ ಭಾಷಣ, ಹಿಂಸಾತ್ಮಕ ಸಂಘರ್ಷ, ಅಲ್ಪಸಂಖ್ಯಾತರ ಮೇಲಿನ ದ್ವೇಷ ಮೊದಲಾದ ಪದಗಳು ಅವರು ಏನನ್ನು ಹೇಳಲು ಹೊರಟಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ. ಅವರ ದೃಷ್ಟಿಕೋನವನ್ನು ವಿರೋಧಿಸುವ ಮತ್ತೊಂದು ಗುಂಪಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಮರುಹೇಳಿಕೆ ನೀಡಿದರೆ ಸಂಸ್ಥೆಯ ಆವರಣದಲ್ಲಿನ ಅತ್ಯುತ್ತಮ ಶೈಕ್ಷಣಿಕ ವಾತಾವರಣದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತದೆ ಎನ್ನುವ ಸೂಕ್ಷ್ಮತೆ ಅವರಿಗಿಲ್ಲವಾಗಿದೆ ಎಂದು ಟೀಕಿಸಿದ್ದಾರೆ.

ಇಂತಹ ಪತ್ರಗಳಿಗೆ ಮೌನವೇ ಉತ್ತರವಾದರೂ, ಭವಿಷ್ಯದಲ್ಲಿ ಇದೇ ರೀತಿಯ ಚಟುವಟಿಕೆಗಳು ಮುಂದುವರಿಯಬಹುದು. ಇದು ಐಐಎಂನ ವಿಶ್ವಾಸಾರ್ಹತೆ, ಖ್ಯಾತಿಯನ್ನು ಹಾನಿಗೊಳಿಸುತ್ತದೆ ಎಂದೂ ಪತ್ರದಲ್ಲಿ ಹೇಳಿದ್ದಾರೆ.

ಪದವಿ ಸಂಭ್ರಮ ನಗರದ ಡಾ. ಬಾಬು ರಾಜೇಂದ್ರ ಪ್ರಸಾದ್ ಇಂಟರ್ ನ್ಯಾಷನಲ್ ಕನ್ವೆನ್ಷನ್ ಸೆಂಟರ್‌ನಲ್ಲಿ ಶನಿವಾರ ನಡೆದ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯದ 31ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳು ಪದವಿ ಕ್ಯಾಪ್ ತೂರಿ ಸಂಭ್ರಮಿಸಿದ ಕ್ಷಣ

ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

'ಗೂರ್ಖಾ ಸಮಾಜ ನಿರ್ಲಕ್ಷ್ಯ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೂರ್ಖಾ ಸಮಾಜ ಅದ್ವಿತೀಯ ರಾಷ್ಟ್ರ ಸೇವೆ ಸಲ್ಲಿಸಿದರೂ, ಆ ಸಮಾಜದ ಸಣ್ಣಪುಟ್ಟ ಬೇಡಿಕೆಗಳನ್ನೂ ರಾಜ್ಯ– ಕೇಂದ್ರ ಸರ್ಕಾರಗಳು ಈಡೇರಿಸಿಲ್ಲ' ಎಂದು ಶಿಕ್ಷಣ ತಜ್ಞ ಕೆ.ಇ. ರಾಧಾಕೃಷ್ಣ ಹೇಳಿದರು.

ಡಾರ್ಜಿಲಿಂಗ್‌ನಲ್ಲಿ ಶುಕ್ರವಾರ ನಡೆದ ಭಾರತೀಯ ಗೂರ್ಖಾ ಪರಿಷತ್ತಿನ ರಾಷ್ಟ್ರೀಯ ಅಧಿವೇಶನದಲ್ಲಿ ಮಾತನಾಡಿದ ಅವರು, 'ಈ ದೇಶಭಕ್ತ ಸಮಾಜ ಬಡತನ ಮತ್ತು ಶೋಷಣೆಗೆ ಒಳಗಾಗಿದೆ. ಈ ಸಮಾಜದ ಯುವವರ್ಗ ತಮ್ಮ ಭವಿಷ್ಯದ ಬಗ್ಗೆ ಆತಂಕದಲ್ಲಿದೆ. ಇದು ಅಪಾಯಕಾರಿ ಬೆಳವಣಿಗೆ' ಎಂದು ಅಭಿಪ್ರಾಯಟ್ಟರು.

ಅಧಿವೇಶನದಲ್ಲಿ ಮಾತನಾಡಿದ ಸುಪ್ರೀಂ ಕೋರ್ಟಿನ ಹಿರಿಯ ವಕೀಲ ನಿರೂಪ್ ರೆಡ್ಡಿ ಗೂರ್ಖಾ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸದ ಕೇಂದ್ರ ಸರ್ಕಾರದ ನಡೆ ಖಂಡನೀಯ ಎಂದರು.

ಪ್ರೊ. ಮುನೀಶ್ ತಮಂಗ್ ಸಭೆ ಅಧ್ಯಕ್ಷತೆ ವಹಿಸಿದ್ದರು. ಭಾರತೀಯ ಗೂರ್ಖಾ ಸಮಾಜ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಈಶಾನ್ಯ ಪ್ರಾಂತಗಳು ಎದುರಿಸುತ್ತಿರುವ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿರ್ಲಕ್ಷ್ಯ ತೋರಿಸುತ್ತಿರುವ ಬಗ್ಗೆ ಅಧಿವೇಶನವು ಆತಂಕ ವ್ಯಕ್ತಪಡಿಸಿತು.

ಈ ಸಂದರ್ಭದಲ್ಲಿ ಕೆ.ಇ. ರಾಧಾಕೃಷ್ಣ ಅವರು ನೇತಾಜಿ ಸುಭಾಷ್ಚಂದ್ರ ಬೋಸರ ಅಜಾದ್ ಹಿಂದ್ ಸೇನೆಯಲ್ಲಿದ್ದು, ಬ್ರಿಟಿಷರಿಂದ ಗಲ್ಲಿಗೇರಿಸಲ್ಪಟ್ಟಿದ್ದ ಮೇಜರ್ ದುರ್ಗಾ ಮಲ್ಲ ಅವರ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಿದರು. ದೇಶದ ವಿವಿಧ ಪ್ರದೇಶಗಳಲ್ಲಿರುವ ಗೂರ್ಖಾ ಸಮಾಜದ ಪ್ರಮುಖರು ಅಧಿವೇಶನದಲ್ಲಿ ಭಾಗವಹಿಸಿದ್ದರು.

ಕೆ.ಇ. ರಾಧಾಕೃಷ್ಣ ಅವರು ಮೇಜರ್ ದುರ್ಗಾ ಮಲ್ಲ ಅವರ ಕಂಚಿನ ಪ್ರತಿಮೆ ಅನಾವರಣಗೊಳಿಸಿದರು

'ಮೋದಿಗೆ ದೇಶ ಮೊದಲು, ಯುಪಿಎಗೆ ಕುಟುಂಬ'

ನವದೆಹಲಿ (ಪಿಟಿಐ): ಚಂದ್ರನ ಮೇಲೆ ವಿಕ್ರಮ್ ಲ್ಯಾಂಡರ್ ಸ್ಪರ್ಶಿಸಿದ ಜಾಗಕ್ಕೆ 'ಶಿವಶಕ್ತಿ ಪಾಯಿಂಟ್' ಎಂದು ಹೆಸರಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರ ಘೋಷಣೆಯನ್ನು ಬಿಜೆಪಿ ಶನಿವಾರ ಶ್ಲಾಘಿಸಿದೆ. ಒಂದು ವೇಳೆ ಕಾಂಗ್ರೆಸ್ ಅಧಿಕಾರದಲ್ಲಿದ್ದರೆ 'ಇಂದಿರಾ ಪಾಯಿಂಟ್ ಮತ್ತು ರಾಜೀವ್ ಪಾಯಿಂಟ್' ಎಂದು ನಾಮಕರಣ ಮಾಡುತ್ತಿತ್ತು ಎಂದೂ ಬಿಜೆಪಿ, ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದೆ.

ಪ್ರಧಾನಿ ಘೋಷಣೆ ಶ್ಲಾಘಿಸಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ, 'ಪ್ರಧಾನಿ ಮೋದಿ ಅವರಿಗೆ ದೇಶ ಮೊದಲು. ಯುಪಿಎಗೆ ಕುಟುಂಬ ಮೊದಲು. ಯುಪಿಎ ಸರ್ಕಾರ ವಿದ್ದರೆ ಚಂದ್ರಯಾನ– 2 ಮತ್ತು 3 ನೌಕೆಯನ್ನು ಎಂದಿಗೂ ಕಳುಹಿಸುತ್ತಿರಲಿಲ್ಲ' ಎಂದು ಟೀಕಿಸಿದ್ದಾರೆ. ಯುಪಿಎ ಸರ್ಕಾರ ಚಂದ್ರಯಾನ-1 ನೌಕೆ ತಲುಪಿದ ಸ್ಥಳಕ್ಕೆ 'ಜವಾಹರ್ ಪಾಯಿಂಟ್' ಹೆಸರಿಟ್ಟಿದೆ ಎಂದೂ ಶೆಹಜಾದ್ ಹೇಳಿದ್ದಾರೆ.

ಗೆಹಲೋತ್ ರಾಜೀನಾಮೆಗೆ ಒತ್ತಾಯ

ಜೈಪುರ (ಪಿಟಿಐ): ರಾಜಸ್ಥಾನ ಸರ್ಕಾರದ ಭ್ರಷ್ಟಾಚಾರ ಮತ್ತು ಕರಾಳ ಕೃತ್ಯಗಳ ವಿವರಗಳನ್ನು ಒಳಗೊಂಡಿರುವ 'ಕೆಂಪು ಡೈರಿ' ವಿಚಾರ ಪ್ರಸ್ತಾಪಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಅಶೋಕ್ ಗೆಹಲೋತ್ ರಾಜೀನಾಮೆಗೆ ಶನಿವಾರ ಒತ್ತಾಯಿಸಿದ್ದಾರೆ.

ಗಂಗಾಪುರ ನಗರದಲ್ಲಿ 'ಸಹಕಾರ ಕಿಸಾನ್ ಸಮ್ಮೇಳನ' ಉದ್ದೇಶಿಸಿ ಶಾ ಮಾತನಾಡುವಾಗ ಕೆಲವರು ಘೋಷಣೆಗಳನ್ನು ಕೂಗಿದರು. ಆಗ ಶಾ, 'ನಾನು ಗೆಹಲೋತ್ ಅವರಿಗೆ ಹೇಳಬಯಸುತ್ತೇನೆ. ಅವರಿಗೆ ಮರ್ಯಾದೆ ಇದ್ದರೆ, 'ಕೆಂಪು ಡೈರಿ' ವಿಚಾರದಲ್ಲಿ ಮೊದಲು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಚುನಾವಣೆ ಎದುರಿಸಲಿ' ಎಂದರು.

ಬಿಜೆಪಿಯಲ್ಲಿ ಈಗಿರುವುದು ಒಬ್ಬನೇ ಸಂಸದ: ದೇವನೂರ

ಪ್ರಜಾವಾಣಿ ವಾರ್ತೆ



ಮೈಸೂರು: 'ಈಗ ನಿಜವಾದ ಸಂಸದರು ಎಷ್ಟು ಮಂದಿ ಇದ್ದಾರೆ? ಬಿಜೆಪಿಯಲ್ಲಿರುವುದು ಒಬ್ಬನೇ ಒಬ್ಬ. ಇನ್ನುಳಿದವರೆಲ್ಲ ಜೈ ಜೈ' ಎಂದು ಲೇಖಕ ದೇವನೂರ ಮಹಾದೇವ ವ್ಯಂಗ್ಯವಾಡಿದರು.

ಮೈಸೂರು ವಿಶ್ವವಿದ್ಯಾಲಯದ ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣ ಕೇಂದ್ರದ ಅಂಬೇಡ್ಕರ್ ಪೀಠ ಮತ್ತು ಇಂಡಿಯನ್ ಪಾಲಿಟ್ ಫೋರಂ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ 'ಕ್ಷೇತ್ರ ಪುನರ್‌ವಿಂಗಡಣೆ: ಅಂತರರಾಜ್ಯ ಅಸಮತೆ ಮತ್ತು ಅದರ ಪರಿಣಾಮಗಳು' ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಕಾಂಗ್ರೆಸ್‌ನಲ್ಲಿ 2–3 ಮಂದಿ ಇರಬಹುದು; ಏಕೆಂದರೆ ಅಲ್ಲಿ ಭಿನ್ನ ಮತವಿದೆ. ಇತರ ಪಕ್ಷಗಳಲ್ಲಿ 2–3 ಜನ ಇರಬಹುದಷ್ಟೆ. ಉಳಿದವರೆಲ್ಲರೂ ಮಂದೆಯಂತೆ ವರ್ತಿಸುತ್ತಿದ್ದಾರೆ. ಇದಕ್ಕೇಕೆ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸ ಬೇಕು? ಸಂಸತ್ತಿನಲ್ಲಿ ಶಬ್ದ ಮಾಲಿನ್ಯ ಮಾಡಬೇಕಾ' ಎಂದು ಕೇಳಿದರು.

'ಲೋಕಸಭಾ ಸದಸ್ಯರ ಸಂಖ್ಯೆ ಹೆಚ್ಚಿಸಿದರೆ ಕೇವಲ ಮೂರು ಮತ್ತೊಂದು ಹಿಂದಿ ಭಾಷೆಯ ರಾಜ್ಯಗಳಷ್ಟೆ ಕೂಡಿ ಕೇಂದ್ರದಲ್ಲಿ ಬಹುಮತ ಗಳಿಸಿಕೊಳ್ಳಬಹುದು. ಆಗ ಹಿಂದಿ ಭಾಷೆಯು ದೇಶದ ಉಳಿದೆಲ್ಲ ಶ್ರೀಮಂತ ಭಾಷೆಗಳ ಮೇಲೆ ಸವಾರಿ ಮಾಡೇ ಮಾಡುತ್ತದೆ. ಉತ್ತರ ಭಾರತ ಇಡೀ ಭಾರತವನ್ನು ಆಳಬಹುದು. ಆಗ ಇತರ ರಾಜ್ಯಗಳು ಸಾಮಂತ ರಾಜ್ಯಗಳಾಗುತ್ತವೆ. ಉತ್ತರದ ಹಿಂದಿ ಚಕ್ರವರ್ತಿಗೆ ಕಪ್ಪ ಕೊಡಬೇಕಾಗುತ್ತದೆ. ಆಗ ಭಾರತವು ಭಾರತವಾಗಿ ಉಳಿದಿರುವುದಿಲ್ಲ' ಎಂದು ಪ್ರತಿಪಾದಿಸಿದರು.

'ಭಾರತದ ಆರ್ಥಿಕ ನೀತಿಗಳು ಹೇಗಿವೆ ಎಂದರೆ, ಹುಲಿಗೆ ಹುಣ್ಣು ಬಂದ ಕಥೆಯಂತಿದೆ. ಹುಲಿಗೆ ಒಂದು ಗಾಯವಾಯಿತಂತೆ. ಅದು ಮತ್ತೊಂದು ಕಡೆ ಗಾಯ ಮಾಡಿಕೊಂಡು ಹುಣ್ಣನ್ನು ಅಲ್ಲಿಗೆ ನೆಟ್ಟಿತಂತೆ. ಭಾರತವೂ ಹೀಗೆಯೇ ಸಾಗುತ್ತಿದೆ. ರೋಗ ಲಕ್ಷಣಗಳಿಗೆ ಮದ್ದು ನೀಡುತ್ತಿದೆ, ರೋಗ ಮಾತ್ರ ಉಳಿದೇ ಇದೆ' ಎಂದು ವಿಷಾದಿಸಿದರು.

'ಪ್ರಾಕೃತಿಕ ಸಂಪತ್ತಿನ ಲೂಟಿ ನಿಲ್ಲಬೇಕು. ಸ್ವಾಯತ್ತ ಸಂಸ್ಥೆಗಳು ಹೆಚ್ಚು ಸ್ವಾಯತ್ತವಾಗಬೇಕು. ಸಾರ್ವಜನಿಕ ಸಂಪತ್ತು ಸಾರ್ವಜನಿಕವಾಗಿಯೇ ಉಳಿಯಬೇಕು. ಜೊತೆಗೆ ಸಾಮಾಜಿಕ ನ್ಯಾಯವೂ ನಡೆಯುತ್ತಿರಬೇಕು. ಇವು ಮಾತ್ರ ಭಾರತವನ್ನು ಕಾಪಾಡಬಲ್ಲವು. ರಾಜ್ಯಗಳ ನಡುವೆ ಅಸಮತೆ ಕಡಿಮೆಯಾಗಬಹುದು' ಎಂದರು.

ಹೆಣ್ಣು ಮರಿಗೆ ಜನ್ಮ ನೀಡಿದ ಜೀಬ್ರಾ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಜೀಬ್ರಾ ಮುದ್ದಾದ ಹೆಣ್ಣು ಮರಿಗೆ ಜನ್ಮ ನೀಡಿದೆ. ಇದರೊಂದಿಗೆ ಉದ್ಯಾನದ ಜೀಬ್ರಾ ಕುಟುಂಬದ ಸಂಖ್ಯೆ ಏಳಕ್ಕೆ ಏರಿದೆ.

ನಾಲ್ಕು ವರ್ಷ ವಯಸ್ಸಿನ ಕಬಿನಿ ಮತ್ತು ಹರಿಶ್ಚಂದ್ರ ಜೋಡಿಗೆ ಜನಿಸಿದ ಮರಿ ಆರೋಗ್ಯವಾಗಿದೆ. ಕಬಿನಿಗೆ ಇದು ಮೊದಲನೇ ಹೆರಿಗೆಯಾಗಿದೆ.

ಮರಿ ತಾಯಿಯ ಹಾಲನ್ನು ಮಾತ್ರ ಕುಡಿಯುತ್ತದೆ. ಹಾಗಾಗಿ ತಾಯಿ ಹೆಚ್ಚಿನ ಹಾಲು ಕೊಡಲು ಅನುಕೂಲವಾಗುವಂತೆ ಬಿ–ಕಾಂಪ್ಲೆಕ್ಸ್, ಕ್ಯಾಲ್ಷಿಯಂ ಸಿರಪ್ ಮತ್ತು ಹಣ್ಣು ಹಂಪಲು ನೀಡಲಾಗುತ್ತಿದೆ. ಉದ್ಯಾನದ ವೈದ್ಯರು ಮತ್ತು ಸಿಬ್ಬಂದಿ ತಾಯಿ ಮರಿಯನ್ನು ಆರೈಕೆ ಮಾಡುತ್ತಿದ್ದಾರೆ.

ಮರಿಗೆ ಇನ್ನೂ ನಾಮಕರಣವಾಗಿಲ್ಲ. ತಾಯಿ ಮತ್ತು ಮರಿಯನ್ನು ಶೀಘ್ರದಲ್ಲಿ ಪ್ರವಾಸಿಗರ ವೀಕ್ಷಣೆಗೆ ಬಿಡಲಾಗುವುದು ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದರು.

ತಾಯಿ ಕಬಿನಿಯೊಂದಿಗೆ ಜೀಬ್ರಾ ಮರಿ

ಆನೆ ಮರಿ ಜನ್ಮದಿನ

ಉದ್ಯಾನದ ವನಶ್ರೀ ಎಂಬ ಆನೆಗೆ ಜನಿಸಿದ ಹೆಣ್ಣು ಮರಿ ಆನೆ ಓಂ ಗಂಗಾಗೆ ಒಂದನೇ ವರ್ಷದ ಹುಟ್ಟುಹಬ್ಬದ ಸಂಭ್ರಮ. ಉದ್ಯಾನದ ಸಿಬ್ಬಂದಿ ಮತ್ತು ಈ ಆನೆಮರಿ ದತ್ತು ತೆಗೆದುಕೊಂಡಿರುವ ಜಿ-ಗ್ರೂಪ್ ಮುಖ್ಯಸ್ಥರು ಆಚರಿಸಿದರು. ಜನ್ಮದಿನಾಚರಣೆ ಪ್ರಯುಕ್ತ ಆನೆ ಕುಟುಂಬಕ್ಕೆ ಪೊಂಗಲ್, ಬೆಲ್ಲ, ತೆಂಗಿನಕಾಯಿ, ಗಜ್ಜರಿ, ಬಾಳೆಹಣ್ಣು, ಕಬ್ಬು, ಕಲ್ಲಂಗಡಿಯಿಂದ ತಯಾರಿಸಿದ ವಿಶೇಷ ಕೇಕ್ ತಯಾರಿಸಲಾಗಿತ್ತು.

ವರಮಹಾಲಕ್ಷ್ಮಿ ಹಬ್ಬ ಮುಗಿದರೂ ನಗರದ ಅವೆನ್ಯೂ ರಸ್ತೆಯಲ್ಲಿ ವಿಲೇವಾರಿಯಾಗದೇ ಬಿದ್ದಿರುವ ತ್ಯಾಜ್ಯ

ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

'ಸುರಕ್ಷಿತ ಶಾಲೆ; ಸುರಕ್ಷಿತ ರಾಜಸ್ಥಾನ' ಅಭಿಯಾನ

ಜೈಪುರ (ಪಿಟಿಐ): ಸರ್ಕಾರಿ ಶಾಲೆಗಳ ಮಕ್ಕಳಲ್ಲಿ ಅಸುರಕ್ಷಿತ ಸ್ಪರ್ಶದ ಬಗ್ಗೆ ಅರಿವು ಮೂಡಿಸಲು ರಾಜಸ್ಥಾನ ಸರ್ಕಾರವು 'ಸುರಕ್ಷಿತ ಶಾಲೆ; ಸುರಕ್ಷಿತ ರಾಜಸ್ಥಾನ' ಅಭಿಯಾನಕ್ಕೆ ಶನಿವಾರ ಚಾಲನೆ ನೀಡಿದೆ.

65 ಸಾವಿರ ಶಾಲೆಗಳ 57 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಗುಡ್ ಟಚ್– ಬ್ಯಾಡ್ ಟಚ್ ಬಗ್ಗೆ ತರಬೇತಿ ನೀಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದ 50 ಜಿಲ್ಲೆಗಳಲ್ಲಿ ಶನಿವಾರ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನದವರೆಗೆ ವಿಶೇಷ ತರಬೇತಿ ಆಯೋಜಿಸಲಾಗಿತ್ತು ಎಂದು ಶಿಕ್ಷಣ ಇಲಾಖೆಯ ಕಾರ್ಯದರ್ಶಿ ನವೀನ್ ಜೈನ್ ತಿಳಿಸಿದರು.

ಅಭಿಯಾನದ ಮೊದಲ ಹಂತದಲ್ಲಿ, ರಾಜ್ಯದ 65,284 ಸರ್ಕಾರಿ ಶಾಲೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ತರಬೇತಿ ಅವಧಿಗಳನ್ನು ನಡೆಸಲಾಯಿತು. ಇದರಲ್ಲಿ 57 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ 'ಗುಡ್ ಟಚ್, ಬ್ಯಾಡ್ ಟಚ್' ಬಗ್ಗೆ ಅರಿವು ಮೂಡಿಸಲಾಯಿತು. ಬರುವ ಅಕ್ಟೋಬರ್ ಮತ್ತು 2024ರ ಜನವರಿಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಈ ಅಭಿಯಾನದಡಿ ಮತ್ತೆ ತರಬೇತಿ ಆಯೋಜಿಸಲಾಗುವುದು ಎಂದು ಅವರು ಹೇಳಿದರು.

₹6 ಕೋಟಿ ಸ್ವತ್ತು ಮುಟ್ಟುಗೋಲು

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಪಂಜಾಬ್ ಮಾಜಿ ಸಚಿವ, ಕಾಂಗ್ರೆಸ್ ನಾಯಕ ಭರತ್ ಭೂಷಣ್ ಅಶು ಮತ್ತು ಇತರರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಶೋಧ ನಡೆಸಲಾಗಿದ್ದು, ₹6 ಕೋಟಿಗೂ ಹೆಚ್ಚು ಮೌಲ್ಯದ ಸ್ವತ್ತು ಮತ್ತು ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಶನಿವಾರ ತಿಳಿಸಿದೆ.

ಲೂಧಿಯಾನ ಇಂಪ್ರೂವ್‌ಮೆಂಟ್ ಟ್ರಸ್ಟ್ ಮಾಜಿ ಮುಖ್ಯಸ್ಥ ರಾಮನ್ ಬಾಲ ಸುಬ್ರಮಣಿಯಂ ಮತ್ತಿತರರಿಗೆ ಸಂಬಂಧಿಸಿದ ಸ್ಥಳಗಳಲ್ಲೂ ಆಗಸ್ಟ್ 24 ಮತ್ತು 25ರಂದು ಶೋಧ ನಡೆಸಲಾಗಿದೆ.

ಹಂಪಿ ವಿ.ವಿ ವಿರುದ್ಧ ಜಾಗೃತಿ ನಡಿಗೆ

ಪ್ರಜಾವಾಣಿ ವಾರ್ತೆ



ಹರಿಹರಪ್ರಿಯ

ಬೆಂಗಳೂರು: ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿರುದ್ಧ ಸಾಹಿತಿ ಪುಸ್ತಕಮನೆ ಹರಿಹರಪ್ರಿಯ ಅವರು ಬೀದರ್‌ನಿಂದ ಚಾಮರಾಜನಗರದವರೆಗೆ ಜಾಗೃತಿ ನಡಿಗೆ ಹಮ್ಮಿಕೊಳ್ಳಲು ಮುಂದಾಗಿದ್ದಾರೆ.

ಈ ಬಗ್ಗೆ ಅವರು ಸಿದ್ಧತೆ ಮಾಡಿಕೊಳ್ಳಲಿದ್ದು, ಶೀಘ್ರದಲ್ಲಿಯೇ ನಡಿಗೆ ಪ್ರಾರಂಭಿಸಲಿದ್ದಾರೆ. ಮೂರು ತಿಂಗಳ ಅವಧಿಯಲ್ಲಿ ಕಾಲ್ನಡಿಗೆ ಮೂಲಕ ವಿವಿಧೆಡೆ ಸಾಗಿ, ವಿಶ್ವವಿದ್ಯಾಲಯದ ಕಾರ್ಯವೈಖರಿ ಬಗ್ಗೆ ಮಾತನಾಡಲಿದ್ದಾರೆ. ನಡಿಗೆ ಅವಧಿಯಲ್ಲಿ ಯಾವುದೇ ಹೋಟೆಲ್, ಮನೆಗಳಲ್ಲಿ ಉಳಿಯುವುದಿಲ್ಲ ಎಂದು ಅವರು ಘೋಷಿಸಿದ್ದಾರೆ.

'ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದವರು ಹಿಂದಿನ ಕುಲಪತಿಗಳ ಮೇಲೆ ಭ್ರಷ್ಟಾಚಾರದ ಆರೋಪ ಮಾಡುತ್ತಾ ಬಂದಿದ್ದಾರೆ. ವಿದ್ಯುತ್ ಬಿಲ್ ಕಟ್ಟಲಾಗದ ಸ್ಥಿತಿ ನಿರ್ಮಾಣಕ್ಕೆ ಕಾರಣರಾದವರು ಯಾರು ಎನ್ನುವುದು ಜನರಿಗೆ ತಿಳಿಯಬೇಕು. ಅಲ್ಲಿ ಹಲವರು ನಡೆಸಿರುವ ಕೃತಿಚೌರ್ಯದ ಬಗ್ಗೆಯೂ ಸಮಾಜಕ್ಕೆ ಗೊತ್ತಾಗಬೇಕು. ಅಲ್ಲಿನ ಭ್ರಷ್ಟಾಚಾರಗಳು ಹೊರ ಜಗತ್ತಿಗೆ ತಿಳಿಯಬೇಕು. 'ನಾಡೋಜ' ಪ್ರಶಸ್ತಿ ಪಾರದರ್ಶಕತೆ ಕಳೆದುಕೊಂಡಿದೆ. ವಿಶ್ವವಿದ್ಯಾಲಯ ಮೂಲ ಆಶಯ ಮರೆಯುತ್ತಿದೆ. ಆದ್ದರಿಂದ ಈ ಬಗ್ಗೆ ಜಾಗೃತಿ ಮೂಡಿಸಲು ನಡಿಗೆ ಹಮ್ಮಿಕೊಳ್ಳುತ್ತಿದ್ದೇನೆ. ಅಲ್ಲಲ್ಲಿ ಈ ಬಗ್ಗೆ ಭಾಷಣ ಮಾಡುತ್ತೇನೆ' ಎಂದು ಹರಿಹರಪ್ರಿಯ ತಿಳಿಸಿದರು.

'ಬೀದರ್ ಕಡೆಗಣಿಸಲ್ಪಟ್ಟ ಜಿಲ್ಲೆಯಾದ್ದರಿಂದ ಅಲ್ಲಿಂದಲೇ ನಡಿಗೆ ಪ್ರಾರಂಭಿಸುತ್ತಿದ್ದೇನೆ. ನಡಿಗೆ ಪ್ರಾರಂಭಿಸುವ ದಿನಾಂಕ ನಿಗದಿಯಾಗಿಲ್ಲ. ಅದಕ್ಕೂ ಮೊದಲು ಈ ಕಾರ್ಯಕ್ರಮದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದೇನೆ. ಹಲವರು ಬೆಂಬಲ ಸೂಚಿಸುತ್ತಿದ್ದಾರೆ. ನಡಿಗೆ ಪೂರ್ಣಗೊಳಿಸಿದ ಬಳಿಕ ಸರ್ಕಾರಕ್ಕೆ ವರದಿ ಸಲ್ಲಿಸುತ್ತೇನೆ' ಎಂದು ಅವರು ಹೇಳಿದರು.

ಕೆಆರ್‌ಎಸ್ ಅಣೆಕಟ್ಟೆಯತ್ತ ನುಗ್ಗಲು ಯತ್ನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ತಮಿಳುನಾಡಿಗೆ ನೀರು ಬಿಡಬಾರದು: ಕನ್ನಡ ಸಂಘಟನೆಗಳ ಆಗ್ರಹ
- ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ವಿರುದ್ಧ ಘೋಷಣೆ

ಶ್ರೀರಂಗಪಟ್ಟಣ: 'ತಮಿಳುನಾಡಿಗೆ ಕಾವೇರಿ ನೀರು ಹರಿಸಬಾರದು' ಎಂದು ಆಗ್ರಹಿಸಿ ಶನಿವಾರ ಕೆಆರ್‌ಎಸ್ ಅಣೆಕಟ್ಟೆಯತ್ತ ನುಗ್ಗಲು ಯತ್ನಿಸಿದ ವಿವಿಧ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಕನ್ನಡಿಗರ ರಕ್ಷಣಾ ವೇದಿಕೆ ಅಧ್ಯಕ್ಷ ಕೆ.ಜಿ. ಪ್ರಕಾಶ್, ಕೃಷ್ಣೇಗೌಡ, ಶಿವುಗೌಡ, ರಮೇಶ್ ಅವರನ್ನು ಬಂಧಿಸಿ ಕೆಆರ್‌ಎಸ್ ಪೊಲೀಸ್ ಠಾಣೆಗೆ ಕರೆತಂದು ನಂತರ ಬಿಡುಗಡೆ ಮಾಡಲಾಯಿತು.

'ಈ ಬಾರಿ ಮುಂಗಾರು ಮಳೆ ಬೀಳದೆ ರೈತರು ಕಂಗಾಲಾಗಿದ್ದಾರೆ. ಬೆಂಗಳೂರು ಇತರ ನಗರ ಮತ್ತು ಗ್ರಾಮೀಣ ಪ್ರದೇಶಕ್ಕೆ ಕುಡಿಯುವ ನೀರಿಗೂ ತೊಂದರೆಯಾಗುವ ಸಂಭವ ಇದೆ. ಇಂತಹ ದುಸ್ಥಿತಿಯಲ್ಲಿ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸುವ ಮೂಲಕ ರಾಜ್ಯದ ಜನರಿಗೆ ದ್ರೋಹ ಬಗೆದಿದೆ' ಎಂದು ಕೆ.ಜಿ. ಪ್ರಕಾಶ್ ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಜಲ ಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ವಿರುದ್ಧ ಘೋಷಣೆ ಕೂಗಿದರು.

'ತಮಿಳುನಾಡಿಗೆ ಈಗಲೂ ನೀರು ಹರಿಸಲಾಗುತ್ತಿದೆ. ಅಧಿಕಾರಿಗಳು ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಸರ್ಕಾರ ರೈತರನ್ನು ಬಲಿ ಕೊಡಲು ಹೊರಟಿದೆ. ತಕ್ಷಣ ನೀರು ನಿಲ್ಲಿಸಬೇಕು. ರೈತರಿಗೆ ಬೆಳೆ ಪರಿಹಾರ ಘೋಷಿಸಬೇಕು' ಎಂದು ಕೃಷ್ಣೇಗೌಡ ಆಗ್ರಹಿಸಿದರು.

ಮಾತಿನ ಚಕಮಕಿ: ಕೆಆರ್‌ಎಸ್ ಅಣೆಕಟ್ಟೆಯಿಂದ ತಮಿಳುನಾಡಿಗೆ ನೀರು ಹರಿಸುವುದನ್ನು ಸ್ಥಗಿತಗೊಳಿಸಲಾಗಿದೆ ಎಂದು ಪೊಲೀಸರು ಹಾಗೂ ನೀರಾವರಿ ನಿಗಮದ ಅಧಿಕಾರಿಗಳು ಹೇಳಿದಾಗ ನೀರು ನಿಲ್ಲಿಸಿರುವುದನ್ನು ನೋಡಬೇಕು ಎಂದು ಬೆಂಗಳೂರಿನಿಂದ ಬಂದಿದ್ದ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಪಟ್ಟು ಹಿಡಿದರು.

ಈ ಹಂತದಲ್ಲಿ ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. 'ಅಣೆಕಟ್ಟೆಯತ್ತ ಬಿಡಲಿಲ್ಲ' ಎಂಬ ಕಾರಣಕ್ಕೆ ಪೊಲೀಸರ ವಿರುದ್ಧ ಘೋಷಣೆ ಕೂಗಿದರು.

ಕೆಆರ್‌ಎಸ್ ದಕ್ಷಿಣ ದ್ವಾರದ ಬಳಿ ಹೆಚ್ಚುವರಿ ಎಸ್ಪಿ ತಿಮ್ಮಯ್ಯ ಅವರ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ನಗರದಲ್ಲಿ ಇಂದು

'ಕಾರ್ ರ‍್ಯಾಲಿ': ಅತಿಥಿಗಳು: ಎಂ.ಎ. ಸಲೀಂ, ರಿಜ್ವಾನ್ ಅರ್ಷದ್, ಸ್ಥಳ: ವಿಧಾನಸೌಧ, ಬೆಳಿಗ್ಗೆ 6.30

'ಸ್ಯಾರಿ ರನ್': ಚಾಲನೆ: ಸಿಂಧು ಗಂಗಾಧರನ್, ಸ್ಥಳ: ಬಿಜಿಎಸ್ ಮೈದಾನ, ವಿಜಯನಗರ, ಬೆಳಿಗ್ಗೆ 6.30

ನಾಡಪ್ರಭು ಕೆಂಪೇಗೌಡ ಜಯಂತಿ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಎಂ.ಬಿ. ಪಾಟೀಲ, ಅಧ್ಯಕ್ಷತೆ: ಎಚ್.ಡಿ. ರಂಗನಾಥ್, ಅತಿಥಿಗಳು: ಎಂ. ಕೃಷ್ಣಪ್ಪ, ಪ್ರಿಯಕೃಷ್ಣ, ಪಿ.ಕೆ.ಎಂ. ಪ್ರಶಾಂತ, ಡಿ. ಹನುಮಂತಯ್ಯ, ಎಚ್.ಎಂ. ಕೃಷ್ಣಮೂರ್ತಿ ಆಯೋಜನೆ: ಕೆಂಪೇಗೌಡ ಒಕ್ಕಲಿಗರ ಸಂಘ, ಸ್ಥಳ: ಆದಿ ಚುಂಚನಗಿರಿ ಸಮುದಾಯ ಭವನ, ವಿಜಯನಗರ, ಬೆಳಿಗ್ಗೆ 9ರಿಂದ

ನಮ್ರತಾ ನಾಯಕ್ ಅವರ 'ಚರಿತಾ' ಪುಸ್ತಕ ಬಿಡುಗಡೆ: ಉದ್ಘಾಟನೆ: ವಿಶ್ವನಾಥ್ ಪಿ. ಹಿರೇಮಠ್, ಪುಸ್ತಕ ಬಿಡುಗಡೆ: ಬ್ಯಾಡನೂರು ಶಾಂತವೀರಪ್ಪ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ವಿಶ್ವಮಾನವ ಸಂಗೀತ ಯಾನ, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9ರಿಂದ

ಆಚಾರ್ಯರ ಜನ್ಮಾರಾಧನೆ: 'ಬನ್ನಂಜೆ ಉವಾಚ' 'ಗೋವಿಂದಾಲೋಕಃ' ಪುಸ್ತಕಗಳ ಬಿಡುಗಡೆ: ಸುಗುಣೇಂದ್ರ ತೀರ್ಥ ಶ್ರೀಪಾದ ಸ್ವಾಮೀಜಿ, ಎಸ್. ಅಹಲ್ಯಾ, 'ಆಚಾರ್ಯರು ಸಾಂಸ್ಕೃತಿಕ ರಾಯಭಾರಿ' ಉಪನ್ಯಾಸ: ಜಿ.ಬಿ. ಹರೀಶ, ಬನ್ನಂಜೆ ಅವರೊಂದಿಗೆ ಮುಸ್ಸಂಜೆ: ಹಿರೇಮಗಳೂರ್ ಕಣ್ಣನ್, ಗಂಗಾವತಿ ಪ್ರಾಣೇಶ್, ವೈ.ವಿ. ಗುಂಡೂರಾವ್, ಬಸವರಾಜ ಮಹಾಮನಿ, ನಾಗಶ್ರೀ ತ್ಯಾಗರಾಜ್, ಎನ್. ರಾಮನಾಥ್, ಆಯೋಜನೆ: ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಸ್ಥಳ: ಯುವಪಥ, ಸಭಾಂಗಣ, ಜಯನಗರ, ಬೆಳಿಗ್ಗೆ 9.45

ಗಂಗಾವತಿ ಪ್ರಾಣೇಶ್

'ಶ್ರಾವಣ ಸಂಜೆ' ಗಾಯನ ಕಾರ್ಯಕ್ರಮ: ನಿತ್ಯಗಾಯನ ಸಾಂಸ್ಕೃತಿಕ ವೇದಿಕೆ, ಸ್ಥಳ: ಬಲಮುರಿ ಗಣಪತಿ ದೇವಸ್ಥಾನದ ಆವರಣ, ಬೊಮ್ಮನಹಳ್ಳಿ, ಬೆಳಿಗ್ಗೆ 10ರಿಂದ

ಗಾಯನ, ಹಾಸ್ಯ, ರಸಪ್ರಶ್ನೆ, ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿ: ಬಿ.ಎಸ್. ಶ್ರೀನಿವಾಸ್, ಉಪಸ್ಥಿತಿ: ಹೇಮಂತಕುಮಾರ್, ಆಯೋಜನೆ: ಸಹಮತ, ಸ್ಥಳ: ನಂ. 323, ಹೇಮ ಸದನ, ಸಹಕಾರ ಬಡಾವಣೆ, ಬೆಳಿಗ್ಗೆ 10

ಪದ್ಮಶಾಲಿ ನೇಕಾರ ಸಮಾಜ ಸಮ್ಮಿಲನ: ಉದ್ಘಾಟನೆ: ಮಲ್ಲಿಕಾರ್ಜುನ್ ಖರ್ಗೆ, ಅಧ್ಯಕ್ಷತೆ: ಶಿವರಾಜ ವಿ. ಪಾಟೀಲ, ಕೆ.ಜಿ. ಲಕ್ಷ್ಮೀನಾರಾಯಣ ಅವರ 'ಪದ್ಮಶಾಲಿ ನೇಕಾರ ಇತಿಹಾಸ ಮತ್ತು ಸಂಸ್ಕೃತಿ ದರ್ಶನ' ಸಂಶೋಧನಾ ಗ್ರಂಥ ಬಿಡುಗಡೆ: ಜಿ. ಪರಮೇಶ್ವರ್, ಅತಿಥಿಗಳು: ರಾಮಲಿಂಗಾರೆಡ್ಡಿ, ಶಿವರಾಜ ಎಸ್. ತಂಗಡಗಿ, ಕೆ.ಸಿ. ಕೊಂಡಯ್ಯ, ನಲ್ಲಿ ಕುಪ್ಪುಸ್ವಾಮಿ ಚೆಟ್ಟಿಯಾರ್, ಮಲ್ಲೇಪುರಂ ಜಿ. ವೆಂಕಟೇಶ್, ಕೆ.ಎಂ. ನಾಗರಾಜ, ಕೆ.ಈ. ರಾಧಾಕೃಷ್ಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಕವಿಗೋಷ್ಠಿ, ಗೀತಗಾಯನ, ರಸಪ್ರಶ್ನೆ: ಅಧ್ಯಕ್ಷತೆ: ಎಚ್.ಎ. ಪಾರ್ಶ್ವನಾಥ್, ಅತಿಥಿಗಳು: ಎಚ್.ವಿ. ಸುಧಾ ದೇವಿ, ಮಾಲತಿ ಎಸ್. ಆರಾಧ್ಯ, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ವಾರ್ಷಿಕೋತ್ಸವ ಸಮಾರಂಭ: 'ಸುಚಿತ್ರ ನಡೆದುಬಂದ ಹಾದಿ' ಹಿರಿಯರಿಗೆ ಗೌರವ: ಎಸ್. ರಾಘವೇಂದ್ರ ರಾವ್, ಅತಿಥಿ: ಎಂ.ಬಿ.ಎಸ್. ಪ್ರಸಾದ್, ಆಯೋಜನೆ ಮತ್ತು ಸ್ಥಳ: ಸುಚಿತ್ರ ಫಿಲಂ ಸೊಸೈಟಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10.30

'ರಾಬರ್ಟ್ ಬಾಷ್ ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ' ಪ್ರದಾನ: ಉದ್ಘಾಟನೆ: ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಪ್ರಶಸ್ತಿ ಪ್ರದಾನ: ಎಚ್. ಬಿ. ತೋಂಟೇಶ್, ವಿಜೆಕೆ ನಾಯರ್, ಪ್ರಶಸ್ತಿ ಪುರಸ್ಕೃತರು: ದೊಡ್ಡರಂಗೇಗೌಡ, ಅಧ್ಯಕ್ಷತೆ: ಪದ್ಮಿನಿ ನಾಗರಾಜು, ಆಯೋಜನೆ: ಮೈಕೊ ಕನ್ನಡ ಬಳಗ, ಸ್ಥಳ: ರೇಣುಕಾಚಾರ್ಯ ಕಾಲೇಜು (ಎಸ್. ಜೆ.ಆರ್.ಸಿ) ಸಭಾಂಗಣ, ಆನಂದರಾವ್ ವೃತ್ತ, ಬೆಳಿಗ್ಗೆ 10.30



ದೊಡ್ಡರಂಗೇಗೌಡ

ಪಿ. ಮಲ್ಲಿಕಾರ್ಜುನಪ್ಪ ಅವರ 'ಬೆಳಕಿನೆಡೆಗೆ' ಪುಸ್ತಕ ಬಿಡುಗಡೆ: ಮನು ಬಳಿಗಾರ್, ಅಧ್ಯಕ್ಷತೆ: ಪದ್ಮರಾಜ ದಂಡಾವತಿ, ಪುಸ್ತಕ ಕುರಿತು: ಟಿ. ಸತೀಶ್ ಜವರೇಗೌಡ, ಅತಿಥಿಗಳು: ಪಿ. ಮಲ್ಲಿಕಾರ್ಜುನಪ್ಪ, ಶಿಲ್ಪ ಭಾಸ್ಕರ್, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 11

ಕೆ. ಶ್ರೀನಾಥ್ ಅವರ 'ಕನಸು ಸೊಗಸು', ಕಂ.ಕ. ಮೂರ್ತಿ ಅವರ 'ಒಂದು ಗುಲಾಬಿಯ ಕಥೆ', ವಸಂತ ಕಲ್‌ಬಾಗಲ್ ಅವರ 'ಬ್ರೆಜಿಲ್ ಪಯಣ', ಅಂಜನಾ ಹೆಗಡೆ ಅವರ 'ಅಪ್ಪಗೌಡನ ಶಂಖಪುಷ್ಪ' ಪುಸ್ತಕಗಳ ಬಿಡುಗಡೆ: ಜಯಂತ್ ಕಾಯ್ಕಿಣಿ, ಜೋಗಿ, ಆಯೋಜನೆ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 11

ಜಯಂತ್ ಕಾಯ್ಕಿಣಿ

ಭೂಮಿಕಾ ಕ್ಲಬ್: ಉದ್ಘಾಟನೆ: ಅರ್ಚನಾ ಜೋಯಿಸ್, ಆಯೋಜನೆ: ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್, ಸ್ಥಳ: ಕೆ.ಇ.ಎ. ಪ್ರಭಾತ್ ರಂಗಮಂದಿರ, ಸಿ.ಎ. ಸೈಟ್, ಬಸವೇಶ್ವರ ನಗರ, ಮಧ್ಯಾಹ್ನ 2.30ರಿಂದ

ಅರ್ಚನಾ ಜೋಯಿಸ್

ಫಿಸಿಯೊ ಥೆರಪಿಸ್ಟ್ ಸಭೆ: ಅತಿಥಿಗಳು: ಕೃಷ್ಣಬೈರೇಗೌಡ, ಶಾಲಿನಿ ರಜನೀಶ್, ಆಯೋಜನೆ: ಬೆಂಗಳೂರು ಫಿಸಿಯೊ ಥೆರಪಿಸ್ಟ್, ಸ್ಥಳ: ಐಟಿಸಿ ಗಾರ್ಡೇನಿಯಾ, ಬೆಳಿಗ್ಗೆ 11

ಶ್ರೀ ಅಯ್ಯರ್ ಮತ್ತು ಜಗದೀಶ್ ಶೆಟ್ಟಿ ಅವರ 'ಪೇಪರ್ ಇನ್ ಮನಿ ಔಟ್' ಪುಸ್ತಕ ಬಿಡುಗಡೆ: ಸುಬ್ರಮಣಿಯನ್ ಸ್ವಾಮಿ, ಆಯೋಜನೆ: ವಿರಾಟ್ ಹಿಂದೂಸ್ತಾನ ಸಂಗಮ್, ಸ್ಥಳ: ಹೋಟೆಲ್ ಅಜಂತಾ, ಎಂ.ಜಿ. ರಸ್ತೆ, ಮಧ್ಯಾಹ್ನ 12.15

ವಾರ್ಷಿಕೋತ್ಸವ, 'ಶೋಭಕೃತು' ಪುಸ್ತಕ ಬಿಡುಗಡೆ: ಉದ್ಘಾಟನೆ: ರಾಣಿ ಸತೀಶ್, ಅತಿಥಿಗಳು: ಕೆ.ಆರ್. ವೆಂಕಟೇಶಗೌಡ, ಜಿ.ಎಚ್. ಇಮ್ರಾಪುರ್, ಆಯೋಜನೆ: ಭಾರತೀಯ ಕರ್ನಾಟಕ ಸಂಘ, ಸ್ಥಳ: ಕಬಿನಿ ಸಭಾಂಗಣ, ಇಂದಿರಾನಗರ, ಕ್ಲಬ್, ಮಧ್ಯಾಹ್ನ 3.30

ವಾರ್ಷಿಕ ಹುಸೇನ್ ದಿನ: ಆಯೋಜನೆ: ಆಗಾ ಸುಲ್ತಾನ, ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದ ಸಭಾಂಗಣ, ಲ್ಯಾಂಗ್ ಫೋರ್ಡ್ ರಸ್ತೆ, ಸಂಜೆ 4

39ನೇ ವರ್ಷದ ಸವಿ ನೆನಪಿನಲ್ಲಿ: ಸಾನ್ನಿಧ್ಯ: ರಾಜೇಶ್ ಬಂಗೇರ, ಉದ್ಘಾಟನೆ: ಬ್ರಿಜೇಶ್ ಉಳ್ಳಾಲ, ಅಧ್ಯಕ್ಷತೆ: ಯು.ಟಿ. ಖಾದರ್, ಆಯೋಜನೆ: ನಂದಿಕೇಶ್ವರ ನಾಟಕ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

ನಾಟ್ಯಮೇಳ ವಾರ್ಷಿಕೋತ್ಸವ: ಅತಿಥಿಗಳು: ವೇದಾಂತಂ ರಾಮಲಿಂಗ ಶಾಸ್ತ್ರಿ, ಎಂ. ಸೂರ್ಯ ಪ್ರಸಾದ್, ಆಯೋಜನೆ: ಲಾಸ್ಯ ಲಹರಿ ಸಂಸ್ಕೃತಿಕ ಕಲಾಸಂಸ್ಥೆ, ಸ್ಥಳ: ವಿವೇಕ ಸಭಾಂಗಣ, ಯುವಪಥ, ಜಯನಗರ, ಸಂಜೆ 4.30

ಎಚ್.ಡಿ. ದೇವೇಗೌಡ ದಂಪತಿಗೆ 'ಹುಟ್ಟೂರು ಸನ್ಮಾನ': ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ: ಸಾಧನ್ ದಾಸ್, ಅತಿಥಿಗಳು: ಜಯರಾಂ ರಾಯಪುರ, ಟಿ. ವೆಂಕಟೇಶ್, ಜಪ್ರುಲ್ಲಾ ಖಾನ್, ಹಳೆಕೋಟೆ ವಿಶ್ವಾಮಿತ್ರ, ಆಯೋಜನೆ: ಕನ್ನಡಿಗರ ಕನ್ನಡ ಕೂಟ, ದುಬಾಯಿ, ಯು.ಎ.ಇ., ಸ್ಥಳ: ಅಂಬರೀಷ್ ಸಭಾಂಗಣ, ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ, ಚಾಮರಾಜಪೇಟೆ, ಸಂಜೆ 5



ನಿರ್ಮಲಾನಂದನಾಥ ಸ್ವಾಮೀಜಿ

ವಚನ ಶ್ರಾವಣ–2023: ವಚನ ಗಾಯನ: ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ವಚನ ಚಿಂತನ: ಎಸ್. ಪಿನಾಕ ಪಾಣಿ, ಅಧ್ಯಕ್ಷತೆ: ಅನುಪಮ ಪಂಚಾಕ್ಷರಿ, ಆಯೋಜನೆ: ವಚನ ಜ್ಯೋತಿಬಳಗ, ಸ್ಥಳ: ಲಕ್ಷ್ಮಿ ಮತ್ತು ಪ್ರಭುರಾಜ್ ಮನೆಯಂಗಳ, ಕೆಂಗೇರಿ ಉಪನಗರ, ಸಂಜೆ 5.30

ಅ'ಸಾಮಾನ್ಯ' ಗೀತೆ: ಉಪಸ್ಥಿತಿ: ಎ.ಎಂ. ಚಂದ್ರಶೇಖರ, ಅಕ್ಷಯ ಎಂ. ಭಾರದ್ವಾಜ್, ನವ್ಯ ಪಿ., ಭ.ರಾ. ವಿಜಯಕುಮಾರ್, ಆಯೋಜನೆ ಮತ್ತು ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ವೇಮಣ್ಣ ಬಡಾವಣೆ, ಸಂಜೆ 5.30

'ನಮನ' ಓಡಿಸ್ಸಿ ನೃತ್ಯೋತ್ಸವ: ಪ್ರಸ್ತುತಿ: ನೃತ್ಯಾಂತರ, ಪ್ರೀತಿಷಾ ಮೋಹಪಾತ್ರ, ನೃತ್ಯಗ್ರಾಮ, ಆಯೋಜನೆ: ನೃತ್ಯಾಂತರ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30

ಪ್ರವರ ಥಿಯೇಟರ್ ದಶಕದ ಒಳನೋಟ ಸಮಾರೋಪ ಸಮಾರಂಭ: ಅತಿಥಿಗಳು: ರವೀಂದ್ರ ಭಟ್ಟ, ಬನಶಂಕರಿ ವಿ. ಅಂಗಡಿ, ಎಂ.ಎಸ್. ನರಸಿಂಹಮೂರ್ತಿ, ಮಾಲತೇಶ್ ಬಡಿಗೇರ, ಜೇಕಬ್ ಸ್ವಾಮಿನಾಥನ್, ರಂಗಗೌರವ: ಹರ್ಷವರ್ಷನ ಪ್ರಸಾದ್, ಲಕ್ಷ್ಮಣ ಪೂಜಾರಿ, 'ಜತೆಗಿರುವನು ಚಂದಿರ' ನಾಟಕ ಪ್ರದರ್ಶನ: ಪ್ರಸ್ತುತಿ: ಪ್ರವರ ಥಿಯೇಟರ್, ರಚನೆ: ಜಯಂತ್ ಕಾಯ್ಕಿಣಿ, ನಿರ್ದೇಶನ: ಹನು ರಾಮಸಂಜೀವ, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 6ರಿಂದ

'ಕುಡಕ ಕಲ್ಯಾ ಸಿಡಕ ಮಲ್ಲಿ' ನಾಟಕ ಪ್ರದರ್ಶನ: ಆಯೋಜನೆ: ವಿಶ್ವಜ್ಯೋತಿ ಪಂಚಾಕ್ಷರ ನಾಟ್ಯ ಸಂಘ, ಜೇವರ್ಗಿ, ಸ್ಥಳ: ಗುಬ್ಬಿ ವೀರಣ್ಣ ರಂಗ ಮಂದಿರ, ಗಾಂಧಿನಗರ, ಸಂಜೆ 6.30

'ಲೋಕದ ಒಳ ಹೊರಗೆ' ನಾಟಕ ಪ್ರದರ್ಶನ: ನಿರ್ದೇಶನ: ಬಿ. ಸುರೇಶ, ಸಂಗೀತ: ಅನೂಪ್ ಶೆಟ್ಟಿ, ಆಯೋಜನೆ: ರಂಗಸಂಪದ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

1. ಪ್ರಧಾನಿ ನರೇಂದ್ರ ಮೋದಿ ಅವರು ಚಂದ್ರಯಾನ– 3ರ ಯಶಸ್ಸಿಗಾಗಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ವಿಜ್ಞಾನಿಗಳನ್ನು ಅಭಿನಂದಿಸಲು ಶನಿವಾರ ಪೀಣ್ಯದಲ್ಲಿರುವ ಇಸ್ರೊ ಟೆಲಿಮೆಟ್ರಿ ಕೇಂದ್ರಕ್ಕೆ ಆಗಮಿಸುವ ರಸ್ತೆ ಬದಿಯಲ್ಲಿ ನಿಂತಿದ್ದ ಜನರತ್ತ ಕೈ ಬೀಸಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಶಾಸಕರಾದ ಮುನಿರತ್ನ, ಕೆ. ಗೋಪಾಲಯ್ಯ, ಆರ್. ಅಶೋಕ, ಮುನಿರಾಜು, ವಿಶ್ವನಾಥ್ ಜನರ ನಡುವೆ ನಿಂತು ಪ್ರಧಾನಿಗೆ ಸ್ವಾಗತ ಕೋರಿದರು 2. ಚಂದ್ರಯಾನ–3ರ ಯಶಸ್ಸಿಗೆ ಕಾರಣರಾದ ವಿಜ್ಞಾನಿಗಳ ಜತೆ ಪ್ರಧಾನಿ ನರೇಂದ್ರ ಮೋದಿ —ಪಿಐಬಿ ಚಿತ್ರಗಳು

ಇಸ್ರೊ, ವಿಜ್ಞಾನಿಗಳು, ತಂತ್ರಜ್ಞರು, ಸಿಬ್ಬಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರಿಂದ ಅಭಿನಂದನೆ

‘ಚಂದ್ರಯಾನ: ಮುನ್ನೆಲೆಗೆ ನೆಗೆದ ಭಾರತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಂದು ಕಾಲದಲ್ಲಿ ಬಾಹ್ಯಾಕಾಶ ಸಂಶೋಧನೆಗೆ ಬೇಕಾದ ತಂತ್ರಜ್ಞಾನ ಮತ್ತು ಬೆಂಬಲವೇ ನಮ್ಮ ಬಳಿ ಇರಲಿಲ್ಲ. ಆಗ ಭಾರತವನ್ನು ತೃತೀಯ ಜಗತ್ತಿನ ರಾಷ್ಟ್ರಗಳ ಪಟ್ಟಿಯಲ್ಲಿ ತೋರಿಸಲಾಗುತ್ತಿತ್ತು. ಈಗ ದೇಶವು ಮೊದಲ ಸಾಲಿಗೆ ಜಿಗಿದಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಪೀಣ್ಯದಲ್ಲಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಟೆಲಿಮೆಟ್ರಿ ಟ್ರ್ಯಾಕಿಂಗ್ ಆ್ಯಂಡ್ ಕಮಾಂಡ್ ಸೆಂಟರ್‌ನಲ್ಲಿ ಚಂದ್ರಯಾನ–3ರಲ್ಲಿ ಕಾರ್ಯನಿರ್ವಹಿಸಿದ ವಿಜ್ಞಾನಿಗಳು, ತಂತ್ರಜ್ಞರು ಮತ್ತು ಸಿಬ್ಬಂದಿಯನ್ನು ಅಭಿನಂದಿಸಿ ಶನಿವಾರ ಮಾತನಾಡಿದರು.

‘ಚಂದ್ರನ ಮೇಲೆ ಯಶಸ್ವಿಯಾಗಿ ಇಳಿದ ನಾಲ್ಕನೇ ರಾಷ್ಟ್ರ ಎಂಬ ಕೀರ್ತಿ ಭಾರತಕ್ಕೆ ಲಭಿಸಿದೆ. ದೇಶವು ಈಗ ಜಗತ್ತಿನ ಐದನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ಭಾರತವು ಜಗತ್ತಿನ ಮೊದಲ ಸಾಲಿನ ರಾಷ್ಟ್ರಗಳ ಪಟ್ಟಿ ಸೇರುವಲ್ಲಿ ಇಸ್ರೊ ಕೊಡುಗೆ ಮಹತ್ತರವಾದುದು’ ಎಂದರು.

ಚಂದ್ರಯಾನದ ಯಶಸ್ಸು ಇತರ ರಾಷ್ಟ್ರಗಳ ಪಾಲಿಗೆ ಇಂತಹ ಅಧ್ಯಯನ ನಡೆಸುವ ಅವಕಾಶಗಳ ಬಾಗಿಲನ್ನು ತೆರೆದಿದೆ. ಈ ಯೋಜನೆಯು ಚಂದ್ರನಲ್ಲಿನ ರಹಸ್ಯಗಳನ್ನು ಅರಿಯಲು ಸಹಕಾರಿಯಾಗುವ ಜತೆಯಲ್ಲೇ ಭೂಮಿಯು ಎದುರಿಸುವ ಸವಾಲುಗಳ ಬಗ್ಗೆಯೂ ತಿಳಿಯಲು ಪೂರಕವಾಗಿದೆ ಎಂದು ಪ್ರತಿಪಾದಿಸಿದರು.

ಮಂಗಳಯಾನ ಮತ್ತು ಚಂದ್ರಯಾನದ ಯಶಸ್ಸು ಹಾಗೂ ಗಗನಯಾನದ ಸಿದ್ಧತೆಯು ದೇಶದ ಯುವ ಜನರಲ್ಲಿ ಹೊಸ ಭರವಸೆ ಮೂಡಿಸಿವೆ. ಬಾಹ್ಯಾಕಾಶ ಕ್ಷೇತ್ರದ ವ್ಯಾಪ್ತಿಯು ಉಪಗ್ರಹಗಳ ಉಡಾವಣೆ, ಅಧ್ಯಯನಕ್ಕೆ ಸೀಮಿತವಾಗಿಲ್ಲ. ಸುಲಲಿತ ಜೀವನ ಮತ್ತು ಆಡಳಿತಕ್ಕೆ ಪೂರಕವಾಗಿಯೂ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರವನ್ನು ಬಳಸಿಕೊಳ್ಳಬೇಕಿದೆ. ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು, ಅನುಷ್ಠಾನ ಮತ್ತು ಮೇಲುಸ್ತುವಾರಿಯಲ್ಲಿ ಬಾಹ್ಯಾಕಾಶ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕಿದೆ. ಇದರಿಂದ ಯುವಜನರಿಗೆ ಹೆಚ್ಚಿನ ಅವಕಾಶಗಳು ಲಭಿಸುತ್ತವೆ ಎಂದು ಹೇಳಿದರು.

‘ನಮ್ಮ ಪರಂಪರೆಯಲ್ಲಿ ವಿಜ್ಞಾನಕ್ಕೆ ಹೆಚ್ಚಿನ ಮಹತ್ವ ನೀಡಲಾಗಿತ್ತು. ಗುಲಾಮಗಿರಿಯ ಕಾಲದಲ್ಲಿ ಭಾರತದ ವೈಜ್ಞಾನಿಕ ಜ್ಞಾನ ಸಂಪತ್ತು ಹುದುಗಿಹೋಗಿತ್ತು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅವಧಿಯಲ್ಲಿ ಈ ಜ್ಞಾನದ ಸಂಪತ್ತಿನ ಗಣಿಯನ್ನು ಶೋಧಿಸುವ ಅವಕಾಶ ಲಭಿಸಿದೆ. ಈ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಬೇಕು ಮತ್ತು ಅದನ್ನು ಜಗತ್ತಿಗೆ ತಿಳಿಸಬೇಕು’ ಎಂದರು.

ಭಾರತದಲ್ಲಿ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದ ವಾರ್ಷಿಕ ವಹಿವಾಟು 800 ಕೋಟಿ ಡಾಲರ್‌ನಷ್ಟಿದೆ. ಚಂದ್ರಯಾನದ ಯಶಸ್ಸಿನಿಂದಾಗಿ ಅದು ಮುಂದಿನ ಐದು ವರ್ಷಗಳಲ್ಲಿ 1,600 ಕೋಟಿ ಡಾಲರ್ ತಲುಪಲಿದೆ. ನಾಲ್ಕು ವರ್ಷಗಳಲ್ಲಿ ದೇಶದಲ್ಲಿ ಬಾಹ್ಯಾಕಾಶ ವಿಜ್ಞಾನಕ್ಕೆ ಸಂಬಂಧಿಸಿದ ನವೋದ್ಯಮಗಳ ಸಂಖ್ಯೆಯು ನಾಲ್ಕರಿಂದ 150ಕ್ಕೆ ಏರಿದೆ. ನಿರಂತರ ಪರಿಶ್ರಮ ಮತ್ತು ಪ್ರಯತ್ನದ ಫಲವಾಗಿ ದೇಶವು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿಗೆ ತಲುಪಲಿದೆ ಎಂದು ಹೇಳಿದರು.

ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಅವರು ಪ್ರಧಾನಿಯವರಿಗೆ ಚಂದ್ರಯಾನ–3ರ ಪ್ರತಿಕೃತಿಯನ್ನು ನೀಡಿ ಗೌರವಿಸಿದರು. ಚಂದ್ರಯಾನ–3ರ ತಂಡದಲ್ಲಿದ್ದ ಮುಂಚೂಣಿ ವಿಜ್ಞಾನಿಗಳು, ತಜ್ಞರ ಜತೆ ಮಾತನಾಡಿದ ಪ್ರಧಾನಿ, ಅವರನ್ನು ಅಭಿನಂದಿಸಿದರು.

ಸ್ವಾಗತಿಸಲು ಬರದಂತೆ ಮನವಿ ಮಾಡಿದ್ದೆ: ಮೋದಿ ಸ್ಪಷ್ಟನೆ

‘ನಾನು ಗ್ರೀಸ್‌ನಿಂದ ನೇರವಾಗಿ ಇಲ್ಲಿಗೆ ಬಂದಿಳಿದೆ. ದೂರದ ಪ್ರಯಾಣದ ಕಾರಣದಿಂದ ಬಂದಿಳಿಯುವ ಸಮಯದ ಬಗ್ಗೆ ಖಾತರಿ ಇರಲಿಲ್ಲ. ಆದ್ದರಿಂದ ಸ್ವಾಗತ ಕೋರಲು ಬರುವುದು ಬೇಡ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿದ್ದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಎಚ್‌ಎಎಲ್ ವಿಮಾನ ನಿಲ್ದಾಣದ ಪ್ರವೇಶ ದ್ವಾರದ ಬಳಿ ಸೇರಿದ್ದ ಜನಸ್ತೋಮವನ್ನುದ್ದೇಶಿಸಿ ಮಾತನಾಡಿದ ಅವರು, ‘ಯಾವ ಸಮಯಕ್ಕೆ ತಲುಪುತ್ತೇನೆ ಎಂಬುದು ಖಾತರಿ ಇರಲಿಲ್ಲ. ಇಷ್ಟೊಂದು ಬೆಳಿಗ್ಗೆ ಸ್ವಾಗತಿಸಲು ಬರುವ ತೊಂದರೆಯನ್ನು ಅವರು ತೆಗೆದುಕೊಳ್ಳುವುದು ಬೇಡ ಎಂಬ ಭಾವನೆ ನನ್ನದು. ಆ ಕಾರಣದಿಂದ ಬರುವುದು ಬೇಡ ಎಂದಿದ್ದೆ’ ಎಂದರು.

‘ನನ್ನ ಔಪಚಾರಿಕ ಭೇಟಿಯ ಸಂದರ್ಭಗಳಲ್ಲಿ ಮಾತ್ರವೇ ಶಿಷ್ಟಾಚಾರ ಪಾಲಿಸಿದರೆ ಸಾಕು ಎಂದು ಹೇಳಿದ್ದೆ. ನನ್ನ ಮನವಿಯನ್ನು ಅವರೆಲ್ಲರೂ ಪುರಸ್ಕರಿಸಿದ್ದಾರೆ. ಇದಕ್ಕಾಗಿ ಅವರಿಗೆ ಧನ್ಯವಾದ ಅರ್ಪಿಸುತ್ತೇನೆ’ ಎಂದು ಹೇಳಿದರು.

ಕಾತರದಿಂದ ಕಾದಿದ್ದ ಜನರು: ಎಚ್‌ಎಎಲ್ ವಿಮಾನ ನಿಲ್ದಾಣದಿಂದ ಹೊರಟ ಪ್ರಧಾನಿ, ರಸ್ತೆ ಮಾರ್ಗವಾಗಿ ಪೀಣ್ಯದ ಇಸ್ರೊ ಟೆಲಿಮೆಟ್ರಿ ಕೇಂದ್ರ ತಲುಪಿದರು. ರಸ್ತೆಯುದ್ದಕ್ಕೂ ಇಕ್ಕೆಲಗಳಲ್ಲಿ ಅಳವಡಿಸಿದ್ದ ಬ್ಯಾರಿಕೇಡ್‌ನ ಒಳ ಭಾಗದಲ್ಲಿ ನೂರಾರು ಮಂದಿ ಸಾರ್ವಜನಿಕರು ಪ್ರಧಾನಿಯನ್ನು ಸ್ವಾಗತಿಸಲು ಕಾದಿದ್ದರು. ತೆರೆದ ವಾಹನದಲ್ಲಿ ಕೈಬೀಸುತ್ತಾ ಮೋದಿ ಅವರು ಸಾಗಿದರು.

ಕಾಂಗ್ರೆಸ್‌ನವರಿಗೆ ಶಿಷ್ಟಾಚಾರ ಗೊತ್ತಿಲ್ಲ: ಅಶೋಕ

ಪ್ರಧಾನಿ ಸ್ವಾಗತಕ್ಕೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಬಾರದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಬಿಜೆಪಿ ಶಾಸಕ ಆರ್. ಅಶೋಕ, ‘ಕಾಂಗ್ರೆಸ್‌ನವರಿಗೆ ಶಿಷ್ಟಾಚಾರದ ಬಗ್ಗೆ ಅರಿವೇ ಇಲ್ಲ’ ಎಂದು ದೂರಿದರು.

‘ಕಾಂಗ್ರೆಸ್ ನಾಯಕರು ವಿಜ್ಞಾನಿಗಳನ್ನು ನೋಡಲು ಬಯಸುವುದಿಲ್ಲ. ಚಂದ್ರಯಾನ–2 ಯೋಜನೆಯನ್ನು ಒಂದು ಕಾಲದಲ್ಲಿ ತಡೆದವರು ಅವರು. ಇಸ್ರೊ ವಿಜ್ಞಾನಿ ನಂಬಿ ನಾರಾಯಣನ್ ಅವರನ್ನು ಜೈಲಿನಲ್ಲಿ ಇರಿಸಿದ್ದು ಕಾಂಗ್ರೆಸ್. ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡಿದ ಬಳಿಕ ಅವರ ಬಿಡುಗಡೆಯಾಯಿತು’ ಎಂದು ಆರೋಪಿಸಿದರು.

‘ಅಭಿನಂದಿಸಲು ಕಾತರನಾಗಿದ್ದೆ’

‘ಚಂದ್ರಯಾನ–3 ಯಶಸ್ವಿಯಾಗಿ ಚಂದ್ರನ ಮೇಲೆ ಇಳಿದಾಗ ನಾನು ದಕ್ಷಿಣ ಆಫ್ರಿಕಾದಲ್ಲಿದ್ದೆ. ಅಲ್ಲಿಂದ ಗ್ರೀಸ್‌ಗೆ ತೆರಳಿದ್ದೆ. ಗ್ರೀಸ್‌ನಿಂದ ನೇರವಾಗಿ ಇಲ್ಲಿಗೆ ಬಂದಿದ್ದೇನೆ. ಈ ಯಶಸ್ಸಿಗಾಗಿ ನಿಮ್ಮನ್ನು ಅಭಿನಂದಿಸಲು ನಾನು ಕಾತರನಾಗಿದ್ದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಚಂದ್ರಯಾನ–3ರಲ್ಲಿ ಕಾರ್ಯನಿರ್ವಹಿಸಿದ ವಿಜ್ಞಾನಿಗಳು, ತಂತ್ರಜ್ಞರು ಮತ್ತು ಸಿಬ್ಬಂದಿಯನ್ನುದ್ದೇಶಿಸಿ ಹೇಳಿದರು.

‘ಇದೊಂದು ಅಭೂತಪೂರ್ವ ಸಾಧನೆ. ಇಡೀ ದೇಶದ ಜನರು ತಮ್ಮದೇ ಸಾಧನೆ ಎಂಬಂತೆ ಸಂಭ್ರಮಿಸಿದ್ದಾರೆ. ಮೇಕ್ ಇನ್ ಇಂಡಿಯಾ ಯೋಜನೆಯನ್ನು ಚಂದ್ರನವರೆಗೂ ತಲುಪಿಸಿದ್ದೀರಿ. ಈ ಯಶಸ್ಸಿಗಾಗಿ ಶ್ರಮಿಸಿದ್ದ ಎಲ್ಲರಿಗೂ ಸೆಲ್ಯೂಟ್ ಮಾಡಲು ಬಯಸಿದ್ದೆ’ ಎಂದರು.

ರಸ್ತೆ ಬದಿ ನಿಂತ ಬಿಜೆಪಿ ನಾಯಕರು

ಇಸ್ರೊ ಟೆಲಿಮೆಟ್ರಿ ಕೇಂದ್ರಕ್ಕೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೇರಿದಂತೆ ಪಕ್ಷದ ಹಲವು ಮುಂಚೂಣಿ ನಾಯಕರು ರಸ್ತೆ ಬದಿಯಲ್ಲೇ ಕಾದರು!

ಶಾಸಕರಾದ ಆರ್. ಅಶೋಕ, ಕೆ. ಗೋಪಾಲಯ್ಯ, ಎಂ.ಕೃಷ್ಣಪ್ಪ, ಮುನಿರತ್ನ ಸೇರಿದಂತೆ ಬಿಜೆಪಿಯ ಹಲವು ಪ್ರಮುಖರು ಬ್ಯಾರಿಕೇಡ್ ಬಳಿ ಕಾದು ನಿಂತು ಪ್ರಧಾನಿಯವರಿಗೆ ಸ್ವಾಗತ ಕೋರಿದ ಫೋಟೊ ಸಾಮಾಜಿಕ ಮಾಧ್ಯಮಗಳಲ್ಲಿ ವಿನಿಮಯವಾಗುತ್ತಿದೆ. ಮುನಿರತ್ನ ಬ್ಯಾರಿಕೇಡ್ ಮೇಲೆ ಏರಿ ಪ್ರಧಾನಿಯವರಿಗೆ ಕೈ ಬೀಸಿದ್ದು, ನಳಿನ್ ಕುಮಾರ್, ಅಶೋಕ ಸೇರಿದಂತೆ ಪ್ರಮುಖರು ಪ್ರಧಾನಿಯವರಿಗಾಗಿ ಕಾದು ನಿಂತಿರುವುದು ಚಿತ್ರದಲ್ಲಿದೆ.

ಈ ಫೋಟೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಅನೇಕರು, ಬಿಜೆಪಿ ನಾಯಕರನ್ನು ಟೀಕಿಸಿದ್ದಾರೆ. ಬಿಜೆಪಿ ಕಾರ್ಯಕರ್ತರೂ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದಾರೆ.

ಸುದ್ದಿ 2 ನಿಮಿಷ

ಲಿಂಗತ್ವ ಅಲ್ಪಸಂಖ್ಯಾತರಿಗೆ ನಿಗಮ ಸ್ಥಾಪಿಸಿ: ನಟ ಚೇತನ್

ಬಾಗಲಕೋಟೆ: ‘ಲಿಂಗತ್ವ ಅಲ್ಪಸಂಖ್ಯಾತರ ಏಳ್ಗೆಗಾಗಿ ರಾಜ್ಯ ಸರ್ಕಾರವು ಪ್ರತ್ಯೇಕ ನಿಗಮ ಸ್ಥಾಪಿಸಬೇಕು’ ಎಂದು ನಟ ಚೇತನ್ ಹೇಳಿದರು.

‘ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ವಾಸಿಸಲು ಮನೆ ಇಲ್ಲ. ರಾಜ್ಯದಲ್ಲಿ ಅಂದಾಜು 2 ಲಕ್ಷ ಲಿಂಗತ್ವ ಅಲ್ಪಸಂಖ್ಯಾತರು ಇರಬಹುದು. ಅವರಿಗೆ ನಿಗಮ ಸ್ಥಾಪಿಸಿ, ₹100 ಕೋಟಿ ಮೀಸಲಿಡಬೇಕು’ ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

‘ಚಂದ್ರಯಾನ ಯಶಸ್ಸು ದೇಶಕ್ಕೆ ಹೆಮ್ಮೆಯ ವಿಷಯ. ಆದರೆ, ವಿಜ್ಞಾನಿಗಳು ತಿರುಪತಿ ತಿಮ್ಮಪ್ಪನ ದೇವಸ್ಥಾನಕ್ಕೆ ತೆರಳಿ ಚಂದ್ರಯಾನದ ಮಾದರಿಗೆ ಪೂಜೆ ಸಲ್ಲಿಸಿದ್ದು ಸರಿಯಲ್ಲ. ವೈಜ್ಞಾನಿಕ ನಂಬಿಕೆ ಬೆಳೆಸಬೇಕಾದ ವಿಜ್ಞಾನಿಗಳಿಗೇ ತಮ್ಮ ಕೆಲಸದ ಮೇಲೆ ನಂಬಿಕೆಯಿಲ್ಲ ಎನ್ನುವಂತಾಗಬಾರದು’ ಎಂದರು.

ನಟ ಉಪೇಂದ್ರ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಮೊದಲಿನಿಂದಲೂ ತಾರತಮ್ಯವಿದೆ. ಇದೀಗ ಜಾಗೃತಿ ಮೂಡಿರುವ ಕಾರಣ ವಿರೋಧ ವ್ಯಕ್ತವಾಗುತ್ತಿದೆ. ಗಾದೆಗಳು ಉತ್ತಮ ಸಂದೇಶ ನೀಡುತ್ತವೆ. ಆದರೆ ದಲಿತ, ಮಹಿಳಾ ವಿರೋಧಿ ಗಾದೆಗಳಿವೆ. ದ್ವೇಷ ಮೂಡಿಸುವ ಹೇಳಿಕೆ ನೀಡಬಾರದು. ಅವರ ಹಲವು ಸಿನಿಮಾಗಳಲ್ಲಿ ಮಹಿಳೆಯರ ಅವಹೇಳನ ಆಗಿದೆ. ಉತ್ತಮ ಪಕ್ಷ ಕಟ್ಟಲು ಹೊರಟವರು ಆತ್ಮಾವಲೋಕನ ಮಾಡಿಕೊಳ್ಳಬೇಕು’ ಎಂದು ಅವರು ಹೇಳಿದರು.

ಬಿಪಿಎಲ್ ಕಾರ್ಡ್ ರದ್ದು ಪ್ರಸ್ತಾವ ಇಲ್ಲ: ಸಚಿವ ಮುನಿಯಪ್ಪ

ಪರಿಶಿಷ್ಟ ಜಾತಿ, ಪಂಗಡದ ಎಷ್ಟು ಮಂದಿ ಪಡಿತರ ಚೀಟಿದಾರರಿದ್ದಾರೆ ಎಂಬುದನ್ನು ಪರಿಶೀಲಿಸಲು ನ್ಯಾಯಬೆಲೆ ಅಂಗಡಿಯಲ್ಲಿ ಜಾತಿ ಪ್ರಮಾಣಪತ್ರ ಸಂಗ್ರಹಿಸಲು ತಿಳಿಸಲಾಗಿದೆ. ಆದರೆ, ಅಕ್ಕಿ ವಿತರಣೆ ನಿಲ್ಲಿಸಲು ಹೇಳಿಲ್ಲ

ಕೆ.ಎಚ್. ಮುನಿಯಪ್ಪ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ

ಹಾಸನ: ‘ರಾಜ್ಯದ ಬಿಪಿಎಲ್ ಪಡಿತರ ಚೀಟಿದಾರರಿಗೆ 10 ಕೆ.ಜಿ. ಅಕ್ಕಿ ಪೂರೈಸುವುದಕ್ಕೆ ಸರ್ಕಾರ ಆದ್ಯತೆ ನೀಡುತ್ತಿದ್ದು, ಕಾರು ಹಾಗೂ ಇತರೆ ವಾಹನ ಹೊಂದಿರುವವರ ಬಿಪಿಎಲ್ ಕಾರ್ಡ್ ರದ್ದು ಮಾಡಲು ತೀರ್ಮಾನಿಸಿಲ್ಲ’ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಎಚ್. ಮುನಿಯಪ್ಪ ಅವರು ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ವಾಹನ ಹೊಂದಿರುವವರ ಬಿಪಿಎಲ್ ಕಾರ್ಡ್ ರದ್ದು ಮಾಡಲು ಹಿಂದಿನ ಸರ್ಕಾರ ತೀರ್ಮಾನಿಸಿತ್ತು. ಆ ಬಗ್ಗೆ ಕಾಂಗ್ರೆಸ್ ಸರ್ಕಾರ ಯಾವುದೇ ತೀರ್ಮಾನ ಕೈಗೊಂಡಿಲ್ಲ. ರಾಜ್ಯದಲ್ಲಿ 1.28 ಕೋಟಿ ಬಿಪಿಎಲ್ ಕಾರ್ಡ್‌ದಾರರಿದ್ದು, ಇಲಾಖೆಯ ಹಂತದಲ್ಲಿ ಪರಿಷ್ಕರಿಸಿದ ನಂತರ ತೀರ್ಮಾನಿಸಲಾಗುವುದು. 3 ಲಕ್ಷ ಮಂದಿ ಹೊಸದಾಗಿ ಕಾರ್ಡ್‌ಗೆ ಅರ್ಜಿ ಸಲ್ಲಿಸಿದ್ದು, ಪರಿಶೀಲಿಸಿ ತಿಂಗಳೊಳಗೆ ವಿತರಿಸಲು ಸೂಚಿಸಲಾಗಿದೆ’ ಎಂದು ಅವರು ಹೇಳಿದರು.

‘21 ಲಕ್ಷ ಬಿಪಿಎಲ್ ಪಡಿತರ ಚೀಟಿದಾರರಿಗೆ ಬ್ಯಾಂಕ್ ಖಾತೆ ಇಲ್ಲದೆ ಗೊಂದಲ ಏರ್ಪಟ್ಟಿತ್ತು, 7 ಲಕ್ಷ ಕಾರ್ಡ್‌ದಾರರ ಬ್ಯಾಂಕ್ ಖಾತೆ ತೆರೆದು ಜೋಡಣೆ ಮಾಡಲಾಗಿದೆ. ಉಳಿದ 14 ಲಕ್ಷ ಮಂದಿಯ ಬ್ಯಾಂಕ್ ಖಾತೆ ತೆರೆಯಲು ಸೂಚಿಸಲಾಗಿದೆ’ ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	102.12	2,213	2,142
ಹಾರಂಗಿ	2,859	2,857.90	753	1,700
ಕಬಿನಿ	2284.00	2,274.76	1,422	2,000
ಹೇಮಾವತಿ	2,922	2,910.28	716	5,030
ಲಿಂಗನಮಕ್ಕಿ	1,819	1,789	3,119	7,433.82
ಸೂಪಾ (ಮೀ)	564	546.11	1,884	5,396
ವಾಣಿ	595	580.18	338	652
ತುಂಗಭದ್ರಾ	1,633	1,626.15	850	9,784
ಮಲಪ್ರಭಾ	2079.5	2,067.20	694	694
ಘಟಪ್ರಭಾ	2175	2,163.01	718	4,841
ಭದ್ರಾ	186	165.5	804	3,223
ಆಲಮಟ್ಟಿ (ಮೀ)	519.6	519.56	00	1,012
ನಾರಾಯಣಪುರ (ಮೀ)	492.25	490.02	00	308

* ನೆಲಮಟ್ಟದಿಂದ

ಪ್ರಧಾನಿ ಕಚೇರಿಗೆ ಅಶೋಕ ಲೆಕ್ಕಕ್ಕೇ ಇಲ್ಲ: ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ಕಚೇರಿ ಆರ್. ಅಶೋಕ ಅವರನ್ನು ಲೆಕ್ಕಕ್ಕೇ ಇಟ್ಟುಕೊಂಡಿಲ್ಲ ಎಂಬುದಕ್ಕೆ ಅವರ ಮಾತೇ ಸಾಕ್ಷಿ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಇಸ್ರೊ ವಿಜ್ಞಾನಿಗಳನ್ನು ಅಭಿನಂದಿಸಲು ಬಂದ ಪ್ರಧಾನಿಯನ್ನು ಸ್ವಾಗತಿಸಲು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸರ್ಕಾರದ ಪ್ರತಿನಿಧಿಗಳಾಗಲಿ ತೆರಳಿಲ್ಲ ಎಂಬ ಬಗ್ಗೆ ಬಿಜೆಪಿ ಶಾಸಕ ಆರ್. ಅಶೋಕ ಅವರ ಟೀಕೆಗೆ ಶಿವಕುಮಾರ್ ಪ್ರತಿಕ್ರಿಯಿಸಿದರು.

‘ಶಿಷ್ಟಾಚಾರ ಪ್ರಕಾರ ಪ್ರಧಾನಿಯ ಸ್ವಾಗತಕ್ಕೆ ಸರ್ಕಾರ ಸಿದ್ಧವಿತ್ತು. ಆದರೆ, ಯಾರೂ ಬರಬಾರದೆಂಬ ಸಂದೇಶ ಅನಧಿಕೃತವಾಗಿ ಪ್ರಧಾನಿ ಕಚೇರಿಯಿಂದ ನಮಗೆ ಬಂದಿತ್ತು. ಈ ವಿಚಾರವಾಗಿ ಲಿಖಿತ ಸಂದೇಶ ನೀಡಿ ಎಂದು ನಾವು ಮುಖ್ಯಕಾರ್ಯದರ್ಶಿಗೆ ಮನವಿ ಮಾಡಿದೆವು. ನಂತರ ಅವರು ಪತ್ರದ ಮೂಲಕ ರಾಜ್ಯಪಾಲರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಯಾರೂ ಬರುವುದು ಬೇಡವೆಂದು ಸಂದೇಶ ರವಾನಿಸಿದ್ದಾರೆ. ಪ್ರಧಾನಿ ಕಚೇರಿಯಿಂದ ಮಾಹಿತಿ ಪಡೆದುಕೊಂಡು ನಂತರ ಅಶೋಕ ಮಾತನಾಡಲಿ’ ಎಂದು ತಿಳಿಸಿದರು.

‘ನಮಗೆ ರಾಜಕೀಯ ಪ್ರಜ್ಞೆ, ಶಿಷ್ಟಾಚಾರ, ಯಾರಿಗೆ ಯಾವ ಗೌರವ ನೀಡಬೇಕು ಎಂಬ ಪರಿಜ್ಞಾನ ಬಿಜೆಪಿಯವರಿಗಿಂತಲೂ ಹೆಚ್ಚಾಗಿ ಇದೆ’ ಎಂದ ಅವರು, ‘ಅಶೋಕ ಅವರನ್ನು ಪ್ರಧಾನಿ ಕಚೇರಿ ರಾಜಕೀಯ ಚಿತ್ರಣದಿಂದ ದೂರವಿಟ್ಟಿದೆ. ಹೀಗಾಗಿ ಅವರು ಮಾಹಿತಿ ಇಲ್ಲದೆ ಮಾತನಾಡಿದ್ದಾರೆ. ಅದಕ್ಕೆ ನಾವೇನು ಮಾಡಲು ಸಾಧ್ಯ? ಅವರಲ್ಲಿ ಏನೋ ಸಮಸ್ಯೆ ಇರಬಹುದು’ ಎಂದು ಅವರು ಹೇಳಿದರು.

ಬಿಜೆಪಿ ನಾಯಕರು ‘ಬ್ಯಾರಿಕೇಡ್ ಬಂದಿ’: ಪ್ರಿಯಾಂಕ್ ವ್ಯಂಗ್ಯ

ಚಂದ್ರಯಾನ-3 ಯಶಸ್ವಿಯಾದ ಹಿನ್ನೆಲೆಯಲ್ಲಿ ಇಸ್ರೊ ವಿಜ್ಞಾನಿಗಳನ್ನು ಅಭಿನಂದಿಸಲು ಬಂದ ಪ್ರಧಾನಿ ನರೇಂದ್ರ ಮೋದಿ ಅವರ ಗಮನಸೆಳೆಯಲು ಬ್ಯಾರಿಕೇಡ್ ಒಳಗಿನಿಂದಲೇ ಯತ್ನಿಸಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೇರಿದಂತೆ ಆ ಪಕ್ಷದ ನಾಯಕರನ್ನು ‘ಬ್ಯಾರಿಕೇಡ್ ಬಂದಿಗಳು’ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಬಣ್ಣಿಸಿದ್ದಾರೆ.

ಬಂದೋಬಸ್ತಿಗೆಂದು ಅಳವಡಿಸಿದ್ದ ಬ್ಯಾರಿಕೇಡ್‌ಗಳ ಒಳಗಿನಿಂದಲೇ ಬಿಜೆಪಿ ನಾಯಕರು ಮೋದಿಯತ್ತ ಕೈ ಬೀಸುತ್ತಿರುವ ಭಾವಚಿತ್ರವನ್ನು ಲಗತ್ತಿಸಿ ಟ್ವೀಟ್ ಮಾಡಿರುವ ಪ್ರಿಯಾಂಕ್, ‘ಪ್ರಧಾನಿ ಮುಂದೆ ಬ್ಯಾರಿಕೇಡ್ ಬಂದಿಗಳಾಗಿ ಗಮನಸೆಳೆಯಲು ಹರಸಾಹಸ ಮಾಡುತ್ತಿರುವ ಬಿಜೆಪಿ ನಾಯಕರು ಸ್ವಾಭಿಮಾನ, ಆತ್ಮಗೌರವವನ್ನು ಬೀದಿಪಾಲು ಮಾಡಿಕೊಂಡಿದ್ದು ಕರುಣಾಜನಕವಾಗಿದೆ’ ಎಂದಿದ್ದಾರೆ.

‘ರಾಜಕೀಯವಾಗಿ, ಸೈದ್ಧಾಂತಿಕವಾಗಿ ವಿರೋಧಿಗಳಾಗಿದ್ದರೂ ಕರ್ನಾಟಕ ಬಿಜೆಪಿ ನಾಯಕರ ಅವಸ್ಥೆ ನೋಡಿ ಕರುಣೆ ಹುಟ್ಟುತ್ತಿದೆ! ಬೀದಿಯಲ್ಲಿ ನಿಂತ ಬಿಜೆಪಿ ನಾಯಕರು ತಮ್ಮನ್ನು ತಾವೇ ಅವಮಾನಿಸಿಕೊಂಡಿದ್ದು, ಇದು ಮತ ನೀಡಿದ ಮತದಾರರಿಗೆ ಅವಮಾನ, ಕನ್ನಡಿಗರಿಗೆ ಅವಮಾನ, ಕಾರ್ಯಕರ್ತರಿಗೆ ಅವಮಾನ. ಹೈಕಮಾಂಡ್‌ನಿಂದ ಇಷ್ಟೊಂದು ತಿರಸ್ಕಾರಕ್ಕೆ ಒಳಪಟ್ಟಿರುವಾಗ ‘ವಿರೋಧ ಪಕ್ಷದ ನಾಯಕ’ನ ಆಯ್ಕೆ ಸಾಧ್ಯವಾಗುವುದೇ? ಈಗ ಸ್ವತಃ ಬಿಜೆಪಿಯವರೂ ಸರ್ವಾಧಿಕಾರದ ಸಂತ್ರಸ್ತರಾಗಿದ್ದಾರೆ’ ಎಂದಿದ್ದಾರೆ.

ಮುಖ್ಯಮಂತ್ರಿ ಜತೆ ಚರ್ಚೆ ಕಾಂಗ್ರೆಸ್ ಕಡೆಗೆ ಹೆಬ್ಬಾರ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್ ನಾಯಕರು ಅನ್ಯ ಪಕ್ಷಗಳ ಮುಖಂಡರನ್ನು ಪಕ್ಷಕ್ಕೆ ಕರೆತರಲು ಮುಂದಾಗಿರುವ ಬೆನ್ನಲ್ಲೇ, ಯಲ್ಲಾಪುರ ಕ್ಷೇತ್ರದ ಬಿಜೆಪಿ ಶಾಸಕ ಶಿವರಾಂ ಹೆಬ್ಬಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶುಕ್ರವಾರ ರಾತ್ರಿ ಭೇಟಿ ಮಾಡಿ ಸುಮಾರು ಒಂದೂವರೆ ಗಂಟೆ ಕಾಲ ಚರ್ಚೆ ನಡೆಸಿದ್ದಾರೆ.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ್ದ ಹೆಬ್ಬಾರ್, ‘ನಾನು ಯಾವುದೇ ಕಾರಣಕ್ಕೂ ಕಾಂಗ್ರೆಸ್ ಸೇರುವುದಿಲ್ಲ’ ಎಂದಿದ್ದರು. ಆದರೆ, ಸಿದ್ದರಾಮಯ್ಯ ಅವರನ್ನು ಹೆಬ್ಬಾರ್ ಭೇಟಿಯಾಗಿರುವುದು ಚರ್ಚೆಗೆ ಎಡೆ ಮಾಡಿಕೊಟ್ಟಿದೆ. ಆ ಮೂಲಕ, ಕಾಂಗ್ರೆಸ್‌ಗೆ ವಾಪಸಾಗಲು ಅವರು ಮುಂದಾಗಿದ್ದಾರೆಂಬ ವದಂತಿಗಳಿಗೆ ಪುಷ್ಟಿ ನೀಡಿದೆ.

‘ನನ್ನ ಕ್ಷೇತ್ರ ವ್ಯಾಪ್ತಿಯ ಯಲ್ಲಾಪುರ, ಮುಂಡಗೋಡ ಮತ್ತು ಶಿರಸಿ ತಾಲ್ಲೂಕಿನ ಪೂರ್ವ ಭಾಗವಾದ ಬನವಾಸಿಯಲ್ಲಿ ವಾಡಿಕೆ ಮಳೆಯು ಶೇ 70ಕ್ಕಿಂತ ಕಡಿಮೆ ಆಗಿರುವುದರಿಂದ ಈ ಹೋಬಳಿಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು. ಅಲ್ಲದೆ, ತಮ್ಮ ಕ್ಷೇತ್ರಕ್ಕೆ ಕುಡಿಯುವ ನೀರು ಪೂರೈಕೆಗೆ ವಿಶೇಷ ಅನುದಾನ ನೀಡಬೇಕು’ ಎಂದು ಇದೇ ವೇಳೆ ಮುಖ್ಯಮಂತ್ರಿಗೆ ಹೆಬ್ಬಾರ್ ಮನವಿ ಸಲ್ಲಿಸಿದ್ದಾರೆ.

ಡಿಕೆಶಿ ಜೊತೆ ಎಸ್‌ಟಿಎಸ್

ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿರುವ ಯಶವಂತಪುರ ಶಾಸಕ ಎಸ್.ಟಿ. ಸೋಮಶೇಖರ್ ಅವರು ಕಾಂಗ್ರೆಸ್ ಸೇರುತ್ತಾರೆ ಎಂಬ ವದಂತಿ ದಟ್ಟವಾಗಿದೆ.

ತಮ್ಮ ಕ್ಷೇತ್ರ ವ್ಯಾಪ್ತಿಯ ಹೆಮ್ಮಿಗೆಪುರ ವಾರ್ಡ್ ನಿವಾಸಿ ಸಂಘಗಳು ಶನಿವಾರ ಏರ್ಪಡಿಸಿದ್ದ ‘ಜನಸ್ಪಂದನ’ ಕಾರ್ಯಕ್ರಮದಲ್ಲಿ ಸೋಮಶೇಖರ್ ಅವರು ಡಿ.ಕೆ. ಶಿವಕುಮಾರ್ ಜೊತೆ ವೇದಿಕೆ ಹಂಚಿಕೊಂಡಿದ್ದಾರೆ. ಈ ಬೆಳವಣಿಗೆ ಕೂಡಾ ಸೋಮಶೇಖರ್ ಅವರು ಮತ್ತೆ ಕಾಂಗ್ರೆಸ್ ಕಡೆ ಆಕರ್ಷಿತರಾಗಿರುವ ಸೂಚನೆ ಎಂದೇ ವಿಶ್ಲೇಷಿಸಲಾಗಿದೆ.

ವೃದ್ಧೆ ಮನೆಗೆ ವಿದ್ಯುತ್ ಸೌಲಭ್ಯ

ಪ್ರಜಾವಾಣಿ ವಾರ್ತೆ

ಚಳ್ಳಕೆರೆ: ತಾಲ್ಲೂಕಿನ ಗಡಿ ಭಾಗದ ಬಸಾಪುರ ಗ್ರಾಮದ ಅನಾಥ ವೃದ್ಧೆ ದೋಣಮ್ಮ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಎಕ್ಸ್ ಖಾತೆಗೆ (ಟ್ವಿಟರ್) ತಮ್ಮ ಮನವಿ ಕಳಿಸುವ ಮೂಲಕ ಮನೆಗೆ ವಿದ್ಯುತ್ ಸಂಪರ್ಕ ಪಡೆಯಲು ಯಶಸ್ವಿಯಾಗಿದ್ದಾರೆ.

ದೋಣಮ್ಮ 40 ವರ್ಷಗಳಿಂದ ಸೀಮೆಎಣ್ಣೆ ದೀಪದ ಬೆಳಕಿನಲ್ಲಿ ಜೀವನ ಸಾಗಿಸುತ್ತಿದ್ದರು. ಸರ್ಕಾರದ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಯೋಜನೆ ಅಡಿ ಮನೆಗೆ ವಿದ್ಯುತ್ ಸೌಲಭ್ಯ ಒದಗಿಸುವಂತೆ ತಾಲ್ಲೂಕು ಕಚೇರಿ ಹಾಗೂ ಬೆಸ್ಕಾಂಗೆ ಅಲೆದಾಡಿ ಬೇಸತ್ತಿದ್ದರು.

ಅಜ್ಜಿಯ ಅಳಲನ್ನು ಕೇಳಿದ ಗ್ರಾಮದ ಯುವಕ ಮಹೇಂದ್ರ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಟ್ವಿಟರ್ ಖಾತೆಗೆ ಅಜ್ಜಿ ಮನೆಯ ಕತ್ತಲೆ ಕೋಣೆಯ ಫೋಟೊ ಸೇರಿದಂತೆ ಅವರ ಜೀವನದ ವಿವರವನ್ನು ಕಳುಹಿಸಿದ್ದರು. ಬೆಸ್ಕಾಂ, ಗ್ರಾಮೀಣಾಭಿವೃದ್ಧಿ ಇಲಾಖೆ ಗಮನವನ್ನೂ ಸೆಳೆದಿದ್ದರು. ಇದನ್ನು ಗಮನಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಕ್ಷಣ ಕ್ರಮ ವಹಿಸುವಂತೆ ತಾಲ್ಲೂಕಿನ ಅಧಿಕಾರಿಗಳಿಗೆ ಸೂಚಿಸಿದ್ದರು. ತಹಶೀಲ್ದಾರ್ ರೇಹಾನ್ ಪಾಷ, ಬೆಸ್ಕಾಂನ ತಳುಕು ಗ್ರಾಮದ ಅಧಿಕಾರಿಗಳು ಬಸಾಪುರ ಗ್ರಾಮಕ್ಕೆ ಶನಿವಾರ ಭೇಟಿ ನೀಡಿ, ದೋಣಮ್ಮ ಅವರ ಮನೆಗೆ ವಿದ್ಯುತ್ ಸಂಪರ್ಕ ಒದಗಿಸಿದ್ದಾರೆ.

ಮನೆಗೆ ಬೆಳಕಿನ ಭಾಗ್ಯ ದೊರಕಿಸಿಕೊಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವೃದ್ಧೆ ದೋಣಮ್ಮ ಅಭಿನಂದನೆ ತಿಳಿಸಿದ್ದಾರೆ.

ಚಳ್ಳಕೆರೆ ತಾಲ್ಲೂಕಿನ ಗಡಿ ಭಾಗದ ಬಸಾಪುರ ಗ್ರಾಮದ ಅನಾಥ ವೃದ್ಧೆ ದೋಣಮ್ಮ ಮನೆಗೆ ಶನಿವಾರ ವಿದ್ಯುತ್ ಕಲ್ಪಿಸಲಾಗಿದೆ

ಸೌಜನ್ಯಾ ಕುಟುಂಬದವರಿಗೆ ನ್ಯಾಯ ಕೊಡಿಸಲು ಆಗ್ರಹ

ಕೆಆರ್‌ಎಸ್ ಪಕ್ಷದಿಂದ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 14 ದಿನಗಳ ಪಾದಯಾತ್ರೆಗೆ ಬೆಳ್ತಂಗಡಿಯಲ್ಲಿ ಚಾಲನೆ
- ಪಾದಯಾತ್ರೆ ದೂರ 330 ಕಿ.ಮೀ.

ಬೆಳ್ತಂಗಡಿ: ‘ಅತ್ಯಾಚಾರಕ್ಕೆ ಒಳಗಾಗಿ ಕೊಲೆಯಾದ ಧರ್ಮಸ್ಥಳದ ಸೌಜನ್ಯಾಗೆ ನ್ಯಾಯ ಒದಗಿಸಬೇಕು. ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಪ್ರಕರಣದ ನ್ಯಾಯಾಂಗ ತನಿಖೆ ನಡೆಸಿ, ಅಪರಾಧವೆಸಗಿದವರಿಗೆ ಶಿಕ್ಷೆ ಕೊಡಿಸಬೇಕು’ ಎಂದು ಒತ್ತಾಯಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷವು ಇಲ್ಲಿಂದ ಬೆಂಗಳೂರಿಗೆ ಪಾದಯಾತ್ರೆಯನ್ನು ಶನಿವಾರ ಆರಂಭಿಸಿತು.

ಪಾದಯಾತ್ರೆಗೆ ಇಲ್ಲಿ ಚಾಲನೆ ನೀಡಿದ ಪಕ್ಷದ ಅಧ್ಯಕ್ಷ ರವಿಕೃಷ್ಣ ರೆಡ್ಡಿ, ‘ಸರ್ಕಾರಗಳು ಈ ಪ್ರಕರಣದಲ್ಲಿ ಉಳ್ಳವರ ಪರವಾಗಿ ನಿಂತಿವೆ. ಪಾದಯಾತ್ರೆಯಲ್ಲಿ ಸಾಗಿ ವಿಧಾನಸೌಧದ ಮುಂದೆಯೇ ಧರಣಿ ನಡೆಸಿ ಇದನ್ನು ಖಂಡಿಸಲಿದ್ದೇವೆ. ಅನ್ಯಾಯಕ್ಕೊಳಗಾದ ಕುಟುಂಬಕ್ಕೆ ನ್ಯಾಯ ಸಿಗುವವರೆಗೆ ಹೋರಾಟದಿಂದ ಹಿಂದೆ ಸರಿಯುವುದಿಲ್ಲ’ ಎಂದರು.

‘ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಸರ್ಕಾರವು ಮರುತನಿಖೆಗೆ ಕ್ರಮ ವಹಿಸಬೇಕು. ತನಿಖಾಧಿಕಾರಿ ಆಗಿದ್ದ ಯೋಗೇಶ್ ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು’ ಎಂದರು.

ಪಕ್ಷದ ಉಪಾಧ್ಯಕ್ಷ ಎಸ್.ಎಚ್. ಲಿಂಗೇಗೌಡ, ‘ಈ ಪ್ರಕರಣದಲ್ಲಿ ನಿರಪರಾಧಿ ಶಿಕ್ಷೆ ಅನುಭವಿಸಿದ್ದಾನೆ. ಮರುತನಿಖೆ ನಡೆಸಿ, ನಿಜವಾದ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕು. ಈ ಬಗ್ಗೆ ಸರ್ಕಾರ ಕ್ರಮಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಸೌಜನ್ಯಾ ಪ್ರಕರಣದಲ್ಲಿ ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿ ಪಾದಯಾತ್ರೆ ಆರಂಭಿಸುವುದಕ್ಕೂ ಮುನ್ನ ಬೆಳ್ತಂಗಡಿಯಲ್ಲಿ ಶನಿವಾರ ಕೆಆರ್‌ಎಸ್ ಪಕ್ಷದ ವತಿಯಿಂದ ಪ್ರತಿಭಟನೆ ನಡೆಯಿತು

ಪಕ್ಷದ ಜಂಟಿ ಕಾರ್ಯದರ್ಶಿ ರಘುಪತಿ ಭಟ್, ‘ರಾಜ್ಯದಲ್ಲಿ 10 ವರ್ಷಗಳಿಂದ ಈಚೆಗೆ ನಡೆದ ಮಹಿಳಾ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳಲ್ಲಿ ಶೇ 1.18ರಷ್ಟು ಅಪರಾಧಿಗಳಿಗೆ ಮಾತ್ರ ಶಿಕ್ಷೆ ಆಗಿದೆ. ಇಂತಹ ಪ್ರಕರಣಗಳ ವಿಚಾರಣೆಗೆ ತ್ವರಿತಗತಿ ನ್ಯಾಯಾಲಯ ಸ್ಥಾಪಿಸಬೇಕು’ ಎಂದು ಒತ್ತಾಯಿಸಿದರು.

‘ಪಾದಯಾತ್ರೆಯು ಧರ್ಮಸ್ಥಳ–ಉಜಿರೆ– ಚಾರ್ಮಾಡಿ– ಕೊಟ್ಟಿಗೆಹಾರ–ಮೂಡಿಗೆರೆ– ಬೇಲೂರು– ಹಾಸನ ಮಾರ್ಗವಾಗಿ ಬೆಂಗಳೂರು ತಲುಪಲಿದೆ’ ಎಂದು ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಪ್ರವೀಣ್ ಪಿರೇರಾ ತಿಳಿಸಿದರು.

ಪಕ್ಷದ ಮಹಿಳಾ ಘಟಕದ ಸಂಘಟನಾ ಕಾರ್ಯದರ್ಶಿ ನಂದಾ ರೆಡ್ಡಿ, ಮುಖಂಡರಾದ ಇಂದಿರಾ ರೆಡ್ಡಿ, ಜನನಿ ವತ್ಸಲಾ, ರಾಜ್ಯ ಯುವ ಘಟಕದ ಅಧ್ಯಕ್ಷ ರಘು ಜಾಣಗೆರೆ, ಜಿಲ್ಲಾ ಕಾರ್ಯದರ್ಶಿಗಳಾದ ಯಶೋದಾ ಪ್ರಕಾಶ್, ಸುನೀತಾ ರೊಸಾರಿಯೊ ಇದ್ದರು.

ಸೌಜನ್ಯಾ ಪ್ರಕರಣ: ಮರು ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮಸ್ಥಳದಲ್ಲಿ ನಡೆದ ಸೌಜನ್ಯಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಹೊಸದಾಗಿ ತನಿಖೆ ನಡೆಸಬೇಕು’ ಎಂದು ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ಆಡಿಟರ್ ನಾಗರಾಜ್ ಯಲಚವಾಡಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಇದೇ 28ರಂದು ಪ್ರಜ್ಞಾವಂತ ಹೋರಾಟಗಾರರು ಬೆಳ್ತಂಗಡಿಯಲ್ಲಿ ಹಮ್ಮಿಕೊಂಡಿರುವ ಬೃಹತ್ ಸಮಾವೇಶಕ್ಕೆ ಬೆಂಬಲ ಘೋಷಿಸಿರುವ ಅವರು, ‘12 ವರ್ಷಗಳ ಹಿಂದೆ ಧರ್ಮಸ್ಥಳದಲ್ಲಿ ಸೌಜನ್ಯಾಳ ಹತ್ಯೆ ನಡೆಯಿತು. ಆ ಹತ್ಯೆಯ ಆರೋಪವನ್ನು ಅಮಾಯಕ ವ್ಯಕ್ತಿಯ ಮೇಲೆ ಹಾಕಿ, ಜೈಲಿಗೆ ಕಳಿಸಲಾಗಿತ್ತು. ನ್ಯಾಯಾಲಯವು 11 ವರ್ಷಗಳ ಬಳಿಕ ಆತ ನಿರ್ದೋಷಿ ಎಂದು ತೀರ್ಪುನೀಡಿ, ಬಿಡುಗಡೆ ಮಾಡಿದೆ. ಆದ್ದರಿಂದ ಹತ್ಯೆ ಮಾಡಿದವರನ್ನು ಪತ್ತೆ ಮಾಡಿ, ಬಂಧಿಸಬೇಕು’ ಎಂದು ಒತ್ತಾಯಿಸಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶಿಕ್ಷಕಿಯಿಂದ ಕೋಮುಪ್ರೇರಿತ ಹೇಳಿಕೆ • ದೇಶದಾದ್ಯಂತ ಆಕ್ರೋಶ • ಪ್ರಕರಣ ದಾಖಲು

ವಿದ್ಯಾರ್ಥಿ ಕೆನ್ನೆಗೆ ಸಹಪಾಠಿಗಳಿಂದ ಏಟು

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ/ನವದೆಹಲಿ: ಶಿಕ್ಷಕಿಯೊಬ್ಬರು ಮುಸ್ಲಿಂ ವಿದ್ಯಾರ್ಥಿಗೆ ಸಹಪಾಠಿಗಳಿಂದ ಕಪಾಳಕ್ಕೆ ಏಟು ಕೊಡಿಸಿದ ಘಟನೆ ಶುಕ್ರವಾರ ಉತ್ತರ ಪ್ರದೇಶದ ಮುಜಾಫರ್‌ನಗರದ ಖುಬ್ಬಾಪುರ ಗ್ರಾಮದ ಖಾಸಗಿ ಶಾಲೆಯಲ್ಲಿ ನಡೆದಿದೆ. ಇದಕ್ಕೆ ರಾಷ್ಟ್ರದಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗಿದ್ದು, ಶಿಕ್ಷಕಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಾಗಿ ಹಂಚಿಕೆಯಾಗಿದೆ. ಶಿಕ್ಷಕಿ ತೃಪ್ತಾ ತ್ಯಾಗಿ, ಎಂಟು ವರ್ಷದ ಮುಸ್ಲಿಂ ವಿದ್ಯಾರ್ಥಿ ಕಪಾಳಕ್ಕೆ ಹೊಡೆಯುವಂತೆ ಇತರ ವಿದ್ಯಾರ್ಥಿಗಳಿಗೆ ಸೂಚಿಸಿದ ಮತ್ತು ಅದರಂತೆ ವಿದ್ಯಾರ್ಥಿಗಳು ಕಪಾಳಕ್ಕೆ ಬಾರಿಸಿದ ದೃಶ್ಯ ವಿಡಿಯೊದಲ್ಲಿದೆ. ಅವರು ಕೋಮು ಪ್ರೇರಿತ ಹೇಳಿಕೆಗಳನ್ನು ನೀಡಿರುವುದೂ ಅದರಲ್ಲಿದೆ.

ವ್ಯಾಪಕ ಖಂಡನೆ ವ್ಯಕ್ತವಾಗುತ್ತಿದ್ದಂತೆಯೇ ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಶಿಕ್ಷಕಿ, 'ಓದಿನ ಕಡೆಗೆ ಗಮನ ನೀಡದಿದ್ದರೆ ಮತ್ತು ಹೋಂ ವರ್ಕ್ ಸರಿಯಾಗಿ ಮಾಡದಿದ್ದರೆ ಶಿಕ್ಷೆ ನೀಡುವಂತೆ ಬಾಲಕನ ಪೋಷಕರು ತಿಳಿಸಿದ್ದರು. ಬಾಲಕ ಸರಿಯಾಗಿ ಮಗ್ಗಿ ಹೇಳುತ್ತಿರಲಿಲ್ಲ. ನಾನು ಅಂಗವಿಕಲೆಯಾದ ಕಾರಣ ಕಪಾಳಕ್ಕೆ ಬಾರಿಸುವಂತೆ ಇತರ ಮಕ್ಕಳಿಗೆ ತಿಳಿಸಿದೆ' ಎಂದು ಹೇಳಿದ್ದಾರೆ.

ವಿದ್ಯಾರ್ಥಿ ಕುಟುಂಬ ನೀಡಿದ ದೂರಿನ ಅನ್ವಯ ಶಿಕ್ಷಕಿ ತ್ಯಾಗಿ ವಿರುದ್ಧ ಭಾರತೀಯ ದಂಡ ಸಂಹಿತೆ (ಐಪಿಸಿ) ಸೆಕ್ಷನ್ 322 ಮತ್ತು 504ರ ಅಡಿಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರಕರಣದ ಬಗ್ಗೆ ಆಗಸ್ಟ್ 28ರ ಒಳಗಾಗಿ ಪ್ರತಿಕ್ರಿಯೆ ನೀಡುವಂತೆ ಶಾಲಾ ಆಡಳಿತ ಮಂಡಳಿಗೆ ಶಿಕ್ಷಣಾಧಿಕಾರಿ ಶುಭಂ ಶುಕ್ಲಾ ನೋಟಿಸ್ ಜಾರಿ ಮಾಡಿದ್ದಾರೆ.

'ವಿಡಿಯೊ ಹಂಚಿಕೊಳ್ಳದಿರಿ': ಬಾಲಕನ ಗುರುತು ಬಹಿರಂಗ ಆಗುವ ಕಾರಣ ಈ ವಿಡಿಯೊ ಹಂಚಿಕೊಳ್ಳಬೇಡಿ ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಜನರಲ್ಲಿ ಮನವಿ ಮಾಡಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಇಂಥ ಘಟನೆಗಳ ಬಗ್ಗೆ ಇ-ಮೇಲ್ ಮೂಲಕ ಮಾಹಿತಿ ನೀಡಿ. ಬಾಲಕನ ಗುರುತು ಬಹಿರಂಗ ಮಾಡುವ ಮೂಲಕ ಅಪರಾಧದಲ್ಲಿ ನೀವೂ ಭಾಗಿಯಾಗಬೇಡಿ' ಎಂದು ಅಧ್ಯಕ್ಷೆ ಪ್ರಿಯಾಂಕಾ ಕನೂನ್‌ಗೊ 'ಎಕ್ಸ್' ವೇದಿಕೆಯಲ್ಲಿ ಮನವಿ ಮಾಡಿದ್ದಾರೆ.

ಬಿಜೆಪಿ ಹಚ್ಚಿದ ದ್ವೇಷದ ಬೆಂಕಿ– ರಾಹುಲ್: 'ಮುಗ್ಧ ಮಕ್ಕಳ ಮನಸ್ಸಿನಲ್ಲಿ ತಾರತಮ್ಯದ ವಿಷ ಬಿತ್ತುವುದು, ಶಾಲೆಯಂತಹ ಪವಿತ್ರ ಸ್ಥಳವನ್ನು ದ್ವೇಷದ ಮಾರುಕಟ್ಟೆಯನ್ನಾಗಿ ಮಾಡುವುದು... ಒಬ್ಬ ಶಿಕ್ಷಕ ಈ ದೇಶಕ್ಕೆ ಇದಕ್ಕಿಂತ ಕೆಟ್ಟದ್ದನ್ನು ಮಾಡಲಾರ. ದೇಶದ ಮೂಲೆ ಮೂಲೆಯಲ್ಲಿ ಬಿಜೆಪಿ ಇಂತಹ ದ್ವೇಷದ ಬೆಂಕಿ ಹಚ್ಚಿದೆ. ಮಕ್ಕಳೇ ದೇಶದ ಭವಿಷ್ಯ. ಪ್ರೀತಿಯಿಂದ ಒಟ್ಟಿಗೆ ಬದುಕುವುದನ್ನು ಅವರಿಗೆ ಕಲಿಸಬೇಕು' ಎಂದು ಕಾಂಗ್ರೆಸ್ ಮುಖಂಡ, ಸಂಸದ ರಾಹುಲ್ ಗಾಂಧಿ ತಮ್ಮ 'ಎಕ್ಸ್' ಖಾತೆ ಯಲ್ಲಿ ಬರೆದುಕೊಂಡಿದ್ದಾರೆ.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್, ಕೂಡಲೇ ಶಿಕ್ಷಕಿ ಯನ್ನು ವಜಾಗೊಳಿಸುವಂತೆ ಒತ್ತಾಯಿಸಿ ದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಸೇರಿ ಅನೇಕರು ಈ ಶಿಕ್ಷಕಿಯ ನಡೆಯನ್ನು ಖಂಡಿಸಿದ್ದಾರೆ. ದೇಶದ ಶಾಲಾ ವಾತಾವರಣದಲ್ಲಿ ದ್ವೇಷದ ವಿಷ ಬೆರೆಸುವ ಯತ್ನ ನಡೆದಿದೆ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಘಟನೆಯನ್ನು ಖಂಡಿಸಿರುವ ಸಚಿವ ಜೈವೀರ್ ಸಿಂಗ್, ವಿರೋಧ ಪಕ್ಷಗಳು ಇದನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿವೆ ಎಂದು ಆರೋಪಿಸಿದ್ದಾರೆ.

ಈ ಘಟನೆಯನ್ನು ಟಿಎಂಸಿ ಖಂಡಿಸಿದೆ.

ಇಂಥ ಘಟನೆಗಳು ನಮ್ಮ ಜಾಗತಿಕ ವರ್ಚಸ್ಸನ್ನು ಕುಗ್ಗಿಸುತ್ತವೆ. ಇದು ನಮ್ಮ ಸಂವಿಧಾನಕ್ಕೆ ವಿರುದ್ಧವಾದುದು

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ



ಜ್ಞಾನ ದೇಗುಲದಲ್ಲಿ ವಿದ್ಯಾರ್ಥಿಯೊಬ್ಬನನ್ನು ದ್ವೇಷಿಸಿರುವುದು ಇಡೀ ದೇಶವನ್ನೇ ತಲೆತಗ್ಗಿಸುವಂತೆ ಮಾಡಿದೆ

ವರುಣ್ ಗಾಂಧಿ, ಬಿಜೆಪಿ ಸಂಸದ

'ಪ್ರಧಾನಿ ಖಂಡಿಸುವರೇ?'

ಉತ್ತರ ಪ್ರದೇಶದ ಶಿಕ್ಷಕಿಯ ಅಮಾನವೀಯ ನಡೆಯನ್ನು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ತೀವ್ರವಾಗಿ ಖಂಡಿಸಿದ್ದಾರೆ.

'ಇದು ದ್ವೇಷದ ಸಂಸ್ಕೃತಿ. ಇದನ್ನು ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಬಹಿರಂಗವಾಗಿ ಖಂಡಿಸುವರೇ, ಶಿಕ್ಷಕಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವರೇ ಅಥವಾ ದ್ವೇಷದ ಸಂಸ್ಕೃತಿ ಮುಂದುವರಿಯಲು ಅವಕಾಶ ನೀಡುವರೇ' ಎಂದು ಸಿಬಲ್ ಪ್ರಶ್ನಿಸಿದ್ದಾರೆ.

ಸ್ಮೃತಿ ಮೌನವೇಕೆ: ಎನ್‌ಸಿಪಿ ಪ್ರಶ್ನೆ

ಮುಂಬೈ: ಶಿಕ್ಷಕಿಯ ಧರ್ಮಾಂಧ ಕೃತ್ಯದ ಬಗ್ಗೆ ಕೇಂದ್ರ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಏಕೆ ಮೌನವಾಗಿದ್ದಾರೆ ಎಂದು ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಪ್ರಶ್ನಿಸಿದೆ.

'ಮುಜಾಫರ್‌ನಗರದಲ್ಲಿ ನಡೆದ ಘಟನೆ ಅತ್ಯಂತ ಹೇಯವಾದುದು. ಮಕ್ಕಳನ್ನು ಈ ರೀತಿ ನಡೆಸಿಕೊಂಡ ಶಿಕ್ಷಕಿಗೆ ಕಠಿಣ ಶಿಕ್ಷೆಯಾಗಬೇಕು' ಎಂದು ಎನ್‌ಸಿಪಿಯ ರಾಷ್ಟ್ರೀಯ ವಕ್ತಾರ ಕ್ಲೈಡ್ ಕ್ರೊಸ್ಟೊ ಹೇಳಿದ್ದಾರೆ.

'ಸ್ಮೃತಿ ಅವರು ಸಮಾಜದ ನಿರ್ದಿಷ್ಟ ವರ್ಗ ಮತ್ತು ಸಂಸತ್ತಿನ ಕೆಲ ಸದಸ್ಯರ ವಿಷಯ ಬಂದಾಗ ಮಾತ್ರ ಪ್ರತಿಕ್ರಿಯೆ ನೀಡುತ್ತಾರೆ. ಆದರೆ ಅವರ ಸಚಿವಾಲಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಮೌನ ವಹಿಸುತ್ತಾರೆ' ಎಂದು ಟೀಕಿಸಿದ್ದಾರೆ.

ತಮಿಳುನಾಡಿನ ಮದುರೈ ರೈಲು ನಿಲ್ದಾಣದಲ್ಲಿ ಶನಿವಾರ ಬೆಂಕಿ ಅವಘಡಕ್ಕೆ ತುತ್ತಾದ ಪ್ರವಾಸಿ ಬೋಗಿ –ಪಿಟಿಐ ಚಿತ್ರ

ರೈಲು ಬೋಗಿಗೆ ಬೆಂಕಿ: 9 ಯಾತ್ರಿಗಳ ಸಾವು

ಒಂದನೇ ಪುಟದಿಂದ...

ಲಖನೌದಿಂದ ಪ್ರಯಾಣ ಆರಂಭ: ಲಖನೌ ನಗರದ ಸುತ್ತಮುತ್ತಲಿನ ಪ್ರದೇಶಕ್ಕೆ ಸೇರಿದ ಈ ನತದೃಷ್ಟರು ವಾರದ ಹಿಂದೆ ತಮಿಳುನಾಡಿನ ರಾಮೇಶ್ವರಂಗೆ ಪ್ರತ್ಯೇಕ ಬೋಗಿಯಲ್ಲಿ ತೀರ್ಥಯಾತ್ರೆ ಆರಂಭಿಸಿದ್ದರು. ಭಾನುವಾರ ಚೆನ್ನೈ ತಲುಪಿ ಬಳಿಕ ಅಲ್ಲಿಂದ ಹುಟ್ಟೂರಿಗೆ ಮರಳಲು ನಿರ್ಧರಿಸಿದ್ದರು.

ಆ. 25ರಂದು ನಾಗರಕೋಯಿಲ್ ಜಂಕ್ಷನ್‌ನಲ್ಲಿ ಪುಣಲೂರು-ಮದುರೈ ಎಕ್ಸ್‌ಪ್ರೆಸ್‌ಗೆ ಈ ಬೋಗಿ ಅಳವಡಿಸಲಾಗಿತ್ತು. ರೈಲು ಮದುರೈ ನಿಲ್ದಾಣ ತಲುಪಿದಾಗ ಅದನ್ನು ಪ್ರತ್ಯೇಕಿಸಿ ನಿಲ್ದಾಣದ ಹಳಿಯೊಂದರ ಮೇಲೆ ನಿಲ್ಲಿಸಲಾಗಿತ್ತು. ಅಕ್ರಮವಾಗಿ ತಂದಿದ್ದ ಸಿಲಿಂಡರ್ ಬಳಸಿ ಕೆಲವರು ಚಹಾ ಅಥವಾ ತಿಂಡಿ ತಯಾರಿಕೆಗೆ ಹೋದಾಗ ಬೆಂಕಿ ಹೊತ್ತಿಕೊಂಡಿದೆ ಎಂದು ದಕ್ಷಿಣ ರೈಲ್ವೆ ಹೇಳಿಕೆಯಲ್ಲಿ ತಿಳಿಸಿದೆ.

ಬೆಳಿಗ್ಗೆ 5.15ಕ್ಕೆ ಬೆಂಕಿ ಹೊತ್ತಿಕೊಂಡಿದೆ. ಅರ್ಧಗಂಟೆ ವಿಳಂಬವಾಗಿ ಅಗ್ನಿಶಾಮಕ ಮತ್ತು ತುರ್ತುಸೇವಾ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದ್ದಾರೆ. 7.15ರ ಹೊತ್ತಿಗೆ ಬೆಂಕಿ ನಂದಿಸಿ ಹೆಚ್ಚಿನ ಅವಘಡವನ್ನು ತಪ್ಪಿಸಲಾಯಿತು ಎಂದು ವಿವರಿಸಿದೆ.

ಆರಂಭದಲ್ಲಿ 10 ಮಂದಿ ಮೃತಪಟ್ಟಿದ್ದಾರೆ ಎಂದು ರೈಲ್ವೆ ವಿಭಾಗ ತಿಳಿಸಿತ್ತು. ಬಳಿಕ ಮೃತಪಟ್ಟವರ ಸಂಖ್ಯೆಯನ್ನು ಪರಿಷ್ಕರಿಸಿ ಪ್ರಕಟಿಸಿದೆ.

ಬೊಬ್ಬೆ ಕೇಳಿ ನಿದ್ದೆಯಿಂದ ಎದ್ದೆ...

'ಬೆಂಕಿ... ಬೆಂಕಿ... ಎಂದು ಬೋಗಿಯಲ್ಲಿದ್ದ ಕೆಲವರು ಬೊಬ್ಬೆ ಹಾಕುತ್ತಿದ್ದರು. ನಿದ್ದೆಗೆ ಜಾರಿದ್ದ ನನಗೆ ಈ ಸದ್ದಿನಿಂದ ಎಚ್ಚರವಾಯಿತು. ಬೋಗಿಯ ಬಾಗಿಲನ್ನು ಭದ್ರಪಡಿಸಲಾಗಿತ್ತು. ಹಾಗಾಗಿ, ನಾವು ಸುಲಭವಾಗಿ ಹೊರಹೋಗಲು ಸಾಧ್ಯವಾಗಲಿಲ್ಲ. ಆ ನಡುವೆಯೇ ಕೆಲವರು ಬಾಗಿಲನ್ನು ಮುರಿದಿದ್ದರಿಂದ ಹೊರಬಂದೆವು' ಎಂದು ಬದುಕುಳಿದ ಸಂತ್ರಸ್ತೆ ಅಲ್ಕಾ ಪ್ರಜಾಪತಿ ದುರಂತದ ಬಗ್ಗೆ ವಿವರಿಸಿದರು.

'ಸುತ್ತಲೂ ದಟ್ಟ ಹೊಗೆ ಆವರಿಸಿತ್ತು. ಹೊರಗೆ ಬಂದಾಗಲೂ ನನಗೆ ಉಸಿರಾಟಕ್ಕೆ ತೊಂದರೆಯಾಗಿತ್ತು. ಆಗ ನಾನು ದೇವರನ್ನು ಸ್ಮರಿಸಿದೆ. 15–20 ನಿಮಿಷ ಕಳೆಯುವುದರೊಳಗೆ ಸ್ಥಳಕ್ಕೆ ಧಾವಿಸಿದ ರೈಲ್ವೆ ಸಿಬ್ಬಂದಿ ಬೆಂಕಿ ನಂದಿಸಲು ಶ್ರಮಿಸಿದರು. ಆದರೆ, ಆ ವೇಳೆಗೆ ಅದರ ಕೆನ್ನಾಲಿಗೆಯು ಇಡೀ ಬೋಗಿಯನ್ನು ಆವರಿಸಿತ್ತು' ಎಂದರು.

'ಪ್ರಯಾಣಿಕರ ಕಿರುಚಾಟ ಕೇಳಿದ ತಕ್ಷಣವೇ ಸ್ಥಳಕ್ಕೆ ತೆರಳಿದೆವು. ಆದರೆ, ಬೆಂಕಿಯ ಜ್ವಾಲೆಯಿಂದ ಹತ್ತಿರಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಅದು ಸ್ಲೀಪರ್ ಕೋಚ್ ಬೋಗಿ ಆಗಿದ್ದು, ಸಿಲುಕಿದ್ದವರು ಹೊರಗೆ ಬರಲು ಸಾಧ್ಯವಾಗಲಿಲ್ಲ' ಎಂದು ಪ್ರತ್ಯಕ್ಷದರ್ಶಿ ಆಟೊ ಚಾಲಕ ಮನ್ನನ್ ಪ್ರಕಾಶ್ ವಿವರಿಸಿದರು.

ದುರಂತ ನೋವು ತಂದಿದೆ. ರೈಲ್ವೆ ಸಚಿವರೊಂದಿಗೆ ಮಾತುಕತೆ ನಡೆಸಿ ಅವಘಡದ ಬಗ್ಗೆ ವಿವರ ಪಡೆದಿದ್ದೇನೆ. ಗಾಯಾಳುಗಳಿಗೆ ಸರ್ಕಾರ ಅಗತ್ಯ ನೆರವು ನೀಡಲಿದೆ

ಯೋಗಿ ಆದಿತ್ಯನಾಥ, ಮುಖ್ಯಮಂತ್ರಿ, ಉತ್ತರ ಪ್ರದೇಶ

ಪರಿಹಾರ ಘೋಷಣೆ: ತಮಿಳುನಾಡು ರಾಜ್ಯಪಾಲ ಆರ್‌.ಎನ್. ರವಿ, ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ದುರಂತದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ಮೃತಪಟ್ಟವರ ಕುಟುಂಬಗಳಿಗೆ ತಮಿಳುನಾಡು ಸರ್ಕಾರ ತಲಾ ₹ 3 ಲಕ್ಷ ಹಾಗೂ ಉತ್ತರ ಪ್ರದೇಶ ಸರ್ಕಾರವು ತಲಾ ₹ 2 ಲಕ್ಷ ಪರಿಹಾರ ಘೋಷಿಸಿದೆ. ದಕ್ಷಿಣ ರೈಲ್ವೆಯು ತಲಾ ₹ 10 ಲಕ್ಷ ಪರಿಹಾರ ಘೋಷಿಸಿದ್ದು, [illegible]

ನೂಹ್: ನಾಳೆವರೆಗೆ ಇಂಟರ್‌ನೆಟ್ ಸೇವೆ ನಿರ್ಬಂಧ

ಚಂಡೀಗಢ (ಪಿಟಿಐ): ಕೋಮುಗಲಭೆ ಪೀಡಿತ ನೂಹ್ ಜಿಲ್ಲೆಯಲ್ಲಿ ಸೋಮವಾರ ಬ್ರಿಜ್ ಮಂಡಲ್ ಜಲಾಭಿಷೇಕ ಯಾತ್ರೆ ನಡೆಸಲು ಸರ್ವ ಜಾತಿಯ ಹಿಂದೂ ಮಹಾಪಂಚಾಯತ್ ಕರೆ ಕೊಟ್ಟ ಹಿನ್ನೆಲೆಯಲ್ಲಿ ಇದೇ 28ರವರೆಗೆ ಸೆಕ್ಷನ್ 144ರಡಿ ನಿಷೇಧಾಜ್ಞೆ ವಿಧಿಸಿ ಮೊಬೈಲ್ ಇಂಟರ್‌ನೆಟ್ ಮತ್ತು ಗುಂಪು ಎಸ್‌ಎಂಎಸ್ ಸೇವೆಗಳನ್ನು ನಿರ್ಬಂಧಿಸಿ ಹರಿಯಾಣ ಸರ್ಕಾರ ಶನಿವಾರ ಆದೇಶ ಹೊರಡಿಸಿದೆ.

ಸಾಮಾಜಿಕ ಮಾಧ್ಯಮಗಳ ಮೂಲಕ ವದಂತಿ ಹರಡುವುದನ್ನು ತಡೆಗಟ್ಟಲು ಆ.26ರಿಂದ 28 ರವರೆಗೆ ಇಂಟರ್ನೆಟ್ ನಿರ್ಬಂಧಿಸುವುದಾಗಿ ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಗೃಹ) ಪ್ರಕಟಿಸಿದರು.

ಮಣಿಪುರ, ಹರಿಯಾಣ ರಾಜ್ಯಪಾಲರು ಅಲ್ಲಿನ ಸಿ.ಎಂಗಳಿಗೆ ನೋಟಿಸ್ ನೀಡಿದ್ದಾರೆಯೇ?

ರಾಜ್ಯಪಾಲರಿಂದ ಬೆದರಿಕೆ: ಪಂಜಾಬ್ ಸಿ.ಎಂ

ಚಂಡೀಗಢ (ಪಿಟಿಐ): 'ಕಾನೂನು ಮತ್ತು ಸುವ್ಯವಸ್ಥೆ ನೆಪವೊಡ್ಡಿ ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರು ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರುವ ಬೆದರಿಕೆ ಒಡ್ಡಿದ್ದಾರೆ, ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮಣಿಪುರ ಮತ್ತು ಹರಿಯಾಣದಲ್ಲಿ ಅಲ್ಲಿನ ರಾಜ್ಯಪಾಲರು ಮೌನವಾಗಿದ್ದಾರೆ' ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಶನಿವಾರ ಆರೋಪಿಸಿದ್ದಾರೆ.

'ರಾಜ್ಯಪಾಲರ ಹೇಳಿಕೆಯನ್ನು ರಾಜ್ಯದ ಶಾಂತಿಪ್ರಿಯ ಜನರಿಗೆ ಒಡ್ಡಿದ ಬೆದರಿಕೆ ಎಂದೇ ನಾನು ಭಾವಿಸುತ್ತೇನೆ. ಸಂವಿಧಾನದ ವಿಧಿ 356ರ ಅನ್ವಯ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸು ಮಾಡುವ ಬೆದರಿಕೆಯನ್ನು ರಾಜ್ಯಪಾಲರು ಒಡ್ಡಿದ್ದಾರೆ' ಎಂದು ಹೇಳಿದರು.

'ಸರ್ಕಾರಕ್ಕೆ ತಾವು ಬರೆದಿರುವ ಪತ್ರಗಳಿಗೆ ಶೀಘ್ರ ಉತ್ತರ ನೀಡದಿದ್ದಲ್ಲಿ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರುವಂತೆ ಶಿಫಾರಸು ಮಾಡಬೇಕಾಗುತ್ತದೆ' ಎಂದು ರಾಜ್ಯಪಾಲ ಪುರೋಹಿತ್ ಅವರು ಶುಕ್ರವಾರ ಹೇಳಿದ್ದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾನ್ ಅವರು, 'ರಾಜ್ಯಪಾಲರು ಇದುವರೆಗೂ ನಮಗೆ 16 ಪತ್ರ ಬರೆದಿದ್ದಾರೆ. ಇವುಗಳಲ್ಲಿ 9 ಪತ್ರಗಳಿಗೆ ಉತ್ತರಿಸಲಾಗಿದೆ. ಬಾಕಿ ಪತ್ರಗಳಿಗೆ ಸಂಬಂಧಿಸಿದಂತೆ ಅಗತ್ಯ ವಿವರಗಳನ್ನು ನಿರೀಕ್ಷಿಸಲಾಗುತ್ತಿದೆ. ಬರೆದ ಪತ್ರಗಳಿಗೆ ತಕ್ಷಣವೇ ಉತ್ತರ ನೀಡಬೇಕು ಎಂದು ರಾಜ್ಯಪಾಲರು ಆತುರಪಡಬಾರದು' ಎಂದರು.

ರಾಜ್ಯದಲ್ಲಿ ಮಾದಕವಸ್ತುಗಳ ಮಾರಾಟ, ಬಳಕೆ ತಡೆಗೆ ತಮ್ಮ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆದರೆ, ರಾಜ್ಯಪಾಲರು ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಸುಗಮವಾಗಿಲ್ಲ ಎಂದು ಪ್ರತಿಪಾದಿಸುತ್ತಿದ್ದಾರೆ ಎಂದು ವಿವರಿಸಿದರು.

'ನೂಹ್‌ನಲ್ಲಿ ಸಂಭವಿಸಿದ ಹಿಂಸೆ, ಕರ್ಫ್ಯೂ ಜಾರಿ ಹಿನ್ನೆಲೆಯಲ್ಲಿ ಹರಿಯಾಣದ ರಾಜ್ಯಪಾಲರು ಅಲ್ಲಿನ ಮುಖ್ಯಮಂತ್ರಿಗೆ ನೋಟಿಸ್ ನೀಡಿದ್ದಾರೆಯೇ ಎಂದು ನಾನು ರಾಜ್ಯಪಾಲರನ್ನು ಪ್ರಶ್ನಿಸುತ್ತೇನೆ. ಇಲ್ಲ. ಏಕೆಂದರೆ ಅಲ್ಲಿ ಅವರದೇ ಸರ್ಕಾರವಿದೆ. ಕೇಂದ್ರದಲ್ಲೂ ಆ ಪಕ್ಷದ್ದೇ ಆಡಳಿತವಿದೆ' ಎಂದು ಮುಖ್ಯಮಂತ್ರಿ ಹೇಳಿದರು.

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುರಿತು ಕಾಳಜಿ ಹೊಂದಿರುವ ರಾಜ್ಯಪಾಲರು, ಮಣಿಪುರದಲ್ಲಿ ಜನಾಂಗೀಯ ಗಲಭೆ, ಹಿಂಸೆ ಖಂಡಿಸಿ ಹೇಳಿಕೆಯನ್ನಾದರೂ ನೀಡಿದ್ದಾರೆಯೇ? ಸಂವಿಧಾನವು ಮಣಿಪುರದಲ್ಲಿ ಅನ್ವಯಿಸುವುದಿಲ್ಲವೇ' ಎಂದು ಪ್ರಶ್ನಿಸಿದರು.

'ಉತ್ತರ ಪ್ರದೇಶದಲ್ಲಿ ಮಾಧ್ಯಮದ ಎದುರೇ ಕೊಲೆ ಆಗುತ್ತದೆ. ಅಲ್ಲಿನ ರಾಜ್ಯಪಾಲರು ಕಾನೂನು ಸ್ಥಿತಿ ಪ್ರಶ್ನಿಸಿ ಯೋಗಿ ಆದಿತ್ಯನಾಥ ಅವರಿಗೆ ಪತ್ರ ಬರೆದಿದ್ದಾರೆಯೇ' ಎಂದು ಪ್ರಶ್ನಿಸಿದರು. ಶುಕ್ರವಾರವಷ್ಟೇ ಸರ್ಕಾರಕ್ಕೆ ಮತ್ತೊಂದು ಪತ್ರ ಬರೆದಿದ್ದ ರಾಜ್ಯಪಾಲರು, 'ಸರ್ಕಾರ ಉತ್ತರ ನೀಡುವುದು ವಿಳಂಬ ಮಾಡುತ್ತಿರುವುದು ನನಗೆ ಬೇಸರವಾಗಿದೆ. ಹಿಂದಿನ ಪತ್ರಗಳಿಗೆ ಉತ್ತರ ಸಿಗದಿದ್ದರೆ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸು ಮಾಡುತ್ತೇನೆ' ಎಂದು ಹೇಳಿದ್ದರು.

ಪಂಜಾಬ್, ದೆಹಲಿ, ಕರ್ನಾಟಕ, ಕೇರಳ, ತಮಿಳುನಾಡು, ತೆಲಂಗಾಣದ ರಾಜ್ಯಪಾಲರ ಹೆಸರು ಹೊರತುಪಡಿಸಿ ಹೆಚ್ಚಿನವರಿಗೆ ಉತ್ತರ ರಾಜ್ಯಗಳ ರಾಜ್ಯಪಾಲರ ಹೆಸರು ಗೊತ್ತಿಲ್ಲ. ಏಕೆಂದರೆ, ಅಲ್ಲಿ ಬಿಜೆಪಿ ಆಡಳಿತವಿದೆ

ಭಗವಂತ ಮಾನ್, ಪಂಜಾಬ್ ಸಿ.ಎಂ

ಎನ್‌ಸಿಪಿ ಇಬ್ಭಾಗವಾಗಿಲ್ಲ: ಶರದ್ ಪವಾರ್

ಕೊಲ್ಹಾಪುರ (ಪಿಟಿಐ): ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷವು (ಎನ್‌ಸಿಪಿ) ಇಬ್ಭಾಗವಾಗಿಲ್ಲ ಎಂದು ಅದರ ಮುಖ್ಯಸ್ಥ ಶರದ್ ಪವಾರ್ ಪುನರುಚ್ಚರಿಸಿದ್ದಾರೆ. 'ಕೆಲ ಶಾಸಕರು ಪಕ್ಷದಿಂದ ನಿರ್ಗಮಿಸಿರುವುದು ನಿಜ. ಆದರೆ, ಅದನ್ನು ವಿಭಜನೆ ಎನ್ನಲಾಗದು' ಎಂದಿದ್ದಾರೆ.

ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾನು ಎನ್‌ಸಿಪಿಯ ರಾಷ್ಟ್ರೀಯ ಅಧ್ಯಕ್ಷನಾಗಿದ್ದು, ಜಯಂತ್ ಪಾಟೀಲ ಅವರು ಮಹಾರಾಷ್ಟ್ರ ರಾಜ್ಯ ಘಟಕದ ಅಧ್ಯಕ್ಷ' ಎಂದು ಹೇಳಿದರು.

ಈಗ ಪಕ್ಷದ ವಿರುದ್ಧ ಬಂಡಾಯ ಎದ್ದಿರುವ ನಾಯಕರ ಕುರಿತು ತಮಗೆ ಮೃದುಧೋರಣೆ ಇದೆಯೇ ಎಂಬ ಪ್ರಶ್ನೆಗೆ, 'ಪಕ್ಷದ ಕೆಲ ಬಂಡಾಯ ನಾಯಕರ ಹೆಸರನ್ನು ಉಲ್ಲೇಖಿಸುವ ಮೂಲಕ ಅವರಿಗೆ ಏಕೆ ಪ್ರಾಮುಖ್ಯತೆ ನೀಡಬೇಕು' ಎಂದು ಮರುಪ್ರಶ್ನಿಸಿದರು.

ಕೇಂದ್ರ ಸಾಹಿತ್ಯ ಅಕಾಡೆಮಿಗೆ ನೇಮಕ

ನವದೆಹಲಿ: ಕೇಂದ್ರ ಸಾಹಿತ್ಯ ಅಕಾಡೆಮಿಯ ಮೌಖಿಕ ಪರಂಪರೆ ಮತ್ತು ಬುಡಕಟ್ಟು ಸಾಹಿತ್ಯ ಕೇಂದ್ರದ ಸಲಹಾ ಸಮಿತಿ ಸದಸ್ಯರನ್ನಾಗಿ ಕರ್ನಾಟಕದ ಬಂಜಾರ ಸಮುದಾಯದ ಲೇಖಕ ಪ್ರೊ. ಶಾಂತ ನಾಯ್ಕ ಅವರನ್ನು ನೇಮಕ ಮಾಡಲಾಗಿದೆ ಎಂದು ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

ಶಾಂತ ನಾಯ್ಕ

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಭಾರತ ಸರ್ಕಾರ

ಅಧಿಸೂಚನೆ

VI ನೇ ತರಗತಿ JNVST 2024ನೇ ಸಾಲಿನಾ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ವಿಸ್ತರಣೆಗೆ ಕೊನೆಯ ದಿನಾಂಕ:

ಜವಾಹರ ನವೋದಯ ವಿದ್ಯಾಲಯ ಆಯ್ಕೆ ಪರೀಕ್ಷೆ 2024 ರ 6ನೇ ತರಗತಿಯ 2024–25ನೇ ಶೈಕ್ಷಣಿಕ ಸಾಲಿಗೆ ದಾಖಲಾತಿಗಾಗಿ ಆಯ್ಕೆ ಪರೀಕ್ಷೆಗೆ ಆನ್‌ಲೈನ್ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಆಡಳಿತಾತ್ಮಕ ಕಾರಣದಿಂದಾಗಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು 31 ನೇ ಆಗಸ್ಟ್ 2023ರವರೆಗೆ ಮತ್ತಷ್ಟು ವಿಸ್ತರಿಸಲಾಗಿದೆ. ಅಭ್ಯರ್ಥಿಗಳು www.navodaya.gov.in ಅಥವಾ http://cbseitms.rcil.gov.in/nvs ರ ವೆಬ್‌ಸೈಟ್ ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಪ್ರವೇಶ ಪರೀಕ್ಷೆಗೆ ನೊಂದಾಯಿಸಿಕೊಂಡಿರುವ ಅಭ್ಯರ್ಥಿಗಳು, ಲಿಂಗ (ಗಂಡು/ಹೆಣ್ಣು), ವರ್ಗ (ಸಾಮಾನ್ಯ/ಒ.ಬಿ.ಸಿ./ಎಸ್.ಸಿ./ಎಸ್.ಟಿ), ಪ್ರದೇಶ (ಗ್ರಾಮೀಣ/ನಗರ), ವಿಕಲಚೇತನ ಹಾಗೂ ಪರೀಕ್ಷಾ ಮಾಧ್ಯಮ, ಇವುಗಳ ಪರಿಷ್ಕರಣೆ ಮಾಡಲು ಆನ್‌ಲೈನ್ ತಿದ್ದುಪಡಿ ಕಿಟಕಿಯು (Window) ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದ ನಂತರ ಎರಡು ದಿನಗಳವರೆಗೆ ತೆರೆದಿರುತ್ತದೆ.

ನವೋದಯ ವಿದ್ಯಾಲಯ ಸಮಿತಿ ಪ್ರಕಟಣೆ

ಒಪ್ಪಿತ ಲೈಂಗಿಕತೆ ಎಂದು ಬಣ್ಣಿಸುವ ಪ್ರವೃತ್ತಿ ಹೆಚ್ಚುತ್ತಿದೆ– ಪಿಐಎಲ್

'ಪೋಕ್ಸೊ' ವ್ಯಾಖ್ಯಾನ: ವಿಚಾರಣೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: 16–18 ವರ್ಷದ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಪೋಕ್ಸೊ ಕಾಯ್ದೆ ಆಶಯಗಳಿಗೆ ವಿರುದ್ಧವಾಗಿ 'ಸಮ್ಮತಿಯ ಲೈಂಗಿಕತೆ ಮತ್ತು ಮಧುರ ಬಾಂಧವ್ಯ' ಎಂದು ಕೋರ್ಟ್‌ಗಳು ಮತ್ತು ತನಿಖಾ ಸಂಸ್ಥೆ ಬಣ್ಣಿಸುವ ಪ್ರವೃತ್ತಿ ಹೆಚ್ಚುತ್ತಿದೆ ಎಂದು ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ಕೇಂದ್ರ ಸರ್ಕಾರ ಹಾಗೂ ಮಕ್ಕಳ ಹಕ್ಕುಗಳ ಸಂರಕ್ಷಣೆಯ ರಾಷ್ಟ್ರೀಯ ಆಯೋಗಕ್ಕೆ (ಎನ್‌ಸಿಪಿಸಿಆರ್) ಈ ಸಂಬಂಧ ನೋಟಿಸ್ ಜಾರಿಗೆ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ಅವರಿದ್ದ ಪೀಠ ಶುಕ್ರವಾರ ಆದೇಶಿಸಿತು.

ಎನ್‌ಜಿಒ 'ಬಚ್‌ಪನ್ ಬಚಾವೊ ಆಂದೋಲನ್' ಈ ಬಗ್ಗೆ ಅರ್ಜಿ ಸಲ್ಲಿಸಿತ್ತು. ಎನ್‌ಜಿಒ ಪ್ರತಿನಿಧಿಸಿದ್ದ ಹಿರಿಯ ವಕೀಲ ಎಚ್.ಎಸ್.ಫೂಲ್ಕಾ ಅವರು, 'ರಾಜ್ಯಗಳ ಪ್ರಾಧಿಕಾರಗಳು ಹಾಗೂ ತನಿಖಾ ಸಂಸ್ಥೆಗಳು ದೌರ್ಜನ್ಯ ಪ್ರಕರಣಗಳನ್ನು ತಪ್ಪಾಗಿ ವ್ಯಾಖ್ಯಾನಿಸುತ್ತಿವೆ. ಇವು ಅಸೂಕ್ಷ್ಮತೆಯಿಂದ ಕೂಡಿದ್ದಾಗಿದೆ' ಎಂದು ಗಮನಸೆಳೆದಿದ್ದರು.

ವ್ಯಕ್ತಿಯೊಬ್ಬರು ಅಪ್ರಾಪ್ತ ವಯಸ್ಸಿನ ಬಾಲಕಿ ಜೊತೆಗೆ ವಿವಾಹ ಆಗಿರುವುದನ್ನು ಎತ್ತಿಹಿಡಿದಿದ್ದ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ 2022ರ ಆದೇಶವನ್ನು ಪ್ರಶ್ನಿಸಿ ಎನ್‌ಸಿಪಿಸಿಆರ್ ಸಲ್ಲಿಸಿದ್ದ ಅರ್ಜಿಯ ಜೊತೆಗೆ ಈ ಮನವಿಯನ್ನು ಒಟ್ಟುಗೂಡಿಸಲು ಪೀಠವು ತೀರ್ಮಾನಿಸಿತು.

'ಹದಿಹರೆಯದವರಿಗೆ ಸಂಬಂಧಿಸಿದ ಬಹುತೇಕ ಲೈಂಗಿಕ ದೌರ್ಜನ್ಯ ಪ್ರಕರಣಗಳು ಸಮ್ಮತಿಯ ಲೈಂಗಿಕತೆಯೇ ಆಗಿದ್ದು, ಪೋಕ್ಸೊ ಕಾಯ್ದೆ ದುರ್ಬಳಕೆಯಾಗುತ್ತಿದೆ ಎಂಬ ಅಭಿಪ್ರಾಯ ತನಿಖಾ ಸಂಸ್ಥೆಗಳು, ನ್ಯಾಯಾಂಗ ವಲಯದಲ್ಲಿ ದಟ್ಟವಾಗುತ್ತಿದೆ. ಇದು ವಾಸ್ತವಕ್ಕೆ ದೂರವಾಗಿದೆ. ಕೆಲ ಎನ್‌ಜಿಒಗಳು ಶೇ 60–70 ಪ್ರಕರಣಗಳು ಸಮ್ಮತಿಯ ಲೈಂಗಿಕತೆಯೇ ಎಂಬ ಚಿತ್ರಣ ನೀಡುತ್ತಿವೆ. ಈ ಪ್ರವೃತ್ತಿಯು ಮಕ್ಕಳ ಹಿತಾಸಕ್ತಿ ರಕ್ಷಣೆಗೆ ವಿರುದ್ಧವಾಗಿದ್ದು, ಭಾರತೀಯ ಕ್ರಿಮಿನಲ್ ನ್ಯಾಯವ್ಯವಸ್ಥೆ ವೈಫಲ್ಯಕ್ಕೂ ಕಾರಣವಾಗಲಿದೆ' ಎಂದು ಅರ್ಜಿದಾರರು ಪ್ರತಿಪಾದಿಸಿದ್ದಾರೆ.

ಎನ್‌ಸಿಆರ್‌ಬಿ ದತ್ತಾಂಶಗಳನ್ನೂ ಉಲ್ಲೇಖಿಸಿರುವ ಅರ್ಜಿದಾರರು 2019–2021ರ ಅವಧಿಯಲ್ಲಿ ಪೋಕ್ಸೊ ಕಾಯ್ದೆಯ ಅನುಸಾರ ಒಟ್ಟು 1,50,061 ಸಂತ್ರಸ್ತರಿದ್ದಾರೆ. ಇವರಲ್ಲಿ ಸುಮಾರು 44,104 ಸಂತ್ರಸ್ತರ ವಯಸ್ಸು 16 ರಿಂದ 18 ಆಗಿದೆ ಎಂದು ಪೀಠದ ಗಮನಕ್ಕೆ ತಂದಿದ್ದಾರೆ.

'ಪೋಕ್ಸೊ ಕಾಯ್ದೆ ಪ್ರಕರಣಗಳ ಸಮೀಕ್ಷೆ/ವಿಶ್ಲೇಷಣೆ ನಡೆಸಲು ಎನ್‌ಸಿಪಿಸಿಆರ್‌ಗೆ ಸೂಚಿಸಬೇಕು, ಸಂತ್ರಸ್ತರನ್ನು 30 ದಿನಗಳಲ್ಲಿ ಪರಿಶೀಲನೆಗೆ ಒಳಪಡಿಸುವಂತೆ ಮಾರ್ಗದರ್ಶಿ ನಿಯಮ ಹೊರಡಿಸಬೇಕು. ಸಮ್ಮತಿಯ ಪ್ರೇಮ ಪ್ರಕರಣಗಳಲ್ಲಿ ಆರೋಪಿಗಳ ಬಂಧನಕ್ಕೆ ಆತುರ ಬೇಡ ಎಂದು ತಮಿಳುನಾಡು ಪೊಲೀಸ್ ಮಹಾ ನಿರ್ದೇಶಕರು 2022ರ ಡಿಸೆಂಬರ್ 3ರಂದು ಹೊರಡಿಸಿರುವ ಸುತ್ತೋಲೆ ರದ್ದುಪಡಿಸಬೇಕು' ಎಂದೂ ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ಸಮ್ಮತಿ ವಯಸ್ಸು ಇಳಿಕೆ ವಿರುದ್ಧ ಅರ್ಜಿ

ನವದೆಹಲಿ (ಪಿಟಿಐ): 'ಅಪ್ರಾಪ್ತ ವಯಸ್ಸಿನ ಮುಸ್ಲಿಂ ಬಾಲಕಿ ತನ್ನ ಆಯ್ಕೆಯ ವ್ಯಕ್ತಿಯ ಮದುವೆಯಾಗಬಹುದು' ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ 2022ರ ಜೂನ್ 13ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ 'ಬಚ್‌ಪನ್ ಬಚಾವೊ ಆಂದೋಲನ್' ಸಂಸ್ಥೆ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಪರಿಗಣಿಸಿದೆ.

ಮದುವೆಗೆ ಸಮ್ಮತಿ ನೀಡುವ ವಯಸ್ಸು ಇಳಿಸುವುದು ಲೈಂಗಿಕ ದೌರ್ಜನ್ಯ ಪ್ರಕರಣಗಳ ದೊಡ್ಡ ಸಂಖ್ಯೆಯ ಸಂತ್ರಸ್ತ ಮಕ್ಕಳ, ಮುಖ್ಯವಾಗಿ ಬಾಲಕಿಯರ ಹಿತಾಸಕ್ತಿ ರಕ್ಷಣೆಯ ಪ್ರಕ್ರಿಯೆಯನ್ನು ಅಸ್ತವ್ಯಸ್ತಗೊಳಿಸಲಿದೆ ಎಂದು ಎನ್‌ಜಿಒ ಅರ್ಜಿಯಲ್ಲಿ ಉಲ್ಲೇಖಿಸಿದೆ.

ಸಿಜೆಐ ಡಿ.ವೈ.ಚಂದ್ರಚೂಡ್ ನೇತೃತ್ವದ ತ್ರಿಸದಸ್ಯರ ನ್ಯಾಯಪೀಠವು ಈ ಸಂಬಂಧ ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣೆ ಆಯೋಗಕ್ಕೆ (ಎನ್‌ಸಿಪಿಸಿಆರ್) ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

'ಏಕತೆಗೆ ಸಂಸ್ಕೃತಿ ಕೊಡುಗೆ ಗಣನೀಯ'

ವಾರಾಣಸಿ (ಪಿಟಿಐ): 'ಏಕತೆಯನ್ನು ಮೂಡಿಸುವಲ್ಲಿ ಸಂಸ್ಕೃತಿಯು ಅಂತರ್ಗತವಾದ ಸಾಮರ್ಥ್ಯ ಹೊಂದಿದೆ. ಮನುಕುಲದ ಏಕತೆ ದೃಷ್ಟಿಯಿಂದ ಜಿ20 ಸಂಸ್ಕೃತಿ ಸಚಿವರ ಸಭೆಯು ಮಹತ್ವದ್ದಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದ್ದಾರೆ.

ಇಲ್ಲಿ ನಡೆಯುತ್ತಿರುವ ಜಿ20 ಸದಸ್ಯ ರಾಷ್ಟ್ರಗಳ ಸಂಸ್ಕೃತಿ ಸಚಿವರ ಸಭೆಗೆ ಅವರು ವಿಡಿಯೊ ಸಂದೇಶವನ್ನು ಕಳುಹಿಸಿದ್ದಾರೆ. 'ವಾರಾಣಸಿಯು ಸಂಸ್ಕೃತಿ ಸಂಪತ್ತಿನ ಭಂಡಾರವಾಗಿದೆ. ಸತ್ಯದ ಜ್ಞಾನಕೇಂದ್ರವಾಗಿದೆ' ಎಂದು ಬಣ್ಣಿಸಿದ್ದಾರೆ.

'ಸಂಸ್ಕೃತಿಗೆ ಒಗ್ಗೂಡಿಸುವ ಅನೂಹ್ಯ ಸಾಮರ್ಥ್ಯವಿದೆ. ಇಡೀ ಮನುಕುಲಕ್ಕಾಗಿ ನಿಮ್ಮಗಳ ಕಾರ್ಯ ಹೆಚ್ಚು ಮಹತ್ವದ್ದಾಗಿದೆ' ಎಂದು ವಿವಿಧ ದೇಶಗಳ ಸಚಿವರನ್ನು ಉದ್ದೇಶಿಸಿ ಹೇಳಿದರು.

'ನವದೆಹಲಿಯ ವಸ್ತುಸಂಗ್ರಹಾಲಯವು ದೇಶದ ಪ್ರಜಾಪ್ರಭುತ್ವದ ಪರಂಪರೆ ಬಿಂಬಿಸುತ್ತಿದೆ. ಆರ್ಥಿಕತೆ ಹಾಗೂ ವೈವಿಧ್ಯತೆ ಅಭಿವೃದ್ಧಿಗಾಗಿ ಪರಂಪರೆ ಮಹತ್ವದ ಆಸ್ತಿಯಾಗಿದೆ. 'ಪರಂಪರೆ ಮತ್ತು ಅಭಿವೃದ್ಧಿ' ದೇಶದ ಘೋಷವಾಕ್ಯವು ಆಗಿದೆ. ಸಂಸ್ಕೃತಿ ಮತ್ತು ಪರಂಪರೆಯನ್ನು ಸಂರಕ್ಷಿಸಿಡಲು ಭಾರತವು ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸುತ್ತಿದೆ' ಎಂದರು.

ಮಧ್ಯಪ್ರದೇಶ: ಸಂಪುಟ ವಿಸ್ತರಣೆ

ಭೋಪಾಲ್ (ಪಿಟಿಐ): ಮಧ್ಯ ಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಮೂವರನ್ನು ಸೇರಿಸಿಕೊಳ್ಳುವ ಮೂಲಕ ಶನಿವಾರ ಸಚಿವ ಸಂಪುಟವನ್ನು ವಿಸ್ತರಿಸಿದರು.

ಮಧ್ಯಪ್ರದೇಶದಲ್ಲಿ ವರ್ಷಾಂತ್ಯದಲ್ಲಿ ಚುನಾವಣೆ ನಡೆಯಲಿದೆ. ಜಾತಿ ಮತ್ತು ಪ್ರಾದೇಶಿಕ ಸಮತೋಲನ ಕಾಯ್ದುಕೊಳ್ಳಲು ಈಗ ಮೂವರನ್ನು ಸೇರಿಸಿಕೊಳ್ಳಲಾಗಿದೆ ಎಂದು ಹೇಳಲಾಗಿದೆ.

ಗೀತೆ ರಚನೆಕಾರ ದೇವ್ ಕೊಹ್ಲಿ ನಿಧನ

ಪ್ರಜಾವಾಣಿ ವಾರ್ತೆ

ಮುಂಬೈ: ಕವಿ ಹಾಗೂ ಗೀತೆ ರಚನೆಕಾರ ದೇವ್ ಕೊಹ್ಲಿ (81) ಅವರು ಶನಿವಾರ ಇಲ್ಲಿನ ಆಸ್ಪತ್ರೆಯಲ್ಲಿ ನಿಧನರಾದರು.

ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದ ಅವರನ್ನು ಕೆಲವು ತಿಂಗಳ ಹಿಂದೆ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಹಿಂದಿ ಚಿತ್ರರಂಗದಲ್ಲಿ ಆರು ದಶಕಗಳಿಗೂ ಹೆಚ್ಚು ಕಾಲ ನೂರಕ್ಕೂ ಹೆಚ್ಚು ಹಿಂದಿ ಚಿತ್ರಗಳಿಗೆ ಗೀತೆಗಳನ್ನು ರಚಿಸಿರುವುದು ಅವರ ಹೆಗ್ಗಳಿಕೆಯಾಗಿದೆ. ಅವರು ರಚಿಸಿದ ಹಲವು ಹಾಡುಗಳು ಮ್ಯೂಸಿಕಲ್ ಸೂಪರ್ ಹಿಟ್ ಆಗಿವೆ.

'ಮೈನೆ ಪ್ಯಾರ್ ಕಿಯಾ', 'ಬಾಜಿಗರ್', 'ಜುಡ್ವಾ 2', ಮುಸಾಫಿರ್' ಸೇರಿದಂತೆ ಹಲವು ಹಿಂದಿ ಚಿತ್ರಗಳಿಗೆ ಗೀತೆ ರಚನೆ ಮಾಡಿದ ಹಿರಿಮೆ ಅವರದಾಗಿದೆ. 'ಮೈನೆ ಪ್ಯಾರ್ ಕಿಯಾ' ಚಿತ್ರಕ್ಕಾಗಿ ಅವರು ರಚಿಸಿರುವ 'ಕಬೂತರ್ ಜಾ ಜಾ ಜಾ' ಹಾಡು ಇಂದಿಗೂ ಜನರ ಬಾಯಲ್ಲಿ ಗುನುಗುತ್ತಿದೆ.

ಪಾಕಿಸ್ತಾನದ ರಾವಲ್ಪಿಂಡಿಯ ಸಿಖ್ ಕುಟುಂಬದಲ್ಲಿ 1942ರ ನವೆಂಬರ್ 2ರಂದು ಅವರು ಜನಿಸಿದರು. ದೇಶ ವಿಭಜನೆ ಬಳಿಕ ಅವರ ಕುಟುಂಬವು ಡೆಹ್ರಾಡೂನ್‌ಗೆ ಬಂದು ನೆಲೆಸಿತ್ತು. ಅಲ್ಲಿನ ಶ್ರೀಗುರು ನಾನಕ್ ದೇವ್ ಗುರು ಮಹಾರಾಜ್ ಕಾಲೇಜಿನಲ್ಲಿ ಅವರು ವಿದ್ಯಾಭ್ಯಾಸ ಪೂರ್ಣಗೊಳಿಸಿದರು.

1964ರಲ್ಲಿ ಉದ್ಯೋಗ ಅರಸಿ ಅವರು ಮುಂಬೈಗೆ ಕಾಲಿಟ್ಟರು. ಸಿನಿಮಾ ರಂಗ ಪ್ರವೇಶಿಸಿದ ಅವರಿಗೆ 1969ರಲ್ಲಿ ತೆರೆಕಂಡ 'ಗುಂಡ' ಸಿನಿಮಾ ವೃತ್ತಿಬದುಕಿಗೆ ಹೊಸದಿಕ್ಕು ನೀಡಿತು. 'ಲಾಲ್ ಪತ್ಥರ್' ಚಿತ್ರಕ್ಕೆ ಅವರು ರಚಿಸಿದ 'ಗೀತ್ ಗಾತಾ ಹೂಂ ಮೈಂ' ಹಾಡು ಹಿಟ್ ಆಯಿತು. ಇದಕ್ಕೆ ಗಾಯಕ ಕಿಶೋರ್ ಕುಮಾರ್ ಧ್ವನಿಯಾಗಿದ್ದರು.

ಆರೋಪಪಟ್ಟಿ ಕೋರ್ಟ್ ಭಾಷೆಯಲ್ಲಿ ಇರಬೇಕಿಲ್ಲ: 'ಸುಪ್ರೀಂ' ಪ್ರತಿಪಾದನೆ

ನವದೆಹಲಿ (ಪಿಟಿಐ): ನ್ಯಾಯಾಲಯಗಳಲ್ಲಿ ಬಳಸುವ ಭಾಷೆಯಲ್ಲಿಯೇ ತನಿಖಾ ಸಂಸ್ಥೆಯು ಕೋರ್ಟ್‌ಗೆ ಆರೋಪ ಪಟ್ಟಿ ಸಲ್ಲಿಸಬೇಕು ಎಂಬ ಬಗ್ಗೆ ಅಪರಾಧ ಪ್ರಕ್ರಿಯಾ ಸಂಹಿತೆಯಲ್ಲಿ (ಸಿಆರ್‌ಪಿಸಿ) ಯಾವುದೇ ನಿಯಮ ಇಲ್ಲ ಎಂದು ಸುಪ್ರೀಂ ಕೋರ್ಟ್ ಪ್ರತಿಪಾದಿಸಿದೆ.

'ವ್ಯಾಪಂ' ಹಗರಣದ ಇಬ್ಬರು ಆರೋಪಿಗಳು ಸಿಬಿಐ ಸಲ್ಲಿಸಿರುವ ಆರೋಪ ಪಟ್ಟಿಯು ಇಂಗ್ಲಿಷ್‌ನಲ್ಲಿದೆ. ಇದು ನಮಗೆ ಅರ್ಥವಾಗುವುದಿಲ್ಲ. ಹಾಗಾಗಿ, ಹಿಂದಿ ಭಾಷೆಯಲ್ಲಿ ಒದಗಿಸಬೇಕು ಎಂದು ಮಧ್ಯಪ್ರದೇಶದ ಹೈಕೋರ್ಟ್‌ನ ಮೆಟ್ಟಿಲೇರಿದ್ದರು.

ಇದಕ್ಕೆ ಅನುಮತಿ ನೀಡಿದ್ದ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಹಾಗೂ ರಾಜೇಶ್ ಬಿಂದಾಲ್ ಅವರಿದ್ದ ವಿಭಾಗೀಯ ನ್ಯಾಯಪೀಠವು ವಜಾಗೊಳಿಸಿದೆ.

ಈ ಸಂಬಂಧ ವಿಚಾರಣಾ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿರುವ ನ್ಯಾಯಪೀಠವು, ಕೋರ್ಟ್‌ನಲ್ಲಿ ಬಳಸುವ ಭಾಷೆ ಬಗ್ಗೆ ಸಿಆರ್‌ಪಿಸಿ ಸೆಕ್ಷನ್ 272ರಲ್ಲಿ ಹೇಳಲಾಗಿದೆ. ಇದರ ಅನ್ವಯ ರಾಜ್ಯದಲ್ಲಿರುವ ಕೋರ್ಟ್‌ಗಳಲ್ಲಿ ಯಾವ ಭಾಷೆ ಬಳಸಬೇಕು ಎಂಬುದನ್ನು ನಿರ್ಧರಿಸುವ ಹಕ್ಕು ರಾಜ್ಯ ಸರ್ಕಾರಕ್ಕಿದೆ. ಆದರೆ, ಇದು ಹೈಕೋರ್ಟ್‌ಗೆ ಅನ್ವಯಿಸುವುದಿಲ್ಲ. ಜೊತೆಗೆ, ತನಿಖಾ ಸಂಸ್ಥೆ ಅಥವಾ ತನಿಖಾಧಿಕಾರಿಯು ಅಂತಿಮ ವರದಿಯನ್ನು ಇಂತಹದ್ದೇ ಭಾಷೆಯಲ್ಲಿ ನೀಡಬೇಕು ಎಂದು ಸೂಚಿಸುವ ಅಧಿಕಾರವೂ ಇಲ್ಲ ಎಂದು ಸ್ಪಷ್ಟಪಡಿಸಿತು.

'ಸೆಕ್ಷನ್ 173ರಲ್ಲಿ ತನಿಖಾಧಿಕಾರಿಯು ಅಂತಿಮ ವರದಿ/ಆರೋಪ ಪಟ್ಟಿ ಸಲ್ಲಿಸುವ ಬಗ್ಗೆ ವಿವರಿಸಲಾಗಿದೆ. ಆದರೆ, ತನಿಖಾ ಸಂಸ್ಥೆ/ ತನಿಖಾಧಿಕಾರಿಯು ನ್ಯಾಯಾಲಯದಲ್ಲಿ ಬಳಸುವ ಭಾಷೆಯಲ್ಲಿಯೇ ಆರೋಪಪಟ್ಟಿ ಸಲ್ಲಿಸಬೇಕು ಎಂದು ಹೇಳುವುದಿಲ್ಲ. ಒಂದು ವೇಳೆ ವರದಿಯು ನ್ಯಾಯಾಲಯದಲ್ಲಿ ಬಳಸುವ ಭಾಷೆಯಲ್ಲಿ ಇಲ್ಲದಿದ್ದರೂ ಅದರಿಂದ ನ್ಯಾಯಿಕ ಪ್ರಕ್ರಿಯೆಗೆ ಯಾವುದೇ ತೊಂದರೆಯಾಗುವುದಿಲ್ಲ' ಎಂದು ಹೇಳಿತು.

'ತನ್ನ ವಿರುದ್ಧ ಸಲ್ಲಿಕೆಯಾಗಿರುವ ಆರೋಪ ಪಟ್ಟಿ ಬಗ್ಗೆ ತಿಳಿದುಕೊಳ್ಳುವುದು ಆರೋಪಿಯ ಹಕ್ಕಾಗಿದೆ. ಸಂವಿಧಾನದ 21ನೇ ವಿಧಿಯ (ಜೀವನ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು) ಸಾರವೂ ಇದೇ ಆಗಿದೆ. ಆದರೆ, ಆರೋಪ ಪಟ್ಟಿಯ ಭಾಷಾಂತರಕ್ಕೆ ಹಲವು ತಂತ್ರಾಂಶಗಳು ಮತ್ತು ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು ಬಳಸಬಹುದು' ಎಂದು ಹೇಳಿತು.

ಎನ್‌ಐಎ ಹಾಗೂ ಸಿಬಿಐ ಗಂಭೀರ ಅಪರಾಧಗಳ ಬಗ್ಗೆ ತನಿಖೆ ನಡೆಸುತ್ತವೆ. ದೇಶದ ಹಲವೆಡೆ ಇವುಗಳ ಶಾಖೆಗಳಿವೆ. ಹಾಗಾಗಿ, ಇಂತಹ ಸಂಸ್ಥೆಗಳು ಪ್ರಕರಣದ ಅಂತಿಮ ವರದಿಯನ್ನು ಸಂಬಂಧಪಟ್ಟ ಕೋರ್ಟ್‌ನಲ್ಲಿ ಬಳಸುವ ಭಾಷೆಯಲ್ಲಿಯೇ ನೀಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿತು.

2013ರಲ್ಲಿ ಮಧ್ಯಪ್ರದೇಶದ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶ ಮತ್ತು ನೇಮಕಾತಿ ಹಗರಣ ಬಯಲಿಗೆ ಬಂದಿತ್ತು. 2015ರಲ್ಲಿ ಸುಪ್ರೀಂ ಕೋರ್ಟ್‌ನ ಆದೇಶದ ಅನ್ವಯ ಸಿಬಿಐ ತನಿಖೆ ಆರಂಭಿಸಿದೆ. ರಾಜಕಾರಣಿಗಳು, ಹಿರಿಯ ಅಧಿಕಾರಿಗಳು ಸೇರಿದಂತೆ ಉದ್ಯಮಿಗಳು ಇದರಲ್ಲಿ ಭಾಗಿಯಾಗಿರುವ ಆರೋಪ ಇದೆ.

ಕರ್ನಾಟಕ ಸರಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಲಬುರಗಿ
ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿಗಳ ಕಾರ್ಯಾಲಯ ಕಲಬುರಗಿ
ಇ–ಮೇಲ್: dlogulbarga@gmail.com ದೂರವಾಣಿ: 08472–278649

ಸಂಖ್ಯೆ: ಜಿಅಂನಿಕಾ/62/2023–24 ದಿನಾಂಕ : 25–08–2023

:: ಅಲ್ಪಾವಧಿ ಟೆಂಡರ್ ಪ್ರಕಟಣೆ ::

REF NO: DHFWS/2023-24/IND0106 ದಿನಾಂಕ:25.08.2023

1) ಕಾಮಗಾರಿ ವಿವರ : ರಾಷ್ಟ್ರಿಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದಡಿಯಲ್ಲಿ ನಡೆಯುವ ಆಶಾಕಿರಣ ಅಭಿಯಾನ ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರಿಗಾಗಿ ನೀಡುವ ಉಚಿತ ಕನ್ನಡಕಗಳ ಇ–ಟೆಂಡರ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : ರೂ. **20400800/-**, 3) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : **04-09-2023 @ 16.00 Hrs,** 4) ಟೆಂಡರ (ತಾಂತ್ರಿಕ ಬಿಡ್) ತೆರೆಯುವ ದಿನಾಂಕ : **05-09-2023 @ 16:30 Hrs,** 5) ಮಾದರಿ ಸಲ್ಲಿಕೆ ದಿನಾಂಕ : **06-09-2023 @ 11:00 Hrs,** 6) ಟೆಂಡರ (ಅರ್ಥಿಕ ಬಿಡ್) ತೆರೆಯುವ ದಿನಾಂಕ : **07-09-2023 @ 11:30 Hrs (Tentative),** 7) ಹೆಚ್ಚಿನ ವಿವರಗಳಿಗೆ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿಗಳ ಕಾರ್ಯಾಲಯ ಕಲಬುರಗಿ, 8) ಅಂತರಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/– ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿಗಳು ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/217/ಕೆ.ಎಸ್.ಎಂ.ಸಿ.&ಎ/2023–24

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ
(ಆಯುಕ್ತಾಲಯ, (ಉದ್ಯೋಗ ವಿಭಾಗ)
"ಕೌಶಲ್ಯ ಭವನ", ಡೈರಿ ಸರ್ಕಲ್ ಹತ್ತಿರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029. ದೂರವಾಣಿ : 080– 25189112/25189136

ಸಂಖ್ಯೆ: ಕೈತಉ/ಉದ್ಯೋಗ/ಉ–8/ವಿವ–21/2022–23. ದಿನಾಂಕ: 25.08.2023

ಇ–ಟೆಂಡರ್ ಪ್ರಕಟಣೆ

ಇಲಾಖೆಯ ಉದ್ಯೋಗ ವಿಭಾಗದಲ್ಲಿ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ಪಡೆಯುವ ಸಂಬಂಧ ಆಸಕ್ತ ಟೆಂಡರ್‌ದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಅಧಿಸೂಚನೆ ನೀಡಲಾಗಿದ್ದು, ಅರ್ಹ ಬಿಡ್‌ದಾರರು ಟೆಂಡರ್ ಪ್ರಸ್ತಾವನೆಯನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಸದರಿ ಟೆಂಡರ್ ಅಧಿಸೂಚನೆಗಳ ವಿವರಗಳು ಕೆಳಕಂಡಂತೆ ಇರುತ್ತವೆ.

ಟೆಂಡರ್‌ನ ದಸ್ತಾವೇಜು ಇ–ಪೋರ್ಟಲ್‌ನಲ್ಲಿ ಸಿಗುವ ದಿನಾಂಕ: 28.08.2023.

ಪ್ರಿ–ಬಿಡ್ ಸಭೆಯ ದಿನಾಂಕ: 31.08.2023, ಸಮಯ: ಅಪರಾಹ್ನ 12.30 ಗಂಟೆ.

ಕ್ರ. ಸಂ.	ಟೆಂಡರ್ ಅಧಿಸೂಚನೆ ಸಂಖ್ಯೆ	ಒದಗಿಸಬೇಕಾದ ಸಿಬ್ಬಂದಿಗಳ ವಿವರ ಮತ್ತು ಸಂಖ್ಯೆ		ಟೆಂಡರ್ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನ
1	ಕೈತಉ/ಉದ್ಯೋಗ/ಉ–8/ವಿವ–22/2022–23. ದಿನಾಂಕ: 05.08.2023.	1. ಡೆಪ್ಯೂಟಿ ಮ್ಯಾನೇಜರ್ಸ್	04	11.09.2023, 17.30 ಗಂಟೆ
2	ಕೈತಉ/ಉದ್ಯೋಗ/ಉ–8/ವಿವ–21/2022–23. ದಿನಾಂಕ: 05.08.2023.	1. ಜಾಬ್ ಡೆವೆಲಪ್‌ಮೆಂಟ್ ಎಕ್ಸಿಕ್ಯೂಟಿವ್ಸ್	29	26.09.2023, 17.30 ಗಂಟೆ
		2. ಕೌನ್ಸಿಲರ್–ಕಂ–ಟ್ರೈನರ್ಸ್	29	
		3. ಡಾಟಾ ಎಂಟ್ರಿ ಆಪರೇಟರ್ಸ್	29	

ಸೂಚನೆ: ಟೆಂಡರ್‌ನ ವೇಳಾಪಟ್ಟಿ ಹಾಗೂ ಹೆಚ್ಚಿನ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿದೆ.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/1055/ಆಕಾರ್/2023–24

ಪೂರೈಕೆ ಸುಧಾರಣೆ, ಬೆಲೆ ನಿಯಂತ್ರಣಕ್ಕೆ ಕೇಂದ್ರದ ಕ್ರಮ

ಕುಚ್ಚಿಲಕ್ಕಿ ರಫ್ತು: ಶೇ 20 ಸುಂಕ

ನವದೆಹಲಿ (ಪಿಟಿಐ): ಕುಚ್ಚಿಲಕ್ಕಿ ರಫ್ತು ಮೇಲೆ ಕೇಂದ್ರ ಸರ್ಕಾರವು ಶೇ 20ರಷ್ಟು ಸುಂಕ ವಿಧಿಸಿದೆ. ದೇಶಿ ಮಾರುಕಟ್ಟೆಯಲ್ಲಿ ಪೂರೈಕೆ ಸುಧಾರಿಸಲು ಮತ್ತು ಬೆಲೆಯನ್ನು ನಿಯಂತ್ರಿಸುವ ಉದ್ದೇಶದಿಂದ ಈ ಕ್ರಮ ಕೈಗೊಂಡಿದೆ.

ರಫ್ತು ಸುಂಕವು ಶುಕ್ರವಾರದಿಂದ ಅಕ್ಟೋಬರ್ 16ರವರೆಗೆ ಜಾರಿಯಲ್ಲಿ ಇರಲಿದೆ ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಈ ಕ್ರಮದಿಂದಾಗಿ ಬಾಸ್ಮತಿ ಹೊರತುಪಡಿಸಿ ಇತರ ಎಲ್ಲ ಬಗೆಯ ಅಕ್ಕಿ ಮೇಲೆಯೂ ಭಾರತವು ನಿರ್ಬಂಧಗಳನ್ನು ವಿಧಿಸಿದಂತೆ ಆಗಿದೆ. ದೇಶವು ರಫ್ತು ಮಾಡುತ್ತಿರುವ ಅಕ್ಕಿಯಲ್ಲಿ ಬಾಸ್ಮತಿ ಹೊರತುಪಡಿಸಿ ಇತರ ಬಗೆಯ ಅಕ್ಕಿ ಪಾಲು ಶೇ 25ರಷ್ಟು ಇದೆ.

ಬಾಸ್ಮತಿ ಹೊರತುಪಡಿಸಿ ಇತರ ಬಗೆಯ ಅಕ್ಕಿ ರಫ್ತನ್ನು ಕೇಂದ್ರ ಸರ್ಕಾರವು ಜುಲೈ 21ರಿಂದ ಜಾರಿಗೆ ಬರುವಂತೆ ನಿಷೇಧ ಹೇರಿದೆ.

ಆಹಾರ ವಸ್ತುಗಳ ದರದಲ್ಲಿ ಭಾರಿ ಏರಿಕೆ ಕಂಡಿದ್ದರಿಂದ ಚಿಲ್ಲರೆ ಹಣದುಬ್ಬರ ಜುಲೈನಲ್ಲಿ 15 ತಿಂಗಳ ಗರಿಷ್ಠ ಮಟ್ಟ (ಶೇ 7.44) ತಲುಪಿದೆ. ಜೂನ್‌ನಲ್ಲಿ ಶೇ 4.87ರಷ್ಟು ಇತ್ತು.

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ 15.54 ಲಕ್ಷ ಟನ್‌ನಷ್ಟು ಬಾಸ್ಮತಿ ಹೊರತುಪಡಿಸಿ ಇತರ ಬಗೆಯ ಅಕ್ಕಿ ರಫ್ತು ಮಾಡಲಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ 11.55 ಲಕ್ಷ ಟನ್‌ನಷ್ಟು ರಫ್ತು ಮಾಡಲಾಗಿತ್ತು.

ಭಾರತವು 2022–23ರಲ್ಲಿ ₹39,360 ಕೋಟಿ ಮೌಲ್ಯದ ಬಾಸ್ಮತಿ ಅಕ್ಕಿ ರಫ್ತು ಮಾಡಿದೆ. 2022–23ರಲ್ಲಿ ಬಾಸ್ಮತಿ ಹೊರತುಪಡಿಸಿ ಇತರ ಬಗೆಯ ಅಕ್ಕಿ ರಫ್ತು ಮೌಲ್ಯವು ₹54,366 ಕೋಟಿ ಆಗಿತ್ತು. ಕೃಷಿ ಸಚಿವಾಲಯದ ಮಾಹಿತಿಯ ಪ್ರಕಾರ, ಅಕ್ಕಿ ಉತ್ಪಾದನೆಯು 2021–22ರ ಬೆಳೆ ವರ್ಷದಲ್ಲಿ 12.94 ಕೋಟಿ ಟನ್‌ನಷ್ಟು ಇತ್ತು. ಇದು 2022–23ರ ಬೆಳೆ ವರ್ಷಕ್ಕೆ 13.55 ಕೋಟಿ ಟನ್‌ಗೆ ಏರಿಕೆ ಆಗಿರುವ ಅಂದಾಜು ಮಾಡಲಾಗಿದೆ.

ಮುಖ್ಯಾಂಶಗಳು

- ಸುಂಕವು ಅಕ್ಟೋಬರ್ 16ರವರೆಗೆ ಜಾರಿಯಲ್ಲಿ ಇರಲಿದೆ
- ರಫ್ತಿನಲ್ಲಿ ಬಾಸ್ಮತಿ ಹೊರತುಪಡಿಸಿ ಇತರ ಅಕ್ಕಿಯ ಪಾಲು ಶೇ 25ರಷ್ಟು

ತಿಪಟೂರು ಕೊಬ್ಬರಿ (ಕ್ವಿಂಟಲ್‌ಗೆ)

ಕನಿಷ್ಠ	₹8500
ಗರಿಷ್ಠ	₹9100
ಮಾದರಿ	₹9100

ಚಿನ್ನ, ಬೆಳ್ಳಿ ಧಾರಣೆ — ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹60,460
ಒಡವೆ ಚಿನ್ನ 1ಗ್ರಾಂ	₹5,593
ಬೆಳ್ಳಿ ಕೆ.ಜಿಗೆ	₹75,600

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹460

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹142.50
ಆರ್‌ಎಸ್‌ಎಸ್-5	₹135
ಗುಡ್ ಲಾಟ್	₹121

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1810(1810)
ಸೋಯಾ (ರಿಫೈನ್ಡ್)	₹930(930)
ಸೂರ್ಯಕಾಂತಿ (ರಿಫೈನ್ಡ್)	₹950(945)
ಪಾಮೋಲಿನ್	₹852(850)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹250-575
ದ್ವಿತಳಿ (ಬಿ.ವಿ)	₹335-669

‘ಆದ್ಯತಾ ಸಾಲ ವ್ಯಾಪ್ತಿಗೆ ಇ.ವಿ: ಪರಿಶೀಲನೆ’

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳನ್ನು (ಇ.ವಿ.) ಆದ್ಯತಾ ವಲಯದ ಸಾಲ ಸೌಲಭ್ಯದ ವ್ಯಾಪ್ತಿಗೆ ತರುವ ಪ್ರಸ್ತಾವವನ್ನು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಇ.ವಿ.ಯನ್ನು ಆದ್ಯತಾ ವಲಯಕ್ಕೆ ಸೇರಿಸುವಂತೆ ಬೇಡಿಕೆ ಬಂದಿದೆ. ಇದಕ್ಕಾಗಿ ಬ್ಯಾಂಕ್‌ಗಳಿಗೆ ಆದ್ಯತಾ ವಲಯದ ಸಾಲದ ಅಗತ್ಯವನ್ನು ಮರುಹೊಂದಿಸುವ ಕುರಿತು ಗಮನ ಹರಿಸಲಾಗುವುದು. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಜೊತೆ ಈ ಕುರಿತು ಚರ್ಚಿಸಲಾಗುವುದು ಎಂದು ಹೇಳಿದ್ದಾರೆ.

ಆರ್‌ಬಿಐ ಮಾರ್ಗಸೂಚಿಯ ಪ್ರಕಾರ, ಬ್ಯಾಂಕ್‌ಗಳು ತಮ್ಮ ಒಟ್ಟು ಸಾಲದಲ್ಲಿ ಶೇ 40ರಷ್ಟನ್ನು ಆದ್ಯತಾ ವಲಯಕ್ಕೆ ನೀಡಬೇಕಿದೆ. ಸದ್ಯ, ಕೃಷಿ, ಎಂಎಸ್‌ಎಂಇ, ರಫ್ತು ಸಾಲ, ಶಿಕ್ಷಣ, ಗೃಹ, ಸಾಮಾಜಿಕ ಮೂಲಸೌಕರ್ಯ ಮತ್ತು ನವೀಕರಿಸಬಲ್ಲ ಇಂಧನಕ್ಕೆ ಆದ್ಯತಾ ವಲಯದ ಸಾಲ ಸೌಲಭ್ಯ ನೀಡಲಾಗುತ್ತಿದೆ. ಇ.ವಿ.ಯನ್ನು ಈ ವ್ಯಾಪ್ತಿಗೆ ತರುವುದರಿಂದ ಹೂಡಿಕೆದಾರರ ವಿಶ್ವಾಸ ಹೆಚ್ಚಾಗಲಿದೆ ಎಂದು ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ — ಸಕಲೇಶಪುರ

ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000

ಕಾಳುಮೆಣಸು 640

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13250	13350	13385	151.75ಸೆಂಟ್ಸ್
ಎಸಿ	7000	6700	6700	
ಆರ್‌ಪಿ	10000	10000	10100	ಲಂಡನ್
ಆರ್‌ಸಿ	5830	234	5925	2664ಡಾಲರ್ಸ್

ಐ.ಟಿ: ಸುಧಾರಿತ ಜಾಲತಾಣ ಬಿಡುಗಡೆ

ನವದೆಹಲಿ (ಪಿಟಿಐ): ಬಳಕೆದಾರ ಸ್ನೇಹಿ ಮತ್ತು ಹೊಸ ವೈಶಿಷ್ಟ್ಯಗಳನ್ನು ಒಳಗೊಂಡಿರುವ ಸುಧಾರಿತ ಆದಾಯ ತೆರಿಗೆ ಜಾಲತಾಣವನ್ನು ಶನಿವಾರ ಬಿಡುಗಡೆ ಮಾಡಲಾಗಿದೆ.

ಉದಯಪುರದಲ್ಲಿ ಆದಾಯ ತೆರಿಗೆ ನಿರ್ದೇಶನಾಲಯವು ಆಯೋಜಿಸಿದ್ದ ಚಿಂತನ ಶಿಬಿರದಲ್ಲಿ ನೇರ ತೆರಿಗೆಗಳ ಕೇಂದ್ರೀಯ ಮಂಡಳಿಯ (ಸಿಬಿಡಿಟಿ) ಅಧ್ಯಕ್ಷ ನಿತಿನ್ ಗುಪ್ತಾ ಅವರು ಜಾಲತಾಣಕ್ಕೆ ಚಾಲನೆ ನೀಡಿದರು.

ತೆರಿಗೆಪಾವತಿದಾರಿಗೆ ಜಾಲತಾಣದ ಬಳಕೆಯನ್ನು ಇನ್ನಷ್ಟು ಸುಲಭಗೊಳಿಸಲು ಮತ್ತು ಹೊಸ ತಂತ್ರಜ್ಞಾನದೊಟ್ಟಿಗೆ ನಡೆಯಲು ಬಳಕೆದಾರ ಸ್ನೇಹಿ ಮತ್ತು ಹೊಸ ವೈಶಿಷ್ಟ್ಯಗಳಿರುವ ‘www.incometaxindia.gov.in’ ಜಾಲತಾಣ ಬಿಡುಗಡೆ ಮಾಡಲಾಗಿದೆ ಎಂದು ಸಿಬಿಡಿಟಿ ಪ್ರಕಟಣೆ ತಿಳಿಸಿದೆ.

ಮೊಬೈಲ್‌ನಲ್ಲಿಯೂ ಸುಲಭವಾಗಿ ಬಳಸಲು ಆಗುವಂತೆ ಜಾಲತಾಣವನ್ನು ಮರುವಿನ್ಯಾಸಗೊಳಿಸಲಾಗಿದೆ. ವಿವಿಧ ಕಾಯ್ದೆಗಳು, ಸೆಕ್ಷನ್‌ಗಳು, ನಿಯಮಗಳು ಮತ್ತು ತೆರಿಗೆ ಒಪ್ಪಂದಗಳನ್ನು ಹೋಲಿಸಿ ನೋಡಲು ಅನುಕೂಲ ಮಾಡಿಕೊಡಲಿದೆ. ವಿವಿಧ ರಿಟರ್ನ್‌ಗಳನ್ನು ಸಲ್ಲಿಸಲು ಇರುವ ಗಡುವಿನ ಬಗ್ಗೆಯೂ ಜಾಲತಾಣವು ಎಚ್ಚರಿಸಲಿದೆ ಎಂದು ತಿಳಿಸಿದೆ.

ಹೆಚ್ಚುವರಿ ವೈಶಿಷ್ಟ್ಯಗಳ ವರ್ಚುವಲ್ ಟೂರ್ ಮೂಲಕ ಬಳಕೆದಾರರಿಗೆ ಮಾಹಿತಿಗಳನ್ನು ನೀಡುವ ವ್ಯವಸ್ಥೆಯನ್ನೂ ಜಾಲತಾಣದಲ್ಲಿ ಮಾಡಲಾಗಿದೆ ಎಂದು ಸಿಬಿಡಿಟಿ ಹೇಳಿದೆ.

ಜಿಆರ್‌ಟಿ: ಇಂಡಸ್ಟ್ರಿ ಲೆಜೆಂಡ್ ಪ್ರಶಸ್ತಿ

ಬೆಂಗಳೂರು: ಜಿಆರ್‌ಟಿ ಜುವೆಲರ್ಸ್ ಕಂಪನಿಯು ಹರಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನ ಮಂಡಳಿಯ (ಜಿಜೆಇಪಿಸಿ) ‘ಇಂಡಸ್ಟ್ರಿ ಲೆಜೆಂಡ್’ ಪ್ರಶಸ್ತಿಗೆ ಭಾಜನವಾಗಿದೆ. ಕಂಪನಿಯು ಚಿನ್ನಾಭರಣ ಉದ್ಯಮಕ್ಕೆ ನೀಡಿರುವ ಕೊಡುಗೆ ಪರಿಗಣಿಸಿ ಪ್ರಶಸ್ತಿ ನೀಡಲಾಗಿದೆ.

ನಮ್ಮ ತಂಡದ ಉತ್ಸಾಹ ಮತ್ತು ಸಮರ್ಪಣಾ ಭಾವದ ಜೊತೆಗೆ ನಮ್ಮ ಗ್ರಾಹಕರು ನೀಡಿದ ಪ್ರೀತಿಗೆ ಇದು ಸಾಕ್ಷಿಯಾಗಿದೆ ಎಂದು ಜಿಆರ್‌ಟಿ ಜುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ‘ಆನಂದ್’ ಅನಂತಪದ್ಮನಾಭನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ — 26–8–2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12500-12600
ದಪ್ಪ ಮಧ್ಯಪ್ರದೇಶ(ಹೊಸ)	13200-13300
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1820(1830)
ಒಂದು ವಾರದ ಡೆಲಿವರಿ	1815(1825)
ಸೋಯಾ ಕಚ್ಚಾ	872(875)
ಪಾಮ್ ವಾರದ ಡೆಲಿವರಿ	848(848)
ಸೂರ್ಯಕಾಂತಿ ಎಣ್ಣೆ ಕಚ್ಚಾ	870(870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	58,400 (58,400)
ಬೆಳ್ಳಿ ಕೆ.ಜಿ	73,650 (73,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹಣದುಬ್ಬರವು ಗರಿಷ್ಠ ಮಟ್ಟದಲ್ಲಿಯೇ ಇರುವ ಸಾಧ್ಯತೆ: ವಿಜಯಕುಮಾರ್

ಮಳೆ ಕೊರತೆ: ಎಫ್‌ಪಿಐಗೆ ಅಡ್ಡಿ?

• ವಿಶ್ವನಾಥ ಎಸ್.

ಬೆಂಗಳೂರು: ಆಗಸ್ಟ್ ತಿಂಗಳಿನಲ್ಲಿ ಮುಂಗಾರು ದುರ್ಬಲ ಆಗಿರುವುದು ಹಾಗೂ ಎಲ್ಲೆಡೆಯೂ ಸಮನಾಗಿ ಮಳೆಯಾಗದೇ ಇರುವುದರಿಂದಾಗಿ ಹಣದುಬ್ಬರವು ಗರಿಷ್ಠ ಮಟ್ಟದಲ್ಲಿಯೇ ಇರುವ ಸಾಧ್ಯತೆ ಇದೆ. ಇದು ಷೇರುಪೇಟೆ ಮತ್ತು ವಿದೇಶಿ ಹೂಡಿಕೆಯ (ಎಫ್‌ಪಿಐ) ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಆಹಾರ ವಸ್ತುಗಳ ದರವು ಭಾರಿ ಪ್ರಮಾಣದಲ್ಲಿ ಏರಿಕೆ ಆಗಿರುವುದರಿಂದ ಜುಲೈನಲ್ಲಿ ಚಿಲ್ಲರೆ ಹಣದುಬ್ಬರವು ಶೇ 7.44ಕ್ಕೆ ಏರಿಕೆ ಕಾಣುವ ಮೂಲಕ 15 ತಿಂಗಳ ಗರಿಷ್ಠ ಮಟ್ಟವನ್ನು ತಲುಪಿದೆ. ಇದೀಗ ಆಗಸ್ಟ್‌ನಲ್ಲಿ ಮಳೆ ಸುರಿಯುವ ಪ್ರಮಾಣ ಕಡಿಮೆ ಆಗುವ ಜೊತೆಗೆ ಎಲ್ಲೆಡೆಯೂ ಸಮನಾಗಿ ಮಳೆ ಆಗಿಲ್ಲ. ಹೀಗಾಗಿ ಹಣದುಬ್ಬರವು ಆಗಸ್ಟ್‌ನಲ್ಲಿಯೂ ಗರಿಷ್ಠ ಮಟ್ಟದಲ್ಲಿಯೇ ಇರುವ ಸಾಧ್ಯತೆ ಇದೆ. ಹೀಗಾದಲ್ಲಿ ಮುಂದಿನ ದಿನಗಳಲ್ಲಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳ ಒಳಹರಿವು ಕಡಿಮೆ ಆಗುವ ಸಾಧ್ಯತೆ ಇದೆ ಎಂದು ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆದಾರರು ಆಗಸ್ಟ್ ತಿಂಗಳಿನಲ್ಲಿ ಭಾರತದ ಬಂಡವಾಳ ಮಾರುಕಟ್ಟೆಯಿಂದ ಬಂಡವಾಳ ಹಿಂತೆಗೆತವನ್ನು ಮುಂದುವರಿಸಿದ್ದಾರೆ. ಆಗಸ್ಟ್ 1ರಿಂದ 26ರವರೆಗೆ ನಡೆದಿರುವ ವಹಿವಾಟಿನಲ್ಲಿ ₹15,817 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಅಮೆರಿಕದ ಡಾಲರ್ ಮೌಲ್ಯ ವೃದ್ಧಿಸುತ್ತಿರುವುದು ಹಾಗೂ ಅಮೆರಿಕದ ಬಾಂಡ್ ಗಳಿಕೆಯು ಶೇ 4.25ರ ಮಟ್ಟದಲ್ಲಿಯೇ ಇರುವುದು ಬಂಡವಾಳ ಹೊರಹರಿವಿಗೆ ಪ್ರಮುಖ ಕಾರಣಗಳಾಗಿವೆ ಎಂದು ಅವರು ತಿಳಿಸಿದ್ದಾರೆ.

ವಿದೇಶಿ ಹೂಡಿಕೆದಾರರು ಆರಂಭದಲ್ಲಿ ಬಂಡವಾಳ ಸರಕುಗಳಿಗೆ ಸಂಬಂಧಿಸಿದ ಷೇರುಗಳಲ್ಲಿ ಹೂಡಿಕೆ ಮಾಡಲು ಆರಂಭಿಸಿದರು. ನಂತರ ಹಣಕಾಸಿಗೆ ಸಂಬಂಧಿಸಿದ ಷೇರುಗಳನ್ನು ಮಾರಾಟ ಮಾಡಿದರು. ಡಾಲರ್ ಮೌಲ್ಯ ವೃದ್ಧಿ ಮತ್ತು ಅಮೆರಿಕದ ಬಾಂಡ್ ಗಳಿಕೆ ಹೆಚ್ಚಾಗುತ್ತಿರುವುದರಿಂದ ಅಲ್ಪಾವಧಿಯಲ್ಲಿ ವಿದೇಶಿ ಹೂಡಿಕೆದಾರರು ಬಂಡವಾಳ ಮಾರುಕಟ್ಟೆಯಲ್ಲಿ ಮಾರಾಟವನ್ನು ಮುಂದುವರಿಸುವ ಸಾಧ್ಯತೆ ಹೆಚ್ಚಾಗಿ ಕಂಡುಬರುತ್ತಿದೆ ಎಂದು ವಿಜಯಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಸತತ ಐದನೇ ವಾರವೂ ಷೇರುಪೇಟೆಗಳ ವಹಿವಾಟು ಇಳಿಕೆ ಕಂಡಿದೆ. ಆಗಸ್ಟ್ 25ಕ್ಕೆ ಕೊನೆಗೊಂಡ ವಾರದಲ್ಲಿ ಬಿಎಸ್‌ಇ ಸೆನ್ಸೆಕ್ಸ್ 62 ಅಂಶ ಇಳಿಕೆ ಕಂಡಿದ್ದರೆ ನಿಫ್ಟಿ 44 ಅಂಶ ಇಳಿಕೆ ಆಗಿದೆ.

ಮುಖ್ಯಾಂಶಗಳು

- ಆಗಸ್ಟ್‌ನಲ್ಲಿ ಮುಂದುವರಿದ ವಿದೇಶಿ ಬಂಡವಾಳ ಹಿಂತೆಗೆತ
- ಅಮೆರಿಕದ ಡಾಲರ್ ಮೌಲ್ಯ ವೃದ್ಧಿ, ಬಾಂಡ್ ಗಳಿಕೆ ಪರಿಣಾಮ

ವಿದೇಶಿ ಸಾಂಸ್ಥಿಕ ಹೂಡಿಕೆ ವಿವರ (ಕೋಟಿಗಳಲ್ಲಿ)



ಮಾಸ್ಕೊ: ಡ್ರೋನ್ ದಾಳಿ, ವಿಮಾನ ಸೇವೆ ಸ್ಥಗಿತ

ಕೀವ್ (ಎಪಿ): ರಷ್ಯಾ ರಾಜಧಾನಿ ಮಾಸ್ಕೊ ಮೇಲೆ ಶನಿವಾರ ಮುಂಜಾನೆ ಡ್ರೋನ್ ದಾಳಿ ನಡೆದ ಪರಿಣಾಮ ಪ್ರಮುಖ ಮೂರು ವಿಮಾನ ನಿಲ್ದಾಣಗಳ ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ರಷ್ಯಾ ರಾಜಧಾನಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ಉಕ್ರೇನ್ ನಡೆಸುತ್ತಿರುವ ದಾಳಿಯೇ ಇದಕ್ಕೆ ಕಾರಣ ಎಂದು ಅಧಿಕಾರಿಗಳು ಆರೋಪಿಸಿದ್ದಾರೆ.

‘ಮಾಸ್ಕೊ ನಗರದ 50 ಕಿಲೋಮೀಟರ್ ಪ್ರದೇಶದಲ್ಲಿ ಡ್ರೋನ್ ದಾಳಿ ನಡೆದಿದೆ’ ಎಂದು ಮೇಯರ್ ಸರ್ಗೆ ಸೊಬ್ಯಾನಿನ್ ತಿಳಿಸಿದ್ದಾರೆ. ಪ್ರಾಣಹಾನಿ ಅಥವಾ ಇತರ ಹಾನಿಯ ಬಗ್ಗೆ ತಕ್ಷಣಕ್ಕೆ ಯಾವುದೇ ವರದಿಯಾಗಿಲ್ಲ.

ಪ್ರತಿಭಟನೆ... ಹಾನಿಗೊಳಗಾಗಿರುವ ಫುಕುಶಿಮಾ ಪರಮಾಣು ಸ್ಥಾವರದಿಂದ ವಿಕಿರಣಯುಕ್ತ ನೀರನ್ನು ಪೆಸಿಫಿಕ್ ಮಹಾಸಾಗರಕ್ಕೆ ಬಿಡುಗಡೆ ಮಾಡುವುದನ್ನು ನಿಲ್ಲಿಸುವಂತೆ ಆಗ್ರಹಿಸಿ ದಕ್ಷಿಣ ಕೊರಿಯಾದ ಸಾವಿರಾರು ಜನರು ಸೋಲ್‌ನಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು. ಈ ವಿಷಯದಲ್ಲಿ ದಕ್ಷಿಣ ಕೊರಿಯಾ ತಳೆದಿರುವ ನಿಲುವನ್ನು ಪ್ರತಿಭಟನಕಾರರು ಖಂಡಿಸಿದರು –ಎಪಿ/ಪಿಟಿಐ ಚಿತ್ರ

22 ನಿಮಿಷ ಜೈಲು ಸೇರಿದ್ದ ಡೊನಾಲ್ಡ್ ಟ್ರಂಪ್

ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಪಿಟಿಐ): 2020ರ ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶವನ್ನು ತಿರುಚಲು ಯತ್ನಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶುಕ್ರವಾರ ಜಾರ್ಜಿಯಾದ ಫುಲ್ಟನ್ ಕೌಂಟಿ ಜೈಲಿಗೆ ಶರಣಾದರು. ಬಳಿಕ ಬಾಂಡ್ ಆಧಾರದ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿದೆ.

ಅಮೆರಿಕದ ರಾಜಕೀಯ ಇತಿಹಾಸದಲ್ಲಿಯೇ ಮಾಜಿ ಅಧ್ಯಕ್ಷರೊಬ್ಬರು ಚುನಾವಣಾ ಅಕ್ರಮ ಆರೋಪದ ಮೇಲೆ ಜೈಲು ಸೇರಿದ ಮೊದಲ ನಿದರ್ಶನ ಇದಾಗಿದೆ.

77 ವರ್ಷದ ಟ್ರಂಪ್ ಅವರನ್ನು 22 ನಿಮಿಷಗಳ ಕಾಲ ಜೈಲಿನಲ್ಲಿ ಇಡಲಾಗಿತ್ತು. ಜಾರ್ಜಿಯಾ ರಾಜ್ಯದಲ್ಲಿನ ಫಲಿತಾಂಶವನ್ನು ಬುಡಮೇಲು ಮಾಡಲು ಪಿತೂರಿ ನಡೆಸಿದ ಆರೋಪ ಅವರ ಮೇಲಿದೆ.

ಟ್ರಂಪ್ ಪರ ವಕೀಲರು ನ್ಯಾಯಾಲಯದಲ್ಲಿ ಎರಡು ಲಕ್ಷ ಅಮೆರಿಕನ್ ಡಾಲರ್ ಮೌಲ್ಯದ ಬಾಂಡ್ ಸಲ್ಲಿಸಿದ ಬಳಿಕ ವಿಚಾರಣೆಯನ್ನು ಕಾಯ್ದಿರಿಸಿ ಬಿಡುಗಡೆ ಮಾಡಲಾಗಿದೆ.

ಜೈಲಿನ ದಾಖಲೆಗಾಗಿ ಅಲ್ಲಿನ ಅಧಿಕಾರಿಗಳು ಮಾಜಿ ಅಧ್ಯಕ್ಷರ ಮಗ್ ಶಾಟ್ ಫೋಟೊವನ್ನು (ಭುಜದ ಮೇಲಿನ ಅರ್ಧ ಭಾವಚಿತ್ರ) ತೆಗೆದುಕೊಂಡರು. ಬಳಿಕ ಅವರು ಫೋಟೊವನ್ನು ಬಿಡುಗಡೆಗೊಳಿಸಿದ್ದು, ಇದು ಕೆಲವೇ ಕ್ಷಣಗಳಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಟ್ರಂಪ್ 6.3 ಅಡಿ ಎತ್ತರವಿದ್ದು, 97 ಕೆ.ಜಿ ತೂಕ ಹೊಂದಿದ್ದಾರೆ.

ಹೊಂಬಣ್ಣ ಅಥವಾ ಸ್ಟ್ರಾಬೆರಿ ಬಣ್ಣದ ಕೂದಲು, ನೀಲಿ ಕಣ್ಣುಗಳಿವೆ ಎಂದು ಜೈಲಿನ ಡೈರಿಯಲ್ಲಿ ಅವರ ಸ್ವವಿವರವನ್ನು ನಮೂದಿಸಲಾಗಿದೆ. ಅವರಿಗೆ ಕೈದಿ ಸಂಖ್ಯೆ ಪಿ01135809 ನೀಡಲಾಗಿತ್ತು.

ಟ್ರಂಪ್ ಹೊರತಾಗಿ ಅಮೆರಿಕದ ಈ ಹಿಂದಿನ ಯಾವುದೇ ಅಧ್ಯಕ್ಷರು ಕ್ರಿಮಿನಲ್ ಅಪರಾಧ ಎದುರಿಸಿಲ್ಲ. ಒಂದು ಬಾರಿ ಅಧ್ಯಕ್ಷರಾಗಿ ಅಧಿಕಾರ ಅವಧಿ ಪೂರ್ಣಗೊಳಿಸಿರುವ ಅವರ ಮೇಲೆ ನಾಲ್ಕು ಆರೋಪ ಪಟ್ಟಿಗಳು ಸಲ್ಲಿಕೆಯಾಗಿವೆ.

‘ನಾನು ಯಾವುದೇ ತಪ್ಪು ಎಸಗಿಲ್ಲ. ಅದು ಎಲ್ಲರಿಗೂ ಗೊತ್ತಿದೆ’ ಎಂದು ಜೈಲಿನಿಂದ ಬಿಡುಗಡೆಯಾದ ಬಳಿಕ ಸುದ್ದಿಗಾರರ ಪ್ರಶ್ನೆಗಳಿಗೆ ಅವರು ಪ್ರತಿಕ್ರಿಯಿಸಿದರು.

ಮುಂದಿನ ವರ್ಷ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಗೆ ರಿಪಬ್ಲಿಕನ್ ಪಕ್ಷದಿಂದ ಅವರು ಪ್ರಬಲ ಆಕಾಂಕ್ಷಿಯೂ ಆಗಿದ್ದಾರೆ.

ಅಮೆರಿಕ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ವಿವೇಕ್ ರಾಮಸ್ವಾಮಿ ಇಂಗಿತ

ವಿವೇಕ್ ರಾಮಸ್ವಾಮಿ

ವಾಷಿಂಗ್ಟನ್ /ಲಂಡನ್ (ಪಿಟಿಐ): ಅಮೆರಿಕದ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಹಾಗೂ ಅಧ್ಯಕ್ಷ ಸ್ಥಾನದ ಸ್ಪರ್ಧಿ ಡೊನಾಲ್ಡ್ ಟ್ರಂಪ್ ಜೊತೆಗೆ ಕೈಜೋಡಿಸುವ ಇಂಗಿತವನ್ನು ಭಾರತ ಮೂಲದ ಅಮೆರಿಕದ ಸಂಸದ ವಿವೇಕ್ ರಾಮಸ್ವಾಮಿ ಶನಿವಾರ ವ್ಯಕ್ತಪಡಿಸಿದ್ದಾರೆ.

ಅಧ್ಯಕ್ಷ ಸ್ಥಾನ ಹೊರತುಪಡಿಸಿ ಇತರೆ ಯಾವುದೇ ಜವಾಬ್ದಾರಿ ಕುರಿತು ‘ತಮಗೆ ಆಸಕ್ತಿಯಿಲ್ಲ’ ಎಂದು ಬಯೊಟೆಕ್ ಕ್ಷೇತ್ರದ ಉದ್ಯಮಿ, 38 ವರ್ಷ ವಯಸ್ಸಿನ ವಿವೇಕ್ ರಾಮಸ್ವಾಮಿ ಈ ಹಿಂದೆ ಹೇಳಿದ್ದರು ಎಂಬುದನ್ನು ಈ ಕುರಿತ ಮಾಧ್ಯಮ ವರದಿ ಉಲ್ಲೇಖಿಸಿದೆ.

‘ಅಧ್ಯಕ್ಷನಾಗಿ ರಾಷ್ಟ್ರವನ್ನು ಒಗ್ಗೂಡಿಸಬಹುದು ಎಂದು ನಾನು ಭಾವಿಸಿದ್ದೇನೆ. ಆದರೆ, 77 ವರ್ಷ ವಯಸ್ಸಿನ ಟ್ರಂಪ್ ಅವರೊಂದಿಗೆ ಉಪಾಧ್ಯಕ್ಷನಾಗಿ ಕೈಜೋಡಿಸುವ ಅವಕಾಶವನ್ನು ತಳ್ಳಿಹಾಕುವುದಿಲ್ಲ’ ಎಂದು ಹೇಳಿದ್ದಾರೆ.

ಟ್ರಂಪ್ ನೇತೃತ್ವದಲ್ಲಿ ಉಪಾಧ್ಯಕ್ಷನಾಗುವುದು ನಿಮಗೆ ಸಂತಸ ನೀಡಲಿದೆಯೇ ಎಂಬ ಪ್ರಶ್ನೆಗೆ, ‘ಖಂಡಿತವಾಗಿ. ನನ್ನ ವಯಸ್ಸಿಗೆ ಅದು ಸೂಕ್ತವಾದ ಸ್ಥಾನವೂ ಹೌದು’ ಎಂದು ಅವರು ಹೇಳಿದ್ದಾರೆ. ‘ಈಗ ರಾಷ್ಟ್ರವನ್ನು ಪುನಶ್ಚೇತನಗೊಳಿಸುವ ಪ್ರಶ್ನೆ ಇದೆ. ಇದನ್ನು ನಾನು ಶ್ವೇತಭವನದಿಂದ ನಾಯಕನಾಗಿ, ಅಭಿಯಾನದ ಮುಖ್ಯಸ್ಥನಾಗಿಯಷ್ಟೇ ಕಾರ್ಯಗತಗೊಳಿಸಬಹುದು’ ಎಂದು ಹೇಳಿದ್ದಾರೆ.

‘ವ್ಯಾಗ್ನರ್’ಗೆ ಆವರಿಸಿದ ಅನಿಶ್ಚಿತತೆ

ಮಾಸ್ಕೊ (ಎ.ಪಿ): ರಷ್ಯಾದ ಖಾಸಗಿ ಸೇನಾ ಪಡೆ ‘ವ್ಯಾಗ್ನರ್’ನ ಮುಖಂಡ ಯೆವ್ಗೆನಿ ಪ್ರಿಗೋಷಿನ್ ಅಕಾಲಿಕ ಸಾವಿನಿಂದಾಗಿ ಈ ಗುಂಪಿನ ಸದಸ್ಯರಲ್ಲಿ ಅನಿಶ್ಚಿತತೆ ಮನೆಮಾಡಿದ್ದು ‘ವ್ಯಾಗ್ನರ್’ನ ಭವಿಷ್ಯ ಕುರಿತಂತೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಕಳೆದ ಬುಧವಾರ ಸಂಭವಿಸಿದ್ದ ಖಾಸಗಿ ವಿಮಾನ ಅಪಘಾತದಲ್ಲಿ ಪ್ರಿಗೋಷಿನ್ ಸೇರಿ 10 ಮಂದಿ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಪ್ರಿಗೋಷಿನ್ ಕಡೆಯದಾಗಿ ಕಳೆದ ವಾರದ ಆರಂಭದಲ್ಲಿ ಅಪರಿಚಿತ ಸ್ಥಳದಿಂದ ವಿಡಿಯೊ ಸಂದೇಶ ನೀಡಿದ್ದು, ‘ಎಲ್ಲ ದೇಶಗಳು ಹಾಗೂ ಆಫ್ರಿಕಾಗಿಂತ ರಷ್ಯಾವನ್ನು ಹೆಚ್ಚು ಶಕ್ತಿಯುತಗೊಳಿಸುವುದು ನಮ್ಮ ಗುರಿ’ ಎಂದು ಹೇಳಿದ್ದರು.

‘ಪ್ರಿಗೋಷಿನ್ ಮೃತಪಟ್ಟಿದ್ದಾರೆ. ಅವರ ಏಳಿಗೆಯನ್ನು ಸಹಿಸದವರ ಪಾತ್ರ ಸಾವಿನ ಹಿಂದಿದೆ’ ಎಂಬ ವದಂತಿಯು ದಟ್ಟವಾಗಿದೆ. ಆದರೆ, ವಿಮಾನ ಅಪಘಾತದ ಹಿಂದೆ ತನ್ನ ಪಾತ್ರವಿದೆ ಎಂಬ ವದಂತಿಗಳನ್ನು ರಷ್ಯಾ ಸರ್ಕಾರ ಈಗಾಗಲೇ ನಿರಾಕರಿಸಿದೆ.

ಅಲ್ ಕೈದಾ, ಇಸ್ಲಾಮಿಕ್ ಸ್ಟೇಟ್ ಸಂಘಟನೆಗಳ ವಿರುದ್ಧ ಆಫ್ರಿಕಾದ ಕೆಲ ರಾಷ್ಟ್ರಗಳಲ್ಲಿ ವ್ಯಾಗ್ನರ್ ಗುಂಪು ಭದ್ರತಾ ಸೇವೆಯನ್ನು ನೀಡುತ್ತಿದೆ. ರಷ್ಯಾದ ಹೊಸ ನಾಯಕತ್ವದಲ್ಲಿ ‘ವ್ಯಾಗ್ನರ್’ ಅಸ್ತಿತ್ವ ಮುಂದುವರಿಯಬಹುದು’ ಎಂದು ಅಧಿಕಾರಿಗಳು ಆಶಿಸಿದ್ದಾರೆ.

ಅಂಕೋಲಾ: ಕಂಬಳಿ ಜೋಲಿಯಲ್ಲಿ ಕರೆದೊಯ್ದ ಕೇಂದಗಿ ಜನ

ಗಾಯಾಳು ಹೊತ್ತು 10 ಕಿ.ಮೀ ನಡೆದ ಗ್ರಾಮಸ್ಥರು

ಪ್ರಜಾವಾಣಿ ವಾರ್ತೆ

ಅಂಕೋಲಾ (ಉತ್ತರ ಕನ್ನಡ ಜಿಲ್ಲೆ): ತೋಟದಲ್ಲಿ ಕೆಲಸ ಮಾಡುವಾಗ ಬಿದ್ದು ಗಾಯಗೊಂಡ ವ್ಯಕ್ತಿಯೊಬ್ಬರನ್ನು ತಾಲ್ಲೂಕಿನ ಕೇಂದಗಿಯಲ್ಲಿ ಗ್ರಾಮಸ್ಥರು ಶುಕ್ರವಾರ ರಾತ್ರಿ ಕಂಬಳಿಯ ಜೋಲಿಯಲ್ಲಿ ಹೊತ್ತುಕೊಂಡು 10 ಕಿ.ಮೀ ದೂರವರೆಗೆ ನಡೆದು ಆಸ್ಪತ್ರೆಗೆ ಸೇರಿಸಿದ್ದಾರೆ.

‘ಗಾಯಗೊಂಡಿದ್ದ ಉಮೇಶ ಗೌಡ ಎಂಬವರನ್ನು ಕೇಂದಗಿಯಿಂದ ನಾಯಿಗದ್ದೆ ಕ್ರಾಸ್‌ವರೆಗೆ 10 ಕಿ.ಮೀ. ಹೊತ್ತು ತಂದೆವು. ಅಲ್ಲಿಂದ ವಾಹನದ ಮೂಲಕ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಸೇರಿಸಿದೆವು. ಹಟ್ಟಿಕೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೇಂದಗಿ ಗ್ರಾಮದಲ್ಲಿ 24 ಮನೆಗಳಿದ್ದು, ನೂರಕ್ಕೂ ಹೆಚ್ಚು ಜನರಿದ್ದಾರೆ. ಆದರೂ ಗ್ರಾಮಕ್ಕೆ ರಸ್ತೆ ಇಲ್ಲ. ಹೀಗಾಗಿ ಗ್ರಾಮಕ್ಕೆ ವಾಹನಗಳು ಸಂಚರಿಸುವುದಿಲ್ಲ’ ಎಂದು ಗ್ರಾಮಸ್ಥರು ತಿಳಿಸಿದರು.

‘ಕಡಿದಾದ ರಸ್ತೆಯಲ್ಲೇ ಸಾಗಬೇಕು. ದ್ವಿಚಕ್ರ ವಾಹನದಲ್ಲಿ ಹೋದರೂ ಮಳೆಗಾಲದಲ್ಲಿ ತುಂಬಿ ಹರಿಯುವ ಹಳ್ಳದ ನೀರನ್ನು ದಾಟುವುದು ಕಷ್ಟ. ಉಮೇಶಗೌಡ ಅವರಿಗೆ ನಾಲ್ಕು ದಿನಗಳ ಹಿಂದೆಯೇ ಗಾಯವಾಗಿತ್ತು. ಆದರೆ, ಆಸ್ಪತ್ರೆಗೆ ಹೋಗಲು ಕಷ್ಟ ಎಂಬ ಕಾರಣಕ್ಕೆ ಮನೆಯಲ್ಲೇ ಸ್ವಯಂ ಚಿಕಿತ್ಸೆ ಪಡೆದಿದ್ದರು. ಆದರೆ, ಗಾಯ ಉಲ್ಬಣಿಸಿದ ಕಾರಣ ಆಸ್ಪತ್ರೆಗೆ ಕರೆದೊಯ್ದೆವು. ಸದ್ಯಕ್ಕೆ ಅವರು ಜಿಲ್ಲಾ ಆಸ್ಪತ್ರೆಯಲ್ಲಿದ್ದಾರೆ’ ಎಂದು ಗ್ರಾಮಸ್ಥ ಸೋಮು ಗೌಡ ಹೇಳಿದರು.

‘ಮೀಸಲು ಅರಣ್ಯ ಪ್ರದೇಶದ ಮೂಲಕ ಹಾದುಹೋಗುವ ಕಾರಣಕ್ಕೆ ಗ್ರಾಮಕ್ಕೆ ರಸ್ತೆ ಸಂಪರ್ಕ ಒದಗಿಸಲು ಕಷ್ಟವಾಗಿದೆ. ಗ್ರಾಮಕ್ಕೆ ರಸ್ತೆ ನಿರ್ಮಿಸಲು ಗ್ರಾಮ ಪಂಚಾಯಿತಿಗೆ ಅಗತ್ಯದಷ್ಟು ಅನುದಾನ ಇಲ್ಲ’ ಎಂದು ಹಟ್ಟಿಕೇರಿ ಗ್ರಾಮ ಪಂಚಾಯಿತಿ ಪಿಡಿಒ ನೀಲಾ ಆಗೇರ ತಿಳಿಸಿದರು.



ಅಂಕೋಲಾ ತಾಲ್ಲೂಕಿನ ಕೇಂದಗಿ ಗ್ರಾಮಸ್ಥರು ಗಾಯಾಳುವನ್ನು ಕಂಬಳಿಯ ಜೋಲಿಯಲ್ಲಿ ಕರೆದೊಯ್ಯುತ್ತಿರುವುದು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಂ.ಎಂ. ನಾಯ್ಕ
ಕರ್ನಾಟಕ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಹಾಗೂ ಮಾಜಿ KPSC ಸದಸ್ಯರು
ಜನನ: 5.6.1932 ಮರಣ: 27.8.2022
ನಿಮ್ಮ ನೆನಪು ಸದಾ ಜೀವಂತ
ದುಃಖತಪ್ತ: ಕುಟುಂಬದವರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
Domestic Helpers / Housekeeping
URGENTLY REQUIRE Kannada Brahmin Cook for Senior Living Community Interested candidates call 9205851568
General
ONLINE ನಲ್ಲಿ Govt. Applications ಹಾಕಲು ಗೊತ್ತಿರುವವರು Work from Home Job ಗಾಗಿ ಸಂಪರ್ಕಿಸಿ: 9019976891
Part-Time Jobs
ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.
Teachers/ Professors
ಕನ್ನಡ ಮಾಧ್ಯಮ ಪ್ರೌಢಶಾಲೆಗೆ B.A BEd, BSc BEd ಶಿಕ್ಷಕರು ತುರ್ತಾಗಿ ಬೇಕಾಗಿದ್ದಾರೆ. ಸಂಪರ್ಕಿಸಿ: 9845559530
Walk-in
ಬೇಕಾಗಿದ್ದಾರೆ : ಅಟೆಂಡರ್, ಸೆಕ್ಯೂರಿಟಿ ಗಾರ್ಡ್‌ಗಳು. ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು.
Multiple Vacancy
ಬೆಂಗಳೂರಿನಲ್ಲಿ ಹೊಸ ಹೋಟೆಲ್‌ಗೆ ಅಗತ್ಯವಿರುವ ಅಡುಗೆಯವರು, ಬಿರಿಯಾನಿ ಮಾಸ್ಟರ್, ಸಹಾಯಕರು, ಸರ್ವರ್‌ಗಳು ಮತ್ತು ವ್ಯವಸ್ಥಾಪಕರು. ph: 9972491675
ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988
ಭವಿಷ್ಯ
Astrology
ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್100% ಗ್ಯಾರಂಟಿ ಪರಿಹಾರ. ಪಂಡಿತ್. ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ,ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರ ಧರ್ಮಸ್ಥಳ:9880788899
★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ.9880811806
ವೈವಾಹಿಕ
Brides Wanted
Hindu
ವಧು ಬೇಕಾಗಿದೆ
ವಯಸ್ಸು 31, BAMS ಆಯುರ್ವೇದಿಕ್ ಡಾಕ್ಟರ್. ಕೀಲು, ಮೂಳೆ ಮತ್ತು ಲೈಂಗಿಕ ತಜ್ಞರು ಹಾಗೂ ಸಮಾಜ ಸೇವಕರು, ಬೆಂಗಳೂರು ಸಂಬಳ: ರೂ.80,000/– ನಿಮ್ಮ ಜಾತಿ ಯಾವುದೇ ಇರಲಿ, SSLC ಮೇಲ್ಪಟ್ಟ ಯಾರಾದರೂ ಒಳ್ಳೆಯ ಹುಡುಗಿ ಇದ್ರೆ ನೇರವಾಗಿ ಸಂಪರ್ಕಿಸಿ. 9535388252 (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
Telugu
BRAHMIN(TELUGU) 44(2ND marriage) 5'10"/Good Looking/MBA , B.E, SWE, 4Lakhs. PM/Hyd Rich Family Seeks Suitable 1st Marriage Bride Call; 8367619529 / 9515349877.
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು
ಇತರೆ
For Sale
ಕಚೇರಿ ಸ್ವತ್ತುಗಳ ಮರು ಮಾರಾಟ
ಬ್ಯಾಂಕ್‌ಗಳಿಗೆ ಮತ್ತು ಎನ್‌ಬಿಎಫ್‌ಸಿ ಮುಂತಾದವುಗಳಿಗೆ ಸೂಕ್ತವಾದ ಕಚೇರಿ ಸ್ವತ್ತುಗಳಾದ ವರ್ಕ್ ಸ್ಟೇಷನ್ಸ್, ಕ್ಯಾಷ್ ಕೌಂಟರ್, ಕ್ಯಾಬಿನ್ಸ್, ಕ್ಯುಬಿಕಲ್ಸ್, ಫರ್ನಿಚರ್ಸ್, ಗೋದ್ರೆಜ್ ಸ್ಟ್ರಾಂಗ್ ರೂಮ್ ಗ್ರಿಲ್ ವಿತ್ ಡೋರ್, ಬಳಸದೆ ಇರುವ ಗೋದ್ರೆಜ್ ಸೇಫ್ ಲಾಕರ್ ಇತ್ಯಾದಿ ಪೀಠೋಪಕರಣಗಳು ‘ಹೇಗಿದೆಯೊ ಎಲ್ಲಿದೆಯೊ’ ಆಧಾರದಲ್ಲಿ ತಕ್ಷಣವೇ ಮಾರಾಟಕ್ಕಾಗಿ 3 ಕಚೇರಿ ಸ್ಥಳಗಳಲ್ಲಿ ಲಭ್ಯವಿರುತ್ತವೆ.
ಸ್ಥಳಕ್ಕಾಗಿ ಸಂಪರ್ಕಿಸಿ: ಬೆಂಗಳೂರು: 9481481919 / 9036292226 ಮೈಸೂರು: 8618222424 / 9341236021 ಪುತ್ತೂರು: 8970294980
ಪ್ರವಾಸ
Travel
22.11.2023 ವಿಜಯವಾಡ, ಭದ್ರಾಚಲಂ,ವಾಸವಿಪೆನುಗೊಂಡ, ಕಲ್ಕತ್ತಾ,ಗಂಗಾಸಾಗರ್, ಪೂರಿಜಗನ್ನಾಥ್,ಕೊನಾರ್ಕ್, ಭುವನೇಶ್ವರ್.11.12.2023, 16ದಿನಗಳ ಅಷ್ಠಜ್ಯೋತಿರ್ಲಿಂಗಗಳು, ಮಹಾರಾಷ್ಟ್ರ,ಮಧ್ಯಪ್ರದೇಶ, ಗುಜರಾತ್. ಸಂಪರ್ಕಿಸಿ:ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್,ಬೆಂಗಳೂರು-70. 9342287551, 8050629305
ಅನಿತಾ ಟ್ರಾವಲ್ಸ್ ಶೇಷಾದ್ರಿಪುರ ಬೆಂಗಳೂರು-20 9740679845 9448602641 ವಿಮಾನ/ A/C ಬಸ್ಸಿನಲ್ಲಿ ಮಧ್ಯಪ್ರದೇಶ, ಗುಜರಾತ್ ಉಜ್ಜಯಿನಿ ಮಹಾಕಾಳೇಶ್ವರ ಸರ್ದಾರ್ ವಲ್ಲಭ ಬಾಯಿ ಪಟೇಲರ ಪ್ರತಿಮೆ ದ್ವಾರಕಾ,ಸೋಮನಾಥ್ ಇತ್ಯಾದಿ 26.10.2023 22.11.2023 ರಿಂದ 11 ದಿನಗಳು. ಕಾಶಿಯಾತ್ರೆ, ದೆಹಲಿ,ಆಗ್ರಾ,ಮಥುರ ಕಾಶಿ,ಗಯಾ ನೈಮಿಶಾರಣ್ಯ ಇತ್ಯಾದಿ 08.10.2023 24.10.2023 ರಿಂದ 10/8 ದಿನಗಳು. ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ ಪ್ರವಾಸಗಳಿಗಾಗಿ ವಿಚಾರಿಸಿ.
ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಕೆಲಸ ಹುಡುಕಾಟ
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
JOB
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9900428036
+91 9731810277
080 - 45557163/164

ಮಹಾರಾಜ ಟ್ರೋಫಿ ಕ್ರಿಕೆಟ್: ಮನ್ವಂತ್‌ಗೆ ಐದು ವಿಕೆಟ್

ಸೆಮಿಗೆ ಹುಬ್ಬಳ್ಳಿ, ಮೈಸೂರು

ಪ್ರಜಾವಾಣಿ ವಾರ್ತೆ

ಅರ್ಧಶತಕ ಗಳಿಸಿದ ಮನೀಶ್ ಪಾಂಡೆ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ

ಬೆಂಗಳೂರು: ಹುಬ್ಬಳ್ಳಿ ಟೈಗರ್ಸ್ ಮತ್ತು ಮೈಸೂರು ವಾರಿಯರ್ಸ್ ತಂಡಗಳು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದವು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಮನ್ವಂತ್ ಕುಮಾರ್ (33ಕ್ಕೆ5) ಅವರ ಉತ್ತಮ ಬೌಲಿಂಗ್‌ನಿಂದ ಹುಬ್ಬಳ್ಳಿ ತಂಡವು 5 ವಿಕೆಟ್‌ಗಳಿಂದ ಮಂಗಳೂರು ಡ್ರ್ಯಾಗನ್ಸ್ ವಿರುದ್ಧ ಗೆದ್ದಿತು. ಒಟ್ಟು 16 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದು ನಾಲ್ಕರ ಘಟ್ಟಕ್ಕೆ ಸಾಗಿತು.

ಇನ್ನೊಂದು ಪಂದ್ಯದಲ್ಲಿ ಮೈಸೂರು ತಂಡವು 8 ವಿಕೆಟ್‌ಗಳಿಂದ ಜಯಿಸಿತು. 12 ಅಂಕಗಳೊಂದಿಗೆ ಸೆಮಿಫೈನಲ್ ಪ್ರವೇಶಿಸಿತು.

ಸಂಕ್ಷಿಪ್ತ ಸ್ಕೋರು: ಮಂಗಳೂರು ಡ್ರ್ಯಾಗನ್ಸ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 167 (ಬಿ.ಆರ್. ಶರತ್ 40, ರೋಹನ್ ಪಾಟೀಲ 34, ಸಿದ್ಧಾರ್ಥ್ 53, ಎಲ್. ಮನ್ವಂತಕುಮಾರ್ 33ಕ್ಕೆ5, ಲವಿಶ್ ಕೌಶಲ್ 26ಕ್ಕೆ2) ಹುಬ್ಬಳ್ಳಿ ಟೈಗರ್ಸ್: 18.2 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 170 (ಮೊಹಮ್ಮದ್ ತಾಹ 51, ಮನೀಷ್ ಪಾಂಡೆ 56, ಬಿ. ಮೋಹಿತ್ ಔಟಾಗದೆ 20, ಆನಂದ ದೊಡ್ಡಮನಿ 34ಕ್ಕೆ3) ಫಲಿತಾಂಶ: ಹುಬ್ಬಳ್ಳಿ ಟೈಗರ್ಸ್‌ಗೆ 5 ವಿಕೆಟ್‌ಗಳ ಜಯ.

ಗುಲ್ಬರ್ಗ ಮಿಸ್ಟಿಕ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 153 (ಎಲ್.ಆರ್. ಚೇತನ್ 34, ಮೈಕೆಲ್ ನರೋನಾ 25, ಶ್ರೀನಿವಾಸ್ ಶರತ್ 26, ಜೆ. ಸುಚಿತ್ 28ಕ್ಕೆ3, ಕುಶಾಲ್ ವಾಧ್ವಾನಿ 17ಕ್ಕೆ2) ಮೈಸೂರು ವಾರಿಯರ್ಸ್: 18 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ154 (ಎಸ್.ಯು. ಕೃತಿಕ್ 20, ಆರ್. ಸಮರ್ಥ್ ಔಟಾಗದೆ 62, ಕರುಣ್ ನಾಯರ್ 23, ಕೆ.ಎಸ್. ಲಂಕೇಶ್ ಔಟಾಗದೆ 39, ಹಾರ್ದಿಕ್ ರಾಜ್ 30ಕ್ಕೆ2) ಫಲಿತಾಂಶ: ಮೈಸೂರು ವಾರಿಯರ್ಸ್ ತಂಡಕ್ಕೆ 8 ವಿಕೆಟ್‌ಗಳ ಜಯ.

ಇಂದಿನ ಪಂದ್ಯಗಳು
ಮಂಗಳೂರು ಡ್ರ್ಯಾಗನ್ಸ್–ಗುಲ್ಬರ್ಗ ಮಿಸ್ಟಿಕ್ಸ್ (ಮಧ್ಯಾಹ್ನ 1)
ಬೆಂಗಳೂರು ಬ್ಲಾಸ್ಟರ್ಸ್–ಶಿವಮೊಗ್ಗ ಲಯನ್ಸ್ (ಸಂಜೆ 5.30)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್ ಆ್ಯಪ್.

ಏಷ್ಯನ್ ಗೇಮ್ಸ್ ಚೆಸ್ ಶಿಬಿರಕ್ಕೆ ಪ್ರಗ್ಗು

ಕೋಲ್ಕತ್ತ (ಪಿಟಿಐ): ಚೆಸ್ ತಾರೆ ಆರ್. ಪ್ರಜ್ಞಾನಂದ, ಡಿ.ಗುಕೇಶ್ ಅವರನ್ನು ಒಳಗೊಂಡಂತೆ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸುವ ಭಾರತ ಚೆಸ್ ತಂಡಕ್ಕೆ ಆಗಸ್ಟ್ 30 ರಿಂದ ಇಲ್ಲಿ ನಾಲ್ಕು ದಿನಗಳ ತಂತ್ರಗಾರಿಕೆ ಶಿಬಿರ (ಟ್ಯಾಕ್ಟಿಕಲ್ ಕ್ಯಾಂಪ್) ನಡೆಯಲಿದೆ.

ಗ್ರ್ಯಾಂಡ್‌ಮಾಸ್ಟರ್‌ಗಳಾದ ವಿದಿತ್ ಗುಜರಾತಿ, ಅರ್ಜುನ್ ಎರಿಗೇಶಿ, ಆರ್. ಗುಕೇಶ್ ಜೊತೆಗೆ ಹಿರಿಯ ಆಟಗಾರ ಪಿ.ಹರಿಕೃಷ್ಣ ಅವರು ಭಾರತ ತಂಡದಲ್ಲಿ ಇದ್ದಾರೆ. ಇವರಲ್ಲಿ ಪ್ರಜ್ಞಾನಂದ ಜೊತೆ ಮೊದಲ ಮೂವರು ಇತ್ತೀಚೆಗೆ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಎಂಟರ ಘಟ್ಟ ತಲುಪಿ ಗಮನ ಸೆಳೆದಿದ್ದರು.

ಏಷ್ಯನ್ ಗೇಮ್ಸ್ ಚೆಸ್ ತಂಡಕ್ಕೆ ವಿಶ್ವಪ್ರಸಿದ್ಧ ಮಾಜಿ ಆಟಗಾರ ಬೋರಿಸ್ ಗೆಲ್ಫಾಂಡ್ ಅವರು ಹೆಡ್ ಕೋಚ್ ಆಗಿದ್ದಾರೆ. ಶ್ರೀನಾಥ್ ನಾರಾಯಣನ್, ಕೋಚ್ ಆಗಿದ್ದು, ವೈಭವ್ ಸೂರಿ, ಅರ್ಜುನ್ ಕಲ್ಯಾಣ್ ಸಹಾಯಕ ಕೋಚ್‌ಗಳಾಗಿದ್ದಾರೆ.

ಮಹಿಳೆಯರ ತಂಡದಲ್ಲಿ ಜಿಎಂ ಕೊನೇರು ಹಂಪಿ, ದ್ರೋಣವಲ್ಲಿ ಹಾರಿಕಾ, ವೈಶಾಲಿ ರಮೇಶಬಾಬು, ವಂತಿಕಾ ಅಗರವಾಲ್ ಹಾಗೂ ಸವಿತಾಶ್ರೀ ಇದ್ದಾರೆ. ಕೋಲ್ಕತ್ತದಲ್ಲಿ ಆ. 31 ರಿಂದ ಟಾಟಾ ಸ್ಟೀಲ್ ಚೆಸ್ ಇಂಡಿಯಾ ರ್‍ಯಾಪಿಡ್ ಮತ್ತು ಬ್ಲಿಟ್ಸ್ ಟೂರ್ನಿಗಳು ನಡೆಯಲಿದ್ದು, ಆ ವೇಳೆಯೇ ಶಿಬಿರವೂ ಇದೆ.

ಜಿಪಿಬಿಎಲ್ ಅನಿರ್ದಿಷ್ಟಾವಧಿಗೆ ಮುಂದೂಡಿಕೆ

ಬಿಎಐ ಬೆದರಿಕೆಗೆ ಹಿಂದೆ ಸರಿದ ಆಟಗಾರರು; ಆಯೋಜಕರಿಗೆ ಅಪಾರ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾನುವಾರದಿಂದ ಆರಂಭವಾಗಬೇಕಿದ್ದ ಗ್ರ್ಯಾನ್‌ಪ್ರೀ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯಲ್ಲಿ ಆಡಲು ಕಳೆದ ಹಲವು ದಿನಗಳಿಂದ ಸಿದ್ಧತೆ ನಡೆಸಿದ್ದ ಆಟಗಾರರು ಶನಿವಾರ ಅಪಾರ ನಿರಾಶೆಯೊಂದಿಗೆ ತಮ್ಮ ತವರೂರುಗಳಿಗೆ ಮರಳಿದರು. ಆದರೆ ಎರಡನೇ ಆವೃತ್ತಿಯ ಜಿಪಿಬಿಎಲ್ ಟೂರ್ನಿಯನ್ನು ಅನಿರ್ದಿಷ್ಟಾವಧಿಯವರೆಗೆ ಮುಂದೂಡಿರುವುದೇ ಅವರ ಹತಾಶೆಗೆ ಕಾರಣ.

ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ)ಯು ಜಿಪಿಬಿಎಲ್‌ಗೆ ಮಾನ್ಯತೆ ನೀಡಲು ನಿರಾಕರಿಸಿತ್ತು. ಅದಕ್ಕಾಗಿ ಜಿಪಿಬಿಎಲ್ ಆಯೋಜಕ ಸಂಸ್ಥೆಯಾದ ಬಿಟ್‌ಸ್ಪೋರ್ಟ್ಸ್ ಹೈಕೋರ್ಟ್‌ನಲ್ಲಿ ಮನವಿ ಸಲ್ಲಿಸಿತ್ತು. ಕೆಲವು ದಿನಗಳ ಹಿಂದೆ ಟೂರ್ನಿ ನಡೆಸಲು ಕೋರ್ಟ್ ಅನುಮತಿ ನೀಡಿತ್ತು. ಅದರಿಂದ ಆಯೋಜಕರು ಸಿದ್ಧತೆಯನ್ನು ನಡೆಸಿದ್ದರು. ಆಟಗಾರರ ಬಿಡ್ ಕೂಡ ನಡೆದಿತ್ತು. 80 ಆಟಗಾರರು ಆಡಲು ಆಯ್ಕೆಯಾಗಿದ್ದರು. ಆದರೆ ಟೂರ್ನಿಗೆ ತಡೆ ಕೋರಿದ್ದ ಬಿಎಐ ಅರ್ಜಿಯನ್ನು ರಾಜ್ಯ ಹೈಕೋರ್ಟ್ ಏಕಸದಸ್ಯ ಪೀಠವು ಶುಕ್ರವಾರ ವಿಚಾರಣೆ ಮಾಡಿತ್ತು. ಟೂರ್ನಿ ನಡೆಯಲಿ ಎಂದು ಹೇಳಿತ್ತು. ಕೋರ್ಟಿನ ವಿಭಾಗೀಯ ಪೀಠವು ಅಂತಿಮ ತೀರ್ಪು ನೀಡಲು ಸೆಪ್ಟೆಂಬರ್ 12ಕ್ಕೆ ವಿಚಾರಣೆ ನಡೆಸುವುದಾಗಿ ಹೇಳಿತ್ತು.

ಮಿಥುನ್ ಮಂಜುನಾಥ್ ಹಾಗೂ ಸಾಯಿಪ್ರಣೀತ್ ಸೇರಿ ಕೆಲವು ಪ್ರಮುಖ ಆಟಗಾರರು ಬಿಎಐ ‘ಎಚ್ಚರಿಕೆ‘ಗೆ ಹೆದರಿ ಹಿಂದೆ ಸರಿದಿದ್ದರಿಂದ ಆಯೋಜಕರು ಟೂರ್ನಿಯನ್ನು ಮುಂದೂಡಲು ನಿರ್ಧರಿಸಿದರು.

‘ಪ್ರಮುಖ ಆಟಗಾರರು ಹಿಂದೆ ಸರಿದಿರುವುದರಿಂದ ಟೂರ್ನಿಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗುತ್ತಿದೆ. ನಮ್ಮ ಬಹಳಷ್ಟು ಪ್ರಯತ್ನಗಳ ನಂತರವೂ ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಟೂರ್ನಿಗೆ ಮಾನ್ಯತೆ ನೀಡಲು ಒಪ್ಪಲಿಲ್ಲ. ಈಗ ಬಿಎಐನ ಕೆಲವು ಪದಾಧಿಕಾರಿಗಳೂ ಮತ್ತು ಕೋಚ್‌ಗಳು ಖಾಸಗಿ ಲೀಗ್‌ನಲ್ಲಿ ಆಡಿದರೆ ಮುಂದೆ ಬೇರೆ ಟೂರ್ನಿಗಳಲ್ಲಿ ಆಡಲು ಅವಕಾಶ ನೀಡುವುದಿಲ್ಲವೆಂದು ಆಟಗಾರರಿಗೆ ಬೆದರಿಕೆ ಒಡ್ಡಿದ್ದಾರೆ. ಇದರಿಂದಾಗಿ ಆಟಗಾರರು ಹಿಂದೆ ಸರಿದಿದ್ದಾರೆ. ಆದರೆ ಬಿಎಐ ವಿರುದ್ಧ ನಿಲ್ಲುವ ಉದ್ದೇಶ ನಮಗಿಲ್ಲ. ಅವರೊಂದಿಗೆ ಜೊತೆಗೂಡಿ ಮುಂದುವರಿಯುವ ಆಸೆಯಿದೆ. ಬಿಎಐ ಜೊತೆಗೆ ಮಾತುಕತೆ ಮುಂದುವರಿಸುತ್ತೇವೆ. ಅವರ ಮನವೊಲಿಸಿ ಆದಷ್ಟು ಶೀಘ್ರದಲ್ಲಿ ಟೂರ್ನಿಯನ್ನು ಆಯೋಜಿಸಲು ಪ್ರಯತ್ನಿಸುತ್ತೇವೆ’ ಎಂದು ಲೀಗ್ ಕಮಿಷನರ್ ಪ್ರಶಾಂತ್ ರೆಡ್ಡಿ ಹೇಳಿದರು.

ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಭಾರತದಲ್ಲಿ ಬ್ಯಾಡ್ಮಿಂಟನ್ ಬೆಳವಣಿಗೆಗೆ ಇಂತಹ ಲೀಗ್‌ಗಳ ಅವಶ್ಯಕತೆ ಇದೆ. ಬ್ಯಾಡ್ಮಿಂಟನ್ ಕ್ರೀಡೆಯು ಬಹಳ ದುಬಾರಿಯದ್ದು. ದೇಶದ ಅಗ್ರಮಾನ್ಯ 8–10 ಆಟಗಾರರು ಮಾತ್ರ ಉತ್ತಮ ಸೌಲಭ್ಯಗಳನ್ನು ಪಡೆಯುತ್ತಾರೆ. ಮಧ್ಯಮವರ್ಗದ ಮತ್ತು ಬಡ ಕುಟುಂಬದ ಮಕ್ಕಳು ಈ ಕ್ರೀಡೆಯಲ್ಲಿ ಬೆಳೆಯಲು ಹರಸಾಹಸ ಪಡಬೇಕು. ಬಿಎಐ ಅಥವಾ ರಾಜ್ಯ ಸಂಸ್ಥೆಗಳಿಗೆ ಜೂನಿಯರ್ ಹಂತದಲ್ಲಿ ಧನಸಹಾಯ ಮತ್ತಿತರ ಸೌಲಭ್ಯಗಳು ಸಿಗುವುದಿಲ್ಲ. ಕೆಲವು ಟೂರ್ನಿಗಳಲ್ಲಿ ಗೆದ್ದರೆ ಮಾತ್ರ ನಗದು ಬಹುಮಾನ ಸಿಗುತ್ತದೆ. ಥಾಮಸ್ ಕಪ್ ಗೆದ್ದ ಆಟಗರರಿಗೇ ತಲಾ ₹ 10 ಲಕ್ಷ ನೀಡಲಾಗಿತ್ತು. ಅಂತಹದ್ದರಲ್ಲಿ ನಮ್ಮ ಲೀಗ್‌ನಲ್ಲಿ ₹ 15 ಲಕ್ಷದವರೆಗೂ ಆಟಗಾರರು ಮೌಲ್ಯ ಗಳಿಸಿದ್ದರು. ಇದು ಅವರ ಭವಿಷ್ಯಕ್ಕೆ ನೆರವಾಗುತ್ತದೆ’ ಎಂದು ರೆಡ್ಡಿ ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಹಾಜರಿದ್ದ ಮಾಜಿ ಆಟಗಾರ ಅರವಿಂದ್ ಭಟ್, ‘ಇನ್ನು ಮುಂದೆ ದೇಶದಲ್ಲಿ ಬ್ಯಾಡ್ಮಿಂಟನ್ ಲೀಗ್‌ಗಳು ನಡೆಯುತ್ತವೆ ಎನ್ನುವುದು ಖಚಿತವಿಲ್ಲ. ಇದರಿಂದಾಗಿ ಪ್ರತಿಭಾವಂತರು ಅವಕಾಶವಂಚಿತರಾಗಬಹುದು‘ ಎಂದರು.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 27 ಆಗಸ್ಟ್ 2023

ಯಾವಾಗ ಬಂದೀತು 'ಯಾಂಬು' ಕುಣಿತ? 11

ಮಹೂವಾ... ವ್ಹಾರೆ ವ್ಹಾ... 12

ಕ್ಯಾಮೆರಾ ಕಣ್ಣಲ್ಲಿ ಕೀನ್ಯಾದ ವನ್ಯಜೀವಿ ಲೋಕ... 13

ಕಲಾ ಮಾಧ್ಯಮ ಅದರಲ್ಲೂ ಸಿನಿಮಾ ಕ್ವಿಯರ್ ಸಮುದಾಯವ ಒಳಗೊಳ್ಳುವ ವಸ್ತುವನ್ನು ಇತ್ತೀಚೆಗೆ ವ್ಯಾಪಕವಾಗಿ ಕೈಗೆತ್ತಿಕೊಳ್ಳುತ್ತಿವೆ. ನಿಜಕ್ಕೂ ಅಲ್ಲಿ ತೋರಲಾಗುತ್ತಿರುವ ಸಂಗತಿಗಳು ವಾಸ್ತವಕ್ಕೆ ಹತ್ತಿರವಾಗಿವೆಯೇ ಎನ್ನುವ ಜಿಜ್ಞಾಸೆಗೆ ಉತ್ತರವಾಗುವ ಬರಹವಿದು.

'ಕ್ವಿಯರ್' ಕಲಾ ಕನ್ನಡಿ ಮೇಲಿನ ದೂಳು

ದಾದಾಪೀರ್ ಜೈಮನ್

ಅದೊಂದು ಕಾಲವಿತ್ತು. 'ಲಿಂಗತ್ವ ಮತ್ತು ಲೈಂಗಿಕತೆ', 'ಕ್ವಿಯರ್ ಸಮುದಾಯದ ಅಸ್ಮಿತೆ' ಮುಂತಾದ ವಿಷಯಗಳನ್ನು ಜನ ಮಾತನಾಡುತ್ತಿರಲಿಲ್ಲ. ಹಾಗೆಂದು ಅವ್ಯಾವುವೂ ಅಸ್ತಿತ್ವದಲ್ಲಿಯೆ ಇರಲಿಲ್ಲವೆಂದಲ್ಲ. ಅದಕ್ಕೆ ತಕ್ಕ ಭಾಷೆ ಅಭಿವ್ಯಕ್ತಿ ಸಾಧ್ಯವಾಗಿರಲಿಲ್ಲ. ಕ್ವಿಯರ್ ವಿಷಯಕ್ಕೆ ಒಂದು ಕಳಂಕ ಅಥವಾ 'ಸ್ಟಿಗ್ಮಾ' ಅಂಟಿಕೊಂಡಿತ್ತು. ಈ ಕಳಂಕದ ಮೂಲಧಾತು ಭಯ. ನಮ್ಮೊಳಗಿನ ಭಯಗಳೆ ಒಂದು ಸಮುದಾಯವನ್ನು ಅಂಚಿಗೆ ತಳ್ಳಿಬಿಡುತ್ತವೆ. ಸಾಹಿತ್ಯದ ವಿಷಯಕ್ಕೆ ಬಂದರೆ, ಮೊದಮೊದಲಿಗೆ ಶಿವರಾಮ ಕಾರಂತ, ಭೈರಪ್ಪರಂತಹ ಹಿರಿಯ ಕಾದಂಬರಿಕಾರರೆ ಈ ವಿಷಯಗಳ ಬಗೆಗೆ ಫೋಬಿಕ್ ಆಗಿದ್ದರೆನ್ನುವುದು ಅವರ ಕೆಲವು ಕೃತಿಗಳಲ್ಲಿಯೇ ಕಾಣಿಸಿಕೊಂಡಿದೆ. ಅಬ್ದುಲ್ ರಶೀದರ ಕತೆಗಳಲ್ಲಿ ಕ್ವಿಯರ್ ವಿಷಯದ ಮಿಂಚೊಂದು ಕಾಣಿಸಿಕೊಂಡರೂ ಅವು ಅಲ್ಲಲ್ಲಿಗೆ ನಿಂತುಬಿಡುತ್ತವೆ. ಶಾಂತಿನಾಥ ದೇಸಾಯಿಯವರ 'ಮುಕ್ತಿ' ಕಾದಂಬರಿಯಲ್ಲಿ ಕಾಣುವ ಕ್ವಿಯರ್ ವಿಷಯ 'ಅಡಲ್ಟ್ ಸೆಕ್ಷುಯಲ್ ಎಕ್ಸ್‌ಪ್ಲೋರೇಷನ್'ಗೆ ಸೀಮಿತವಾಗುತ್ತದೆ. ಇವೆಲ್ಲವನ್ನೂ ಕಾಲನ ಮಹಿಮೆ ಎಂದುಕೊಳ್ಳಬಹುದಾದರೂ ಕನ್ನಡದ ಮಟ್ಟಿಗೆ ವಸುಧೇಂದ್ರರ 'ಮೋಹನಸ್ವಾಮಿ' ಕೃತಿ ಈ ವಿಷಯಗಳ ಬಗೆಗೆ ಮೈ ಚಳಿ ಬಿಟ್ಟು ಮಾತನಾಡಿದ ಮೊದಲ ಕೃತಿ. ಸಾಮಾಜಿಕವಾಗಿ, ಆರ್ಥಿಕವಾಗಿ ಉನ್ನತ ಸ್ತರದಲ್ಲಿದ್ದ ವಸುಧೇಂದ್ರರ ಕೃತಿಯನ್ನೆ ಕನ್ನಡಲೋಕ ಅಷ್ಟು ತೆರೆದ ಹೃದಯದಿಂದ ಸ್ವೀಕರಿಸಿರಲಿಲ್ಲ ಎಂದು ಅವರೆ ತಮ್ಮ ಒಂದು ಲೇಖನದಲ್ಲಿ ಹೇಳಿಕೊಂಡಿದ್ದಾರೆ. ನಂತರದಲ್ಲಿ ಹಲವು ಕತೆಗಾರರು, ಕವಿಗಳು ತಮ್ಮ ಬರಹಗಳಲ್ಲಿ ಕ್ವಿಯರ್ ವಿಷಯಗಳನ್ನು ಒಳಗೊಳ್ಳುವುದರ ಮೂಲಕ ಭಾಷೆಯನ್ನು ರೂಪಿಸುತ್ತಾ ಬಂದರು. 'ನೀಲಕುರಿಂಜಿ', 'ಹರಾಂನ ಕಥೆಗಳು', 'ದೀಪವಿರದ ದಾರಿಯಲ್ಲಿ' ಮುಂತಾದ ಕೃತಿಗಳು ಅದಕ್ಕೆ ಉದಾಹರಣೆಯಾಗಿ ನಿಲ್ಲುತ್ತವೆ. ಇತ್ತೀಚಿನ ದಿನಗಳಲ್ಲಿ ಸಮುದಾಯದವರಲ್ಲದ ಆದರೆ ಕ್ವಿಯರ್ ವಿಚಾರದ ಪರವಾಗಿ ನಿಲ್ಲುವ ಬರಹಗಾರರೂ ಕೃತಿಗಳನ್ನು ಬರೆಯುತ್ತಿದ್ದಾರೆ. ಕಾವ್ಯ ಕಡಮೆ ಅವರ ಕಾದಂಬರಿ 'ಪುನರಪಿ', 'ಶರಣಬಸವ ಗುಡದಿನ್ನಿ', ಮಿತ್ರಾ ವೆಂಕಟರಾಜ ಅವರ ಕೆಲವು ಕತೆಗಳು ಈ ಸಾಲಿಗೆ ಸೇರಿಸುವಂತಹವು.

ಅತಿ ಹೆಚ್ಚು ಮುಕ್ತವಾಗಿರುವ ಕಲಾಮಾಧ್ಯಮವೆಂದರೆ ರಂಗಭೂಮಿ. ಅಲ್ಲಿ 'ಕ್ವೀನ್ ಸೈಝ್', 'ಅಮ್ಮ ಮತ್ತು ಸುಹೇಲ್', 'ಅಕ್ಷಯಾಂಬರ', 'ಫ್ರೀಡಂ ಬೇಗಂ', 'ಶಹರ್ ಇನ್ ದ ಖಾಕಿ ರೂಮ್', 'ಶಿವ' ಮುಂತಾದ ನಾಟಕಗಳು ಪ್ರಯೋಗದ ದೃಷ್ಟಿಯಿಂದ ಮತ್ತು ರಂಗಭೂಮಿಯ ಚಲನಶೀಲತೆಯ ದೃಷ್ಟಿಯಿಂದ ಮಹತ್ವ ಪಡೆಯುತ್ತವೆ. ಉಳಿದಂತೆ ಶಿಲ್ಪಕಲೆ ಮತ್ತು ಚಿತ್ರಕಲೆ ಮುಂತಾದ ಪ್ರಕಾರಗಳೂ ಕ್ವಿಯರ್ ವಿಷಯಗಳ ಮುಕ್ತ ಅಭಿವ್ಯಕ್ತಿಗೆ ಹೆಚ್ಚು ಸ್ವಾತಂತ್ರ್ಯ ನೀಡಿವೆ. ಬೆಂಗಳೂರಿನ ವನ್ ಶಾಂತಿ ರೋಡ್ ಆರ್ಟ್ ಗ್ಯಾಲರಿ, ಸುಮುಖ ಆರ್ಟ್ ಗ್ಯಾಲರಿ ಕಲಾವಿದರಿಗೆ ರೆಸಿಡೆನ್ಸಿಯನ್ನು ಒದಗಿಸುವುದರ ಮೂಲಕ ಅವರ ಕಲೆಗೆ ಪ್ರೋತ್ಸಾಹ ನೀಡುತ್ತಿವೆ. 'ಜೆಂಡರ್ ಬೆಂಡರ್', ಮುಂಬೈ ಮೂಲದ 'ರಿಫ್ರೇಮ್' ಗ್ರಾಂಟ್‌ಗಳೂ ಕ್ವಿಯರ್ ಅಭಿವ್ಯಕ್ತಿಗೆ ಪ್ರೋತ್ಸಾಹ ನೀಡುತ್ತಿವೆ.

ಹೀಗಿದ್ದೂ ಜನರನ್ನು ಹೆಚ್ಚು ಸೆಳೆಯುವುದು ಸಿನಿಮಾ ಮಾಧ್ಯಮ. ಅದರಲ್ಲೂ ಮುಖ್ಯಧಾರೆಯ ಸಿನಿಮಾಗಳು. ಅದರಲ್ಲಿ ಕ್ವಿಯರ್ ಸಂವೇದನೆ ಬೆಳೆದುಬಂದ ದಾರಿಯನ್ನು ಮುಖ್ಯವಾಗಿ ಗಮನಿಸಬೇಕು.

ನಾನು ಚಿಕ್ಕವನಿರುವಾಗ ಹೆಚ್ಚಾಗಿ ಕನ್ನಡ ಸಿನಿಮಾಗಳನ್ನೆ ನೋಡುತ್ತಿದ್ದೆ. ನನಗೆ ಬೇರೆ ಭಾಷೆಯ ಸಿನಿಮಾಗಳು ಇರುತ್ತವೆ ಎನ್ನುವ ಕಲ್ಪನೆಯೂ ಇರಲಿಲ್ಲ. ನನಗೆ ನೆನಪಿರುವ ಹಾಗೆ ಬಹುತಾರಾಗಣವಿದ್ದ ಕನ್ನಡದ 'ಹಬ್ಬ' ಸಿನಿಮಾದಲ್ಲಿ ವಿಷ್ಣುವರ್ಧನ್, ಅಂಬರೀಶ್, ದೇವರಾಜ್, ಶಶಿಕುಮಾರ್ ಎಲ್ಲರೂ ಖಳನಾಯಕರಿಗೆ ಬುದ್ಧಿ ಕಲಿಸುವ ಸಲುವಾಗಿ 'ಮಾಮ ಮಾಮ ಮಸ್ತಿ, ಮಾಡು ಜಂಗಿ ಕುಸ್ತಿ' ಎನ್ನುವ ಹಾಡಿಗೆ ಸೀರೆ ಉಟ್ಟುಕೊಂಡು ಕುಣಿಯುತ್ತಾರೆ. ಹಾಡು ತಮಾಷೆಯಾಗಿದ್ದರೂ ಆ ಹಾಡಿನಲ್ಲಿ ಕನ್ನಡದ ಆ ಕಾಲದ ಮುಖ್ಯನಟರೆಲ್ಲರೂ ಸೀರೆ ಉಟ್ಟು ಕುಣಿಯುವ ದೃಶ್ಯ ಕಚಗುಳಿ ಇಡುತ್ತಿತ್ತು. ಸಿನಿಮಾದವರೂ ಇದರ ಆಚೆಗೆ ಯೋಚನೆಯನ್ನು ಕೂಡ ಮಾಡಿರುವುದಿಲ್ಲ. ಆದರೆ ಹೀಗೆ ಚಿಕ್ಕಪುಟ್ಟ ದೃಶ್ಯಗಳು ಆ ಕಾಲದಲ್ಲಿ ಹೆಣ್ಣುಭಾವನೆಯಿದ್ದು, 'ಜೆಂಡರ್ ಡಿಸ್ಫೋರಿಯ' ಇರುವ ಗಂಡುಮಕ್ಕಳಲ್ಲಿ ವಿಶ್ವಾಸ ಹಾಗೂ ಖುಷಿಯನ್ನು ಉಂಟುಮಾಡಿರಬಲ್ಲದು ಎನಿಸುತ್ತಿತ್ತು. ಆದರೂ ಇದೆಲ್ಲ ನನ್ನ ಅತಿ ಯೋಚನೆ ಎಂದು ತಳ್ಳಿ ಹಾಕುತ್ತಿದ್ದೆ. ಆದರೆ ಇತ್ತೀಚೆಗೆ 'ಜೋನ್ಪುರಿ ಖಯಾಲ್' ಎಂಬ ಟ್ರಾನ್ಸ್‌ಮ್ಯಾನ್ ಆತ್ಮಕಥೆಯನ್ನು ನಿರೂಪಿಸುವ ಸಂದರ್ಭದಲ್ಲಿ ಕವಿ ಮತ್ತು ಹೋರಾಟಗಾರ ರೂಮಿ ಹರೀಶ್ ಒಂದು ಘಟನೆಯನ್ನು ನೆನಪಿಸಿಕೊಂಡರು. ಮಾಲಾಶ್ರೀ, ವಿಜಯಶಾಂತಿ, ವಾಣಿ ವಿಶ್ವನಾಥ್, ಕಾಜಲ್ ಮತ್ತು ರಾಣಿ ಮುಖರ್ಜಿ ಒಂದಷ್ಟು ಸಿನಿಮಾಗಳಲ್ಲಿ ಪುರುಷ ಉಡುಪುಗಳನ್ನು ಧರಿಸಿದ ನಾಯಕಿ ಪ್ರಧಾನ ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ಉದಾಹರಣೆಗೆ ಮಾಲಾಶ್ರೀ ಅಭಿನಯಿಸಿದ 'ಚಾಮುಂಡಿ', 'ದುರ್ಗಿ' ಮುಂತಾದ ಸಿನಿಮಾಗಳು. ಅಲ್ಲಿ ಆ ಪಾತ್ರಗಳಿಗೆ ಪುರುಷ ಉಡುಪುಗಳನ್ನು ತೊಡಿಸುವ ಆಯ್ಕೆಯಲ್ಲಿ 'ಜೆಂಡರ್ ಡಿಸ್ಫೋರಿಯ' ಆಗಲಿ ಅಥವಾ ಅದನ್ನು ಒಂದು ಟ್ರಾನ್ಸ್ ಕಣ್ಣೋಟದಿಂದ ನೋಡುವ ಗೋಜಿಗೆ ಸಿನಿಮಾ ತಂಡವೂ ಹೋಗಿರುವ ಸಾಧ್ಯತೆ ಇಲ್ಲವಾದರೂ ಹೆಣ್ಣಾಗಿ ಹುಟ್ಟಿ ಗಂಡಾಗಬೇಕೆನ್ನುವ ಅಭಿಲಾಷೆ ಉಳ್ಳವರಿಗೆ ಅದು ತಂದು ಕೊಡುತ್ತಿದ್ದ ವಿಶ್ವಾಸ ಮತ್ತು ಸಂತೋಷ ಅಪರಿಮಿತವಾದುದು. ಮನೆ ಜವಾಬ್ದಾರಿಯನ್ನು ಹೊತ್ತುಕೊಳ್ಳುವ ಗಟ್ಟಿ ಮಹಿಳೆಯರು ಗಂಡಸಿನ ಬಟ್ಟೆ ಹಾಕುತ್ತಾರೆ ಎನ್ನುವುದನ್ನು ಸೂಚ್ಯವಾಗಿ ತೋರಿಸಿ ಗಂಡು ಪೋಷಾಕಿನ ಸ್ವಭಾವದ ಛಾಯೆಯಿಲ್ಲದೆ ಆ ಅಚ್ಚಿಗೆ ಕೂರದೆ ಹೆಣ್ಣಿಗೆ ಶಕ್ತಿಯಿಲ್ಲ ಎನ್ನುವುದನ್ನು ತೋರಿಸುವ ಹಂಬಲದ ಯೋಚನೆಯೆ ಅಲ್ಲಿ ಢಾಳಾಗಿ ಕಾಣುತ್ತದೆ.

'ಜೆಂಡರ್ ಟ್ರಾನ್ಸಿಷನ್ನು'ಗಳನ್ನು ನಾವು ಹಾರರ್ ಸಿನಿಮಾಗಳಲ್ಲಿ ಕಾಣಬಹುದಾಗಿತ್ತು. ಒಂದು ಹೆಂಗಸಿನ ಪಾತ್ರಕ್ಕೆ ಗಂಡು ದೆವ್ವ ಮೆಟ್ಟಿಕೊಳ್ಳುವುದು, ಗಂಡು ಪಾತ್ರಕ್ಕೆ ಹೆಣ್ಣು ದೆವ್ವ ಮೆಟ್ಟಿಕೊಳ್ಳುವುದು ಇತ್ಯಾದಿ. ಹೀಗೆ ನಾವು ಇರುವುದರಲ್ಲಿ ನಮ್ಮೊಳಗಿದನ್ನು ಆರೋಪಿಸಿ ಖುಷಿಪಟ್ಟುಕೊಳ್ಳಬೇಕಾಗಿತ್ತು. ಮುಖ್ಯವಾಗಿ ಹಾಸ್ಯ, ತಮಾಷೆ, ಅಪರಾಧ, ಖಳಪಾತ್ರಗಳಿಗಾಗಿ ಮಾತ್ರ ಕ್ವಿಯರ್ ಪಾತ್ರ ಹಾಗೂ ವಿಷಯಗಳು ಬಳಕೆಯಾಗುತ್ತಿದ್ದವು. ಕ್ವಿಯರ್ ಪಾತ್ರಗಳ ಉಡುಪು, ಅವುಗಳ ಕುರಿತಾದ ಭಾಷೆ, ಆ ಪಾತ್ರಗಳನ್ನು ಚಿತ್ರಗಳಲ್ಲಿ ಇರಿಸಿಕೊಳ್ಳುವುದರ ಹಿಂದೆ ಇರುತ್ತಿದ್ದ ಉದ್ದೇಶಗಳೆ ಕ್ವೀರ್ ಸಮುದಾಯದವರ ಕುರಿತಾದ ಸಮಾಜದ ಧೋರಣೆಗೆ ಕನ್ನಡಿ ಹಿಡಿಯುತ್ತಿತ್ತು.

11ನೇ ಪುಟಕ್ಕೆ...

ಪ್ರಜಾವಾಣಿ @75
ದೀಪಾವಳಿ ವಿಶೇಷಾಂಕ 2023

ಓದುಗರ ವೇದಿಕೆಗೆ ಬರಹಗಳ ಆಹ್ವಾನ

ಆಸ್ಪತ್ರೆಯಲ್ಲಿ ಕಷ್ಟಕ್ಕೆ ಮಿಡಿದ ಅನಾಮಧೇಯ

ಆಸ್ಪತ್ರೆಗೇ ಒಂದು ವಾಸನೆ ಇದೆ. ಅಲ್ಲಿ ಎಲ್ಲಿ ನೋಡಿದರೂ ಭಯ, ಆತಂಕದ ಚಹರೆಗಳು. ರಿಸಪ್ಷನ್ ಕೌಂಟರ್ ಮುಂದೆ ಕೂಡ ಕುದಿಮೌನ. ಇಂತಹ ವಾತಾವರಣದಲ್ಲಿ ಆಪದ್ಬಾಂಧವರಾಗುವ ಜೀವಗಳೂ ಇರುತ್ತವೆ. ಆಸ್ಪತ್ರೆಯಲ್ಲಿ ಹಾಗೆ ನೆರವಿಗೆ ಬಂದಂಥ, ಸಂಜೀವಿನಿಯ ತಂದ ಹನುಮಂತನಂಥವರು ನಿಮ್ಮ ಜೀವನದಲ್ಲೂ ಇದ್ದಿರಬಹುದು. ಅಂತಹ ಮನುಷ್ಯತ್ವದ ಕಥನವನ್ನು ಹಂಚಿಕೊಳ್ಳಿ.

ಸಾಕುಪ್ರಾಣಿಯ ಕಕ್ಕುಲಾತಿ

ಸಾಕುಪ್ರಾಣಿಗಳು ಬದುಕಿನಲ್ಲಿ ಒಲವು ಮೂಡಿಸುವ ಕ್ಷಣಗಳೇ ಆಪ್ಯಾಯಮಾನ. ನಮ್ಮ ಭಾಷೆ ಅರಿಯದೆಯೂ ಅವು ನಡೆಸುವ ಸಂವಹನ ಬಣ್ಣಿಸಲಸದಳ. ನಾಯಿಯನ್ನೋ, ಬೆಕ್ಕನ್ನೋ ಮುದ್ದಿನಿಂದ ಸಾಕುವವರಿಗೆ ದಕ್ಕುವ ಅನುಭವಗಳು ಅತ್ಯಾಪ್ತ. ಅವುಗಳಲ್ಲಿ ಕೆಲವು ಮನಮಿಡಿಯುವಂತೆ ಇರಬಹುದು. ಸಾಕುಪ್ರಾಣಿಗಳೊಂದಿಗಿನ ಅಂತಹ ನೆನಪು ನಿಮ್ಮದೂ ಆಗಿದ್ದರೆ ಬರೆದು ಕಳುಹಿಸಿ

ಬರಹ ಕಳಿಸುವ ಮುನ್ನ

ಬರಹಗಳು 250 ಪದಗಳ ಮಿತಿಯಲ್ಲಿ ಇರಲಿ. ನಿಮ್ಮ ವಿಳಾಸ, ಸಾಕು ಪ್ರಾಣಿಯ ಜತೆಗಿನ ನಿಮ್ಮ ಫೋಟೊ, ಕಷ್ಟಕ್ಕೆ ಮಿಡಿದ ಅನಾಮಧೇಯರ ಜತೆಗಿನ ಫೋಟೊವನ್ನೂ ಅವರ ಒಪ್ಪಿಗೆ ಪಡೆದು ಅಟ್ಯಾಚ್ ಮಾಡಿ ಕಳುಹಿಸಬೇಕು. ಆಯ್ದ ಬರಹಗಳನ್ನು ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು

ಬರಹಗಳು ತಲುಪಲು ಕೊನೆಯ ದಿನಾಂಕ: ಸೆಪ್ಟೆಂಬರ್ 2, 2023
ಇ-ಮೇಲ್: deepavali@prajavani.co.in

ಸರ್ಕಾರಿ ಶಾಲೆಯಲ್ಲೊಂದು ರಂಗ ಪ್ರಯೋಗಶಾಲೆ

ಸಿದ್ದಯ್ಯ ಹಿರೇಮಠ

ಮಾವಿನಕಟ್ಟೆ ಸರ್ಕಾರಿ ಶಾಲೆಯ ಶಿಕ್ಷಕರೊಬ್ಬರು ಹದಿನಾಲ್ಕು ವರ್ಷಗಳಲ್ಲೇ ರಂಗ ಪ್ರಯೋಗಶಾಲೆಯನ್ನು ರೂಪಿಸಿ, ಅದಕ್ಕೆ ತಮ್ಮ ರಂಗಗುರುಗಳಾದ ಕೆ.ವಿ. ಸುಬ್ಬಣ್ಣ ಅವರ ಹೆಸರನ್ನು ಇಟ್ಟಿರುವುದು ಅಪರೂಪದ ವಿದ್ಯಮಾನ. ಇಂತಹ ರಂಗದೀವಿಗೆಗಳು ಇನ್ನಷ್ಟು ಹೆಚ್ಚಲಿ.

'ಕಾಡೇಗೂಡೇ' ಪರಿಸರ ಸಂರಕ್ಷಣಾ ಸಂದೇಶ ಸಾರುವ ನಾಟಕ

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಮಾವಿನಕಟ್ಟೆಯ ಸರ್ಕಾರಿ ಶಾಲೆ. ಅಲ್ಲಿ 'ಕೆ.ವಿ. ಸುಬ್ಬಣ್ಣ ರಂಗ ಪ್ರಯೋಗಶಾಲೆ' ಎನ್ನುವ ಪ್ರತ್ಯೇಕ ಕೋಣೆ. ನೀನಾಸಂನಲ್ಲಿ ಕಲಿತ ಮೇಷ್ಟರು ತಮ್ಮ ರಂಗಗುರುವಿನ ನೆನಪಿನಲ್ಲಿ ರೂಪಿಸಿರುವ ಪ್ರಯೋಗಶಾಲೆ ಇದೆನ್ನುವುದು ವಿಶೇಷ. ರಂಗಕಲಿಕೆಗೇ ಶಾಲೆಯೊಂದರಲ್ಲಿ 'ಲ್ಯಾಬ್' ರೂಪಿಸಿರುವುದು ವಿರಳಾತಿ ವಿರಳ.

ಬಹುತೇಕ ಕೃಷಿ ಕೂಲಿ ಕಾರ್ಮಿಕರ ಮಕ್ಕಳೇ ಓದುತ್ತಿರುವ ಈ ಶಾಲೆಯಲ್ಲಿ ರಂಗ ಶಿಕ್ಷಕ, ಪೆನ್ನಸಮುದ್ರದ ವೆಂಕಟೇಶ್ವರ ಕೆ. ಅವರು ವಿದ್ಯಾರ್ಥಿಗಳ ಕಲಿಕಾಸಕ್ತಿ ಹೆಚ್ಚಿಸಲು ರಂಗಕಲೆಯನ್ನು ಸಾಣೆಯಂತೆ ಮಾಡಿದ್ದಾರೆ. ಅವರ ಪ್ರಯೋಗ ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕೂ ದೀವಿಗೆಯಾಗುತ್ತಿರುವುದು ವಿಶೇಷ. ದಾವಣಗೆರೆ ಜಿಲ್ಲೆಯಲ್ಲಿ ರಂಗಶಿಕ್ಷಕ ಹುದ್ದೆ ಇರುವುದು ಈ ಶಾಲೆಯಲ್ಲಿ ಮಾತ್ರ ಎನ್ನುವುದಕ್ಕೂ ಅಡಿಗೆರೆ ಎಳೆಯಬೇಕು.

2009ರಲ್ಲಿ ರಂಗಶಿಕ್ಷಕರಾಗಿ ಈ ಶಾಲೆಯಿಂದಲೇ ಸೇವೆ ಆರಂಭಿಸಿರುವ ವೆಂಕಟೇಶ್ವರ, ಆಗ ರಾಜ್ಯದಲ್ಲಿ ನೇಮಕಗೊಂಡಿದ್ದ 47 ರಂಗ ಶಿಕ್ಷಕರ ಪೈಕಿ ಒಬ್ಬರು. ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿಯನ್ನೂ, ಬಿ.ಇಡಿ ಪದವಿಯನ್ನೂ ಪಡೆದಿರುವ ಇವರಿಗೆ ಇಂಗ್ಲಿಷ್ ಕಲಿಸುವ ಮತ್ತೊಂದು ಜವಾಬ್ದಾರಿಯೂ ಹೆಗಲೇರಿದಾಗ ಸಂತಸ ಆಗಿತ್ತು. ಗ್ರಾಮೀಣ ಮಕ್ಕಳಿಗೆ ಕಬ್ಬಿಣದ ಕಡಲೆಯಾಗಿರುವ ಇಂಗ್ಲಿಷ್ ಅನ್ನು ಸುಲಭವಾಗಿ ಕಲಿಸಲು, ರಂಗಕಲೆಯಲ್ಲಿನ ವಿವಿಧ ಆಯಾಮಗಳ ನೆರವು ಪಡೆದದ್ದು ಇವರ ಆಸಕ್ತಿಗೆ ಹಿಡಿದ ಕನ್ನಡಿ.



ವೆಂಕಟೇಶ್ವರ ಕೆ.

ಅದು 2012ನೇ ಶೈಕ್ಷಣಿಕ ವರ್ಷ. ಯಕ್ಷಗಾನ, ಮೂಡಲಪಾಯ, ದೊಡ್ಡಾಟ, ಸಣ್ಣಾಟಗಳ ಲವಲೇಷವೂ ಅಡಿಕೆ ನಾಡಿನ ಮಕ್ಕಳಿಗೆ ಗೊತ್ತಿರಲಿಲ್ಲ. 'ಕಲೆ ಎಂದರೆ ಅದು ಸಿನಿಮಾ ಮತ್ತು ಟಿ.ವಿ.ಗಳಲ್ಲಿ ಪ್ರಸಾರವಾಗುವ ಧಾರಾವಾಹಿಗಳು ಮಾತ್ರ' ಎಂದು ಅರಿತಿದ್ದ ಆ ಮಕ್ಕಳನ್ನು ಪಠ್ಯದಲ್ಲಿನ ವಿಷಯಗಳತ್ತ ಆಕರ್ಷಿತರಾಗುವಂತೆ ಮಾಡಲು ಏನಾದರೂ ಮಾಡಬೇಕಾದ ಅಗತ್ಯ, ಅನಿವಾರ್ಯ ಇತ್ತು. ಶಿವಮೊಗ್ಗ ರಂಗಾಯಣದ ಸಹಕಾರದೊಂದಿಗೆ 20 ದಿನಗಳ ರಂಗ ತರಬೇತಿ ಶಿಬಿರಕ್ಕೆ ಆಯ್ದ ಮಕ್ಕಳನ್ನು ಕರೆದೊಯ್ಯಲಾಗಿತ್ತು. ಅಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ಬ್ರೆಕ್ಟ್‌ನ 'ಸುಣ್ಣದ ಸುತ್ತು' (ಅನುವಾದ: ಎಚ್.ಎಸ್. ವೆಂಕಟೇಶಮೂರ್ತಿ) ನಾಟಕವನ್ನು ಗ್ರಾಮದ ಸಾವಿರಾರು ಜನರೆದುರು ಪ್ರದರ್ಶಿಸಿ ಅಚ್ಚರಿ ಮೂಡಿಸಿದರು. ಮಕ್ಕಳ ಹಿಂಜರಿಕೆಯನ್ನು ಹೊಡೆದೋಡಿಸಲು ರಂಗಕಲೆ ನೆರವಾದ ಆ ಸಂದರ್ಭವನ್ನು ವೆಂಕಟೇಶ್ವರ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಾರೆ.

ಆಯಾ ವಿಷಯ ಶಿಕ್ಷಕರ ಸಮ್ಮುಖದಲ್ಲೇ, ಪಾಠ-ಪದ್ಯಗಳಲ್ಲಿನ ಅಂಶಗಳನ್ನು ರಂಗಕ್ಕೆ ತಂದು ವಿದ್ಯಾರ್ಥಿಗಳನ್ನೇ ಅದರಲ್ಲಿ ತೊಡಗಿಸಲಾಯಿತು. ಉದಾಹರಣೆಗೆ, 'ಶಬರಿ'ಯ ಕುರಿತ ಪಾಠವನ್ನು ಓದುವುದರ ಜೊತೆಗೇ ವಿದ್ಯಾರ್ಥಿಗಳು ಕಂಠಪಾಠ ಮಾಡಿ, ಅಭಿನಯಿಸುವಂತೆ ಅಣಿಗೊಳಿಸಲಾಯಿತು.

'ಆ ವರ್ಷ ನಾವು ಪಠ್ಯವನ್ನು ರಂಗಕ್ಕೆ ತಂದು ಕಲಿಸಿದ ವಿಷಯದಲ್ಲಿ ವಿದ್ಯಾರ್ಥಿಗಳ ಸಾಧನೆ ನಿಜಕ್ಕೂ ಅಚ್ಚರಿ ಮೂಡಿಸಿತ್ತು. ಅದು ಕನ್ನಡ ಮಾತ್ರವಲ್ಲದೆ ಇಂಗ್ಲಿಷ್, ವಿಜ್ಞಾನ, ಸಮಾಜ ಅಧ್ಯಯನ, ಹಿಂದಿ ಮತ್ತು ಗಣಿತ ವಿಷಯಗಳ ಪಠ್ಯವನ್ನೂ ಒಳಗೊಂಡಿದೆ. 'ಪಾಠನಾಟಕ' ಮತ್ತು 'ಗೀತನಾಟಕ' ಪ್ರಕಾರವು ಮಕ್ಕಳನ್ನು ಆಕರ್ಷಿಸಲು ಹೆಚ್ಚು ಸಮಯವನ್ನೇನೂ ತೆಗೆದುಕೊಳ್ಳಲಿಲ್ಲ' ಎಂದು ವೆಂಕಟೇಶ್ವರ ರಂಗ ಪ್ರಯೋಗದ ಇನ್ನೊಂದು ಅನುಭವ ಹಂಚಿಕೊಂಡರು.

ಈ ಶಾಲೆಯಲ್ಲೀಗ ಪ್ರತಿ ವಾರ ಇರುವ ಆಯಾ ವಿಷಯಗಳ ಆರು ಪೀರಿಯಡ್‌ಗಳ ಪೈಕಿ ಒಂದು ಪೀರಿಯಡ್ ರಂಗಕಲೆ ಕಲಿಸುವುದಕ್ಕೆ ಮೀಸಲು. ಒಂದು ಪಾಠ ಅಥವಾ ಪದ್ಯದ ಬೋಧನೆ ಪೂರ್ಣಗೊಳ್ಳಲು ನಾಲ್ಕು ಅಥವಾ ಐದು ಪೀರಿಯಡ್‌ಗಳು ಬೇಕು. ಆ ಪಾಠ-ಪದ್ಯ ಪೂರ್ಣಗೊಂಡ ನಂತರದ ಪೀರಿಯಡ್ ರಂಗಸಜ್ಜಿಕೆಯಲ್ಲಿ ನಡೆಯುತ್ತದೆ. ಬೋಧನೆಯ ಮೂಲಕ ಕಲಿತದ್ದನ್ನು ಅವರು ಅಭಿನಯಿಸಿ ಒಪ್ಪಿಸುವುದು ಮುಂದುವರಿದ ಅವಧಿಯ ಕಲಿಕೆಯ ಸಾರಾಂಶ.

ಗೈರಾಗುವ ಸಮಸ್ಯೆಗೆ ಪರಿಹಾರ

ಕೃಷಿ ಚಟುವಟಿಕೆಯಲ್ಲಿ ಪಾಲಕರಿಗೆ ನೆರವು ನೀಡಲೋ, ತಮ್ಮ ತಂಗಿಯರನ್ನು ನೋಡಿಕೊಳ್ಳಲೋ ಶಾಲೆ ತಪ್ಪಿಸುವುದನ್ನು ರೂಢಿಸಿಕೊಂಡಿದ್ದ ಈ ಶಾಲೆಯ ಮಕ್ಕಳು ಬರಬರುತ್ತ 'ಗೀತನಾಟಕ'ದಂಥ ಅನೌಪಚಾರಿಕ ಬೋಧನೆಯ ಕ್ರಮಕ್ಕೆ ಮನಸೋತರು. ಒಂದೇ ಒಂದು ದಿನ ಶಾಲೆ ತಪ್ಪಿಸಿಕೊಂಡರೂ ಏನನ್ನೋ ಕಳೆದುಕೊಂಡ ಭಾವ ಅವರಲ್ಲಿ ಆವರಿಸುತ್ತಾ ಹೋಯಿತು. ಹೀಗೆ ಅವರ 'ಶಾಲಾ ಗೈರು' ಸಮಸ್ಯೆಗೆ ಪರಿಹಾರ ದೊರೆತಿರುವುದು ಅವರ ಕಲಿಕೆಯ ಮೊದಲ ಗೆಲುವೂ ಹೌದು.

ಮಾವಿನಕಟ್ಟೆ ಶಾಲೆಯ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ಅಕ್ಕಪಕ್ಕದ ಗ್ರಾಮಗಳ ಇತರ ಪ್ರೌಢಶಾಲೆಗಳ ವಿದ್ಯಾರ್ಥಿಗಳೊಂದಿಗೆ ಹೋಲಿಕೆ ಮಾಡುವುದಾದರೆ, ಅಲ್ಲಿ ಅಜಗಜಾಂತರ ಇರುವುದು ಎದ್ದುಕಾಣುತ್ತದೆ. ಸಂವಹನ ಕಲೆಯಲ್ಲಿ ಈ ವಿದ್ಯಾರ್ಥಿಗಳ ಸಾಧನೆ ಎಂಥವರಲ್ಲೂ ಅಚ್ಚರಿ ಮೂಡಿಸುತ್ತದೆ.

ಜೀವನಕ್ಕೆ ಹತ್ತಿರವಾದ, ಭವಿಷ್ಯ ರೂಪಿಸಿಕೊಳ್ಳಲು ಪೂರಕವಾದ ಅನೇಕ ಅಂಶಗಳ ಅವಲೋಕನವು ರಂಗಶಿಕ್ಷಣದ ಮೂಲಕ ಕಲಿಕೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೆ ಸಾಧ್ಯವಾಗಿದೆ. ಆಹಾರ ಭದ್ರತೆ ಕುರಿತು ಅವರಲ್ಲಿ ಅರಿವು ಮೂಡಿಸುವ ಪ್ರಯತ್ನಕ್ಕೆ ಜೇಡರ ದಾಸಿಮಯ್ಯನ 'ಒಡಲುಗೊಂಡವಾ ಹಸಿವಾ' ಎಂಬ ವಚನವು ಪೂರಕವಾಗಿ ಒದಗಿಬಂದಿದೆ. ಹೊಟ್ಟೆಯ ಹಸಿವನ್ನು ಪರಿಪೂರ್ಣವಾಗಿ ಅನುಭವಿಸುತ್ತಲೇ ಬಂದಿರುವ ಈ ಮಕ್ಕಳಿಂದ ಅಭಿನಯ ತೆಗೆಸಿ, ಆಹಾರದ ಮಹತ್ವ ಸಾರುವ ಈ ಕ್ರಮವೇ ಅನನ್ಯ.

ಸಣ್ಣಪುಟ್ಟ ಪರಿಕರಗಳನ್ನು ಹೊಂದಿಸಿಕೊಳ್ಳಲು ಪೋಷಕರ, ಊರಿನವರ ಮನ ಒಲಿಸುತ್ತಾ ಬಂದ ವೆಂಕಟೇಶ್ವರ ಕೆಲವೇ ವರ್ಷಗಳಲ್ಲಿ ರಂಗ ಪ್ರಯೋಗಶಾಲೆ ರೂಪಿಸಿರುವುದು ಅನುಕರಣೀಯ. ಶಾಲೆಯಲ್ಲಿ ಅದಕ್ಕೊಂದು ಕೊಠಡಿಯನ್ನು ಮಂಜೂರು ಮಾಡಿಸಿಕೊಂಡು, ಮುಖ್ಯ ಶಿಕ್ಷಕರು, ವಿಷಯ ಶಿಕ್ಷಕರ ಮನವೊಲಿಸಿ 'ಗೀತನಾಟಕ', 'ಪಾಠನಾಟಕ' ಪ್ರಕ್ರಿಯೆ ಯಶಸ್ವಿಯಾಗುವಂತೆ ನೋಡಿಕೊಂಡಿದ್ದಾರೆ.

ಪ್ರಶಸ್ತಿಗಳ ಒಡೆಯರು

ಪ್ರತಿಭಾ ಕಾರಂಜಿ', 'ವಿಜ್ಞಾನ ನಾಟಕ', 'ಕಲಿಕಾ ನಾಟಕ' ಸ್ಪರ್ಧಾ ವಿಭಾಗದ ವಿವಿಧ ಪ್ರಶಸ್ತಿಗಳ ಮೇಲೆ ಈ ವಿದ್ಯಾರ್ಥಿಗಳು ಪ್ರತಿವರ್ಷ ತಮ್ಮ ಪಾರಮ್ಯ ಸಾಧಿಸಲು ನೆರವಾಗಿದೆ. ಮಾವಿನಕಟ್ಟೆ ಶಾಲೆಗೆ ರಂಗ ಶಿಕ್ಷಕರ ಹುದ್ದೆ ಭರ್ತಿಯಾಗಿದ್ದರಿಂದ ಆ ಶಾಲೆಯ ಶೈಕ್ಷಣಿಕ ಪ್ರಗತಿಯು ಗೋಡೆಯ ಮೇಲಿನ ಸುಣ್ಣದಂತೆ ಕಂಗೊಳಿಸುತ್ತಿದೆ.

ರಂಗಚಟುವಟಿಕೆಯಲ್ಲಿ ವಿದ್ಯಾರ್ಥಿಗಳಿಗೆ ನಾಟಕ ತರಬೇತಿ

ಯಾವಾಗ ಬಂದೀತು 'ಯಾಂಬು' ಕುಣಿತ?

ಡಾ. ಕೆ.ಎಸ್. ಪವಿತ್ರ



ಏರ್‌ಪೋರ್ಟ್‌ನಲ್ಲಿ ವಿಮಾನ ಹತ್ತಲು ಸೆಕ್ಯೂರಿಟಿ ಚೆಕ್‌ಗಾಗಿ ಕ್ಯೂನಲ್ಲಿ ನಿಂತಿದ್ದೆ. ಮನುಷ್ಯರು ಪಾಸ್‌ಪೋರ್ಟ್-ಬೋರ್ಡಿಂಗ್ ಪಾಸ್ ಚೆಕ್ ಮಾಡುವ ಬದಲಿಗೆ, ಅಲ್ಲೊಂದು ತೆರೆ. ಆ ತೆರೆಯ ಮೇಲೊಬ್ಬಳು ಸುಂದರಿ, ಆಕೆ ನಮಸ್ಕಾರ ಮಾಡಿ, ಪ್ರತಿಯೊಬ್ಬರಿಗೂ ಹಲೋ ಹೇಳಿ, ಕೈಯ್ಯಲ್ಲೇ, ಎಲ್ಲಿ ನಮ್ಮ ದಾಖಲೆ ಸ್ಕ್ಯಾನ್ ಮಾಡಬೇಕು ಎಂದು ತೋರಿಸಿ, ನಾವು ಹಾಗೆ ಮಾಡಿದ ನಂತರ, 'ಟಾಟಾ' ಎಂದು ಕೈಯ್ಯಾಡಿಸಿ ಮುಂದೆ ಹೋಗಲು ಬಿಡುತ್ತಿದ್ದಳು. ನನಗೆ ಭಾಷೆಯಿಲ್ಲದೆ ಹಾವ-ಭಾವದ ಮೂಲಕವೇ ಎಲ್ಲವನ್ನೂ ನಮಗೆ ತಲುಪಿಸುತ್ತಿದ್ದ ತೆರೆಯ ಮೇಲಿನ ಈ ಗೊಂಬೆ ಒಂದು ನೃತ್ಯದ ಚಲನೆಯನ್ನೇ ಮಾಡುತ್ತಿದ್ದಾಳೆ ಅನಿಸಿಬಿಟ್ಟಿತು. ಸೆಕ್ಯೂರಿಟಿ ಚೆಕ್ ಮುಗಿಸಿ ಒಳಹೋಗಿ ಮೊಬೈಲ್ ತೆರೆದರೆ ವಾಟ್ಸ್ ಆ್ಯಪ್‌ನಲ್ಲೊಂದು ಚಿಕ್ಕ ವಿಡಿಯೊ ತುಣುಕು ಹರಿದಾಡುತ್ತಿತ್ತು. ಯಾವ ವಿಡಿಯೊ ತುಣುಕು? ಚೀನಾದ ಡಿಸ್ನಿಲ್ಯಾಂಡ್‌ನಲ್ಲಿ ಎರಡು ಗೊಂಬೆಗಳು ಮಾಡಿದ ಶಾಸ್ತ್ರೀಯ ನೃತ್ಯ. ಇವು 'ಯಾಂಬು ಗೊಂಬೆ'ಗಳು. 'ಯಾಂಬು' ಅಂದರೆ ಆದಿವಾಸಿ ಗೊಂಬೆಯಾಟವೋ ಅಥವಾ ಯಾವುದೋ ಜನಪದ ನೃತ್ಯವೋ ಅಂತ ನೀವಂದುಕೊಂಡರೆ ಅದು ಪೂರ್ತಿ ತಪ್ಪು! 'ಯಾಂಬು' ಅಂದರೆ 'ಯಾಂತ್ರಿಕ ಬುದ್ಧಿಮತ್ತೆ'- ಆರ್ಟಿಫಿಷಿಯಲ್ ಇಂಟೆಲಿಜೆನ್ಸ್. 'ಯಾಂಬು' ಬಗ್ಗೆ ಅಸಹನೆಯಿಂದ ಹಿರಿಯ ತಲೆಗಳು "ಅವರಿಬ್ಬರು 'ಯಾಂಬು' ನರ್ತಕಿಯರಾಗಿರಲು ಸಾಧ್ಯವೇ ಇಲ್ಲ" ಎಂದು ವಾಟ್ಸ್ ಆ್ಯಪ್‌ನಲ್ಲಿ ಗಲಾಟೆ ಮಾಡಲಾರಂಭಿಸಿದರು! ಬಿಡದೆ ಕೆದಕಿ ಅದು 'ಫೇಕ್' ಮಾಹಿತಿಯೇ ಎಂದು ಖಚಿತಪಡಿಸಿದರು. ಆದರೆ 'ಯಾಂಬು ಕುಣಿತ', ಚ್ಯಾಟ್ ಜಿಪಿಟಿ ಕಥೆ-ಕವನ-ಕಾದಂಬರಿ ಬರೆಯುತ್ತಿರುವ, 'ಅಲೆಕ್ಸಾ' ನಮ್ಮ ಮಕ್ಕಳೊಡನೆ ಮಾತಾಡುತ್ತ ಸ್ನೇಹ ಬೆಳೆಸಿರುವ ಈ ದಿನಗಳಲ್ಲಿ ಅಸಾಧ್ಯ ಎಂದು ತಳ್ಳಿ ಹಾಕುವಂತಿಲ್ಲ!

'ಯಾಂಬು' ವನ್ನು ಕೃತಕ ಬುದ್ಧಿಮತ್ತೆ ಎಂದು ಕರೆಯುವುದು, ಅಪಾರ ಸಾಧ್ಯತೆಗಳ, ಆಧುನಿಕ ಮಿತ್ರನೇ ಆಗಿರುವ ಕಂಪ್ಯೂಟರ್‌ಗೂ (ಅಥವಾ ಅಂತಹ ಎಲ್ಲ ಸಾಧನಗಳಿಗೂ), ಅದನ್ನು ರೂಪಿಸಿರುವ ಮಾನವ ಬುದ್ಧಿಮತ್ತೆಗೂ ಅಪಮಾನ ಎಂದು ನಾನು ಭಾವಿಸುತ್ತೇನೆ. 'ಯಾಂತ್ರಿಕ ಬುದ್ಧಿಮತ್ತೆ' ಎನ್ನುವುದು ಯಂತ್ರದ ಬುದ್ಧಿಮತ್ತೆ ಎನ್ನುವುದನ್ನು ಸೂಚಿಸಲೂ, 'ಯಾಂಬು' ಅಂತ 'ಕ್ಯೂಟ್' ಆಗಿದೆ ಎಂಬ ಕಾರಣಕ್ಕೂ 'ಎಐ' ಅನ್ನು ನಾವು 'ಯಾಂಬು' ಎಂದೇ ಕರೆಯೋಣ.

ನೃತ್ಯ ಜಗತ್ತಿನಲ್ಲಿ 'ಯಾಂಬು' ಪ್ರವೇಶಿಸಿ ಕೆಲ ವರ್ಷಗಳೇ ಆಗಿವೆ. ಒಂದು ಚಲನೆಯನ್ನು ಗ್ರಹಿಸಿ ಅದನ್ನು 'ನೊಟೇಟ್' ಮಾಡುವುದು, ಚಲನೆಗಳನ್ನು ಸರಣಿಯಾಗಿ ಜೋಡಿಸಿ ಒಂದು ನೃತ್ಯ ಬಂಧವನ್ನು ಸೃಷ್ಟಿಸುವುದು, ಕಲಾವಿದೆಯೊಬ್ಬಳ ಶೈಲಿಯನ್ನು ಕರಾರುವಾಕ್ಕಾಗಿ ಹಿಡಿದಿಡುವುದು, ಕಲಾವಿದೆಯ ಮರಣಾನಂತರವೂ ಆಕೆಯ ನೃತ್ಯವನ್ನು ಜೀವಂತವಾಗಿಡುವುದಷ್ಟೇ ಅಲ್ಲ, ಅದನ್ನು ಇತರರು ಕಲಿಯಲೂ ಕಾಪಿಡುವುದು- ಇವು 'ಯಾಂಬು' ಈಗಾಗಲೇ ನೃತ್ಯ ಜಗತ್ತಿನಲ್ಲಿ ಮಾಡುತ್ತಿರುವ ಕೆಲಸಗಳು. 'ಹ್ಯೂಮನಾಯ್ಡ್'- ಮಾನವರಂತಹ ಆದರೆ ಮಾನವರಲ್ಲದ 'ಯಾಂಬು' ಗೊಂಬೆಗಳೊಡನೆ ಪ್ರಾಕ್ಟೀಸ್ ಮಾಡುವುದು, ಪ್ರಸಿದ್ಧ ಪಾಪ್ ನೃತ್ಯಗಳನ್ನು ಯಥಾವತ್ತಾಗಿ 'ಯಾಂಬು' ಗೊಂಬೆಗಳು ಅನುಕರಿಸಿ, ಕಲಿಯಬೇಕೆಂಬ ಆಸೆಯಿರುವ ಇತರರಿಗೆ 'ಮಾಡೆಲ್' ಆಗುವ ಪ್ರಯೋಗಗಳೂ ಈಗಾಗಲೇ ನಡೆಯುತ್ತಿವೆ. ಸದ್ಯದಲ್ಲೇ 'ಯಾಂಬು' ಕೊರಿಯಾಗ್ರಫರ್ ನೃತ್ಯ ಸಂಯೋಜನೆಗಳು ವೇದಿಕೆಯ ಮೇಲೆ ಕಲಾವಿದರಿಗೆ ಸಹಕರಿಸಲಿವೆ.

'ಯಾಂಬು' ಚೆಸ್ ಆಡಬಹುದು ಎಂದರೆ, 'ಯಾಂಬು' ಸರ್ಜರಿ ಮಾಡಬಹುದಾದರೆ, ಶಾಸ್ತ್ರೀಯ ನೃತ್ಯವನ್ನೂ ಅದು ಮಾಡಬಹುದಲ್ಲ? ನೃತ್ಯವನ್ನು ಮಾಡಬಹುದು, ಆದರೆ ಶಾಸ್ತ್ರೀಯ?! ಸಹಜವಾಗಿ ಭರತನಾಟ್ಯದಂತಹ ಶಾಸ್ತ್ರೀಯ ನೃತ್ಯಕ್ಕೆ ತಳಹದಿ ಗಟ್ಟಿಯಾಗಿದೆ. ಕಂಪ್ಯೂಟರ್‌ಗೆ ಸುಲಭವಾಗಿ ಫೀಡ್ ಮಾಡಬಲ್ಲ ಸಂಸ್ಕೃತ ಭಾಷೆಯಲ್ಲಿ ಸೂತ್ರಗಳಿವೆ. ಒಂದು 'ಜತಿ'ಯನ್ನು, ತಿಲ್ಲಾನವನ್ನು 'ಕಂಪೋಸ್' ಮಾಡಲು 'ಯಾಂಬು'ವಿಗೆ ಚಿಟಿಕೆ ಹೊಡೆದಷ್ಟು ಅಥವಾ ತೆರೆಯನ್ನು ಒಮ್ಮೆ 'ರಿಫ್ರೆಷ್' ಮಾಡಿದಷ್ಟೇ ಇದು ಸುಲಭವಾಗಬೇಕು. ನೃತ್ಯ ತರಗತಿಗಳಲ್ಲಿ ಕಂಪ್ಯೂಟರ್ ಅವಿಭಾಜ್ಯ ಅಂಗ ಅಥವಾ ಅದೇ ಮುಖ್ಯ ಗುರು ಎಂಬ ಕಾಲ ಇನ್ನೇನು ಸನ್ನಿಹಿತ!

ಕಲಾವಿದೆಯಾಗಿ ನನ್ನಲ್ಲಿ ಇದು ಮಿಶ್ರ ಭಾವಗಳನ್ನು ಹುಟ್ಟಿಸುತ್ತದೆ. ಮಾನವನ ಬುದ್ಧಿಶಕ್ತಿ ನಿರಂತರವಾಗಿ ಬೆಳೆಯುವಂತಹದು; ಮಿದುಳಿನ ಸೃಷ್ಟಿಶೀಲತೆಗೆ ಮಿತಿಯೇ ಇಲ್ಲ. 'ಯಾಂಬು' ಈ ಸೃಷ್ಟಿಶೀಲತೆಗೆ ಇನ್ನಷ್ಟು ಬೆಂಬಲವೂ ಆಗಬಹುದು. 'ಗುರು'ವಿಗೊಂದು ಸಮರ್ಥ ಸಹಾಯಕನೂ/ ಸಹಾಯಕಿಯೂ, ಅಥವಾ 'ಸಹಾಯಕ್' (ಮಗುವಿನ ಹಾಗೆ?!) ಆಗಬಹುದು.

ಶಾಸ್ತ್ರೀಯ ನೃತ್ಯದೊಳಗೆ ನಾವು ಬಹುವಾಗಿ ಕಾಣುವ ಗುರು-ಶಿಷ್ಯ ಸಂಬಂಧದಲ್ಲಿ 'ಯಾಂಬು' ಯಾವ ಕಡೆ ನಿಲ್ಲಬಹುದು?! ಹೇಗೆ ಈ ಸಂಬಂಧವನ್ನು ವರ್ಧಿಸಬಹುದು/ ಹದಗೆಡಿಸಬಹುದು? ದೇಹ-ಮನಸ್ಸು-ಆತ್ಮಗಳ ಸಮಾಗಮ ಎಂದು ನೃತ್ಯವನ್ನು ಶಿಷ್ಯನಿಗೆ ಹೇಳಿಕೊಡುವ ಗುರು ದೇಹ-ಮನಸ್ಸು-ಆತ್ಮ-'ಯಾಂಬು'ಗಳನ್ನೂ ಬೆಸೆಯಬೇಕಾಗಬಹುದೆ? ಮುಂದೊಂದು ದಿನ 'ಯಾಂಬು'ಗಳದ್ದೇ ಜಗತ್ತಿನಲ್ಲಿ ಮಾನವ ಪ್ರೇಕ್ಷಕರ ಜೊತೆ 'ಯಾಂಬು' ಪ್ರೇಕ್ಷಕನೂ ಕುಳಿತಿರುವಂತಾದೀತೆ?

ನೃತ್ಯ-ಕೈಕಾಲು ಚಲನೆಗಳು, ರೇಖಾ ಗಣಿತ-ಗಣಿತದ ಲೆಕ್ಕಾಚಾರಗಳ ಚಲನೆ-ತಾಳಗಳು ಇವೆಲ್ಲವನ್ನೂ ಮಾನವನ ಕಲ್ಪನೆಗೂ ಮೀರುವಂತೆ, ಕ್ಷಣಗಳಲ್ಲಿ ಅನುಸರಿಸುವುದು-ಅನುಕರಿಸುವುದು-ಸೃಷ್ಟಿಸುವುದು 'ಯಾಂಬು'ಗೆ ಸಾಧ್ಯ. ಆದರೆ ಅಭಿನಯ, ಭಾವ-ರಸಗಳು? 'ಯಾಂಬು' ಹೇಗೆ ಸೃಷ್ಟಿಸುವ ಪ್ರಯತ್ನ ಮಾಡಬಹುದು ಅಥವಾ ಯಾಂಬು ಗೊಂಬೆಗಳು ಅಭಿನಯದಲ್ಲಿ ಒಂದು ದೇವರ ನಾಮವನ್ನು ಹೇಗೆ ಮಾಡಿ ತೋರಿಸಬಹುದು? ನಾನು ಕುತೂಹಲದಿಂದ ಕೊಂಚ ಬೆರಗು-ಒಂಥರಾ ವಿಷಾದದಿಂದ ಕಾದಿದ್ದೇನೆ! ಗುರು-ಶಿಷ್ಯರ ಮಧ್ಯೆ ಹಲವು ಇರುವ ಭಾವಗಳ ಮಿಶ್ರಣ- ಒಂದು ಅದ್ಭುತ ಚಲನೆಯನ್ನು ವೇದಿಕೆಯ ಮೇಲೆ ನೋಡಿದಾಗ ಉಂಟಾಗುವ ಉದ್ವೇಗ ಇವು 'ಯಾಂಬು'ವಿನಿಂದಾಗಿ ಹೇಗೆ ಬದಲಾಗಬಹುದು? ಒಟ್ಟಿನಲ್ಲಿ ಅಭಿನಯ-ರಸಗಳನ್ನು ಯಾಂಬುವಿಗೆ 'ಫೀಡ್' ಮಾಡಿದರೂ, ಅಂದರೆ ಉಣಿಸಿದರೂ, ಅದು ಸ್ವಲ್ಪ ಹೊತ್ತು ಅಗಿದು, ಆ ಮೇಲೆಯೇ ಹೊರಹಾಕಬೇಕು! ಅಭಿನಯ-ರಸ-ಮಾನವ ಭಾವನೆಗಳ ನೃತ್ಯದ ವಿಷಯದಲ್ಲಿ ಮಾತ್ರ- 'ಯಾಂಬು'ವಿಗೆ ದೊಡ್ಡ ಮಿದುಳಿದ್ದರೂ, ಎರಡೂ ಎಡಗಾಲುಗಳೇ ಇವೆ! (ಎಐ ಹ್ಯಾಸ್ ಬಿಗ್ ಬ್ರೇನ್ ಬಟ್ ಇಟ್ ವುಡ್ ಸ್ಟಿಲ್ ಹ್ಯಾವ್ ಟೂ ಲೆಫ್ಟ್ ಫೀಟ್) ಎಂಬ ಮಾತು ಸದ್ಯಕ್ಕಂತೂ ಸತ್ಯ! ❖

ಹೋರಾಟದ ದಿನಗಳನ್ನು ನೆನಪಿಸಿದ 'ವೀರ ಭಾರತಿ'

ಕೃಷ್ಣಿ ಶಿರೂರ

ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಮಹಿಳೆಯರದ್ದು ಪ್ರಮುಖ ಪಾತ್ರವಿದೆ. ಅದನ್ನು ಸಂಕ್ಷಿಪ್ತವಾಗಿ ತಿಳಿಪಡಿಸಲು ಹುಬ್ಬಳ್ಳಿಯ ಕಲಾಸುಜಯ ಸಂಸ್ಥೆಯ 75 ವರ್ಷದವರೆಗಿನ 75 ಕಲಾವಿದರ ತಂಡ ಹುಬ್ಬಳ್ಳಿಯ ಸವಾಯಿ ಗಂಧರ್ವ ಸಭಾಂಗಣದಲ್ಲಿ 'ವೀರಭಾರತಿ' ನೃತ್ಯರೂಪಕ ಪ್ರದರ್ಶಿಸಿತು.

ಒಂದೂವರೆ ಗಂಟೆ ಅವಧಿಯ ಈ ನೃತ್ಯರೂಪಕವು ಹೋರಾಟದ ದಿನಗಳನ್ನು ನೆನಪಿಗೆ ತಂದಿತು ಅಲ್ಲದೇ ಮಹಿಳೆಯರ ತ್ಯಾಗ, ಸಂಘರ್ಷ ಮತ್ತು ಆಕ್ರೋಶವನ್ನು ಅನಾವರಣಗೊಳಿಸಿತು. ಹೋರಾಟದ ಒಂದು ಕಥೆಯಿಂದ ಮತ್ತೊಂದಕ್ಕೆ ಸಾಗುವಾಗ ಸಿಗುವ ಮೂರು-ನಾಲ್ಕು ನಿಮಿಷದ ಕನಿಷ್ಠ ಕಾಲಾವಕಾಶದಲ್ಲಿ ಪಾತ್ರಕ್ಕೆ ತಕ್ಕಂತೆ ವೇಷಭೂಷಣ ಬದಲಾಯಿಸಿ ಕಲಾವಿದರು ಹೊಂದಿಕೊಳ್ಳುವುದು ಅಚ್ಚರಿ ಮೂಡಿಸಿತು. ಭರತನಾಟ್ಯದಲ್ಲಿ ಯಕ್ಷಗಾನದ ಹೆಜ್ಜೆಗಳೂ ಮೂಡಿಬಂದವು. ಸನ್ನಿವೇಶಗಳಿಗೆ ತಕ್ಕ ಬೆಳಕಿನ ಸಂಯೋಜನೆ ಕಾರ್ಯಕ್ರಮದ ಮೆರಗು ಹೆಚ್ಚಿಸಿತು. ವಿದ್ವಾನ್ ವಿ.ವಿ.ಗೋಪಾಲರ ಸಾಹಿತ್ಯ, ಸುಜಯ ಶಾನಭಾಗ ಅವರ ಪರಿಕಲ್ಪನೆ-ನೃತ್ಯ ಸಂಯೋಜನೆ, ನಟನೆ, ವಿ.ಪ್ರವೀಣ ಡಿ. ರಾವ್ ಅವರ ಸಂಗೀತ, ಕಿರಣರಾಮ್ ಅವರ ಕಥಾಮಾಲಿಕೆ, ಸೂರ್ಯರಾವ್ ಲೈಟಿಂಗ್, ಪ್ರಭಾತ್ ಸ್ಟುಡಿಯೊ ಧ್ವನಿಮುದ್ರಣದೊಂದಿಗೆ ಇಡೀ ನೃತ್ಯರೂಪಕ ಜೀವಕಳೆ ಪಡೆದಿದೆ. ❖

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಹುಬ್ಬಳ್ಳಿಯ ಕಲಾಸುಜಯ ಸಂಸ್ಥೆಯ 75 ವರ್ಷದವರೆಗಿನ 75 ಕಲಾವಿದರ ತಂಡ ಹುಬ್ಬಳ್ಳಿಯ ಸವಾಯಿ ಗಂಧರ್ವ ಸಭಾಂಗಣದಲ್ಲಿ ಪ್ರದರ್ಶಿಸಿದ 'ವೀರಭಾರತಿ' ನೃತ್ಯರೂಪಕ

ಚಿತ್ರಗಳು: ಹರ್ಷದ್ ಕಾಮತ್

'ವೀರಭಾರತಿ' ನೃತ್ಯರೂಪಕ

'ವೀರ ಭಾರತಿ' ನೃತ್ಯ ರೂಪಕದ ದೃಶ್ಯ

'ಕ್ವಿಯರ್' ಕಲಾ ಕನ್ನಡಿ..

10ನೇ ಪುಟದಿಂದ...

ಅಲ್ಲಲ್ಲಿ ಒಂದಷ್ಟು ಜೋಗಪ್ಪಗಳ ಪಾತ್ರಗಳು, ಟ್ರಾನ್ಸ್ ಮಹಿಳೆಯರ ಪಾತ್ರಗಳು ಮುನ್ನೆಲೆಗೆ ಬಂದರೂ ಅತಿಯಾದ ಸಿಂಪಥಿ, ಸಾಧನೆ ಮಾಡಿದರೆ ಮಾತ್ರ ಆ ಪಾತ್ರಗಳಿಗೆ ಮನ್ನಣೆ ಮುಂತಾದ ಅತಿಭಾರಗಳನ್ನು ಹೊರಿಸಿ ಕೂರಿಸುವ ಸಿನಿಮಾಗಳೆ ಹೆಚ್ಚು ಮುನ್ನಲೆಗೆ ಬರಲು ಶುರುಮಾಡಿದವು. ಟ್ರಾನ್ಸ್ ಮಹಿಳೆಯರ ಜೀವನದ ಕಥೆಗಳನ್ನು ಹೇಳುವ ಕಥೆಗಳಲ್ಲಿ ಕೂಡ ಸರ್ಜರಿ, ಗಂಡು ಹೆಣ್ಣಾಗುವ ಹಿಜ್ರಾ ಸಂಸ್ಕೃತಿ ಮತ್ತು ಆಚರಣೆಗಳೆ ಮುಖ್ಯ ಕೇಂದ್ರದಲ್ಲಿರುವ ವಸ್ತುಗಳೆ ಕೇಂದ್ರದಲ್ಲಿರುತ್ತಿದ್ದವು. ಸಂಚಾರಿ ವಿಜಯ್ ಅಭಿನಯದ ಕನ್ನಡದ 'ನಾನು ಅವನಲ್ಲ ಅವಳು', ಜಯಸೂರ್ಯ ಅಭಿನಯದ ಮಲಯಾಳಂ ಸಿನಿಮಾ 'ನಾನ್ ಮೇರಿಕುಟ್ಟಿ' ಮುಖ್ಯ ಸಿನಿಮಾಗಳೇ ಆಗಿದ್ದರೂ ಈ ಮೇಲೆ ಉಲ್ಲೇಖಿಸಲಾದ ಕೆಲವು ವಿಚಾರಗಳಿಂದ ಅವು ಸೊರಗಿರುವಂತೆ ಕಾಣುತ್ತವೆ.

ಅನನ್ಯ ಕಾಸರವಳ್ಳಿ ನಿರ್ದೇಶನದ 'ಹರಿಕಥಾಪ್ರಸಂಗ' ಸಿನಿಮಾ ಕಲಾತ್ಮಕತೆಯ ದೃಷ್ಟಿಯಿಂದ ಸೆಳೆದರೂ ಕಥಾ ಮುಖ್ಯಪಾತ್ರದ ಅನಗತ್ಯ ದುರಂತ ಅಂತ್ಯ ಮತ್ತೆ ಸಮುದಾಯದ ಜನರ ಮನಸ್ಸನ್ನು ಮುದುಡಿಸುತ್ತದೆ. ಸಾವೊಂದೆ ನಮಗುಳಿಯುವ ಉತ್ತರವೆ? ಗೋಪಾಲಕೃಷ್ಣ ಪೈ ಅವರ ಕಥೆಯನ್ನು ಸಿನಿಮಾ ಮಾಡುವಾಗ ಅನನ್ಯ ಒಂದು ಅಕ್ಷರ ಪಠ್ಯಕ್ಕೆ ನಿಷ್ಠವಾಗಿರುವ ಸವಾಲನ್ನು ಎದುರಿಸಿರಲೂಬಹುದು.

ಇತ್ತೀಚೆಗೆ ಬಿಡುಗಡೆಯಾದ ಸುಶ್ಮಿತಾ ಸೇನ್ ಅಭಿನಯದ 'ತಾಳಿ' ಎಂಬ ವೆಬ್ ಸೀರೀಸ್ ಕೂಡ ಮೇಲುಸ್ತರದಲ್ಲಿ, ಅತಿ ರಂಜಕತೆಯ, ಅತಿಭಾವುಕತೆಯ ನರೇಷನ್ ಆಗಿಯೆ ಉಳಿಯುತ್ತದೆಯೆ ಹೊರತು ಅದು ನಮಗೆ ಹತ್ತಿರ ಎನಿಸುವುದಿಲ್ಲ. ಜಯಸೂರ್ಯ ಅಭಿನಯದ 'ನಾನ್ ಮೇರಿ ಕುಟ್ಟಿ' ಕೂಡ ವಾಸ್ತವದಿಂದ ದೂರವಿರುವ ಸಿನಿಮಾ ಎಂದೇ ಹೋರಾಟಗಾರ ಮತ್ತು ಸಿನಿಮಾ ಮೋಹಿಯಾದ ಟ್ರಾನ್ಸ್‌ಮ್ಯಾನ್ ಸುನಿಲ್ ಮೋಹನ್ ಹೇಳುತ್ತಾರೆ. ಇವರು ಕೇರಳ ಮಹಿಳಾ ಕ್ರಿಕೆಟ್ ತಂಡದ ನಾಯಕಿಯಾಗಿದ್ದವರು. ಅವರನ್ನು ಸಿನಿಮಾಗಳಲ್ಲಿ ಕ್ವಿಯರ್ ಸಂವೇದನೆ ಕುರಿತು ಮಾತನಾಡಿಸಿದಾಗ ಹೀಗೆಂದರು:

"1986 ರಲ್ಲಿ ಬಿಡುಗಡೆಯಾದ 'ದೇಶಾಟನಕ್ಕಿಳಿ ಕರಯಾರಿಲ್ಲ' ಎಂಬ ಮಲಯಾಳಂ ಸಿನಿಮಾವನ್ನು ಪಿ. ಪದ್ಮರಾಜ್ ಬರೆದು ನಿರ್ದೇಶಿಸಿದ್ದರು. ಮೋಹನ್ ಲಾಲ್, ಊರ್ವಶಿ ಎಲ್ಲರೂ ಅಭಿನಯಿಸಿದ್ದರು. ಪದ್ಮರಾಜ್ ಮತ್ತು ಭರತನ್ ಮುಂತಾದ ನಿರ್ದೇಶಕರು ಆ ಕಾಲದಲ್ಲಿ ಕೇರಳದಲ್ಲಿ ಲಿಂಗತ್ವ ಮತ್ತು ಲೈಂಗಿಕತೆ ಮುಂತಾದ ವಸ್ತುಗಳನ್ನು ತೆಗೆದುಕೊಂಡು ಸಿನಿಮಾ ಮಾಡುತ್ತಿದ್ದರು. ಪೃಥ್ವಿರಾಜ್ ಮಲಯಾಳಂ ಸಿನಿಮಾದಲ್ಲಿ ತುಂಬಾ ಚಾಲ್ತಿಯಲ್ಲಿರುವಾಗಲೆ ರೋಶಾನ್ ನಿರ್ದೇಶನದ 'ಮುಂಬೈ ಪೋಲೀಸ್' ಸಿನಿಮಾದಲ್ಲಿ ಒಬ್ಬ ಸಲಿಂಗಪ್ರೇಮಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದ. ಸಸ್ಪೆನ್ಸ್ ಥ್ರಿಲ್ಲರ್ ಜಾನರಿಗೆ ಸೇರುವ ಈ ಸಿನಿಮಾ ಮಲಯಾಳಂ ಚಿತ್ರರಂಗದಲ್ಲಿ ಸಂಚಲನವನ್ನೆ ಉಂಟುಮಾಡಿತ್ತು. ಅಂತೆಯೆ 'ಸಂಚಾರಂ' ಸಿನಿಮಾವನ್ನು ಕೇರಳ ಚಿತ್ರರಂಗ ಬಿಡುಗಡೆಗೂ ತಡೆಯೊಡ್ಡಿತ್ತು. 2014ರ ನಂತರದಲ್ಲಿ ನಾಲ್ಸಾ ತೀರ್ಪು ಬಂದ ಮೇಲೆ ಬಂದ ಸಿನಿಮಾಗಳು ಸಮುದಾಯದವರನ್ನು ಒಪ್ಪಿಕೊಳ್ಳುವ, ಅವರನ್ನು ಒಳ್ಳೆಯ ಪಾತ್ರಗಳಾಗಿ ಚಿತ್ರಿಸುವ ಸಿನಿಮಾಗಳನ್ನು ಮಾಡತೊಡಗಿದರು. ಕೇರಳದಲ್ಲಿ ಸ್ಥಾಪನೆಗೊಂಡ ಜೆಂಡರ್ ಜಸ್ಟಿಸ್ ಬೋರ್ಡಿನಿಂದಾಗಿ ಟ್ರಾನ್ಸ್ ಜೆಂಡರ್ ವಿಷಯಗಳನ್ನು ಸಿನಿಮಾ ವಿಷಯಗಳಾಗಿ ಎತ್ತಿಕೊಳ್ಳುತ್ತಿದ್ದಾರಾದರೂ ಉಳಿದ ಜೆಂಡರ್ ಸ್ಪೆಕ್ಟ್ರಮ್‌ನಲ್ಲಿರುವ ವಿಷಯಗಳ ಕುರಿತು ಸಿನಿಮಾ ಮಾಡಲು ಯಾರೂ ಮುಂದೆ ಬರುತ್ತಿಲ್ಲ."

ಈಗ ಕಾಣಿಸುತ್ತಿರುವ ಎಷ್ಟೋ ಪಾತ್ರಗಳಿಗೆ ಕ್ವಿಯರ್ ಪಾತ್ರಗಳಿಗೆ ಅಸ್ತಿತ್ವವೆ ಇರುವುದಿಲ್ಲ. ಜನರಿಗೆ ಮಾಹಿತಿಯನ್ನು ಕೊಡುವಲ್ಲಿ, ಸಮುದಾಯದವರ ಅಸ್ತಿತ್ವದ ಮೇಲೆ ಬೆಳಕು ಚೆಲ್ಲಿದರೂ, ಅವರನ್ನು ಪರಿಚಯ ಮಾಡಿಕೊಳ್ಳುವಲ್ಲಿಗೇ ಮುಕ್ತಾಯವಾಗುತ್ತವೆ. ಇದಕ್ಕೆ ಅಪವಾದವೆಂಬಂತೆ 'ಮೇಡಿನ್ ಹೆವೆನ್' ಎರಡನೆ ಆವೃತ್ತಿ ಝೋಯಾ ಅಖ್ತರ್ ಮತ್ತು ರೀಮಾ ಕಾಗತಿ ಮುಂತಾದ ಪ್ರತಿಭಾವಂತರ ಕೈಯಲ್ಲಿ ಅರಳಿದ ಒಂದು ಉತ್ತಮ ವೆಬ್ ಸೀರೀಸ್. ಅಲ್ಲಿ ಒಂದು ಟ್ರಾನ್ಸ್ ಪಾತ್ರವಿದೆ. ಅದಕ್ಕೆ ಟ್ರಾನ್ಸ್ ಸಮುದಾಯದ ಜನರನ್ನೆ ಹಾಕಿಕೊಂಡಿದ್ದಾರೆ. ಅದೊಂದು ಗಟ್ಟಿ ನಿರ್ಧಾರವಾದರೂ ಇಡೀ ಸರಣಿ ಒಂದು 'ಟೋಕನಿಸ್ಟಿಕ್' ಹಂತದಲ್ಲಿ ನಿಂತುಬಿಡುತ್ತದೆ. ಹಿಂದಿ ಚಿತ್ರರಂಗದಲ್ಲಿ ದೀಪಾ ಮೆಹ್ತಾ ನಿರ್ದೇಶನದ 'ಫೈರ್', ಪ್ರೊಫೆಸರ್ ರಾಮಚಂದ್ರ ಸಿರಸ್ ಬದುಕಿನ ಚಿತ್ರಣವಾದ ಹನ್ಸಲ್ ಮೆಹತಾ ನಿರ್ದೇಶನದ 'ಆಲಿಘರ್', ನೀರಜ್ ಘಯ್ವಾನ್ ನಿರ್ದೇಶನದ 'ಗೀಲಿ ಪುಚ್ಚಿ' ಮುಂತಾದವುಗಳು ನೆನಪಾಗುತ್ತವೆ.

ಈ ಹೊತ್ತಿನಲ್ಲಿ ನನಗೆ ಭಾರತದ ಒಬ್ಬ ಮಹತ್ವದ ನಿರ್ದೇಶಕ ನೆನಪಾಗುತ್ತಾನೆ. ಪಶ್ಚಿಮ ಬಂಗಾಳದ ರಿತುಪರ್ಣೋ ಘೋಷ್. ಇವರ ನಿರ್ದೇಶನದ 'ಮೆಮೋರಿಸ್ ಇನ್ ಮಾರ್ಚ್', 'ಚಿತ್ರಾಂಗದಾ' ಮುಂತಾದ ಕ್ವಿಯರ್ ವಿಷಯಗಳಿರುವ ಸಿನಿಮಾಗಳು ಕಲಾತ್ಮಕತೆಯ ದೃಷ್ಟಿಯಿಂದಲೂ, ಪಾತ್ರಗಳ ಒಳತೋಟಿಗಳನ್ನು, ಅವುಗಳ ನಾಡಿಮಿಡಿತಗಳನ್ನು ಸರಿಯಾಗಿ ಹಿಡಿದು ಆ ಚಿತ್ರಗಳನ್ನು ಮನುಷ್ಯರ ತೊಳಲಾಟದ ಕಥೆಗಳಾಗಿ ದಾಟಿಸುವ ಉತ್ತಮ ನಿರ್ದೇಶಕನಾಗಿ ನನಗೆ ಕಾಣುತ್ತಾನೆ. ಅದೇ ರೀತಿ ಸ್ಪ್ಯಾನಿಶ್ ಸಿನಿಮಾ ನಿರ್ದೇಶಕ ಪೆದ್ರೊ ಅಲ್ಮಡೋವರ್ ಕಟ್ಟುವ ಸಿನಿಮಾಗಳಲ್ಲಿ ಕ್ವಿಯರ್ ಪಾತ್ರಗಳಿದ್ದರೂ ಅವು ಕಲಾಪ್ರಜ್ಞೆ ಮತ್ತು ಪಾತ್ರ ಚಿತ್ರಣಗಳು ಇವು ನಮ್ಮವೆ ಎನ್ನುವ ಭಾವವನ್ನು ಕೊಡುತ್ತವೆ.

ಇದೇ ವಿಷಯದ ಕುರಿತು ಕನ್ನಡದ ಬರಹಗಾರರಾದ ವಸುದೇಂಧ್ರ ಅವರನ್ನು ಮಾತನಾಡಿಸಿದಾಗ, 'ಭಾರತದಲ್ಲಿ ಮೊನ್ನೆ ತಾನೆ ಕ್ವಿಯರ್ ಸಮುದಾಯಕ್ಕೆ ಸುಪ್ರೀಂ ಕೋರ್ಟ್ ಸ್ವಾತಂತ್ರ್ಯ ಕೊಟ್ಟಿದೆ. ಆದ್ದರಿಂದ ಲಲಿತಕಲೆಗಳಲ್ಲಿ ತಕ್ಷಣವೇ ನಾವು ಕಲಾತ್ಮಕವಾಗಿ, ಸಹಜ ರೀತಿಯಲ್ಲಿ ಕ್ವಿಯರ್ ಬದುಕಿನ ಚಿತ್ರಣ ನಿರೀಕ್ಷಿಸುವುದು ತಪ್ಪಾಗುತ್ತದೆ. ಸದ್ಯ ಅದಿನ್ನೂ ಅಂಬೆಗಾಲಿಡಲು ಪ್ರಾರಂಭಿಸಿದ್ದು, ಬಾಲ್ಯದ ವಿನಾಯಿತಿ ಅದಕ್ಕೆ ಕೊಡಬೇಕು. ಒಮ್ಮೆ ಈ ವಿಷಯಗಳನ್ನು ನಿರ್ಭಿಡೆಯಿಂದ ಸಮಾಜ ಮಾತಾಡಲು ತೊಡಗಿದ ನಂತರ, ಕಾವ್ಯ ಹುಟ್ಟುತ್ತದೆ. ಸಿನಿಮಾಗಳಲ್ಲಿ ಈ ವಿಷಯಗಳ ಬಗ್ಗೆ ಚಳಿ ಬಿಟ್ಟು ಮಾತಾಡುತ್ತಿದ್ದಾರೆ ಎನ್ನುವುದೇ ನನಗೆ ಮುಖ್ಯ. ಈವರೆಗೆ ಭಾರತೀಯ ಸಿನಿಮಾ, ಕ್ರೀಡೆ, ರಾಜಕೀಯ ಲೋಕದ ತಾರೆಗಳು ಯಾರೂ ತಾವು ಕ್ವಿಯರ್ ಎಂದು ದಿಟ್ಟತನದಿಂದ ಹೇಳಿಕೊಂಡಿಲ್ಲ. ಹಾಗೆ ನೋಡಿದರೆ ಅಕ್ಷರಲೋಕದ ನಾಯಕರು ಹೆಚ್ಚು ಧೈರ್ಯವಂತರು. ಇಂತಹ ಉಳಿದವರಲ್ಲೂ ವ್ಯಕ್ತವಾದರೆ ಈ ಚಳವಳಿಗೆ ಒಂದು ಶಕ್ತಿ ದಕ್ಕುತ್ತದೆ. ಈ ಸಮುದಾಯವನ್ನು ಗೇಲಿ ಮಾಡುವ ದುಶ್ಚಟ ಸಿನಿಮಾಗಳಲ್ಲಿ ಈಗ ಕಾಣುವುದಿಲ್ಲ. ಅದೊಂದು ಸಕಾರಾತ್ಮಕ ಬೆಳವಣಿಗೆಯಾಗಿದೆ' ಎಂದರು. ❖

ಮುನ್ನೋಟ 27-08-2023 ರಿಂದ -02-09-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಕೆಲವೊಂದು ಮುಖ್ಯ ಕೆಲಸಗಳಿಗಾಗಿ ದೂರಪ್ರಯಾಣ ಮಾಡಬೇಕಾಗುತ್ತದೆ. ಹುಂಬತನದಿಂದ ಆಡಿದ ಮಾತು ಅಥವಾ ಕೆಲಸಗಳು ನಿಮ್ಮ ಮೇಲೆ ಪರಿಣಾಮ ಬೀರುತ್ತವೆ. ಆದಾಯದಷ್ಟೇ ಖರ್ಚು ಇರುವುದರಿಂದ ಹಣ ನಿರ್ವಹಣೆ ಬಹಳ ಮುಖ್ಯ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸಾಕಷ್ಟು ಉತ್ಸಾಹ ಮೂಡುತ್ತದೆ. ಮಾರಾಟ ಮಾಡಲು ಇಚ್ಛಿಸಿರುವ ಆಸ್ತಿಯಿಂದ ನಿರೀಕ್ಷೆಗೆ ಮೀರಿದ ಹಣ ಬರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಮಕ್ಕಳ ಬಗ್ಗೆ ಉತ್ತಮ ವಾರ್ತೆ ಕೇಳುವಿರಿ. ಕಂದಾಯ ಇಲಾಖೆಯಲ್ಲಿ ಆಗದೆ ನಿಂತಿದ್ದ ಕೆಲಸಗಳು ಈಗ ಆರಂಭಗೊಳ್ಳುತ್ತವೆ. ಯಂತ್ರಗಳ ಜೊತೆ ಕೆಲಸ ಮಾಡವಾಗ ಎಚ್ಚರವಿರಲಿ, ಇಲ್ಲವಾದಲ್ಲಿ ಅಪಘಾತಗಳ ಸೂಚನೆ ಇದೆ. ಶ್ವಾಸಕೋಶದ ತೊಂದರೆ ಇರುವವರು ಹೆಚ್ಚು ಎಚ್ಚರಿಕೆ ತೆಗೆದುಕೊಳ್ಳಿ. ಹರಿಯುವ ನೀರಿನ ಬಳಿ ಹೋದಾಗ ಎಚ್ಚರ ವಹಿಸಿ. ಧನ ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ರಂಗ ಕಲಾವಿದರುಗಳಿಗೆ ಹೆಚ್ಚಿನ ಬೇಡಿಕೆ, ಆದಾಯ ಬರುತ್ತದೆ. ಬಂಧುಗಳ ಸಹಾಯದಿಂದ ಕೆಲವೊಂದು ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತವೆ. ಬೆಂಕಿಯ ಜೊತೆ ಕೆಲಸ ಮಾಡುವವರು ಹೆಚ್ಚು ಜಾಗೃತರಾಗಿ ಕೆಲಸ ಮಾಡಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹೆಚ್ಚಿನ ಶ್ರಮ ಪಡಬೇಕಾದ ಅವಶ್ಯಕತೆ ಇದೆ. ಕೃಷಿ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಿಮ್ಮ ಸ್ವತ್ತುಗಳ ವಿವಾದಗಳು ಪರಿಹಾರವಾಗಲು ಸೂಕ್ತ ವೇದಿಕೆಯೊಂದನ್ನು ಸಿದ್ಧಪಡಿಸುವಿರಿ. ಕಚೇರಿ ಕೆಲಸಗಳಲ್ಲಿ ನಿಮ್ಮ ಮಾತು ನಡೆದು ನಿಮಗೆ ಜಯ ದೊರೆಯುತ್ತದೆ. ಸ್ನೇಹಿತರೊಂದಿಗೆ ಇದ್ದ ಮುನಿಸುಗಳನ್ನು ನಿವಾರಿಸಿಕೊಳ್ಳುವುದು ಒಳ್ಳೆಯದು. ಕೊಟ್ಟಿದ್ದ ಸಾಲ ವಸೂಲು ಮಾಡಲು ನೂರೆಂಟು ಅಡ್ಡಿ ಆತಂಕಗಳು ಎದುರಾಗುತ್ತವೆ. ಮಕ್ಕಳ ಮೇಲಿನ ಅತಿಯಾದ ಪ್ರೀತಿ ನಿಮಗೆ ಮಾರಕವಾಗಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಯಶಸ್ಸಿಗಾಗಿ ಹೊಸ ಮಾರ್ಗಗಳನ್ನು ಹುಡುಕುವಿರಿ. ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರು ತಮ್ಮ ವ್ಯವಹಾರಗಳಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ದಿನದ ಕೆಲಸಗಳನ್ನು ಅಂದೇ ಮುಗಿಸಿಕೊಳ್ಳುವುದು ಬಹಳ ಉತ್ತಮ. ಮಕ್ಕಳಿಗೆ ಪಾಠ ಹೇಳಿ ಕೊಡಲು ಸಾಕಷ್ಟು ಪ್ರಯತ್ನ ಪಡುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮೆಲ್ಲಾ ಕೆಲಸಗಳನ್ನು ಬೇರೆಯವರ ಮೇಲೆ ಹೇರಿ ಆರಾಮವಾಗಿರಲು ಯತ್ನಿಸುವಿರಿ. ಸ್ಥಿರಾಸ್ತಿ ವ್ಯವಹಾರ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಬಂಧುಗಳು ನಿಮ್ಮ ಕಷ್ಟಕ್ಕೆ ಸ್ಪಂದಿಸುವರು. ಹೈನುಗಾರಿಕೆ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಮಕ್ಕಳಿಂದ ಬೇಸರ ಪಡುವ ಪರಿಸ್ಥಿತಿ ಎದುರಾಗಬಹುದು. ವಿದ್ಯುತ್ ಉಪಕರಣಗಳನ್ನು ಬಳಸುವಾಗ ಹೆಚ್ಚಿನ ಎಚ್ಚರ ಇರಲಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಮಾರುಕಟ್ಟೆಯಲ್ಲಿರುವ ಅವಕಾಶಗಳನ್ನು ಉಪಯೋಗಿಸಿಕೊಂಡು ವ್ಯವಹಾರ ನಡೆಸಿದಲ್ಲಿ ಅದರಿಂದ ಶುಭ ಫಲವಿರುತ್ತದೆ. ಅನಿವಾರ್ಯ ಕಾರಣಗಳಿಂದ ರಾತ್ರಿ ನಿದ್ರಾಹೀನತೆ ಕಾಡಬಹುದು. ಇಷ್ಟು ದಿನಗಳವರೆಗೂ ನಿಮ್ಮ ಮಾತನ್ನು ಕೇಳಿಕೊಂಡು ಇರುತ್ತಿದ್ದ ನಿಮ್ಮ ಸಹಚರರು ಈಗ ತಿರುಗಿ ಬೀಳಬಹುದು ಎಚ್ಚರ. ಕಚೇರಿಯಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಳ್ಳ ಬೇಕಾದ ಅನಿವಾರ್ಯತೆ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಅಸೂಯೆ ಪಡುವ ಸಹೋದ್ಯೋಗಿಗಳು ಇರುವೆಡೆಯಲ್ಲಿ ಜಾಣ್ಮೆಯಿಂದ ವ್ಯವಹರಿಸಿ. ಹಣದ ಒಳಹರಿವು ನಿರೀಕ್ಷೆಯಷ್ಟಿದ್ದರೂ ಜಾಣ್ಮೆಯಿಂದ ಅದನ್ನು ನಿಮ್ಮಿಂದ ಕಸಿದುಕೊಳ್ಳುವ ಜನರಿರುತ್ತಾರೆ ಎಚ್ಚರವಾಗಿರಿ. ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಅನಿವಾರ್ಯತೆ ನಿಮಗೆ ಇರುತ್ತದೆ. ಕಾರ್ಯಕ್ಷೇತ್ರದಲ್ಲಿ ಗಟ್ಟಿಧ್ವನಿಯಲ್ಲಿ ಮಾತನಾಡಿ ಕೆಲಸ ಮಾಡಿಸಬೇಕಾಗಬಹುದು. ಸಂಗಾತಿಯಿಂದ ಧನಸಹಾಯ ದೊರೆಯುವ ಸಾಧ್ಯತೆ ಇದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಯಮಿತ ದೇಹ ದಂಡನೆಯಿಂದ ದೇಹವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಬಹುದು. ಉತ್ತರ ಸಿಗದ ಕೆಲವೊಂದು ಪ್ರಶ್ನೆಗಳಿಗೆ ಚಿಂತಿಸುವ ಅಗತ್ಯವಿಲ್ಲ. ನಿಮ್ಮನ್ನು ಅಪೇಕ್ಷಿಸಿ ಬರುವ ಜನರಿಗೆ ನಿಮ್ಮ ಸಲಹೆ ಸೂಚನೆಗಳನ್ನು ಕೊಡಬಹುದು. ಸ್ನೇಹಿತರ ವಿಷಯದಲ್ಲಿ ಅತಿಯಾದ ಆಸಕ್ತಿ ಬೇಡ. ಹೆಚ್ಚು ಆಸಕ್ತಿ ನಿಮಗೆ ದುಬಾರಿಯಾಗಿ ಪರಿಣಮಿಸಬಹುದು. ನಿಮ್ಮ ಚಾಣಾಕ್ಷ ನಡೆ ಶತ್ರುಗಳಿಗೆ ಅರ್ಥವಾಗುವುದಿಲ್ಲ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಸ್ವಲ್ಪ ಉದಾಸೀನತೆ ಮನೆ ಮಾಡಿರುತ್ತದೆ. ನಿಮ್ಮ ತೃಪ್ತಿಕರ ರೀತಿಯ ಜೀವನ ಶೈಲಿ ಇತರರಿಗೆ ಮಾದರಿಯೆನಿಸಬಹುದು. ಉಡುಪು ವಿನ್ಯಾಸ ಮಾಡುವವರಿಗೆ ಹೆಚ್ಚಿನ ಅವಕಾಶಗಳು ದೊರೆತು ಸಂಪಾದನೆ ಹೆಚ್ಚುತ್ತದೆ. ಉದ್ದಿಮೆದಾರರು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ನಿರ್ಧರಿಸುತ್ತಾರೆ. ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಹೋಗಬೇಕೆನ್ನುವವರಿಗೆ ಅವಕಾಶ ಒದಗುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಬಿಡುವಿಲ್ಲದ ದಿನಚರಿಯಲ್ಲಿ ಆಯಾಸವಾದರೂ ಕೆಲಸ ನಿಲ್ಲಿಸುವುದಿಲ್ಲ. ಅನಿವಾರ್ಯವಾಗಿ ಕೆಲವು ಜವಾಬ್ದಾರಿಗಳು ಹೆಗಲೇರುತ್ತವೆ. ಮಧುರವಾದ ನಿಮ್ಮ ಸಾಂತ್ವನದ ನುಡಿಗಳು ನೊಂದ ವ್ಯಕ್ತಿಗಳಿಗೆ ಹೊಸ ಚೇತನವಾಗುತ್ತವೆ. ಇಷ್ಟರವರೆಗೆ ನಿಮ್ಮನ್ನು ದೂರ ಇಟ್ಟಿದ್ದ ಸಂಬಂಧಿಕರು ಈಗ ಅವರ ಕೆಲಸಗಳಿಗಾಗಿ ಹತ್ತಿರಕ್ಕೆ ಬರುವರು. ಯುವಕರು ಕೆಲಸದ ಭಾರವನ್ನು ಕಡಿಮೆ ಮಾಡಿಕೊಳ್ಳಲು ನೆಪ ಹೇಳಿ ಸಿಕ್ಕಿಬೀಳಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಆಸ್ತಿ ಖರೀದಿಗೆ ಮುಂಗಡ ಹಣ ಪಾವತಿ ಮಾಡುವುದಕ್ಕೆ ಮುಂಚೆ ಅದರ ಬಗ್ಗೆ ಸರಿಯಾಗಿ ತಿಳಿಯಿರಿ. ಕೃಷಿಕ ವರ್ಗದವರು ಹೆಚ್ಚು ಕ್ರಿಯಾಶೀಲರಾಗಿ ಕೆಲಸ ಮಾಡುವರು. ಹಂಗಾಮಿ ಕೆಲಸ ಮಾಡುತ್ತಿರುವ ಕೆಲವರಿಗೆ ವೃತ್ತಿ ಖಾಯಂ ಆಗುವ ಸಾಧ್ಯತೆಗಳಿವೆ. ಕೆಲಸದ ಒತ್ತಡದಿಂದ ಕೆಲವರಿಗೆ ತಲೆನೋವು ಬರಬಹುದು. ಸ್ತ್ರೀಯರ ಸಿದ್ಧ ಉಡುಪುಗಳನ್ನು ಮಾರಾಟ ಮಾಡುವವರಿಗೆ ವ್ಯಾಪಾರ ಹೆಚ್ಚುತ್ತದೆ.

ಪದಬಂಧ 2804



ಮೇಲಿನಿಂದ ಕೆಳಕ್ಕೆ

1. ನಾಲ್ಕು ರೀತಿಯಲ್ಲಿ ಬುದ್ಧಿವಂತ, ಚಾಣಾಕ್ಷ 3
2. ಬೃಂದಾವನದಲ್ಲಿ ರಾಧಾ ಪ್ರಿಯಕರ 3
4. ವಾಸ್ತವವನ್ನು ಬಿಟ್ಟು ಊಹೆಯಲ್ಲಿ ವಿಹರಿಸುವ ಹುಡುಗಿ 3
5. ಬೇಲೂರಿನ ಸುಂದರಿ ಹಿಡಿವ ಕನ್ನಡಿ 3
7. ಭಾರವೇ ಇಲ್ಲದೆ ಪೂರ ತೆಳ್ಳಗಾಗಿದೆ 3
8. ಅಲ್ಪ ಪ್ರಾಣದ ಅಚ್ಚ ಬಿಳಿ 3
9. ಅಗಲಿಕೆಯ ನೋವು ಹಾಡಾದಾಗ 3
10. ಚಳಿಗಾಲದ ರಜೆಯಲ್ಲಿ ಹೊದೆಯುವ ಹಿಂದಿ ಹೊದಿಕೆ 3
13. ಉಪ್ಪಿನಿಂದ ಕೂಡಿದ ಅಗಾಧ ಸಾಗರ 3
15. ಉತ್ತರ ಭಾರತದ ಹೆಣ್ಣು ಮಗು 3
16. ತೇದಷ್ಟೂ ಪರಿಮಳ ಪಸರಿಸುವ ಕೊರಡು 3
17. ನರರು ಅನುಭವಿಸಬೇಕಾದ ಸಗ್ಗದ ವ್ಯತಿರಿಕ್ತ ಸ್ಥಿತಿ 3
18. ಬಾಳಿ ಬದುಕಿರೆನ್ನುವ ಕನ್ನಡದ ಕುಲನಾಮ 3
19. ಆರುದ್ರವಗಳು ಒತ್ತರಿಸಿಕೊಂಡು ಬೆಸೆದಿದೆ 3
21. ಅಂತ್ಯದಲ್ಲಿ ಸತ್ಯವೊಂದರಿಂದಲೇ 'ಗೆಲುವು' ಎಂಬ ದಿವ್ಯ ಮಂತ್ರ 3
22. ಉತ್ತರ ಭಾರತದವರು ಹಿಡಿವ ಕೋಲು 3
24. ಕನ್ನಡದ ಪತಿವ್ರತೆ 3
25. ಮಾನಸಿಕ ಒತ್ತಡದಿಂದುಂಟಾದ ಮ್ಲಾನ, ದುಃಖ 3

ಎಡದಿಂದ ಬಲಕ್ಕೆ

1. ಮಕ್ಕಳಿಗೆ ಅಮ್ಮನ ತಮ್ಮನಾಗಿ ಕುರುಕುತಿಂಡಿಯನ್ನು ಕೊಡುತ್ತಾನೆ ಈ ಚಂದ್ರ 5
3. ಒಳ್ಳೆಯದನ್ನು ಮಾಡುವ ಶಿವ ನೀಡುವ ಸಂತಸ 5
6. ದ್ರವದಿಂದ ತುಂಬಿದ ಕನ್ನಡದ ಮೃಷ್ಟಾನ್ನ 5
9. ಯಾವ ನಿಮಿತ್ತವೂ ಇಲ್ಲದೆ ಕೊನೆಯಲ್ಲಿ ರಣವಾಗುತ್ತದೆ 5
11. ಸಂದುಗೊಂದಲಿನಲ್ಲಿ ಹತ್ತಾರು ಕುಟುಂಬ ವಾಸವಿರುವ ಆವರಣ 3
12. ದ್ರವಕ್ಕಾಗಿ ವಾಕ್ಸಮರ 4
14. ಬಾಯಿತುಂಬಾ ಹಾಲನ್ನು ತುಂಬಿಕೊಳ್ಳುವ ಸಿಹಿ ಖಾದ್ಯ 4
16. ನಮ್ಮ ಪ್ರಯಾಣ ಶಶಿಯೆಡೆಗೆ 4
18. ಆಂತರ್ಯದ ಗೆಲುವು ಸಾಧಿಸಿ ಈಗ ಹೊರ ಆಗಸಕ್ಕೆ ನಮ್ಮ ನಡಿಗೆ 4
20. ಕೃಷ್ಣಮುರಳಿಯ ನಿನಾದ 3
21. ಮಂದಿಯನ್ನು ಪೋಷಿಸಿ ಸಲುಹುವವ 5
23. ಆಗಸದಲ್ಲಿ ಸಿಗುವ ಸ್ನೇಹಿತೆ 5
26. ಬೆಳೆದ ಕಾಳನ್ನು ಒಟ್ಟು ಸೇರಿಸು 5
27. ನಿಯಮ ಮತ್ತು ನ್ಯಾಯದಿಂದ ಕೂಡಿದ ಇತಿಹಾಸದ ಕತೆ 5

ಪದಬಂಧ ಉತ್ತರ -2803

ಮೇಲಿಂದ ಕೆಳಕ್ಕೆ

1.ಸಾವಿತ್ರಿ 2.ತ್ಯಕ್ತ 3.ಸಹೃದಯ 4.ಕರಗತ 5.ಸಾವಯವ 6.ಕವಿಕೃತಿ 7.ವಿಶಾಲಕರ್ನಾಟಕ 10.ಶೋಭಿತ 13.ಜಾಕಾಯಿ 14.ಕಶೇರುಕ 15.ರಘುವರ 17.ಸಹೋದ್ಯೋಗಿ 18.ಸುರವರ 22.ನಿಕಾಯ 23.ನಾಸ

ಎಡದಿಂದ ಬಲಕ್ಕೆ

1.ಸಾಹಿತ್ಯ 3.ಸಮರ್ಪಕ 5.ಸಾರ್ವತ್ರಿಕ 7.ವಿಷದ 8.ವಿನಾಶಾ 9.ಯಶೋವಂತ 11.ಲಕ್ಷ್ಮೀ 12.ವನಜಾತಿ 14.ಕತೆಗಾರ 16.ಕರ್ಣಾ 17.ಸತಾಯಿಸು 19.ಟಗರು 20.ರಕ್ಷಕ 21.ಕನಿಕರ 24.ಗಿಡಮರ 25.ಸಮಯ

ಮಹೂವಾ... ವ್ಹಾರೆ ವ್ಹಾ...

ಮಹೂವಾ ಮದ್ಯವನ್ನು ಭಟ್ಟಿ ಇಳಿಸುವ ಒಲೆ-ಪಾತ್ರೆ

ಚಿತ್ರ-ಲೇಖನ: ರಹಮತ್ ತರೀಕೆರೆ

ಇತ್ತೀಚೆಗೆ ಭಾರತದ ಭಾಷಾವಿಜ್ಞಾನಿಗಳಲ್ಲಿ ಒಬ್ಬರಾದ ಗಣೇಶ್ ದೇವಿಯವರು, ಗುಜರಾತಿನ ತೇಜಗಢದಲ್ಲಿ ಸ್ಥಾಪಿಸಿರುವ ಆದಿವಾಸಿ ಅಕಾಡೆಮಿಗೆ ಆಹ್ವಾನಿಸಿದ್ದರು. ಇದು ರಾಠವಾ ಆದಿವಾಸಿಗಳ ಕಾಡಿನೊಳಗಿದೆ. ಇಲ್ಲಿ ಆದಿವಾಸಿ ಮ್ಯೂಸಿಯಂ ಇದೆ. ವಸತಿಶಾಲೆಯಿದೆ. ಕರಕುಶಲ ಉದ್ಯಮವಿದೆ. ಗ್ರಂಥಾಲಯವಿದೆ. ಭಾಷಾವನವಿದೆ. ಇದನ್ನು ಆದಿವಾಸಿಗಳೇ ನಡೆಸಿಕೊಂಡು ಹೋಗುವರು. ಭಾಷಾವನದ ಉದ್ದೇಶ ಅಳಿಯುತ್ತಿರುವ ಆದಿವಾಸಿಗಳ ಭಾಷೆಗಳ ಬಗ್ಗೆ ಎಚ್ಚರ ಹುಟ್ಟಿಸುವುದು. ಇಲ್ಲಿ ಭಾಷೆ ಎಂದರೆ ಜನರಾಡುವ ಮಾತು, ಹೇಳುವ ಕತೆ, ಹಾಡುವ ಹಾಡು ಮಾತ್ರವಲ್ಲ. ಅವರ ಬದುಕಿನ ಸರ್ವಸ್ವವೂ ಆಗಿರುವ ಕಾಡು. ಕಾಡಿನೊಳಗಿನ ಜೀವನಕ್ರಮ, ಸಂಸ್ಕೃತಿ ಕೂಡ. ಭಾಷಾವನವು ಒಂದು ಆಧುನಿಕ ಹಾಡಿ. ಇಲ್ಲಿ ಭಾರತದ ಜನಭಾಷೆಗಳ ಉಯಿಲುಗಳಿವೆ. ನಾನು ಕನ್ನಡದ ಉಯಿಲನ್ನು ಬಿಚ್ಚಿನೋಡಿದೆ.

ಗುಜರಾತಿನ ತೇಜಗಢದಲ್ಲಿ ಸ್ಥಾಪಿಸಿರುವ ಆದಿವಾಸಿ ಅಕಾಡೆಮಿಗೆ ಹೋದಾಗ ಮಹೂವಾ ಮರ ಕಣ್ಣಿಗೆ ಬಿತ್ತು. ಈ ಮರದ ಸಾಂಸ್ಕೃತಿಕ ಬೇರುಗಳನ್ನು ಕಾಣಿಸುತ್ತಾ ಲೇಖಕರು ಅಪರೂಪದ ಸಂಗತಿಗಳನ್ನು ಇಲ್ಲಿ ಬರೆದಿದ್ದಾರೆ...

ಹಾಡಿಯಲ್ಲಿ ಮಹೂವಾ ಮರಗಳಿವೆ. ಆದಿವಾಸಿ ಬದುಕಿನಲ್ಲಿ ಮಹತ್ವದ ಸ್ಥಾನ ಪಡೆದಿರುವ ವೃಕ್ಷವಿದು. ಒಂದು ಮಹೂವ ಮರದ ಬುಡದಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದ ಬಂಗಾಳಿ ಲೇಖಕಿ ಮಹಾಶ್ವೇತಾ ದೇವಿಯವರ ಅಸ್ಥಿಗಳನ್ನು ಹೂಳಲಾಗಿದೆ. ಅದು ಅವರ ಬಾಳಿನ ಅಂತಿಮ ಅಪೇಕ್ಷೆಯಾಗಿತ್ತು. ಅವರ ಸ್ಮಾರಕದ ಮೇಲೆ 'ಎಲ್ಲ ಕನಸುಗಳಿಗೂ ಬದುಕುವ ಅಧಿಕಾರವಿದೆ' ಎಂಬ ಅವರದೇ ಮಾತನ್ನು ಕೆತ್ತಲಾಗಿದೆ. ಮಹಾಶ್ವೇತಾ, ಆದಿವಾಸಿಗಳ ಕಾಡು ಮತ್ತು ನೆಲದ ಹಕ್ಕುಗಳಿಗಾಗಿ ದುಡಿದವರು. ಅವರ ಕನಸುಗಳನ್ನು ನನಸಾಗಿಸಲು ಯತ್ನಿಸಿದವರು. ಮಹಾಶ್ವೇತಾದೇವಿ ಸ್ಮಾರಕ ಉಪನ್ಯಾಸಕ್ಕೆಂದು ಭಾರತದ ಬೇರೆಬೇರೆ ಭಾಗಗಳಿಂದ ಬಂದಿದ್ದ ಲೇಖಕರು, ಕಲಾವಿದರಾದ ನಾವು ತೇಜಗಢಕ್ಕೆ ಹೋದಾಗ, ಮಹೂವಾ (ಹಿಪ್ಪೆಯ) ಹೂವಿನ ಕಾಲ ಮುಗಿದು ಹಣ್ಣು ಬಿಟ್ಟಿದ್ದವು. ಬಾವಲಿಗಳು ಹಣ್ಣಿನ ತಿರುಳನ್ನು ತಿಂದು ಬೀಜವನ್ನು ಉಗಿದಿದ್ದವು. ಕೆಲವು ಬೀಜಗಳನ್ನು ಆರಿಸಿ ಅಂಗೈಯಲ್ಲಿ ಇರಿಸಿಕೊಂಡೆ. ಕಪ್ಪುವಜ್ರಗಳಂತೆ ಫಳಫಳಿಸುತ್ತಿದ್ದವು. ಕೂಡಲೇ ಈ ಮರಗಳ ಅಡಿಯಲ್ಲಿಯೇ ನನ್ನ ಬಾಲ್ಯ ತಾರುಣ್ಯ ಕಳೆದ ದಿನಗಳು ನೆನಪಾದವು.

ಬೆಂಗಳೂರು-ಹೊನ್ನಾವರ ಹೆದ್ದಾರಿ ತರೀಕೆರೆ ಪಟ್ಟಣದೊಳಗಿಂದ ಹಾಯುವ ಎರಡೂ ಬದಿಗಳಲ್ಲಿ, ನಾವು ಮೋಹೆ ಎಂದು ಕರೆಯುತ್ತಿದ್ದ ಈ ಮರಗಳಿದ್ದವು. ಏಕೀಕರಣದ ಪೂರ್ವದಲ್ಲಿ ಮೈಸೂರು ಸಂಸ್ಥಾನದ ಲೋಕೋಪಯೋಗಿ ವಿಭಾಗ ನೆಟ್ಟು ಬೆಳೆಸಿದ ಇವು ಬೃಹದಾಕಾರವಾಗಿದ್ದವು. ಇವುಗಳ ಬದಿ ಓಡಾಡುವಾಗ ಮಾದಕ ಪರಿಮಳ ಹೊಮ್ಮುತ್ತಿತ್ತು. ಮಕರಂದಕ್ಕಾಗಿ ಮುತ್ತಿಕೊಂಡ ದುಂಬಿಗಳಿಂದ ಮರವೇ ಸಂಗೀತ ಗೋಷ್ಠಿ ಆಗುತ್ತಿತ್ತು. ಮರದಡಿ ತುಸುಹೊತ್ತು ಕುಳಿತರೆ ನಶೆ ಏರುತ್ತಿತ್ತು. ನಾವು ನಸುಕು ಹರಿವ ಮುನ್ನವೇ ಹೋಗಿ ಮಳೆಯಿಂದ ಒದ್ದೆಯಾದ ಹುಲ್ಲು ಬೆಳೆದ ನೆಲದಲ್ಲಿ ಬಾವಲಿ ತಿಂದುಗಿದ ಬೀಜಗಳನ್ನು ಹೆಕ್ಕುತ್ತಿದ್ದೆವು. ಬೀಜದ ಕವಚಗಳನ್ನು ಬೆರಳಿಗೆ ಹಾಕಿ ಹುಲಿಯುಗುರು ಮಾಡಿಕೊಂಡು ಆಡುತ್ತಿದ್ದೆವು. ಅಂಗಡಿ ರಜಾಕನು ಬೀಜಗಳನ್ನು ಸೇರಿಗೆ 20 ಪೈಸೆಯಂತೆ ಕೊಳ್ಳುತ್ತಿದ್ದನು. ಇದರ ಎಣ್ಣೆಯಿಂದ ಸೋಪು ತಯಾರಿಸುತ್ತಾರೆ ಎನ್ನಲಾಗುತ್ತಿತ್ತು.

ಪಿಥೋರಾ ಚಿತ್ರಕಲೆ

ಕನ್ನಡದಲ್ಲಿ ಮಹೂವಾ ಕುರಿತು ಎರಡು ಕವನಗಳಿವೆ. ಮೊದಲನೆಯದು- ಸತ್ಯನಾರಾಯಣ ಅಣತಿಯವರ 'ಹಿಪ್ಪೆಮರ'. ಎರಡನೆಯದು- ಬಂಜಗೆರೆ ಜಯಪ್ರಕಾಶರ 'ಮಹೂವಾ'. ನಮ್ಮ ಪರಿಸರದಲ್ಲಿ ಸಾಮಾನ್ಯ ವೃಕ್ಷವಾಗಿದ್ದ ಹಿಪ್ಪೆ ಅರ್ಥಾತ್ ಮಹೂವಾದ ಹೂವು ಮತ್ತು ಬೀಜಗಳು, ಆದಿವಾಸಿಗಳ ಹೂವಿನಿಂದ ತಿನ್ನುವ ರೊಟ್ಟಿ, ಕುಡಿವ ಮದ್ಯ, ಪೂಸುವ ಗಂಧ, ಬಳಸುವ ಮದ್ದುಗಳಾಗುತ್ತವೆ ಎಂದು ತಿಳಿದಿರಲಿಲ್ಲ. ಮಹೂವಾ ಹೂವನ್ನು ಸಂಗ್ರಹಿಸದಂತೆ ಸರ್ಕಾರಗಳು ನಿಷೇಧ ಹೇರಿದಾಗ, ಕಾಡುತ್ಪನ್ನಗಳ ಹಕ್ಕಿಗಾಗಿ ಆದಿವಾಸಿಗಳು ಹೋರಾಟ ಆರಂಭಿಸಿದರು. ಅದು ಕಾಡಿನ ಸ್ವಾಯತತ್ತೆ ಉಳಿಸಿಕೊಳ್ಳುವ ಪ್ರಜ್ಞೆಯಾಗಿ ಬದಲಾಯಿತು. ಬಂಜಗೆರೆಯವರ ಕವನ ಮಹೂವವನ್ನು ಬುಡಕಟ್ಟು ಹೋರಾಟಗಳ ಪ್ರತೀಕವಾಗಿ ಚಿತ್ರಿಸುತ್ತದೆ.

ಮಹೂವಾ ಸಪೋಟ ಕುಟುಂಬಕ್ಕೆ ಸೇರಿದ ಸಸ್ಯ. ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಜಾರ್ಖಂಡ್, ಛತ್ತೀಸಘಡ, ಒಡಿಶಾ ಹಾಗೂ ಬಂಗಾಳದ ಕಾಡುಗಳಲ್ಲಿ ಬೆಳೆಯುತ್ತದೆ. ಇದು ಮಧ್ಯಭಾರತದ ಆದಿವಾಸಿಗಳ ಕಾರಿಡಾರ್ ಕೂಡ. ಆದಿವಾಸಿಗಳು, ಮಹೂವಾ ಹೂವನ್ನು ಒಣಗಿಸಿ ಮಾರುವರು. ಇದರ ಬೀಜದ ಎಣ್ಣೆಯನ್ನು ಅಡುಗೆಗೆ ಬಳಸುವರು. ಇದರ ಕಟ್ಟಿಗೆಯಲ್ಲಿ ತಮ್ಮ ದೈವಗಳನ್ನು ಕೆತ್ತುವರು. ಅವರ ಕತೆ ಹಾಡು ಚಿತ್ರಗಳಲ್ಲಿ ಈ ಮರ ಮತ್ತೆಮತ್ತೆ ಕಾಣಿಸುತ್ತದೆ.

ಗುಜರಾತಿನ ರಾಠವಾ ಆದಿವಾಸಿಗಳು ನೃತ್ಯ, ಹಾಡಿಕೆ, ಕತೆ, ಚಿತ್ರಗಳಿಗೆ ಹೆಸರಾದವರು. ಇಲ್ಲಿ ಪ್ರತಿಯೊಬ್ಬ ಪುರುಷರೂ ಕೊಳಲು ವಾದಕರೇ. ಒಬ್ಬ ಗಾಯಕ ಕೊಳಲು ನುಡಿಸುವಾಗ, ಆದಿವಾಸಿ ಶಾಲೆಯ ಮಕ್ಕಳು ಒಬ್ಬರ ಹೆಗಲಿಗೆ ಮತ್ತೊಬ್ಬರು ಕೈಯಿಟ್ಟು ಸರಪಳಿಯಾಗಿಸಿ ಹಿಂದಕ್ಕೂ ಮುಂದಕ್ಕೂ ಲಯಬದ್ಧವಾಗಿ ಚಲಿಸುವ ನರ್ತನ ಮಾಡಿದರು. ಈ ದೇಹದ ಸರಪಳಿ ಆದಿವಾಸಿಗಳ ಸಾಮುದಾಯಿಕ ಬದುಕಿನ ಸಂಕೇತವಾಗಿತ್ತು. ರಾಠವಾಗಳ ನೃತ್ಯ ಕುಣಿತ ಹಾಡಿಕೆ ಕೇಳಬೇಕಾದರೆ ಹೋಳಿ ಇಲ್ಲವೇ ದೀಪಾವಳಿಗೆ ಹೋಗಬೇಕು. ಅವರ ಪಿಥೋರಿ ಚಿತ್ರಕಲೆ ಜಗತ್‌ಪ್ರಸಿದ್ಧ. ಅವರು ಗೋಡೆಗಳ ಮೇಲೆ ಬಿಡಿಸುವ ಚಿತ್ರಗಳಲ್ಲಿ ಮಹೂವಾ ಮದ್ಯದ ಭಟ್ಟಿ ಇಳಿಸುವ ಸನ್ನಿವೇಶವೂ ಇದೆ. ಒಂದು ಚಿತ್ರದಲ್ಲಿ ನೇತುಬಿದ್ದ ಬಾವಲಿಗಳು ಮಹೂವಾ ಹಣ್ಣನ್ನು ತಿನ್ನುತ್ತಿವೆ. ಪಿಥೋರಿ ಚಿತ್ರವನ್ನು ಮಹೂವಾ ಮದ್ಯವನ್ನು ಸೇವಿಸುತ್ತಲೆ ರಚಿಸುವರಂತೆ. ಬಹುಶಃ ಕಲಾವಿದ ಪಾನೀಯವನ್ನು ಸ್ವಲ್ಪ ಹೆಚ್ಚಾಗಿ ಸೇವಿಸಿರಬೇಕು. ಕೆಲವು ಕಡೆ ಜನರ ಮುಖ ಕೋತಿಯದಾಗಿತ್ತು. ತೇಜಗಢದ ಅಕಾಡೆಮಿಯ ವಸ್ತುಸಂಗ್ರಹಾಲಯದಲ್ಲಿ ಭಟ್ಟಿಯಿಳಿಸುವ ಮಡಕೆ ಒಲೆಗಳನ್ನು ಇಡಲಾಗಿದೆ.



ಮಹೂವಾ ಮರ



ರಾಠವಾ ಕಲಾವಿದರು

ಕರಕುಶಲ

ಆದಿವಾಸಿ ಆಹಾರ ಪದ್ಧತಿ ಪಾನೀಯ ಪದ್ಧತಿಗಳು ಅನಾಗರಿಕವೆಂದೂ, ಅವನ್ನು ಅವರಿಂದ ಬಿಡಿಸಬೇಕೆಂದು ಕೆಲವು ಸಂಘಟನೆಗಳು ಯತ್ನಿಸುತ್ತಿವೆ. ಆದರೆ ಮಾಂಸ ಮತ್ತು ಮಹೂವಾ ಮದ್ಯ ಸೇವನೆಗಳು, ಅವರ ಕುಣಿತ, ಹಾಡಿಕೆ ಚಿತ್ರಕಲೆಯಷ್ಟೆ ಬದುಕಿನ, ಆರೋಗ್ಯದ ಮತ್ತು ಸಾಂಸ್ಕೃತಿಕ ಆಚರಣೆಗಳ ಭಾಗವಾಗಿವೆ. ನಾಗರಿಕ ಸಮಾಜಗಳ ಅಹಮಿಕೆಯೆಂದರೆ, ತಮ್ಮ ಜೀವನದೃಷ್ಟಿಯೇ ಶ್ರೇಷ್ಠವೆಂದು ಭಾವಿಸುವುದು. ಅದರ ಮೂಲಕ ಆದಿವಾಸಿಗಳ ಜೀವನಕ್ರಮವನ್ನು ಬೆಲೆಗಟ್ಟುವುದು. ತಿದ್ದಲು ಹವಣಿಸುವುದು. ಆದಿವಾಸಿಗಳ ಜೀವನಕ್ರಮ ಎಂದೂ ಬದಲಾಗದ ಸ್ಥಗಿತ ಚಿತ್ರವಲ್ಲ. ಪರಿವರ್ತನೆ ಹೊರಗಿನ ಹೇರಿಕೆಯಾಗಬಾರದು. ಅವರ ಒಳಗಿಂದಲೇ ಸಹಜವಾಗಿ ಸಂಭವಿಸಬೇಕು. ಒಳಗಿನ ಪ್ರಜ್ಞಾವಂತರು, ಹೊರಗಿನ ಪ್ರಭಾವಗಳಲ್ಲಿ ತಮಗೆ ಬೇಕಾದ್ದನ್ನು ಸ್ವೀಕರಿಸುತ್ತ, ತಮ್ಮೊಳಗಿನ ಬೇಡವಾದ್ದನ್ನು ಕೈಬಿಡುತ್ತ, ತಮ್ಮ ಭಾಷೆ ಸಂಸ್ಕೃತಿ ಕಾಡನ್ನು ಉಳಿಸಿಕೊಳ್ಳುವುದಕ್ಕೆ ಸೆಣಸುತ್ತ ಬಂದಿದ್ದಾರೆ. ಇಂತಹ ಸೆಣಸಾಟಕ್ಕೆ ಪ್ರೇರಣೆ ಕೊಟ್ಟ ಸಂಗತಿಗಳಲ್ಲಿ ಮಹೂವ ಕೂಡ ಒಂದು. ಇದರ ಹೂವು, ಬೀಜಗಳ ಉಪಯುಕ್ತತೆ, ಅವನ್ನು ತಿನ್ನಲು ಬರುವ ಪಶುಪಕ್ಷಿಗಳು ಇದನ್ನು ದೈವೀಕರಿಸಿದೆ. ಮಹೂವಾ- ಆದಿವಾಸಿಗಳ ಪಾಲಿಗೆ ಬೌದ್ಧರ ಬೋಧಿವೃಕ್ಷದಂತೆ, ಸೋಲಿಗರ ದೊಡ್ಡಸಂಪಿಗೆ ಮರದಂತೆ.

ನಮ್ಮ ತಂಡದಲ್ಲಿದ್ದ ಒಬ್ಬರು ಮಹಾಶ್ವೇತಾದೇವಿ ಅಸ್ಥಿಯಿರುವ ಕಡೆ ಮಹೂವಾ ಸಸಿ ನೆಟ್ಟರು. ನಾನು ಗುದ್ದಲಿಯಿಂದ ಮಣ್ಣನ್ನೆಳೆದು ಪಾತಿ ಮಾಡಿದೆ. ಅಲ್ಲಿದ್ದ ಆದಿವಾಸಿಗಳಿಗೆ ಕೇಳಿದೆ: 'ಇದು ಹೂ-ಹಣ್ಣು ಬಿಡಲು ಎಷ್ಟು ವರ್ಷ ಬೇಕು?' 'ಇಪ್ಪತ್ತು ವರ್ಷ' 'ಇಪ್ಪತ್ತು ವರ್ಷ ಬಿಟ್ಟು ಬರುತ್ತೇನೆ. ನನಗೆ ಇದರ ಹೂವಿನಿಂದ ತಯಾರಿಸಿದ ಮಧುರಸವನ್ನು ಕೊಡಬೇಕು' ಅವರು ಒಪ್ಪಿದರು. ನನಗೆ ನಮ್ಮೂರಿನ ಮಹೂವಾ ಮರಗಳೆಲ್ಲ ರಸ್ತೆ ವಿಸ್ತರಣೆಯಲ್ಲಿ ಕಣ್ಮರೆಯಾಗಿದ್ದು ನೆನಪಾಯಿತು. ಅವುಗಳ ಹಣ್ಣಿಗಾಗಿ ಬರುತ್ತಿದ್ದ ಬಾವಲಿಗಳು ಎಲ್ಲಿ ಹೋದವೊ? ಹೀಗೆ ಮರೆಯಾದ ವೃಕ್ಷವು ದೂರದ ಗುಜರಾತಿನ ಕಾಡುಗಳಲ್ಲಿ ದರ್ಶನ ಕೊಟ್ಟಿದ್ದು, ಕಳೆದುಹೋದ ಬಂಧುವನ್ನು ಭೇಟಿಯಾದಂತೆ ಖುಶಿ ಕೊಟ್ಟಿತು. ನಾನು ಆರಿಸಿಕೊಂಡಿದ್ದ ಮಹೂವಾ ಬೀಜಗಳನ್ನು ಭದ್ರವಾಗಿ ಇಟ್ಟುಕೊಂಡು ಹಂಪಿಗೆ ಮರಳಿದೆ. ಹೋಳಿ ಹಬ್ಬಕ್ಕೆ ತೇಜಗಢಕ್ಕೆ ಹೋಗಬೇಕು.

ನಿಷ್ಠುರತೆ–ಕಾರುಣ್ಯದ ಅನುಸಂಧಾನ ಕಥನ

ರಘುನಾಥ ಚ.ಹ.

ವಿಮರ್ಶೆ

'ಕಾಗೆ ಕಾರುಣ್ಯದ ಕಣ್ಣು' ಬರಗೂರು ರಾಮಚಂದ್ರಪ್ಪನವರ 'ಆಯ್ದ ಅನುಭವಗಳ ಕಥನ'. ಈ ಕೃತಿಗೆ ಆತ್ಮಕಥನದ ಸ್ವರೂಪವೂ ಇದೆ. ಇಲ್ಲಿನ ಅನುಭವಗಳ ಮೂಲಕ ಬರಗೂರರ ಜೀವನಕ್ಕೆ ಸಂಬಂಧಿಸಿದ ಸ್ಥೂಲಚಿತ್ರವೊಂದನ್ನು ಕಂಡುಕೊಳ್ಳಬಹುದಾದರೂ, ಈ ಕೃತಿಯನ್ನು ಅವರು ಕರೆದಿರುವಂತೆ ಅನುಭವಗಳ ಕಥನ ಎಂದು ಗುರುತಿಸುವುದೇ ಹೆಚ್ಚು ಸರಿ. ಏಕೆಂದರೆ, ಬದುಕಿನ ಅನುಭವಗಳನ್ನು ನಿರೂಪಿಸುವಲ್ಲಿ ಲೇಖಕರ ಆತ್ಮಪ್ರಜ್ಞೆಗಿಂತಲೂ ವೈಚಾರಿಕ ನಿಷ್ಠೆಯೇ ಕೃತಿಯಲ್ಲಿ ಹೆಚ್ಚು ಕ್ರಿಯಾಶೀಲವಾಗಿದೆ. ವೈಯಕ್ತಿಕ ಬದುಕಿನ ಘಟನೆಗಳನ್ನು ವಿವರಿಸುವುದಕ್ಕಿಂತಲೂ ತಮ್ಮ ಸಾರ್ವಜನಿಕ ಜೀವನದ ನಡೆ–ನುಡಿಗಳನ್ನು ನೆನಪಿನ ಗಣಿಯಿಂದ ಹೆಕ್ಕಿ ತೆಗೆಯುವಲ್ಲಿ ವ್ಯಕ್ತವಾಗಿರುವ ಲೇಖಕರ ಆದ್ಯತೆಯೂ ಪುಸ್ತಕದ ಚೌಕಟ್ಟನ್ನು ಸ್ಪಷ್ಟಪಡಿಸುವಂತಿದೆ.

ಯಾವುದನ್ನು ಹೇಳಬೇಕು, ಎಷ್ಟು ಹೇಳಬೇಕು ಎನ್ನುವ ಔಚಿತ್ಯಪ್ರಜ್ಞೆ ಈ ಅನುಭವ ಕಥನಕ್ಕೆ ವಿಶೇಷ ಹೊಳಪು ನೀಡಿದೆ. ಓದುಗರಿಗೆ ಹೆಚ್ಚು ಆಪ್ತವಾಗಬಹುದಾದ ರಮ್ಯ ಹಾಗೂ ಭಾವುಕ ಸನ್ನಿವೇಶಗಳನ್ನು ಬರಗೂರರು ಪ್ರಜ್ಞಾಪೂರ್ವಕವಾಗಿಯೇ ನಿಯಂತ್ರಿಸಿಕೊಂಡಿದ್ದಾರೆ. ಉದಾಹರಣೆಗೆ, ಪ್ರೇಮ ಮತ್ತು ವಿವಾಹದ ಬಗ್ಗೆ ಕನಿಷ್ಠ ಮಾಹಿತಿಯಷ್ಟೇ ಕೃತಿಯಲ್ಲಿದೆ. ಆದರೆ, ಅನುದಿನದ ದಂದುಗಗಳು ತಮ್ಮ ದಾಂಪತ್ಯವನ್ನು ಹೇಗೆಲ್ಲ ಹೈರಾಣಾಗಿಸಿದವು ಎನ್ನುವುದನ್ನು ವಿವರವಾಗಿಯೇ ಬರೆದುಕೊಂಡಿದ್ದಾರೆ. ಬರಗೂರರ ಔಚಿತ್ಯಪ್ರಜ್ಞೆ ಅಥವಾ ಜೀವನ ದೃಷ್ಟಿಕೋನಕ್ಕೆ ಮತ್ತೊಂದು ನಿದರ್ಶನ, ಅವರು ತಮ್ಮ ಜೀವನದ ಮೇಲೆ ಪ್ರಭಾವ ಬೀರಿರುವವರನ್ನು ನೆನಪಿಸಿಕೊಂಡಿರುವ ರೀತಿ. ತಮಗೆ ನೆರವಾದವರನ್ನು ಕೃತಜ್ಞತಾಪೂರ್ವಕವಾಗಿ ನೆನಪಿಸಿಕೊಂಡಿರುವ ಲೇಖಕರು, ತಮಗೆ ತೊಂದರೆ ಕೊಟ್ಟವರನ್ನೂ ಮರೆತಿಲ್ಲ. ಆದರೆ, ಬೇಸರದ ಸಂಗತಿಗಳನ್ನು ದಾಖಲಿಸುವಾಗ, ಆ ಘಟನೆಗೆ ಕಾರಣರಾದ ವ್ಯಕ್ತಿಗಳ ಹೆಸರನ್ನು ಅವರು ದಾಖಲಿಸಿಲ್ಲ. ಘಟನೆ ಹಾಗೂ ಅದರ ಪರಿಣಾಮವನ್ನು ಹಂಚಿಕೊಳ್ಳುವುದು ಮುಖ್ಯವೇ ಹೊರತು, ಆ ಕಹಿಗೆ ಕಾರಣರಾದವರ ಹೆಸರನ್ನು ಹೇಳುವುದು ಮುಖ್ಯವಲ್ಲ ಎನ್ನುವ ಅವರ ನಿಲುವು ಸುಲಭದ್ದಲ್ಲ, ಎಲ್ಲರಿಗೂ ಸಾಧ್ಯವಾಗುವಂತಹದ್ದೂ ಅಲ್ಲ. ಹಾಗೆಂದು, ತಮ್ಮ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವಲ್ಲಿ ಹಾಗೂ ನಿಷ್ಠುರ ನಿರ್ಧಾರ ತೆಗೆದುಕೊಳ್ಳುವಲ್ಲಿ ಅವರು ಹಿಂಜರಿದಿಲ್ಲ ಎನ್ನುವುದಕ್ಕೆ ಕೃತಿಯುದ್ದಕ್ಕೂ ಉದಾಹರಣೆಗಳಿವೆ.

ಬರಗೂರರು ನೆಚ್ಚಿದ ರೂಪಕಗಳಲ್ಲಿ ಕಾಗೆ ಪ್ರಮುಖವಾದುದು. ಅದರ ಕಾರುಣ್ಯದ ಕಣ್ಣು ಎಲ್ಲರದೂ ಆದಾಗ, ಸಮಾಜದಲ್ಲಿನ ತರತಮಗಳನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ಆ ಸಮಸ್ಯೆಗಳನ್ನು ಹೋಗಲಾಡಿಸುವ ಪೂರಕವಾದ ಚಿಂತನೆ ಸಾಧ್ಯವಾಗುತ್ತದೆ ಎನ್ನುವುದನ್ನು 'ಕಾಗೆ ಕಾರುಣ್ಯದ ಕಣ್ಣು' ಶೀರ್ಷಿಕೆ ಧ್ವನಿಸುತ್ತಿರುವಂತಿದೆ. ಅನುಬಂಧದಲ್ಲಿನ ಆರು ಅಧ್ಯಾಯಗಳು ಸೇರಿದಂತೆ ಈ ಕೃತಿಯ ಒಟ್ಟು ಹನ್ನೆರಡು ಅಧ್ಯಾಯಗಳ ಆಶಯವೂ, ಬದುಕು ಸಮಾಜದ ಬಗೆಗಿನ ಕಾರುಣ್ಯದ ಕಣ್ಣು ಎಲ್ಲರದೂ ಆಗಬೇಕು ಎನ್ನುವುದಾಗಿದೆ.

ಈ ಕೃತಿಯ ಮುಖ್ಯವಾದ ಭಾಗ ದಾಂಪತ್ಯದ ಕುರಿತಾದ ಚದುರಿದ ಚಿತ್ರಗಳದು. ಪ್ರಭಾವ–ಪ್ರೇರಣೆಗಳನ್ನು ಒಳಗೊಂಡೂ ಸ್ವಂತಿಕೆ ಹಾಗೂ ಪರಸ್ಪರ ಗೌರವವನ್ನು ಇಬ್ಬರೂ ಉಳಿಸಿಕೊಂಡ ದಾಂಪತ್ಯ ಇಲ್ಲಿಯದು. ಪ್ರಸಿದ್ಧರ ಪತ್ನಿಯರು, ಪತಿಯ ಪ್ರಭಾವಳಿಯಲ್ಲಿ ಕಳೆದುಹೋಗಿರುವ ಉದಾಹರಣೆಗಳೇ ಹೆಚ್ಚು. ಆದರೆ, ರಾಜಲಕ್ಷ್ಮಿಯವರು ಬರಗೂರರ ಪ್ರಭೆಯಲ್ಲಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳದೆ, ತಮ್ಮ ವ್ಯಕ್ತಿತ್ವದ ಪ್ರಭೆಯಿಂದ ಪತಿಯ ನೈತಿಕ ಶಕ್ತಿಯನ್ನು ಮತ್ತಷ್ಟು ಗಟ್ಟಿಯಾಗಿಸಿದ್ದಾರೆ; ಕುಟುಂಬ ಹಾಗೂ ಬಂಧುಮಿತ್ರರ ನಡುವೆ ತಮ್ಮದೇ ಆದ ನೈತಿಕ ಹಾಗೂ ವೈಚಾರಿಕ ನೆನಪುಗಳನ್ನು ಉಳಿಸಿಹೋಗಿದ್ದಾರೆ. ಈ ನೆನಪುಗಳನ್ನು ಪ್ರಾಂಜಲವಾಗಿ ದಾಖಲಿಸಿದ್ದಾರೆ.

ಈ ಕಥನದ ನಾಯಕನನ್ನು ಐದು ರೂಪಗಳಲ್ಲಿ ಗುರುತಿಸಬಹುದು. ಒಂದು, ಕುಟುಂಬಪ್ರೇಮಿ. ಎರಡು, ಒಳ್ಳೆಯ ಮೇಷ್ಟ್ರು. ಮೂರನೆಯದು, ಆಡಳಿತಗಾರನಾಗಿ ತೋರಿದ ಕ್ರಿಯಾಶೀಲತೆ. ನಾಲ್ಕನೆಯದು, ಬರಹಗಾರನಾಗಿ ಹಾಗೂ ಸಿನಿಮಾ ನಿರ್ದೇಶಕನಾಗಿ ಕೈಗೊಂಡ ಸಾಹಸಯಾತ್ರೆಗಳು. ಐದನೆಯದು, ಸಂಘಟನೆಯ ಸುಖದುಃಖದೊಂದಿಗೆ ಬೆಸೆದುಕೊಂಡ ಬದುಕು. ಈ ಐದು ಸಂಗತಿಗಳನ್ನು ಪ್ರತ್ಯೇಕವಾಗಿ ನೋಡುವುದು ಸಾಧ್ಯವಿಲ್ಲ ಎನ್ನುವ ಮಟ್ಟಿಗೆ ಅವು ಬರಗೂರರ ವ್ಯಕ್ತಿತ್ವದೊಂದಿಗೆ ತಳುಕು ಹಾಕಿಕೊಂಡಿವೆ. ಬರಗೂರರ ವೈಯಕ್ತಿಕ ಹಾಗೂ ಸಾರ್ವಜನಿಕ ಜೀವನಗಳ ನಡುವಿನ ಗೆರೆ ತೀರಾ ತೆಳು ಎನ್ನುವುದು ಈ ಕೃತಿಯ ಮೂಲಕ ಸ್ಪಷ್ಟವಾಗುತ್ತದೆ. ಎರಡು ಮೂರು ಅಧ್ಯಾಯಗಳನ್ನು ಹೊರತುಪಡಿಸಿದರೆ, ಉಳಿದ ಕಥನಗಳೆಲ್ಲವೂ ಬರಗೂರರ ಸಾರ್ವಜನಿಕ ಜೀವನದ ವಿವರಗಳೇ ಆಗಿವೆ. ಯಾವುದೇ ಕ್ರಿಯಾಶೀಲ ವ್ಯಕ್ತಿಗೆ, ಜೀವನದ ಒಂದು ಹಂತದಲ್ಲಿ ಸಮಾಜವೇ ಕುಟುಂಬವಾಗಿ ರೂಪುಗೊಳ್ಳುವುದು ಸಹಜ. ಈ ಅಭೇದ ಬರಗೂರರ ಪಾಲಿಗೂ ಸಾಧ್ಯವಾಗಿದೆ. ಆ ಕಾರಣದಿಂದಲೇ ಸಾಹಿತ್ಯ–ಸಿನಿಮಾ ಸಂಕಥನಕ್ಕಿಂತಲೂ ಹೆಚ್ಚಿನ ಪಾಲು ಸಾಮಾಜಿಕ ಸಂಕಥನಕ್ಕೆ ದೊರಕಿದೆ. ಸಾಹಿತ್ಯ ಅಕಾಡೆಮಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಮಾಡಿದ ಕೆಲಸಗಳ ವಿವರಗಳು ಇಲ್ಲಿವೆ; ಸಾಂಸ್ಕೃತಿಕ ನೀತಿಯ ರೂಪು–ರೇಷೆ ಹಾಗೂ ಪಠ್ಯಪುಸ್ತಕ ಪರಿಷ್ಕರಣೆಯ ವಿವರಗಳಿವೆ. ಸಾಹಿತಿಗಳು, ಸಿನಿಮಾ ಮಂದಿ ಹಾಗೂ ರಾಜಕಾರಣಿಗಳೊಂದಿಗಿನ ಒಡನಾಟದ ಪ್ರಸಂಗಗಳಿವೆ. ಈ ಎಲ್ಲ ಪ್ರಸಂಗಗಳು ಲೇಖಕನೊಬ್ಬ ತನ್ನ ನೈತಿಕತೆ ಮತ್ತು ಸೃಜನಶೀಲ ಬದ್ಧತೆಯಿಂದ ಪಡೆಯಬಹುದಾದ ಅವ್ಯಾಜ ಪ್ರೀತಿಗೆ ನಿದರ್ಶನಗಳಂತಿವೆ. ಈ ಪ್ರೀತಿ ಬರಗೂರರಿಗೆ ಸಂತಸವನ್ನಷ್ಟೇ ನೀಡಿಲ್ಲ, ಸಂಕಟವನ್ನೂ ನೀಡಿದೆ. ದೊಡ್ಡ ಜವಾಬ್ದಾರಿಗಳನ್ನು ನೀಡಿರುವಂತೆ ಸವಾಲುಗಳನ್ನೂ ಎದುರಿಗಿಟ್ಟಿದೆ. ಹೀಗೆ ಎದುರಾದುದೆಲ್ಲವನ್ನೂ ಆದಷ್ಟೂ ನಿಸ್ಪೃಹವಾಗಿ ಎದುರಿಸುತ್ತ, ತನ್ನನ್ನು ರೂಪಿಸಿದ ಸಮಾಜವನ್ನು ಆರೋಗ್ಯಕರವಾಗಿಸಲು ನಿರಂತರವಾಗಿ ಪ್ರಯತ್ನಿಸಿದ ಬರಗೂರರ ಅನುಭವಗಳ ಕಥನ, ಆಧುನಿಕ ಕರ್ನಾಟಕದ ಐದಾರು ದಶಕಗಳ ಸಾಮಾಜಿಕ–ಸಾಂಸ್ಕೃತಿಕ ಚರಿತ್ರೆಯ ಕಿರುನೋಟವೂ ಹೌದು.



ಪು: 336 ₹395

ಕಾಗೆ ಕಾರುಣ್ಯದ ಕಣ್ಣು

ಲೇ: ಬರಗೂರು ರಾಮಚಂದ್ರಪ್ಪ

ಪ್ರ: ಅಂಕಿತ ಪುಸ್ತಕ, ಬೆಂಗಳೂರು.

ಸಂ: 9019190502.

ಮೊದಲ ಓದು

ಶಿಕ್ಷಕರೊಬ್ಬರ ಬದುಕಿನ ಬಿಡಿ ಚಿತ್ರಗಳು

'ಕಲಿಸು ಬಾಗದೆ ಸೆಟೆವುದನ್ನು, ಬಾಗುವುದನ್ನು' ಪುಸ್ತಕದ ಪ್ರಸ್ತಾವನೆಯಲ್ಲಿ ಮಹಾಬಲೇಶ್ವರ ರಾವ್ ಬಳಸಿರುವ ಸಾಲಿದು. ನಾಡಿನ ಜನಪ್ರಿಯ ಶಿಕ್ಷಣ ತಜ್ಞರಾಗಿ, ಲೇಖಕರಾಗಿ ಗುರುತಿಸಿಕೊಂಡಿರುವ ಬೈಕಾಡಿ ಮಹಾಬಲೇಶ್ವರ ರಾವ್ ಅವರ ಆತ್ಮಚರಿತ್ರೆ 'ನೆನಪಿನ ಸೌಟು'. ಈ ಕೃತಿಯಲ್ಲಿ ಬದುಕಿನ ಸಾಕಷ್ಟು ಸ್ವಾರಸ್ಯಕರ ಸಂಗತಿಗಳನ್ನು ಬಿಡಿಬಿಡಿಯಾಗಿ ಹರವಿಕೊಂಡಿದ್ದಾರೆ. ಮಣೂರು ಮಹಾಬಲೇಶ್ವರ ಮಯ್ಯರು, ಬೈಕಾಡಿಗೆ ಹೋಗಿ ಆದ್ಯಂತದಲ್ಲಿ 'ರಾವ್' ಆಗಿ ಬದಲಾಗುವ ಕಥೆಯಿಂದ ಕೃತಿ ಪ್ರಾರಂಭವಾಗುತ್ತದೆ. ಸಣ್ಣ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಮಗುವಿನ ಕಷ್ಟ ಮತ್ತು ಬದುಕು, ಅದು ಕಲಿಸುವ ಪಾಠ ಮೊದಲ ಅಧ್ಯಾಯದಲ್ಲಿದೆ. ಇಡೀ ಕೃತಿಯಲ್ಲಿ ಒಟ್ಟು 17 ಲೇಖನಗಳಿವೆ. ಇವೆಲ್ಲವೂ ಅವರ ಬದುಕಿನ ವಿವಿಧ ಘಟ್ಟಗಳ ದಾಖಲೀಕರಣ. ಗಂಡ–ಹೆಂಡತಿಯ ಸಂಸಾರ ರಥ ಸಾಗಿದ ರೀತಿ, ಉಂಟಾದ ವಾದ–ವಿವಾದಗಳು, ತಮ್ಮಿಬ್ಬರ ಮದುವೆಯ ಪ್ರಸಂಗವನ್ನು ಲೇಖಕರು ಬಹಳ ಲಘು ದಾಟಿಯಲ್ಲಿಯೇ ಬರೆದಿದ್ದರೂ, ಪ್ರಸ್ತಾಪಿಸಿದ ವಿಷಯಗಳು ಗಂಭೀರವಾಗಿ ಮನಸ್ಸಿಗೆ ನಾಟುತ್ತವೆ.



ಪು: 304 ₹325

ನೆನಪಿನ ಸೌಟು (ಆತ್ಮಕಥೆ)

ಲೇ: ಮಹಾಬಲೇಶ್ವರ ರಾವ್

ಪ್ರ:ವಂಶಿ ಪ್ರಕಾಶನ

ಸಂ: 9916595916

ಕರಾವಳಿ ಕಲಾವಿದರ ಸೃಜನಶೀಲತೆಗೆ ಕೈಗನ್ನಡಿ

ಕಲೆ ಎಂಬುವುದಕ್ಕೆ ನಿಶ್ಚಿತ ಅವಧಿಯಿಲ್ಲ. ಅದು ಅಮರ. ಅದನ್ನು ರಚಿಸಿದ ಕಲಾವಿದ ಕ್ಷಣಿಕನಾದರೂ ಆ ಕಲೆಯ ಮೂಲಕ ಅವನೂ ಅಮರ. ಇಂತಹ ಕರಾವಳಿಯ ಕಲಾವಿದರನ್ನು ನೆನಪಿಸುವ ಹೊತ್ತಿಗೆ ಈ ಕೃತಿ. ಅವರ ಇತಿಹಾಸವನ್ನು ಅಕ್ಷರ ರೂಪದಲ್ಲಿ ಜಲವರ್ಣಕ್ಕಿಳಿಸಿದ ಕೃತಿ ಇದು.

ತುಳು ಭಾಷೆಯಲ್ಲಿ 'ಮೊಡೆಪು' ಎಂದರೆ ಕಲಾತ್ಮಕವಾಗಿ ಹೆಣೆಯುವುದು ಎಂದರ್ಥ. ಇದು ಅಲ್ಲಿನ ದೈನಂದಿನ ಬಳಕೆಯ ಪದ. ಈ ಕೃತಿ ಆ ಮಣ್ಣಿನ ಕಲಾ ಇತಿಹಾಸವನ್ನು ಹೆಣೆಯುವ ಪ್ರಯತ್ನವಾಗಿದೆ. ಇಲ್ಲಿ ದಕ್ಷಿಣ ಕನ್ನಡ, ಉಡುಪಿ, ಕೇರಳದ ಕಾಸರಗೋಡು, ಕೊಡಗು ಜಿಲ್ಲೆಯ ಕಲಾವಿದರ ನೋಟವಿದೆ. 34 ಕಲಾವಿದರ ಚಿತ್ರಕಲೆಗಳ ಸಹಿತ ಅವರ ಜೀವನದ ಸಂಕ್ಷಿಪ್ತ ದಾಖಲೆಗಳಿವೆ. 'ನಾನು ಚಿತ್ರಕಲಾವಿದನೆಂಬುದು ನನಗೇ ಗೊತ್ತಿಲ್ಲ' ಎಂದು ಉಲ್ಲೇಖಿಸುವ ಕಾರಂತರ ಹತ್ತು ಹಲವು ಕ್ಷೇತ್ರಗಳ ಪರಿಚಯ ಹಾಗೂ ಅವರು ರಚಿಸಿದ ಚಿತ್ರಕಲೆಗಳ ಸಂಗ್ರಹವೂ ಇಲ್ಲಿದೆ. ಇದು ಕರಾವಳಿ ಕರ್ನಾಟಕದ ಕಲಾ ಇತಿಹಾಸವನ್ನು ಅಂಗೈಯಲ್ಲಿಡುವ ಹೊತ್ತಿಗೆ.



ಪು: 243 ₹780

ಮೊಡೆಪು

ಲೇ: ಜನಾರ್ದನ ಹಾವಂಜೆ

ಸಂ: ನೇಮಿರಾಜ ಶೆಟ್ಟಿ ಹಾಗೂ ರಾಜೇಂದ್ರ ಕೇದಿಗೆ

ಪ್ರ: ಆರ್ಟ್ ಕೆನರಾ ಟ್ರಸ್ಟ್

ಖಗೋಳ ವಿಜ್ಞಾನದ 'ವಿಶ್ವ' ದರ್ಶನಕ್ಕೊಂದು ಏಣಿ

ಎಸ್.ರವಿಪ್ರಕಾಶ್

ಒಳನೋಟ

ಚಂದ್ರಯಾನ–3ರ ಲ್ಯಾಂಡರ್(ವಿಕ್ರಮ್)–ರೋವರ್ (ಪ್ರಜ್ಞಾನ್) ಚಂದ್ರನ ಅಂಗಳಕ್ಕೆ ಇಳಿದಿರುವುದರ ಹರ್ಷೋಲ್ಲಾಸದ 'ಜ್ವರ' ಇಡೀ ಜಗತ್ತಿನಲ್ಲಿ ವ್ಯಾಪಿಸಿರುವ ವೇಳೆಯಲ್ಲೇ 'ನವಕರ್ನಾಟಕ' ಪ್ರಕಟಿಸಿರುವ 'ಖಗೋಳ ದರ್ಶನ–ಅಂತರಿಕ್ಷಕ್ಕೆ ಹಂತ ಹಂತದ ಮೆಟ್ಟಿಲು' ಕೃತಿ ಹೊರಬಂದಿದೆ. ವಾಸ್ತವದಲ್ಲಿ ವಿಕ್ರಮ್ ಮತ್ತು ಪ್ರಜ್ಞಾನ್ ಚಂದ್ರನ ಅಂಗಳಕ್ಕೆ ಇಳಿಯುವುದಕ್ಕೂ ಮೊದಲೇ ಓದುಗರ ಮಡಿಲಿಗೆ ಖಗೋಳ ದರ್ಶನ ಅಡಿ ಇಟ್ಟಿದೆ.

ಧರೆಯಲ್ಲಿನ ಪ್ರತಿಯೊಂದೂ ಜೀವಿಗೂ ಖಗೋಳವೆನ್ನುವುದು ವಿಸ್ಮಯ. ಮಿದುಳು ಹೆಚ್ಚು ವಿಕಾಸಗೊಂಡಿರುವ ಮಾನವ ಅಲ್ಲಿಗೆ ಏಣಿ ಇಡುವ ಪ್ರಯತ್ನ ಮಾಡಿದರೆ, ಉಳಿದ ಜೀವಿಗಳು ಖಗೋಳ ವಿದ್ಯಮಾನಗಳಿಗೆ ತಮ್ಮದೇ ಆದ ರೀತಿಯಲ್ಲಿ ಸಂವೇದನೆಗಳನ್ನು ವ್ಯಕ್ತಪಡಿಸುವುದನ್ನು ಸೂಕ್ಷ್ಮ ಮನಸ್ಸಿನಿಂದ ನೋಡಿದಾಗ ಗೋಚರಿಸುತ್ತದೆ. ಪ್ರತಿಯೊಂದು ಜೀವಿಗೂ ಬ್ರಹ್ಮಾಂಡದೊಂದಿಗೆ ಅಗೋಚರ ನಂಟು ಇರುವುದು ಸ್ಪಷ್ಟ. ಇಂತಹ ಅನೂಹ್ಯ ಖಗೋಳದ ದರ್ಶನಕ್ಕೆ ಈ ಕೃತಿ 'ಕಿಂಡಿ ಬಾಗಿಲು'.

ನಮ್ಮ ಸೌರ ಮಂಡಲ ಮತ್ತು ಅದರ ಗ್ರಹಗಳು, ಆಕಾಶಗಂಗೆ, ನಕ್ಷತ್ರಪುಂಜಗಳು, ಕಪ್ಪುಕುಳಿಗಳು ಇವುಗಳ ಸೃಷ್ಟಿ , ವಿಕಾಸ, ಲಯ ಇತ್ಯಾದಿಗಳು ಕುರಿತು ಆ ಕ್ಷೇತ್ರಗಳಲ್ಲೇ ಕೆಲಸ ಮಾಡಿರುವ ಖಭೌತ ವಿಜ್ಞಾನಿಗಳೇ ವಿದ್ವತ್‌ಪೂರ್ಣ ಲೇಖನಗಳನ್ನು ಬರೆದಿರುವುದು ವಿಶೇಷತೆ. 457 ಪುಟಗಳ ಈ ಕೃತಿ ನುಣುಪು ಹಾಳೆಗಳ ಮೇಲೆ ವಿಷಯಕ್ಕೆ ಪೂರಕವಾಗಿ ವರ್ಣರಂಜಿತ ಛಾಯಾಚಿತ್ರಗಳು, ರೇಖಾಚಿತ್ರಗಳು, ಗ್ರಾಫಿಕ್ಸ್‌ಗಳನ್ನು ಒಳಗೊಂಡಿದೆ. ವಿವಿಧ ಖಗೋಳ ದೂರದರ್ಶಕ ವೀಕ್ಷಣಾಲಯಗಳು ಸೆರೆ ಹಿಡಿದ ರಮ್ಯವಾದ ನಕ್ಷತ್ರಪುಂಜ, ಭೀಮ ಪುಂಜ, 5.5 ಕೋಟಿ ಜ್ಯೋತಿರ್ವರ್ಷ ದೂರದಲ್ಲಿರುವ ಗ್ಯಾಲಕ್ಸಿಯಲ್ಲಿ ಸುರಳಿಯಲ್ಲಿ ಸ್ಫೋಟಿಸಿರುವ ಸುಪರ್ನೋವಾ, 2 ಜ್ಯೋತಿರ್ವರ್ಷ ದೂರದಲ್ಲಿರುವ ಕ್ಯರಿನಾ ನೆಬ್ಯುಲಾ ಮತ್ತು ಅಂತಹ ಹಲವು ಅಪರೂಪದ ಚಿತ್ರಗಳಿವೆ. ಖಗೋಳ ವೀಕ್ಷಣಾಲಯಗಳು, ಬಾಹ್ಯಾಕಾಶಯಾನಗಳ ವಿವರಗಳು ಖಗೋಳ ವಿಜ್ಞಾನದ ಆಸಕ್ತರ ಜ್ಞಾನದ ದಾಹವನ್ನು ತಣಿಸುವ ಸಮಗ್ರ ಕೃತಿ. ತೀರಾ ಇತ್ತೀಚಿನ ತಾಜಾ ಮಾಹಿತಿಗಳನ್ನೂ ಅಡಕಗೊಳಿಸಲಾಗಿದೆ.

ಬಹು ಚರ್ಚಿತ ವಿಶ್ವದ (universe) ಅಗೋಚರ ಶಕ್ತಿಯ ಕುರಿತು ಒಂದು ಅಧ್ಯಾಯವಿದೆ. ವಿಶ್ವದಲ್ಲಿ ಕಾಣಸಿಗುವ ಭೌತಿಕ ವಸ್ತುವು ಸಾಮಾನ್ಯ ದ್ರವ್ಯ ಅಥವಾ ಕಪ್ಪು ದ್ರವ್ಯ ಅಥವಾ ಎರಡರ ಮಿಶ್ರಣ. ಅದರ ಒಟ್ಟು ಮೊತ್ತದಿಂದ ಸಮತಲದ ಜ್ಯಾಮಿತಿಯನ್ನು ವಿವರಿಸುವುದು ಕಷ್ಟ. ಚೈತ್ಯನದ ಈ ಅಗಾಧ ವ್ಯತ್ಯಾಸವನ್ನು ಹೊಂದಿಸಲು ಬೇರೊಂದು ಮೂಲವನ್ನೇ ಹುಡುಕಬೇಕಾಗುವುದು. ಈ ಬಗೆಯ ಸಮತಲದ ಜ್ಯಾಮಿತಿಯನ್ನು ಮಾರ್ಪಡಿಸಲು ಆಗದ ಶಕ್ತಿ ಯನ್ನು ಅಗೋಚರ ಶಕ್ತಿ ಎನ್ನಲಾಗುತ್ತದೆ. ಇದೇ ವಿಶ್ವದ ವೇಗೋತ್ಕರ್ಷಕ್ಕೆ ಕಾರಣ. ಇದು ಗುರುತ್ವಾಕರ್ಷಣ ವಿರೋಧಿ ಬಲವೂ ಆಗಿದೆ. ಅಗೋಚರ ವಸ್ತುವಿನ ನಿಗೂಢ ಗುಣಲಕ್ಷಣಗಳು ವಿಜ್ಞಾನಿ ಗಳ ಪಾಲಿಗೆ ಕಬ್ಬಿಣದ ಕಡಲೆಯೇ ಆಗಿದೆ. ನಾವು ಕಾಣುವ ವಿಶ್ವವು ಶೇ 4 ಭಾಗ ಮಾತ್ರ. ಉಳಿದೆಲ್ಲದರ ಬಗ್ಗೆ ಅರಿವೇ ಇಲ್ಲ, ಅತೀತವಾಗಿಯೇ ಉಳಿದಿದೆ. ಇತ್ತೀಚಿನ ದಿನಗಳಲ್ಲಿ ಆ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆಯುತ್ತಿವೆ. ಗಗನಯಾನಿಗಳ ಕುರಿತ ಅಧ್ಯಾಯವೂ ಹಲವು ಸ್ವಾರಸ್ಯಕರ ಮಾಹಿತಿಗಳನ್ನು ಒಳಗೊಂಡಿದೆ.



ಪು: 457 ₹1950

ಖಗೋಳ ದರ್ಶನ– ಅಂತರಿಕ್ಷಕ್ಕೆ ಹಂತ ಹಂತದ ಮೆಟ್ಟಿಲು

ಸಂ: ಡಾ.ಬಿ.ಎಸ್.ಶೈಲಜಾ, ಡಾ.ಟಿ.ಆರ್. ಅನಂತರಾಮು

ಪ್ರ: ನವಕರ್ನಾಟಕ

ಸಂ:080–22161900

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ

ಜ್ಯೋತಿ ಅವರ **ಬಲೀಂದ್ರ ಲೆಪ್ಪು...**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ವೈ.ಕೆ.ಸಂಧ್ಯಾ ಶರ್ಮ ಅವರ **ಮರೆತೇನೆಂದರೆ ಮರೆಯಲಿ ಹೇಗೆ?**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಕ್ಯಾಮೆರಾ ಕಣ್ಣಲ್ಲಿ ಕೀನ್ಯಾದ ವನ್ಯಜೀವಿ ಲೋಕ...

ಮಸಾಯ್ ಮಾರ ಕಾಡಿನಲ್ಲಿ ಮರವೇರುತ್ತಿರುವ ಚಿರತೆ

ತಮ್ಮ 10ನೇ ವಯಸ್ಸಿನಿಂದಲೇ ವನ್ಯಜೀವಿ ಛಾಯಾಗ್ರಹಣದಲ್ಲಿ ಆಸಕ್ತಿ ಬೆಳೆಸಿಕೊಂಡ ಸಾನ್ವಿ ವಿದ್ಯಾಶಂಕರ್, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಿಂದ ಹವ್ಯಾಸಿ ಛಾಯಾಗ್ರಹಣ ಪ್ರಾರಂಭಿಸಿದವರು. ಬಂಡಿಪುರ ಮತ್ತು ಕಬಿನಿ ಸುತ್ತಲಿನ ವನ್ಯಜೀವಿಗಳನ್ನು ಕ್ಯಾಮೆರಾ ಕಣ್ಣಿನಲ್ಲಿ ಸೆರೆ ಹಿಡಿಯುತ್ತಾ, ಆಫ್ರಿಕಾಗೆ ಹೆಜ್ಜೆ ಇಟ್ಟ ಸಾನ್ವಿ ಅವರ ಕ್ಯಾಮೆರಾದಲ್ಲಿ ಸೆರೆಯಾದ ವನ್ಯಲೋಕವಿದು. ಸದ್ಯ ಆಫ್ರಿಕದ ವನ್ಯ ಜೀವಿ ಜಗತ್ತನ್ನು ಬೆನ್ನತ್ತಿರುವ ಸಾನ್ವಿ, ಅಲ್ಲಿನ ನಕುರು, ಅಂಬೊಸೊಲಿ ಮತ್ತು ಮಸಾಯ್ ಮಾರಗಳಲ್ಲಿ ಸೆರೆ ಹಿಡಿದ ಒಂದಷ್ಟು ವನ್ಯಜೀವಿಗಳ ಚಿತ್ರಗಳು ಇಲ್ಲಿವೆ...

ಅಂದಹಾಗೆ, 17 ವರ್ಷದ ಸಾನ್ವಿ ಅವರಿಗೆ ಇತ್ತೀಚೆಗಷ್ಟೇ ಕರ್ನಾಟಕ ಆಸ್ಕರಿ ಪ್ರಶಸ್ತಿ 2023 ಲಭಿಸಿತ್ತು. ಕರ್ನಾಟಕದಲ್ಲಿ ಛಾಯಾಚಿತ್ರ ಪ್ರತಿಭೆಯನ್ನು ಪ್ರೋತ್ಸಾಹಿಸಲು ಶಾರುಖ್ ಆಸ್ಕರಿ ಹಮೀದ್ ಅವರ ನೆನಪಿನಲ್ಲಿ ನೀಡುವ ಪ್ರಶಸ್ತಿ ಇದಾಗಿದೆ.

ಮಸಾಯ್ ಮಾರದಲ್ಲಿ ಸಿಂಹ ಘರ್ಜನೆ


ಅಂಬೊಸಲಿಯಲ್ಲಿನ ಅತ್ಯಂತ ಹಳೆಯ ಮತ್ತು ಎತ್ತರದ ಆನೆ

ಮಸಾಯ್ ಮಾರದಲ್ಲಿನ ರಿಯಾಸಿ ಮತ್ತು ಅದರ ಮಕ್ಕಳು

ಮಸಾಯ್ ಮಾರಾದಲ್ಲಿ ಕಂಡ ಆನೆ ಮರಿಗಳು

ಮಸಾಯ್ ಮಾರಾದಲ್ಲಿ ಗೋಲ್ಡನ್ ಹವರ್‌ನಲ್ಲಿ ಕ್ಯಾಮೆರಾಗೆ ಸೆರೆ ಸಿಕ್ಕ ಸಿಂಹದ ಮರಿಗಳು

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಗ್ಗ ಚುಕ್ಕು ಶೀರ್ಷಿಕೆ ಕಥೆಯ | ಚಾರ್ಲಿ ಮತ್ತು ಗುಂಡ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡನ ಮುದ್ದಿನ ನಾಯಿ ಚಾರ್ಲಿ. ದಿನವೂ ಒಟ್ಟಿಗೆ ಆಟ, ಓಟ ನಡೆಯುತ್ತಲೇ ಇತ್ತು. ಹೀಗಿರುವಾಗ ಒಂದು ದಿನ ಗುಂಡ ಚಾರ್ಲಿಗೆ ಸಿಟ್ಟಿನಲ್ಲಿ ಗದರಿದ್ದ. ಇದರಿಂದ ಚಾರ್ಲಿ ಬೇಸರಗೊಂಡಿತ್ತು. ಚಾರ್ಲಿಯ ಪ್ರೀತಿಯನ್ನು ಪುನಃ ಪಡೆಯಲು ಗುಂಡ ತಿನಿಸುಗಳ ಪ್ರಯೋಗ ಮಾಡಿದ. ಮೊದಲು ಬ್ರೆಡ್ ತಂದುಕೊಟ್ಟ, ನಂತರ ಬರ್ಗರ್ ಅದಾದನಂತರ ಹಾಲು ತಂದು ಚಾರ್ಲಿಯ ಮುಂದಿಟ್ಟ. ಆದರೆ ಚಾರ್ಲಿ ಯಾವುದನ್ನೂ ಮುಟ್ಟದೆ, ಬೇಡ ಎಂಬಂತೆ ತಲೆಯಾಡಿಸುತ್ತಿತ್ತು. ಕೊನೆಗೊಂದು ಉಪಾಯ ಮಾಡಿದ ಗುಂಡ, ಒಂದು ಕಾಗದದಲ್ಲಿ ಎಲುಬಿನ ಚಿತ್ರ ಬಿಡಿಸಿ ತಂದ. ಅದನ್ನು ನೋಡಿದ ಚಾರ್ಲಿ ಖುಷಿಯಿಂದ ಚಂಗನೆ ಹಾರಿತು.





ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ತುಷಿಕಾ ಕೆ.ಎಸ್.
ಕೆ.ಆರ್.ನಗರ

ಧೀರಜ್ ಎಸ್.ಎಂ.
ತುಮಕೂರು

ಕ್ರಾಂತಿ ಎಸ್.
ಹರಪನಹಳ್ಳಿ

ಪ್ರಜ್ವಲ್ ಐ.
ಬೆಂಗಳೂರು

ಪ್ರತೀಕ್ಷಾ ಜೋಯ್ಸ್
ಆನಂದಪುರ

ಗಿರೀಶ್ ಡಿ.ಜೆ.
ಗಬ್ಬೂರು

ದ್ವಂದ್ವಾಕ್ಷರ ಪದ ಆಟ

ಇಲ್ಲಿ ಬಿಟ್ಟಿರುವ ಸ್ಥಳಗಳಲ್ಲಿ ಒಂದೇ ಅಕ್ಷರ ಎರಡು ಬಾರಿ ತುಂಬಿ ಮೂರಕ್ಷರದ ಅರ್ಥಬದ್ಧ ಪದ ಮಾಡಿ

1			ನ
2			ರ
3			ನೆ
4			ಬಿ
5			ಗೆ
6			ತ್ಮ
7			ಧ
8			ಘು
9			ತೆ
10			ಸು

ಗಾದೆಗಳಲ್ಲಿ 'ಮಳೆ'

1 ಮಳೆ ಆದ್ರ ಕೇಡಲ್ಲ ಮಗ ಉಂಡ್ರ ಕೇಡಲ್ಲ
2 ಮಳೆ ನಿಂತ್ರೂ ಮರದ ಹನಿ ನಿಲ್ಲಲಿಲ್ಲ
3 ಮುಂಜಾನಿ ಬಂದ ಮಳಿ ಅಲ್ಲ ಮಧ್ಯಾಹ್ನಕ ಬಂದ ಬೀಗ ಅಲ್ಲ
4 ಭರಣಿ ಬಂಗಾರ ಕರಣಿ
5 ಹುಬ್ಬಿ ಮಳಿಗೆ ಗುಬ್ಬಿ ಪುಚ್ಛ ತೊಯ್ಲಿಲ್ಲ
6 ಮಿರಗ ಕಳ್ಳಿ ಸಾಲಿಗಿ ಬರಗ
7 ಉತ್ರಿ ಬಿಳಿ ಜ್ವಾಳ ಬಿತ್ರಿ
8 ಸ್ವಾತಿ ಮಳಿ ಆದ್ಮ್ಯಾಗ ಇನ್ನ ಯಾತರ ಮಳಿ
9 ಆರಿದ್ರ ಮಳಿಗಿ ಗದ್ದರಿಸದ್ರ ಆರಮ್ಮ ಕಳಿತಂತ

ಗಣಿತದಲ್ಲಿ ಗರ್ದಿ ಗಮ್ಮತ್ತು

ಕ್ಯಾಲೆಂಡರ್ ಒಂದರಲ್ಲಿ ಯಾವುದೇ ಒಂದು ಪುಟ ಆಯ್ದುಕೊಳ್ಳಿ. ಅಲ್ಲಿ ಕಾಣುವ ಸಂಖ್ಯೆಗಳಲ್ಲಿ ಚೌಕಾಕಾರದಲ್ಲಿ ಸಿಗುವ ಯಾವುದೇ ಒಂಭತ್ತು ಸಂಖ್ಯೆಗಳ ಮೊತ್ತವನ್ನು ಅರೆಕ್ಷಣದಲ್ಲಿ ಹೇಳಿ ನಿಮ್ಮ ಗೆಳೆಯನನ್ನು ದಂಗುಪಡಿಸಿರಿ. ಅದು ಹೇಗೆ?

ಹೀಗೆ: ಚೌಕಾಕಾರದಲ್ಲಿ ಕಾಣುವ ಸಂಖ್ಯೆಗಳಲ್ಲಿ ಮಧ್ಯದ ಸಂಖ್ಯೆಗೆ 9ರಿಂದ ಮನದಲ್ಲಿ ಗುಣಿಸಿ–ಉತ್ತರ ಅದೇ ಆಗಿರುತ್ತದೆ.

ಉದಾ: ಇಲ್ಲಿ 12 ಮಧ್ಯದ ಸಂಖ್ಯೆ. ಆದ್ದರಿಂದ 12*9=108

ತಾಳೆ: ಎಲ್ಲ ಒಂಭತ್ತು ಸಂಖ್ಯೆಗಳನ್ನು ಕೂಡಿಸಿದರೆ 4+ 11 + 18 + 5 + 12 + 19 + 6 + 13 + 20 = 108

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಪಾರ | ಕಾರ | ಮಡಿ

ಗಳ | ಕಲಿ | ಬಿರು

ಅಕ್ಷರ ಪಟ್ಟಿ

ತುಂ | ಜ | ಡೆ | ಣ | ಲು | ಲು

ಸು | ಅ | ವಿ | ದ | ಅಂ | ನ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ : 1.ಆಮದುವೆ 2.ಆಯಾತನೆ 3.ಕೇಸರಿತಾ 4.ಅಂಬಾರಿಸು 5.ಇಂಧನಸ್ಸು 6.ಹಿಂಬಡವ

ಆಲ್ಫಾಬೆಟ್ ಗೇಮ್ : 1.AD 2.AK 3.AT 4.BC 5.BD 6.IK 7.KD 8.PP 9.SA 10.ET 11.TK 12.EG

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅದಲು ಬದಲು ಕಂಚಿ ಕದಲು...

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1. ಆ ಮಗನ ಗಮನ = ________________
2. ಮೊಲದ ಹುರುಕು = ________________
3. ನಮನ ಮಾಡು = ________________
4. ಮಾಯಾವತಿಗೆ ಸಿಟ್ಟು = ________________

ನೆನಪಿಗೊಂದು ಮೀಟುಗೋಲು

ಚಂದ್ರನ ಮೇಲೆ ಮಾನವಸಹಿತ ಇಳಿದ ನೌಕೆ ಎಷ್ಟನೇ ಅಪೊಲೊ ನೌಕೆಯಾಗಿತ್ತು ಎಂಬುವುದನ್ನು ಸುಲಭವಾಗಿ ನೆನಪಿಡಬೇಕೇ? Apollo ಎಂಬ ಪದದಲ್ಲಿ ಅಡಗಿದ ll ಎಂಬ ಅಕ್ಷರಗಳೇ (11–ಹನ್ನೊಂದು) ಉತ್ತರವನ್ನು ಸೂಚ್ಯವಾಗಿ ತಿಳಿಸುತ್ತದೆ. ನೀವು Apollo ಎಂಬ ಶಬ್ದ ನೆನಪಿಟ್ಟುಕೊಂಡರೆ ಸಾಕು.

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.
ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಥಾಯ್ಲೆಂಡ್ ಆಟಗಾರ ಕುನ್ಲಾವತ್ ಫೈನಲ್‌ಗೆ

ಪ್ರಣಯ್ ಕೊರಳಿಗೆ ಕಂಚು

ಕೋಪನ್‌ಹೆಗನ್ (ಪಿಟಿಐ): ಭಾರತದ ಎಚ್.ಎಸ್. ಪ್ರಣಯ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಪಡೆದರು.

ಶನಿವಾರ ನಡೆದ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಥಾಯ್ಲೆಂಡ್‌ನ ಕುನ್ಲಾವತ್ ವಿತಿದ್‌ಸರನ್ 18–21, 21–13, 21–14 ಗೇಮ್‌ಗಳಿಂದ ಪ್ರಣಯ್ ಅವರನ್ನು ಪರಾಭವಗೊಳಿಸಿದರು.

76 ನಿಮಿಷಗಳ ಹೋರಾಟದಲ್ಲಿ ಪ್ರಣಯ್ ಉತ್ತಮ ಆರಂಭವನ್ನೇ ಮಾಡಿದರು. ಮೊದಲ ಗೇಮ್‌ನಲ್ಲಿ ಮೂರು ಅಂಕಗಳ ಅಂತರದಿಂದ ಜಯಗಳಿಸಿದರು. ಆದರೆ ಇದೇ ಲಯವನ್ನು ಇನ್ನುಳಿದ ಎರಡು ಗೇಮ್‌ಗಳಲ್ಲಿ ಉಳಿಸಿಕೊಳ್ಳಲಿಲ್ಲ. ಕುನ್ಲಾವತ್ ಪುಟಿದೆದ್ದರು. ಆತ್ಮವಿಶ್ವಾಸಭರಿತ ಆಟವಾಡಿದ ಅವರು ಪಾರಮ್ಯ ಮೆರೆದರು.

ಮೂರನೇ ರ್‍ಯಾಂಕ್ ಆಟಗಾರ ಕುನ್ಲಾವತ್ ಅವರು ಎರಡು ಗೇಮ್‌ಗಳಲ್ಲಿ ಆಡಿದ ಕರಾರುವಾಕ್ ರ್‍ಯಾಲಿಗಳಿಗೆ ತಕ್ಕ ಪ್ರತ್ಯುತ್ತರ ನೀಡುವಲ್ಲಿ 9ನೇ ಶ್ರೇಯಾಂಕದ ಪ್ರಣಯ್ ಎಡವಿದರು. ನೆಟ್ ಬಳಿಯ ಆಟದಲ್ಲಿಯೂ ವಿಫಲರಾದರು. ಇದರಿಂದಾಗಿ ಪಾಯಿಂಟ್ ಕಳೆದುಕೊಂಡರು. ಮೂರನೇ ಗೇಮ್‌ನಲ್ಲಿ ಪ್ರಣಯ್ 12–15ರ ಅಂತರದಲ್ಲಿದ್ದಾಗ ಪುಟಿದೇಳುವ ಅವಕಾಶ ಇತ್ತು. ಆದರೆ, ಸತತ ಮೂರು ಅಂಕಗಳನ್ನು ಗಳಿಸಿದ ಥಾಯ್ಲೆಂಡ್ ಆಟಗಾರ ಅಂತರವನ್ನು ಹೆಚ್ಚಿಸಿದರು. ನಂತರದ ಆಟದಲ್ಲಿ ಪ್ರಣಯ್‌ಗೆ ಮರಳಿ ಜಯದ ಸನಿಹಕ್ಕೆ ಸಾಗುವ ಅವಕಾಶ ಸಿಗಲಿಲ್ಲ.

ಪುರುಷರ ಡಬಲ್ಸ್, ಮಹಿಳೆಯರ ಸಿಂಗಲ್ಸ್‌ಗಳಲ್ಲಿ ಈ ಬಾರಿ ಭಾರತಕ್ಕೆ ಪದಕ ಒಲಿಯಲಿಲ್ಲ. ಆದರೆ ಪುರುಷರ ಸಿಂಗಲ್ಸ್‌ನಲ್ಲಿ ಪದಕ ಜಯಿಸಿದ ಏಕೈಕ ಆಟಗಾರನಾಗಿ ಪ್ರಣಯ್ ಹೊರಹೊಮ್ಮಿದರು. ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ಪ್ರಕಾಶ್ ಪಡುಕೋಣೆ, ಕೆ. ಶ್ರೀಕಾಂತ್, ಲಕ್ಷ್ಯ ಸೇನ್ ಹಾಗೂ ಸಾಯಿಪ್ರಣೀತ್ ಅವರ ನಂತರ ಪದಕ ಜಯಿಸಿದ ಭಾರತದ ಆಟಗಾರನೆಂಬ ಶ್ರೇಯಕ್ಕೂ ಪ್ರಣಯ್ ಪಾತ್ರರಾದರು.

ಫೈನಲ್‌ಗೆ ಮರಿನ್: ಸ್ಪೇನ್ ದೇಶದ ಕರೊಲಿನಾ ಮರೀನ್ ಮಹಿಳೆಯರ ಸಿಂಗಲ್ಸ್ ಫೈನಲ್ ಪ್ರವೇಶಿಸಿದರು.

ಸೆಮಿಫೈನಲ್‌ನಲ್ಲಿ ಮರಿನ್ 23–21, 21–13ರಿಂದ ಜಪಾನ್ ತಂಡದ ಅಕಾನೆ ಯಮಗುಚಿ ವಿರುದ್ಧ ಗೆದ್ದರು. 53 ನಿಮಿಷಗಳವರೆಗೆ ನಡೆದ ಹೋರಾಟದಲ್ಲಿ 2016ರ ಒಲಿಂಪಿಕ್ ಚಾಂಪಿಯನ್ ಮರಿನ್ ಮೇಲುಗೈ ಸಾಧಿಸಿದರು.

ಇನ್ನೊಂದು ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ಆನ್ ಸೆ ಯಾಂಗ್ 21–19, 21–15ರಿಂದ ಚೀನಾದ ಚೆನ್ ಯೂ ಫೀ ವಿರುದ್ಧ ಜಯಿಸಿದರು. ಅವರು ಫೈನಲ್‌ನಲ್ಲಿ ಮರಿನ್ ವಿರುದ್ಧ ಆಡುವರು.

ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಎಚ್‌.ಎಸ್‌. ಪ್ರಣಯ್ ಆಟದ ವೈಖರಿ –ಎಪಿ ಚಿತ್ರ

ರಾಷ್ಟ್ರೀಯ ಚೆಸ್: ಸೇತುರಾಮನ್ ಚಾಂಪಿಯನ್

ಬೆಂಗಳೂರು: ಗ್ರ್ಯಾಂಡ್‌ಮಾಸ್ಟರ್ ಎಸ್.ಪಿ.ಸೇತುರಾಮನ್ (ರೇಟಿಂಗ್: 2591) ಅವರು ಪುಣೆಯಲ್ಲಿ ಶನಿವಾರ ಮುಕ್ತಾಯಗೊಂಡ 60ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಅಜೇಯ ಸಾಧನೆಯೊಡನೆ ಪ್ರಶಸ್ತಿ ಗೆದ್ದುಕೊಂಡರು. ಮೂರನೇ ಶ್ರೇಯಾಂಕ ಪಡೆದಿದ್ದ ಅವರು ಅವರು 11 ಸುತ್ತುಗಳಿಂದ 9.5 ಪಾಯಿಂಟ್ಸ್ ಸಂಗ್ರಹಿಸಿದರು.

ಕೊನೆಯ ಸುತ್ತಿನಲ್ಲಿ ಅವರಿಗೆ ಡ್ರಾ ಅಗತ್ಯವಿತ್ತು. ಗ್ರ್ಯಾಂಡ್‌ಮಾಸ್ಟರ್ ಮಿತ್ರಬಾ ಗುಹಾ (8.5) ಜೊತೆ ಅವರು ಅದನ್ನು ಸಾಧಿಸಿದರು. ಗ್ರ್ಯಾಂಡ್‌ಮಾಸ್ಟರ್ ವಿಷ್ಣು ಪ್ರಸನ್ನ (9 ಪಾಯಿಂಟ್), ಕೊನೆಯ ಸುತ್ತಿನಲ್ಲಿ ಗ್ರ್ಯಾಂಡ್‌ಮಾಸ್ಟರ್ ಅಭಿಮನ್ಯು ಪುರಾಣಿಕ್ (8) ಅವರನ್ನು ಸೋಲಿಸಿ ಎರಡನೇ ಸ್ಥಾನ ಪಡೆದರು.

ಏಳು ಮಂದಿ ಆಟಗಾರರು ತಲಾ 8.5 ಪಾಯಿಂಟ್ಸ್ ಸಂಗ್ರಹಿಸಿದರು. ಟೈಬ್ರೇಕರ್ ಆಧಾರದಲ್ಲಿ ಐಎಂ ಅರಣ್ಯಕ್ ಘೋಷ್ (ರೈಲ್ವೇಸ್), ಜಿಎಂ ಎನ್.ಆರ್.ವಿಘ್ನೇಶ್ (ರೈಲ್ವೇಸ್), ಜಿಎಂ ದೀಪ್ತಾಯನ್ ಘೋಷ್ (ಪಶ್ಚಿಮ ಬಂಗಾಳ), ಮಿತ್ರಬಾ ಗುಹಾ (ಪಶ್ಚಿಮ ಬಂಗಾಳ), ಐಎ ನೀಲಾಶ್ ಸಹಾ (ರೈಲ್ವೇಸ್) ಕ್ರಮವಾಗಿ ಮೂರರಿಂದ ಏಳರವರೆಗಿನ ಸ್ಥಾನಗಳನ್ನು ಪಡೆದರು.



ಯುವ ಭಾರತೀಯ ಚೆಸ್ ಗ್ರ್ಯಾಂಡ್‌ಮಾಸ್ಟರ್‌ನಿಂದ ಅತ್ಯದ್ಭುತ ಸಾಧನೆ!

ಬ್ಯಾಡ್ಮಿಂಟನ್: ಸಂಸ್ಕೃತಿಗೆ ಪ್ರಶಸ್ತಿ

ಮಂಗಳೂರು: ಎದುರಾಳಿಯ ಪೈಪೋಟಿಯನ್ನು ಮೀರಿನಿಂತ ಬೆಂಗಳೂರಿನ ಅರೈಸ್ ಬ್ಯಾಡ್ಮಿಂಟನ್ ಅಕಾಡೆಮಿಯ ಸಂಸ್ಕೃತಿ ಎಸ್, ಮಂಗಳೂರಿನ ಮಂಗಳಾ ಬ್ಯಾಡ್ಮಿಂಟನ್ ಸಂಸ್ಥೆ ಆಯೋಜಿಸಿರುವ 'ಮಂಗಳಾ ಕಪ್ ಜೂನಿಯರ್' ಮುಕ್ತ ಬ್ಯಾಡ್ಮಿಂಟನ್ ಟೂರ್ನಿಯ 9 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ನಗರದ ಯು.ಎಸ್.ಮಲ್ಯ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ಸಂಜೆ ನಡೆದ ಏಕೈಕ ಗೇಮ್‌ನ ಫೈನಲ್ ಪಂದ್ಯದಲ್ಲಿ ಸಂಸ್ಕೃತಿ, ಬೆಂಗಳೂರಿನ ಓವಲ್‌ನೆಟ್ ಅರೇನಾದ ಯಶೋನಿಧಿ ಟಿ ವಿರುದ್ಧ 30–15ರಲ್ಲಿ ಜಯ ಗಳಿಸಿದರು. ಸೆಮಿಫೈನಲ್‌ನಲ್ಲಿ ಪತ್ರಾವೊ ಬ್ಯಾಡ್ಮಿಂಟನ್ ಅಕಾಡೆಮಿಯ ಸ್ವೀಡಲ್ ಸಾನ್ವಿ ಡಿಸೋಜ ವಿರುದ್ಧ ಸಂಸ್ಕೃತಿ 30–8ರಲ್ಲಿ ಮತ್ತು ಅರೈಸ್ ಅಕಾಡೆಮಿಯ ಮಾನ್ಯ ಆಚಾರ್ಯ ವಿರುದ್ಧ ಯಶೋನಿಧಿ 30–13ರಲ್ಲಿ ಜಯ ಗಳಿಸಿದ್ದರು.

ಸಂಸ್ಕೃತಿ ಎಸ್

ಅಥ್ಲೆಟಿಕ್ಸ್: ಭಾರತ ಪುರುಷರ ರಿಲೇ ತಂಡ ಫೈನಲ್‌ಗೆ ಲಗ್ಗೆ

ಬುಡಾಪೆಸ್ಟ್ (ಪಿಟಿಐ): ಭಾರತ ಪುರುಷರ 4X400 ಮೀ. ರಿಲೇ ತಂಡ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಫೈನಲ್ ಪ್ರವೇಶಿಸಿ ಅಮೋಘ ಸಾಧನೆ ಮಾಡಿತು. ಈ ಹಾದಿಯಲ್ಲಿ ಏಷ್ಯನ್ ದಾಖಲೆಯನ್ನು ಸ್ಥಾಪಿಸಿತು.

ಶನಿವಾರ ನಡೆದ ಅರ್ಹತಾ ಹಂತದಲ್ಲಿ ಮೊದಲ ಹೀಟ್‌ನಲ್ಲಿ ಓಡಿದ ಮೊಹಮ್ಮದ್ ಅನಾಸ್ ಯಹ್ಯಾ, ಅಮೋಜ್ ಜೇಕಬ್, ಮೊಹಮ್ಮದ್ ಅಜ್ಮಲ್ ಮತ್ತು ರಾಜೇಶ್ ರಮೇಶ್ ಅವರನ್ನೊಳಗೊಂಡ ಭಾರತ ತಂಡ 2 ನಿ. 59.05 ಸೆ.ಗಳೊಂದಿಗೆ ಗುರಿ ತಲುಪಿತು. ಮೊದಲ ಹೀಟ್‌ನಲ್ಲಿ ಅಮೆರಿಕ (2 ನಿ. 58.47 ಸೆ.) ಬಳಿಕ ಎರಡನೇ ಸ್ಥಾನ ಗಳಿಸಿತು.

ಭಾರತ ರಿಲೇ ತಂಡವು ಜಪಾನ್ ತಂಡದ (2 ನಿ. 59.51 ಸೆ.) ಹೆಸರಿನಲ್ಲಿದ್ದ ಏಷ್ಯನ್ ದಾಖಲೆಯನ್ನು ಮುರಿಯಿತು. ಈ ಹಿಂದಿನ ರಾಷ್ಟ್ರೀಯ ದಾಖಲೆಯನ್ನು (3 ನಿ. 0.25 ಸೆ.) ಉತ್ತಮಪಡಿಸಿಕೊಂಡಿತು.

ಭಾರತ ತಂಡ ಒಟ್ಟಾರೆಯಾಗಿ ಎರಡನೇ ಸ್ಥಾನ ಪಡೆದು ಫೈನಲ್ ಪ್ರವೇಶಿಸಿದೆ. ಬ್ರಿಟನ್ (2 ನಿ. 59.42 ಸೆ.) ಮತ್ತು ಜಮೈಕಾ (2 ನಿ. 59.82) ತಂಡಗಳಿಗಿಂತ ಉತ್ತಮ ಸಮಯ ಕಂಡುಕೊಂಡಿತು. ಫೈನಲ್ ಭಾನುವಾರ ನಡೆಯಲಿದೆ.

ಇಥಿಯೋಪಿಯಾಕ್ಕೆ ಮ್ಯಾರಥಾನ್ ಚಿನ್ನ: ಅಮಾನೆ ಬೆರಿಸೊ ಶಂಕುಲೆ ಮ್ಯಾರಥಾನ್ ಓಟದಲ್ಲಿ ಶನಿವಾರ ಇಥಿಯೋಪಿಯಾದ ಮೇಲುಗೈಗೆ ಮುನ್ನುಡಿ ಬರೆದರು. 31 ವರ್ಷದ ಶಂಕುಲೆ ಚಿನ್ನ ಗೆದ್ದರೆ, ಕಳೆದ ಸಲ ಚಿನ್ನ ಗೆದ್ದ ಗೊಟಿತೊಮ್ ಗೆಬ್ರೆಸೆಲಾಸಿ ಈ ಬಾರಿ ಬೆಳ್ಳಿಯ ಪದಕ ಪಡೆದರು. ಬುಡಾಪೆಸ್ಟ್‌ನ ಪ್ರಮುಖ ಬೀದಿಗಳಲ್ಲಿ ಬೆಳಿಗ್ಗೆ ನಡೆದ ಮ್ಯಾರಥಾನ್ ಓಟವನ್ನು ಶಂಕುಲೆ 2 ಗಂಟೆ 24 ನಿಮಿಷ 23 ಸೆಕೆಂಡುಗಳಲ್ಲಿ ಕ್ರಮಿಸಿದರು. ಮೊರಾಕ್ಕೊದ ಫಾತಿಮಾ ಗರ್ಡಾದಿ ಮೂರನೇ ಸ್ಥಾನ ಪಡೆದರು.

200 ಮೀ.ನಲ್ಲೂ ನೋವಾಗೆ ಚಿನ್ನ: ಅಮೆರಿಕದ ನೋವಾ ಲೈಲ್ಸ್ ಪುರುಷರ 200 ಮೀ. ಓಟದಲ್ಲೂ ಜಯಶಾಲಿಯಾದರು. ಈ ಕೂಟದಲ್ಲಿ ಅವರು 100 ಮೀ. ಓಟದಲ್ಲೂ ಸ್ವರ್ಣ ಜಯಿಸಿದ್ದರು.

'ಗೋಲ್ಡನ್ ಥ್ರೋ' ನಿರೀಕ್ಷೆಯಲ್ಲಿ ನೀರಜ್

ವಿಶ್ವ ಅಥ್ಲೆಟಿಕ್ಸ್: ಜಾವೆಲಿನ್ ಫೈನಲ್ ಇಂದು • ಕಣದಲ್ಲಿ ಭಾರತದ ಮೂವರು

ಬುಡಾಪೆಸ್ಟ್: ಮೊದಲ ಯತ್ನದಲ್ಲೇ ಭರ್ಜರಿ ಥ್ರೋ ಮೂಲಕ ವಿಶ್ವ ಚಾಂಪಿಯನ್‌ಷಿಪ್ ಜಾವೆಲಿನ್ ಫೈನಲ್ ತಲುಪಿರುವ ನೀರಜ್ ಚೋಪ್ರಾ ಅತ್ಯುತ್ತಮ ಲಯದಲ್ಲಿದ್ದಾರೆ. ಅನುಭವಿಗಳಲ್ಲಿ ಕೆಲವರು ಪರದಾಡಿದ್ದಾರೆ. ಹೀಗಾಗಿ ಭಾನುವಾರ ನಡೆಯುವ ಫೈನಲ್‌ನಲ್ಲಿ ನೀರಜ್ ಚಿನ್ನ ಗೆಲ್ಲುವ ನೆಚ್ಚಿನ ಸ್ಪರ್ಧಿಯಾಗಿದ್ದಾರೆ.

ಈ ಕೂಟದಲ್ಲಿ ಇದುವರೆಗೆ ಇತರ ಸ್ಪರ್ಧಿಗಳ ನಿರಾಶಾದಾಯಕ ಪ್ರದರ್ಶನದಿಂದ ಭಾರತದ ಪಾಳೆಯದಲ್ಲಿ ಮಂಕು ಕವಿದಿದ್ದು, ನೀರಜ್ ಸಾಧನೆ ನವೋಲ್ಲಾಸ ಮೂಡಿಸಬಲ್ಲದು. ಹೋದ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿಯ ಪದಕ ಗೆದ್ದುಕೊಂಡಿದ್ದ ನೀರಜ್, ಇಲ್ಲಿ ಜಾವೆಲಿನ್‌ಅನ್ನು 88.77 ಮೀ. ದೂರಕ್ಕೆ ಎಸೆದಿದ್ದಾರೆ– ಅದೂ ಸರಾಗವಾಗಿ. ಪ್ಯಾರಿಸ್ ಒಲಿಂಪಿಕ್ಸ್‌ಗೂ ಅರ್ಹತೆ ದೊರಕಿದೆ. ಇದು ಈ ಋತುವಿನಲ್ಲಿ 25 ವರ್ಷದ ನೀರಜ್ ಅವರ ಶ್ರೇಷ್ಠ ಥ್ರೊ ಹಾಗೂ ಅವರ ವೈಯಕ್ತಿಕ ನಾಲ್ಕನೇ ಉತ್ತಮ ಥ್ರೊ ಆಗಿದೆ.

ನೀರಜ್ ಚೋಪ್ರಾ

ಭಾನುವಾರವೂ ಅವರು ದಾಖಲೆ ಪ್ರಯತ್ನಕ್ಕೆ ಮುನ್ನುಗ್ಗುವುದು ಖಚಿತ. ಅರ್ಹತಾ ಸುತ್ತಿನಲ್ಲಿ ಅವರು ಎರಡನೇ ಯತ್ನಕ್ಕೆ ಹೋಗದೇ, ಯಶಸ್ವಿ ಮೊದಲ ಥ್ರೊ ನಂತರ ಕ್ರೀಡಾಂಗಣದಿಂದ ಹೊರನಡೆದಿದ್ದರು. ಇದರ ಉದ್ದೇಶ, ಭಾನುವಾರದ ಫೈನಲ್‌ಗೆ ಪೂರ್ಣ ಸಾಮರ್ಥ್ಯ ತೊಡಗಿಸುವುದಷ್ಟೇ.

ಅವರು ಈ ಋತುವಿನಲ್ಲಿ ಕೇವಲ ಎರಡು ಕೂಟಗಳಲ್ಲಿ ಭಾಗವಹಿಸಿದ್ದರೂ, ಇಲ್ಲಿ ಮೊದಲ ಯತ್ನದಲ್ಲೇ ಜಾವೆಲಿನ್‌ಅನ್ನು ಅಷ್ಟು ದೂರಕ್ಕೆ ಎಸೆದಿರುವುದು ನೋಡಿದರೆ ಅವರು ಉತ್ತಮ ಲಹರಿಯಲ್ಲಿರುವುದನ್ನು ಸೂಚಿಸುತ್ತಿದೆ. ಅವರು ಈ ವರ್ಷ ದೋಹಾ ಮತ್ತು ಲುಸಾನ್ ಡೈಮಂಡ್ ಲೀಗ್‌ನಲ್ಲಿ ಮಾತ್ರ ಭಾಗವಹಿಸಿದ್ದು ಎರಡರಲ್ಲೂ ಚಿನ್ನ ಗೆದ್ದಿದ್ದಾರೆ.

ನದೀಮ್ ನೀಡುವರೇ ಫೈಟ್: ಈ ನಡುವೆ, ಚಾಲ್ತಿಗೆ ಬಂದಿರುವ ಪಾಕಿಸ್ತಾನದ ಅರ್ಷದ್ ನದೀಮ್ ಅವರಿಂದ ನೀರಜ್‌ಗೆ ಸ್ಪರ್ಧೆ ಎದುರಾಗಬಹುದು. ಬರ್ಮಿಂಗ್‌ಹ್ಯಾಮ್ ಕಾಮನ್ವೆಲ್ತ್ ಕೂಟದಲ್ಲಿ ಜಾವೆಲಿನ್‌ಅನ್ನು 90.18 ಮೀ. ಥ್ರೊ ಮಾಡಿದ್ದ ನದೀಮ್, ಅನುಭವಿ ಪೀಟರ್ಸ್ ಅವರನ್ನು ಹಿಂದೆಹಾಕಿ ಚಿನ್ನ ಗೆದ್ದಿದ್ದರು. 90 ಮೀ. ತಲುಪುವ ರೇಸ್‌ನಲ್ಲಿ 26 ವರ್ಷದ ನದೀಮ್, ಭಾರತದ ಎದುರಾಳಿಯನ್ನು ಹಿಂದೆಹಾಕಿದ್ದಾರೆ ನಿಜ, ಆದರೆ ಇಬ್ಬರೂ ಭಾಗವಹಿಸಿದ್ದ ಸ್ಪರ್ಧೆಗಳಲ್ಲಿ ನೀರಜ್ ಅವರೇ ವಿಜಯಿಯಾಗಿದ್ದಾರೆ.

ನೀರಜ್, 2018ರ ಜಕಾರ್ತಾ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದಾಗ, ನದೀಮ್ ಕಂಚಿನ ಪದಕ ಪಡೆದಿದ್ದರು. 2018ರ ಕಾಮನ್ವೆಲ್ತ್ ಕ್ರೀಡೆಗಳಲ್ಲಿ ನೀರಜ್ ವಿಜಯಿಯಾದರೆ, ನದೀಮ್ ಎಂಟನೇ ಸ್ಥಾನ ಗಳಿಸಿದ್ದರು. ಟೋಕಿಯೊ ಒಲಿಂಪಿಕ್ಸ್ (2021)ನಲ್ಲಿ ನೀರಜ್ ಚಾಂಪಿಯನ್ ಆದರೆ, ಪಾಕ್ ಸ್ಪರ್ಧಿ ಏಳನೇಯವರಾಗಿದ್ದರು.

ಭಾರತದ ಡಿ.ಪಿ.ಮನು (81.31 ಮೀ.) ಮತ್ತು ಕಿಶೋರ್ ಜೇನಾ (80.55 ಮೀ.) ಅವರೂ ಫೈನಲ್‌ಗೇರಿದ್ದಾರೆ. ಹೀಗಾಗಿ ಭಾರತದ ಮೂವರು ಅಂತಿಮ ಕಣದಲ್ಲಿದ್ದಾರೆ.

ಮುಖ್ಯಾಂಶಗಳು

- ಅರ್ಷದ್ ನದೀಮ್ ಪೈಪೋಟಿ ಸಾಧ್ಯತೆ
- ಫೈನಲ್‌ನಲ್ಲಿ ಭಾರತದ ಮೂವರು
- ಉಳಿದೆಲ್ಲಾ ಪ್ರಮುಖ ಪ್ರಶಸ್ತಿ ಗೆದ್ದಿರುವ ನೀರಜ್

ಸಂಕ್ಷಿಪ್ತ ಸುದ್ದಿ

ವಿಶ್ವ ಕುಸ್ತಿಗೆ ಅಮನ್ ಅರ್ಹತೆ

ಅಮನ್

ಪಟಿಯಾಲ (ಪಿಟಿಐ): ಪುರುಷರ 57 ಕೆ.ಜಿ ಫ್ರೀಸ್ಟೈಲ್ ವಿಭಾಗದಲ್ಲಿ ತಮ್ಮ ಪ್ರಾಬಲ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದ ಅಮನ್ ಸೆಹ್ರಾವತ್ ಅವರು ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಿಟ್ಟಿಕೊಂಡರು.

ಬೆಲ್‌ಗ್ರೇಡ್‌ನಲ್ಲಿ ಸೆ.16 ರಿಂದ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಭಾರತ ತಂಡದ ಆಯ್ಕೆಗೆ ನಡೆದ ಎರಡು ದಿನಗಳ ಟ್ರಯಲ್ಸ್ ಶನಿವಾರ ಕೊನೆಗೊಂಡಿತು. 57 ಕೆ.ಜಿ ವಿಭಾಗದ ಫೈನಲ್‌ನಲ್ಲಿ ಅಮನ್ ಅವರು ಅತಿಶ್ ತೋಡ್ಕರ್ ವಿರುದ್ಧ ಗೆದ್ದು ಅರ್ಹತೆ ಪಡೆದರು.

ಆಕಾಶ್ ದಹಿಯಾ ಅವರು 61 ಕೆ.ಜಿ. ವಿಭಾಗ ಮತ್ತು ಅನುಜ್ ಕುಮಾರ್ ಅವರು 65 ಕೆ.ಜಿ. ವಿಭಾಗದಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ. 65 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸುವ ಬಜರಂಗ್ ಪೂನಿಯಾ ಅವರು ಏಷ್ಯನ್ ಗೇಮ್ಸ್‌ಗೆ ವಿದೇಶದಲ್ಲಿ ಸಿದ್ಧತೆ ನಡೆಸುವ ಉದ್ದೇಶದಿಂದ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿದ್ದರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಹಾಗೂ ಬರ್ಮಿಂಗ್‌ಹ್ಯಾಂ ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನ ಜಯಿಸಿದ್ದ ದೀಪಕ್ ಪೂನಿಯಾ ಅವರು ಪುರುಷರ 86 ಕೆ.ಜಿ. ವಿಭಾಗದ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲಿಲ್ಲ.

ಸೆಮಿಗೆ ಎಫ್‌ಸಿ ಗೋವಾ

ಗುವಾಹಟಿ (ಪಿಟಿಐ): ಚೆನ್ನೈಯಿನ್ ಎಫ್‌ಸಿ ತಂಡವನ್ನು 4–1 ಗೋಲುಗಳಿಂದ ಮಣಿಸಿದ ಎಫ್‌ಸಿ ಗೋವಾ ತಂಡದವರು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ಶನಿವಾರ ನಡೆದ ಪಂದ್ಯದಲ್ಲಿ ಕಾರ್ಲ್ ಮೆಕ್‌ಹ್ಯೂ (30ನೇ ನಿ.), ಕಾರ್ಲೊಸ್ ಮಾರ್ಟಿನೆಜ್ (37), ನೋಅ ಸದೌಯಿ (90 + 1) ಮತ್ತು ವಿಕ್ಟರ್ ರಾಡ್ರಿಗ್ವೆಜ್ (90 + 3) ಅವರು ಗೋವಾ ತಂಡದ ಪರ ಗೋಲು ಗಳಿಸಿದರು. ಚೆನ್ನೈ ತಂಡದ ಏಕೈಕ ಗೋಲನ್ನು ವಿಕಾಶ್ ಯುಮ್ನಮ್ ಐದನೇ ನಿಮಿಷದಲ್ಲಿ ತಂದಿತ್ತರು.

ಬ್ಯಾಸ್ಕೆಟ್‌ಬಾಲ್: ಐಬಿಬಿಸಿಗೆ ಜಯ

ಬೆಂಗಳೂರು: ಯಶ್ವಂತ್ ಮತ್ತು ಸುರೇಶ್ ಅವರ ಉತ್ತಮ ಆಟದ ನೆರವಿನಿಂದ ಐಬಿಬಿಸಿ ತಂಡದವರು ಪ್ರೊ.ಎನ್.ಸಿ ಪರಪ್ಪ ಸ್ಮಾರಕ ರಾಜ್ಯ 'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಜಯ ಸಾಧಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಐಬಿಬಿಸಿ 77–73 ರಿಂದ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಮಣಿಸಿತು. ಯಶ್ವಂತ್ 30 ಹಾಗೂ ಸುರೇಶ್ 21 ಪಾಯಿಂಟ್ಸ್ ಗಳಿಸಿದರು.

ಇನ್ನೊಂದು ರೋಚಕ ಪಂದ್ಯದಲ್ಲಿ ಡಿವೈಇಎಸ್ ಬೆಂಗಳೂರು ತಂಡ 100–97 ರಿಂದ ಭಾರತ್ ಸ್ಪೋರ್ಟ್ಸ್ ಯೂನಿಯನ್ ತಂಡವನ್ನು ಪರಾಭವಗೊಳಿಸಿತು. ಪಾಯಿಂಟ್ಸ್ ಗಳಿಕೆಯಲ್ಲಿ ಅರ್ಧಶತಕ ಗಳಿಸಿದ ಮನೋಜ್ (54) ಅವರು ಡಿವೈಇಎಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಭಾರತ್ ತಂಡದ ಪರ ಅಕ್ಷಯ್ 35 ಪಾಯಿಂಟ್ಸ್ ಗಳಿಸಿದರು.

ಎಸ್.ಬ್ಲೂಸ್ ತಂಡ 67–50 ರಿಂದ ಬಿಎಸ್‌ಎನ್‌ಎಲ್ ವಿರುದ್ಧ ಗೆದ್ದಿತು. ಜಿಎಸ್‌ಟಿ ಮತ್ತು ಕಸ್ಟಮ್ಸ್ ತಂಡ 99–86 ರಿಂದ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ತಂಡವನ್ನು ಸೋಲಿಸಿತು.

ತುಟಿಚುಂಬನ: ರುಬಿಯೇಲ್ಸ್ ಅಮಾನತು

ಮ್ಯಾಡ್ರಿಡ್: ಇತ್ತೀಚೆಗೆ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿ ಗೆದ್ದ ವೇಳೆ ಆಟಗಾರ್ತಿ ಜೆನ್ನಿ ಹೆರ್ಮೊಸೊ ಅವರಿಗೆ ತುಟಿಗೆ ಚುಂಬಿಸಿದ ಪ್ರಕರಣದಲ್ಲಿ ಪದತ್ಯಾಗಕ್ಕೆ ನಿರಾಕರಿಸಿದ ಸ್ಪೇನ್ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಲೂಯಿಸ್ ರುಬಿಯೇಲ್ಸ್ ಅವರನ್ನು ಫಿಫಾ ಕನಿಷ್ಠ 90 ದಿನಗಳ ಮಟ್ಟಿಗೆ ಶನಿವಾರ ಅಮಾನತು ಮಾಡಿದೆ.

46 ವರ್ಷದ ರುಬಿಯೇಲ್ಸ್ ಇನ್ನು ಮುಂದೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಫುಟ್‌ಬಾಲ್ ಚಟುವಟಿಕೆಗಳಲ್ಲಿ ತೊಡಗುವಂತಿಲ್ಲ. ಹೆರ್ಮೊಸಾ ಅಥವಾ ಆಕೆಯ ಆಪ್ತರನ್ನು ಸಂಪರ್ಕಿಸುವಂತಿಲ್ಲ.

ಅಂಧರ ಕ್ರಿಕೆಟ್: ಮಹಿಳಾ ತಂಡಕ್ಕೆ ಚಿನ್ನದ ಪದಕ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಅಂಧ ಮಹಿಳಾ ಕ್ರಿಕೆಟ್ ತಂಡವು ಶನಿವಾರ ಐಬಿಎಸ್‌ಎ ವಿಶ್ವ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದು ಚಾರಿತ್ರಿಕ ಸಾಧನೆ ಮಾಡಿತು.

ಕರ್ನಾಟಕದ ಆಟಗಾರ್ತಿ ವರ್ಷಾ ಉಮಾಪತಿ ನಾಯಕತ್ವದ ಭಾರತ ತಂಡವು ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ 9 ವಿಕೆಟ್‌ಗಳಿಂದ ಜಯಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 114 ರನ್ ಗಳಿಸಿತು. ಮಳೆ ಸುರಿದ ಕಾರಣ ಗೆಲುವಿನ ಗುರಿಯನ್ನು ಪರಿಷ್ಕರಿಸಲಾಯಿತು. 3.3 ಓವರ್‌ಗಳಲ್ಲಿ 42 ರನ್‌ಗಳ ಗುರಿ ಸಾಧಿಸಿದ ಭಾರತ ತಂಡವು ಜಯಭೇರಿ ಬಾರಿಸಿತು.

ವಿಶ್ವ ಕ್ರೀಡಾಕೂಟದಲ್ಲಿ ಇದೇ ಮೊದಲ ಬಾರಿಗೆ ಅಂಧರ ಕ್ರಿಕೆಟ್ ಆಡಿಸಲಾಯಿತು.

ಹೆಚ್ಚಿನ ಕ್ರೀಡಾ ಸುದ್ದಿ ಪುಟ 9